ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ

ಕುಂದಾಪುರ ತಾಲೂಕನ್ನು ಅನುಲಕ್ಷಿಸಿ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧನಾ ವಿದ್ಯಾರ್ಥಿ

ಪ್ರತಿಮಾ ಬಿ.

ನೋಂದಣಿ ಸಂಖ್ಯೆ : ಕೆಟಿಎಸ್ಎಂಡಿಎಸ್/೦೦೪೯೭

ಮಾರ್ಗದರ್ಶಕರು

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.

೨೦೧೨

ಕರ್ನಾಟಕ ಥಿಯಾಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು-೫೭೫೦೦೧

992

ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ

ಕುಂದಾಪುರ ತಾಲೂಕನ್ನು ಅನುಲಕ್ಷಿಸಿ

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಿಬಂಧ

ಸಂಶೋಧನಾ ವಿದ್ಯಾರ್ಥಿ

ಪ್ರತಿಮಾ ಬಿ.

ನೋಂದಣೆ ಸಂಖ್ಯೆ : ಕೆಟಿಎಸ್‌ಎಂಡಿಎಸ್/೦೦೪೯೬

ಮಾರ್ಗದರ್ಶಕರು

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.

೨೦೧೨

ಕರ್ನಾಟಕ ಥಿಯಾಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು–೫೭೫೦೦೧

ಮಾರ್ಗದರ್ಶಕರ ದೃಢೀಕರಣ

ಪ್ರತಿಮಾ ಬಿ. ಇವರು **ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ–ಕುಂದಾಪುರ ತಾಲೂಕನ್ನು ಅನುಲಕ್ಷಿಸಿ** ಎಂಬ ವಿಷಯದ ಕುರಿತು ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್ ಪದವಿಗಾಗಿ ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ಇವರಿಗೆ ಸಲ್ಲಿಸಲು ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಸಂಶೋಧಕರ ಸ್ವಂತ ಅಧ್ಯಯನದ ಮೇಲೆ ರೂಪುಗೊಂಡದ್ದು ಈ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿಯಾಗಲಿ ಅಥವಾ ಪದವಿಗಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ಉಡುಪಿ
ದಿನಾಂಕ: 18-4-2012

(ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ.)
ಸಂಶೋಧನ ಮಾರ್ಗದರ್ಶಕರು

Dr. Gaonkar Gopalkrishna M.
M A., PhD.
Associate Professor & Head,
(Co-Ordinator P.G. Section)
Dept. of Economics
Govt. First Grade College,
Tenkanidiyoor, UDUPI-576106.

ಅಭ್ಯರ್ಥಿ ಪ್ರಮಾಣ ಪತ್ರ

ಡಾ. ಗಾಂವ್ಕರ್ ಗೋಪಾಲಕೃಷ್ಣ ಎಂ. ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ, ಸರಕಾರಿ ಪ್ರಥಮದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ತೆಂಕನಿಡಿಯೂರು, ಉಡುಪಿ ಇವರ ಮಾರ್ಗದರ್ಶನದಲ್ಲಿ **ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ-ಕುಂದಾಪುರ ತಾಲೂಕನ್ನು ಅನುಲಕ್ಷಿಸಿ** ಎಂಬ ವಿಷಯದ ಕುರಿತು ನಿಬಂಧವನ್ನು ಎಂ.ಫಿಲ್ ಪದವಿಗಾಗಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಸಲುವಾಗಿ ಸಿದ್ಧಪಡಿಸಲಾಗಿದೆ. ಈ ನಿಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಕ್ಕಾಗಿಯಾಗಲಿ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

Prathima. B

(ಪ್ರತಿಮಾ ಬಿ.)

ಸಂಶೋಧನಾ ಅಭ್ಯರ್ಥಿ

ಸ್ಥಳ: ಕುಂದಾಪುರ

ದಿನಾಂಕ: 18.4.2012

ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ
ಕುಂದಾಪುರ ತಾಲೂಕನ್ನು ಅನುಲಕ್ಷಿಸಿ

ಅಧ್ಯಯನದ ವಿವರಗಳು

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವಿಧಾನಕ್ರಮ

೧.೧ ಪ್ರಸ್ತಾವನೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನ ವಿಧಾನ

ಅಧ್ಯಾಯ ೧

ಅಧ್ಯಯನದ ಸ್ವರೂಪ, ಉದ್ದೇಶ ಮತ್ತು ವಿಧಾನಕ್ರಮ

೧.೧ ಪ್ರಸ್ತಾವನೆ

ಹಳ್ಳಿಗಳ ಉದ್ಧಾರವಾಗದೆ ದೇಶದ ಪ್ರಗತಿ ಸಾಧ್ಯವಿಲ್ಲ ಎಂಬುದು ಈ ಜಗತ್ತು ತನ್ನ ಚರಿತ್ರೆಯಲ್ಲಿ ಕಂಡ ಮಹಾತ್ಮ ರಾಷ್ಟ್ರಪಿತ ಗಾಂಧೀಜಿಯವರ ನುಡಿ ಮಾಣಿಕ್ಯ. ಮಾತ್ರವಲ್ಲ ಇದು ಮಹಾತ್ಮರ ರಾಮರಾಜ್ಯದ ಕನಸು ಸಹ ಹೌದು. ಸರಿಸುಮಾರು ಒಂದು ಶತಮಾನದ ಹಿಂದೆಯೇ ಗಾಂಧಿ ಈ ಮಾತನ್ನು ವಿಶೇಷವಾಗಿ ಭಾರತಕ್ಕೆ ಅನ್ವಯಿಸಿ ಹೇಳಿದ್ದರು. ಹಳ್ಳಿಗಳು ಎಲ್ಲಾ ಬಗೆಯ ಮೂಲಭೂತ ಸೌಕರ್ಯಗಳನ್ನು ಹೊಂದಿ ಸಮೃದ್ಧವಾಗಿ ಬೆಳೆದಾಗ ಮಾತ್ರ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪ್ರಗತಿಯ ನಿರೀಕ್ಷೆ ಸಾಕಾರಗೊಳ್ಳಲು ಸಾಧ್ಯವಿದೆ ಎಂಬುದು ಇವರ ಮನದಾಳದ ನಿರೀಕ್ಷೆಯಾಗಿತ್ತು. ಈ ದೇಶದ ದೊಡ್ಡ ಸಂಖ್ಯೆಯ ಜನಸಮುದಾಯ ಗ್ರಾಮೀಣ ಪ್ರದೇಶಗಳಲ್ಲಿಯೇ ತಮ್ಮ ಬದುಕನ್ನು ಕಟ್ಟಿಕೊಂಡಿರುವ ಹಿನ್ನೆಲೆಯಲ್ಲಿ ಹಳ್ಳಿಗಳ ಅಭಿವೃದ್ಧಿ ದೇಶದ ಅಬಿವೃದ್ಧಿಗೆ ಸಮಾನವಾದುದು ಎಂಬುದು ಆಧುನಿಕ ಸಂದರ್ಭದ ಬಹುಮಂದಿ ಆರ್ಥಿಕ ಚಿಂತಕರ, ವಿದ್ವಾಂಸರ, ವಿಚಾರವಾದಿಗಳ ಅಭಿಮತವೂ ಹೌದು. ಮುಖ್ಯವಾಗಿ ಗ್ರಾಮೀಣ ಪ್ರದೇಶಗಳು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಔದ್ಯೋಗಿಕವಾಗಿ ಮತ್ತು ಶೈಕ್ಷಣಿಕವಾಗಿ ಸಶಕ್ತವಾದಾಗ ಮಾತ್ರ ಭಾರತ ಜಗತ್ತಿನ ಇತರ ದೇಶಗಳಿಗೆ ಸರಿಸಾಟಿಯಾಗಿ ಮತ್ತು ಆದರ್ಶಪ್ರಾಯವಾಗಿ ನೆಲೆಗೊಳ್ಳಲು ಸಾಧ್ಯ ಎಂಬುದು ಕಳೆದ ಐದಾರು ದಶಕಗಳಿಂದೀಚೆಗೆ ಬಹುನೆಲೆಗಳಲ್ಲಿ ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಸಾಬೀತಾಗಿದೆ.

ಗಾಂಧಿ ಕಲ್ಪನೆಯ ರಾಮರಾಜ್ಯ ಎಂದರೆ ಅದು ಗ್ರಾಮರಾಜ್ಯವಾಗಿದೆ. ಗಾಂಧೀಜಿಯವರು ತಮ್ಮ ರಾಮರಾಜ್ಯದ ಕಲ್ಪನೆಯಲ್ಲಿ ಪೌರಾಣಿಕ ಕಥನದ ಭಾಗವಾಗಿ ಬರುವ ಅಯೊಧ್ಯಯ ರಾಮನ ಇರವನ್ನೇ ನಿರ್ಣಾಯಕವಾಗಿ ಪರಿಕಲ್ಪಿಸಿಕೊಳ್ಳಲಿಲ್ಲ. ಅವರು ಪ್ರತಿ ಹಳ್ಳಿಯ ಮೂಲೆ ಮೂಲೆಗಳಲ್ಲಿಯೂ ರಾಮನ ಅಸ್ತಿತ್ವವನ್ನು ಕಾಣಬಯಸಿದರು. ಅಂದರೆ ಗಾಂಧಿಯವರು ಪರಿಕಲ್ಪಿಸಿಕೊಂಡ ರಾಮರಾಜ್ಯದ ಮಾದರಿ ಪೂರ್ಣವಾಗಿ ಅಯೋಧ್ಯಯ ಮಾದರಿಯಾಗಿರಲಿಲ್ಲ. ಸಾಮಾಜಿಕ ನೆಲೆಯಲ್ಲಿ ರಾಮನ ಅಸ್ತಿತ್ವವನ್ನು ಕಲ್ಪಿಸಿಕೊಳ್ಳುವ ಮೂಲಕ ಹಳ್ಳಿಯ ಬದುಕು ವಿಶಿಷ್ಟ ಬಗೆಯಲ್ಲಿ ದೇಶಕ್ಕೆ ಮಾದರಿ ಎನಿಸಿಕೊಳ್ಳಬೇಕೆಂಬುದು ರಾಮರಾಜ್ಯ ಅಥವಾ ಗ್ರಾಮರಾಜ್ಯ ಪರಿಕಲ್ಪನೆಯ ಕೇಂದ್ರ ಆಶಯವಾಗಿತ್ತು. ಹಳ್ಳಿಗಳು ಸ್ವಾತಂತ್ರ್ಯ ಪಡೆದರೆ

ಇಡಿ ದೇಶವೇ ಸ್ವಾತಂತ್ರ್ಯ ಪಡೆದಂತೆ ಎಂಬ ಆಲೋಚನಾಕ್ರಮ ಗ್ರಾಮಸ್ವರಾಜ್ಯದ ನೆಲೆಗೊಳ್ಳುವಿಕೆಗೆ ನಾಂದಿಯಾಯಿತು. ಹಳ್ಳಿಗಳು ತಮ್ಮ ನಿತ್ಯದ ಅಗತ್ಯಗಳನ್ನು ಪೂರೈಸಿಕೊಳ್ಳಲು ಬೇಕಾದ ವಸ್ತುಗಳನ್ನು ತಾವೇ ಸ್ವತ: ತಯಾರಿಸಿಕೊಳ್ಳುವ ಮೂಲಕ ಸ್ವಯಂಪೂರ್ಣವಾಗಿ ಕಾರ್ಯನಿರ್ವಹಿಸುವ ಅವಕಾಶಗಳು ದೊರೆತಾಗ ಗ್ರಾಮಸ್ವರಾಜ್ಯದ ಕಲ್ಪನೆ ದೃಢಗೊಳ್ಳಲು ಸಾಧ್ಯವಿದೆ. ಗ್ರಾಮಿಣ ಪ್ರದೇಶಗಳಲ್ಲಿ ನೆಲೆ ಕಂಡಿರುವ ಜನಸಮುದಾಯ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಲಗೊಳ್ಳುವಂತಾಗಬೇಕೆನ್ನುವುದು ಗ್ರಾಮಸ್ವರಾಜ್ಯ ಪರಿಕಲ್ಪನೆಯ ಕೇಂದ್ರ ಆಶಯವಾಗಿದೆ. ಪ್ರತಿಯೊಂದು ಹಳ್ಳಿಯೂ ಪುಟ್ಟ ಪುಟ್ಟ ಸ್ವತಂತ್ರ ಘಟಕವಾಗಿ ಕಾರ್ಯನಿರ್ವಹಿಸುತ್ತಲೇ ತಮ್ಮ ಪ್ರಗತಿಯನ್ನು ತಾವೇ ಸಾಧಿಸುವಂತಾಗಬೇಕೆಂಬುದು ಇಲ್ಲಿನ ಕನಸೂ ಹೌದು ಮಾತ್ರವಲ್ಲ ಧ್ಯೇಯವೂ ಹೌದು. ಹಳ್ಳಿಗಳಲ್ಲಿ ಗುಡಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಿ ಔದ್ಯೋಗಿಕ ಅವಕಾಶಗಳು ನಿರ್ಮಾಣವಾಗುವ ಮೂಲಕ ತಮ್ಮ ದಿನನಿತ್ಯದ ಅವಶ್ಯಕತೆಗಳನ್ನು ಪೂರೈಸಲು ಅನಿವಾರ್ಯವಾದ ಸರಕುಗಳನ್ನು ತಾವೇ ತಯಾರಿಸುವ ಸಾಮರ್ಥ್ಯ ಮತ್ತು ಅವಕಾಶಗಳನ್ನು ಪಡೆದಾಗ ಮಾತ್ರ ಗ್ರಾಮಗಳ ಅಭಿವೃದ್ಧಿಯ ಕನಸು ನಿರೀಕ್ಷಿತ ಗುರಿ ತಲುಪಲು ಸಾಧ್ಯವಿದೆ.

ಗಾಂಧಿ ತಮ್ಮ ರಾಮರಾಜ್ಯದ ಕನಸು ಕಂಡು ಶತಮಾನವೇ ಗತಿಸಿದೆ. ಅವರು ತಮ್ಮ ಬದುಕಿನುದ್ದಕ್ಕೂ ಈ ಕನಸನ್ನು ಸಾಕಾರಗೊಳಿಸುವ ಹಂತದಲ್ಲಿ ನುಡಿದಂತೆ ನಡೆದರು. ಮಾತ್ರವಲ್ಲ ಬಹುವಿಧದಲ್ಲಿ ಪ್ರಯತ್ನಪೂರ್ವಕವಾಗಿ ಶ್ರಮಿಸಿದರು. ಸ್ವಾತಂತ್ರ್ಯ ನಂತರ ಅಸ್ತಿತ್ವಕ್ಕೆ ಬಂದ ವಿವಿಧ ಸರಕಾರಗಳು ಗ್ರಾಮೀಣಾಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡು ಮಹತ್ವದ ಪ್ರಯೋಗಗಳನ್ನು ಕಾರ್ಯಗತಗೊಳಿಸಿವೆ. ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರಕಾರಗಳು ಗ್ರಾಮಾಭಿವೃದ್ಧಿಯ ಹಲವು ಆಯಾಮಗಳ ಕುರಿತು ಆದ್ಯತೆಯ ಮೇರೆಗೆ ಗಮನಹರಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ವಿವಿಧ ಪ್ರಮಾಣದ ಸಣ್ಣಕೈಗಾರಿಕೆಗಳನ್ನು ಬಲಗೊಳಿಸುವ ಹಂತದಲ್ಲಿ ಪ್ರಗತಿಪರ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಸರಕಾರೇತರ ಮತ್ತು ಸ್ವಯಂಸೇವಾ ಸಂಘಟನೆಗಳು ಈ ನಿಟ್ಟಿನಲ್ಲಿ ಸರಕಾರದ ಕಾರ್ಯಯೋಜನೆಗಳೊಂದಿಗೆ ಕೈಜೋಡಿಸಿವೆ. ಈ ಎಲ್ಲಾ ಬಗೆಯ ಪರಿಣಾಮಕಾರಿ ಪ್ರಯತ್ನಗಳ ನಡುವೆಯೂ ಗ್ರಾಮೀಣಾಭಿವೃದ್ಧಿ ದೊಡ್ಡ ಪ್ರಮಾಣದ ಯಶಸ್ಸು ಕಂಡಿಲ್ಲ ಎಂಬುದು ಅತ್ಯಂತ ವಿಷಾದನೀಯ ಸಂಗತಿಯಾಗಿದೆ. ಗ್ರಾಮಗಳನ್ನು ಬೇರುಮಟ್ಟದಿಂದ ಪುನರುಜ್ಜೀವನಗೊಳಿಸುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಪ್ರಾಯೋಗಿಕವಾಗಿ ಅನುಷ್ಠಾನಗೊಳ್ಳಲು ಕಷ್ಟಸಾಧ್ಯವಾಗಿರುವುದೇ ಗ್ರಾಮಾಭಿವೃದ್ಧಿಯ ಮುಂದಿನ ತೊಡಕಾಗಿದೆ.

೧೯೯೦ರ ದಶಕದಲ್ಲಿ ಸಂಭವಿಸಿದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಸಂಬಂಧಿ ವಿದ್ಯಮಾನಗಳು ಭಾರತೀಯ ಸಂದರ್ಭದಲ್ಲಿ ಹಲವು ಮಹತ್ವದ ಮತ್ತು ಗಮನಾರ್ಹ ಬದಲಾವಣೆಗಳಿಗೆ

ಕಾರಣವಾದವು. ಈ ಮೂರು ಪ್ರಕ್ರಿಯೆಗಳು ಜಾಗತಿಕ ವಲಯದಲ್ಲಿ ಪರಸ್ಪರ ಒಂದನ್ನೊಂದು ಅವಲಂಬಿಸಿರುವ ಮತ್ತು ಅಂತರ್‌ಸಂಬಂಧಗಳನ್ನು ಕಾಯ್ದುಕೊಂಡಿರುವ ವಿದ್ಯಮಾನಗಳಾಗಿವೆ. ಮುಖ್ಯವಾಗಿ ಮುಕ್ತ ಮಾರುಕಟ್ಟೆಯ ತತ್ವದ ಮೇಲೆ ನೆಲೆಗೊಂಡ ಈ ಪರಿಕಲ್ಪನೆಗಳು ಮತ್ತೆ ಪುನ: ಅಭಿವೃದ್ಧಿ ಹೊಂದಿದ ದೇಶಗಳಿಗೆ ಪೂರಕವಾಗಿಯೇ ಆಕೃತಿಗೊಂಡವು. ಇದರ ಪರಿಣಾಮವಾಗಿ ಆರ್ಥಿಕವಾಗಿ ಶ್ರೀಮಂತವಾಗಿದ್ದ ರಾಷ್ಟ್ರಗಳು ಇನ್ನಷ್ಟು ಸದೃಢಗೊಂಡವು. ಆದರೆ ಭಾರತದಂತಹ ಅಭಿವೃದ್ಧಿಶೀಲ ಮತ್ತು ಹಳ್ಳಿಗಳನ್ನೊಳಗೊಂಡ ದೇಶಗಳಿಗೆ ಜಾಗತೀಕರಣ ಮತ್ತು ಜಾಗತೀಕರಣೋತ್ತರ ಪರಿಣಾಮಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸು ನೀಡಲಿಲ್ಲ ಮತ್ತು ಪ್ರಗತಿದಾಯಕವಾಗಿ ಪರಿಣಮಿಸಲಿಲ್ಲ. ಜಾಗತೀಕರಣವನ್ನು ಒಪ್ಪಿಕೊಂಡ ಶ್ರೀಮಂತ ರಾಷ್ಟ್ರಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಿಗೂ ಭಾರತದಂತಹ ವೈವಿಧ್ಯಮಯ ಸಂಸ್ಕೃತಿ ಮತ್ತು ಜಿವನ ವಿಧಾನಗಳನ್ನು ಅವಲಂಬಿಸಿರುವ ಸ್ಥಿತಿಗತಿಗಳಿಗೂ ' ಸ್ಪಷ್ಟ ಮತ್ತು ನಿಖರವಾದ ಅಂತರಗಳು ಗೋಚಾರಿಸತೊಡಗಿದವು. ಇದರಿಂದಾಗಿ ಜಾಗತೀಕರಣ ಮತ್ತು ಅದರ ಪ್ರತ್ಯುತ್ಪನ್ನಗಳು ಭಾರತೀಯ ಬದುಕಿಗೆ ನಿರಂತರವಾಗಿ ಒಂದು ಮಹತ್ವದ ಸವಾಲಾಗಿ ಪರಿಣಮಿಸಿತು. ಆರ್ಥಿಕ ಮುನ್ನಡೆ, ಔದ್ಯೋಗಿಕ ಬಲವರ್ಧನೆ ಮತ್ತು ಸುಸ್ಥಿರ ಮಾರುಕಟ್ಟೆಯ ಸಿದ್ಧಾಂತಗಳನ್ನು ನಿರ್ಣಾಯಕವಾಗಿ ಒಪ್ಪಿಕೊಂಡ ಜಾಗತೀಕರಣ ಪ್ರಕ್ರಿಯೆ ಗ್ರಾಮೀಣ ಪ್ರದೇಶಗಳನ್ನೊಳಗೊಂಡ ಭಾರತಕ್ಕೆ ಹಲವು ವಿಧದಲ್ಲಿ ವರದಾನವಾಗಿ ಪರಿಣಮಿಸಿದರೆ ಇನ್ನು ಹಲವು ವಿಧದಲ್ಲಿ ವ್ಯತಿರಿಕ್ತ ಪರಿಣಾಮಗಳನ್ನು ಉಂಟುಮಾಡಿದೆ. ಜಗತ್ತನ್ನೆ ಒಂದು ಹಳ್ಳಿಯಾಗಿ ಪರಿಭಾವಿಸಿಕೊಂಡ ಜಾಗತೀಕರಣ ಹಳ್ಳಿಯ ಒಳಗಿನ ಜಗತ್ತನ್ನು ಪ್ರಶ್ನಿಸಿದ್ದು ಮತ್ತು ಮರೆತದ್ದು ಭಾರತಕ್ಕೆ ನುಂಗಲಾರದ ತುತ್ತಾಗಿ ಪರಿಣಮಿಸಿತು. ಇನ್ನೊಂದೆಡೆಯಲ್ಲಿ ಜಾಗತೀಕರಣದ ಗಾಳಿ ಆಧುನಿಕತೆಯ ಅಲೆಯೊಂದಿಗೆ ಹಳ್ಳಿಯ ಮೂಲೆಗಳಲ್ಲಿಯೂ ತೀವ್ರವಾಗಿ ಬೀಸಲಾರಂಭಿಸಿತು. ಜಾಗತೀಕರಣ ಭಾರತವನ್ನು ಪ್ರವೇಶಿಸಿದ ನಂತರದ ಹಂತದಲ್ಲಿ ಗ್ರಾಮೀಣಾಭಿವೃದ್ಧಿಯ ಪಥ ಹಲವು ಸ್ಥಿತ್ಯಂತರಗಳನ್ನು ಕಂಡಿತು. ನಗರೀಕರಣದ ಛಾಯೆ ಹಳ್ಳಿಯ ಬದುಕಿನ್ನು ಪೂರ್ತಿಯಾಗಿ ಆವರಿಸಿಕೊಂಡಿತು. ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ಸಮಗ್ರ ಗ್ರಾಮೀಣಾಭಿವೃದ್ಧಿಯ ಕಲ್ಪನೆ ಇಂದಿಗೂ ನಿರೀಕ್ಷಿತ ಯಶಸ್ಸು ಕಂಡಿಲ್ಲ.

ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಈ ಮೂರು ಪರಿಕಲ್ಪನೆಗಳು ಭಾರತೀಯ ಸಂದರ್ಭದಲ್ಲಿ ಹಳ್ಳಿಗಳ ಸರ್ವಾಂಗೀಣ ಅಭಿವೃದ್ಧಿಯ ದ್ಯೋತಕವಾಗಿ ಪರಿಣಮಿಸಿವೆ. ಇಂದಿನ ಜಾಗತೀಕರಣದ ಯುಗದಲ್ಲಿ ಗ್ರಾಮೀಣ ಪ್ರದೇಶಗಳು ಸಮಗ್ರವಾಗಿ ಯಶಸ್ಸಿನ ಪಥದಲ್ಲಿ ಸಾಗಬೇಕಾದರೆ ಈ ಮೇಲೆ ಗುರುತಿಸಿದ ಮೂರು ಸಂಗತಿಗಳು ನಿರ್ಣಾಯಕ ಪಾತ್ರವಹಿಸುತ್ತವೆ. ಈ ಮೂರು ಪರಿಕಲ್ಪನೆಗಳು ಮೇಲ್ನೋಟಕ್ಕೆ ಪ್ರತ್ಯೇಕ ಪರಿಕಲ್ಪನೆಗಳಾಗಿ ಕಂಡುಬಂದರೂ ಇವುಗಳ ನಡುವೆ

ಅತ್ಯಂತ ನಿಕಟವಾದ ಸಂಬಂಧವಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಇವು ಪರಸ್ಪರ ಒಂದನ್ನೊಂದು ಅವಲಂಬಿಸಿರುವ ಮತ್ತು ಅಂತರ್ ಸಂಬಂಧ ಹೊಂದಿರುವ ಪರಿಕಲ್ಪನೆಗಳಾಗಿವೆ. ಗ್ರಾಮೀಣ ಮಹಿಳೆಯರ ರಾಜಕೀಯ, ಸಾಮಾಜಿಕ, ಅರ್ಥಿಕ ಮತ್ತು ಶೈಕ್ಷಣಿಕ ಸಬಲೀಕರಣ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ಸ್ವಸಹಾಯ ಗುಂಪುಗಳ ಕಾರ್ಯಚಟುವಟಿಕೆಗಳು ಮತ್ತು ಅವು ಒದಗಿಸುವ ಕಿರು ಹಣಕಾಸಿನ ಸೌಲಭ್ಯಗಳು ಸಾಂದರ್ಭಿಕ ಅನುಕೂಲಗಳನ್ನು ಒದಗಿಸಿವೆ. ಹೀಗೆ ಗ್ರಾಮೀಣ ಮಹಿಳೆಯರ ಬದುಕನ್ನು ಅತ್ಯಂತ ಮೇಲ್ಮಟ್ಟದಲ್ಲಿ ಬೆಳಗುವ ಹಂತದಲ್ಲಿ ಈ ಮೇಲೆ ಗುರುತಿಸಿದ ಎಲ್ಲಾ ಪರಿಕಲ್ಪನೆಗಳು ಔಚಿತ್ಯಪೂರ್ಣವೆನಿಸಿವೆ.

ಸ್ವ ಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಕುಂದಾಪುರ ತಾಲೂಕನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯಲ್ಲಿ ಈ ಅಧ್ಯಯನ ಆಕೃತಿಗೊಂಡಿದೆ. ಮುಖ್ಯವಾಗಿ ಕುಂದಾಪುರ ತಾಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳನ್ನು ಕೇಂದ್ರವಾಗಿರಿಸಿಕೊಂಡು ಈ ಸ್ವಸಹಾಯ ಗುಂಪುಗಳ ಮುಲಕ ಉಂಟಾಗಿರುವ ಗ್ರಾಮಿಣ ಮಹಿಳೆಯರ ಸಬಲೀಕರಣದ ಆಯಾಮಗಳನ್ನು ಗುರುತಿಸುವುದು ಮತ್ತು ಶೋಧಿಸುವುದು ಈ ಅಧ್ಯಯನದ ಹಿಂದಿನ ಕಾಳಜಿಯಾಗಿದೆ. ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆ ಕುರಿತಂತೆ ಈಗಾಗಲೇ ವೈವಿಧ್ಯಮಯ ಮಾದರಿಯ ಅಧ್ಯಯನಗಳು ನಡೆದಿವೆ. ಈ ಪ್ರತಿಯೊಂದು ಪರಿಕಲ್ಪನೆಯ ಕುರಿತಂತೆ ಮತ್ತು ಈ ಪರಿಕಲ್ಪನೆಗಳ ನಡುವಿನ ಸಹಸಂಬಂಧದ ಸ್ವರೂಪದ ಕುರಿತಂತೆ ಪ್ರತ್ಯೇಕ ಅಧ್ಯಯನಗಳು ನಡೆದಿವೆ. ಅಂತೆಯೇ ಈ ಮೂರು ಪರಿಕಲ್ಪನೆಗಳ ಕುರಿತು ಅಂತರ್ ಶಿಸ್ತೀಯ ಮತ್ತು ಬಹುಶಿಸ್ತೀಯ ನೆಲೆಯಲ್ಲಿ ಸಹ ಸಮೀಕ್ಷೆ, ಅಧ್ಯಯನ ಮತ್ತು ಸಂಶೋಧನೆಗಳು ಕಾಲದಿಂದ ಕಾಲಕ್ಕೆ ಅವಕಾಶಗಳ ಲಭ್ಯತೆಯ ನೆಲೆಯಲ್ಲಿ ನಡೆಯುತ್ತ ಬಂದಿವೆ. ಈ ಪರಿಕಲ್ಪನೆಗಳನ್ನು ಸಾಂದರ್ಭಿಕವಾಗಿ ಕರ್ನಾಟಕ ಕರಾವಳಿಗೆ ಮತ್ತು ಕುಂದಾಪುರ ತಾಲೂಕಿಗೆ ಅನ್ವಯಿಸಿ ನೋಡುವ ಆನ್ವಯಿಕ ಮಾದರಿಯ ಬರಹಗಳು ಬೆರಳೆಣಿಕೆಯ ಸಂಖ್ಯೆಯಲ್ಲಿ ಪ್ರಕಟವಾಗಿವೆ. ಹೀಗೆ ಅಧ್ಯಯನ ನಡೆಸುವ ಸಂದರ್ಭದಲ್ಲಿ ಹಲವು ಬಗೆಯ ತಾತ್ವಿಕ ಚೌಕಟ್ಟನ್ನು ಮತ್ತು ಸೈದ್ಧಾಂತಿಕ ನೆಲೆಗಟ್ಟನ್ನು ಅಳವಡಿಸಕೊಳ್ಳಲಾಗಿದೆ. ಈವರೆಗೆ ನಡೆದ ಬಹುಮುಖಿ ಅಧ್ಯಯನಗಳು ವಿವರಣಾತ್ಮಕ ವಿಶ್ಲೇಷಣಾತ್ಮಕ ಮತ್ತು ತೌಲನಿಕ ಮಾದರಿಗಳಲ್ಲಿ ರೂಪ ಪಡೆದಿವೆ. ಅಂತೆಯೇ ಇವುಗಳಲ್ಲಿ ಕೆಲವು ಅಧ್ಯಯನಗಳು ಸ್ವ ಸಹಾಯ ಗುಂಪು ಮತ್ತು ಗ್ರಾಮೀಣ ಮಹಿಳೆಯರ ಸಂಬಲೀಕಣರಕ್ಕೆ ಸಂಬಂಧಿಸಿದ ಹಲವು ಮಹತ್ವದ ಫಲಿತಗಳನ್ನು ನೀಡಿವೆ. ಈವರೆಗೆ ಪ್ರಕಟವಾದ ಹಲವು ಲೇಖನಗಳು ಮತ್ತು ಸಂಶೋಧನ ಬರವಣಿಗೆಗಳು ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯ ಕುರಿತ ಸಂಶೋಧನೆಯ ಅವಕಾಶಗಳನ್ನು ವಿಸ್ತರಿಸಿವೆ. ಇವರ ಮುಂದುವರಿಕೆಯಾಗಿಯೇ ಈ ಮೇಲಿನ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಸ್ವ ಸಹಾಯ ಗುಂಪುಗಳ ಪರಿಕಲ್ಪನೆ ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈಗಾಗಲೇ ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ನೂರಾರು ಸಂಖ್ಯೆಯ ಲೇಖನಗಳು ನಿಯತಕಾಲಿಕೆಗಳಲ್ಲಿ ಬೆಳಕು ಕಂಡಿವೆ. ಅದೇ ವೇಳೆಗೆ ಹಲವು ಮಹತ್ವದ ಕೃತಿಗಳು ಅರಳಿವೆ. ಈ ಪರಿಕಲ್ಪನೆಯನ್ನು ಗಮನದಲ್ಲಿಸಿಕೊಂಡು ಬೇರೆ ಬೇರೆ ವಿಶ್ವವಿದ್ಯಾನಿಲಯಗಳಲ್ಲಿ ಹಲವು ಬಗೆಯ ಅಧ್ಯಯನ ಶಿಸ್ತುಗಳ ನೆರವಿನೊಂದಿಗೆ ಸಂಶೋಧನೆ ಕೆಲಸಗಳು ನಡೆದಿವೆ. ಕಾಲದಿಂದ ಕಾಲಕ್ಕೆ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಈ ಕುರಿತು ಹಲವು ವರದಿಗಳನ್ನು ಪ್ರಕಟಿಸಿವೆ. ಸ್ವ ಸಹಾಯ ಗುಂಪುಗಳ ಕಾರ್ಯಚಟುವಟಿಕೆಗಳನ್ನು ಬಿತ್ತರಿಸುವ ಪತ್ರಿಕೆಗಳು ಲಭ್ಯವಿದೆ. ಇವೆಲ್ಲವುಗಳು ಈ ಮೇಲಿನ ಅಧ್ಯಯನಕ್ಕೆ ಪೂರಕ ಆಕರಗಳಾಗಿ ಒದಗಿ ಬಂದಿವೆ.

೧.೨ ಅಧ್ಯಯನದ ಉದ್ದೇಶ

ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಕುಂದಾಪುರ ತಾಲೂಕನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯಲ್ಲಿ ಈ ಅಧ್ಯಯನ ಸಂರಚನೆಗೊಂಡಿದೆ. ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಈ ಮೂರು ಮುಖ್ಯ ಪರಿಕಲ್ಪನೆಗಳು ಅಧ್ಯಯನದ ತಾತ್ವಿಕ ತಳಹದಿಯನ್ನು ನಿರ್ದರಿಸಿವೆ. ಈ ಪರಿಕಲ್ಪನೆಗಳನ್ನು ಕೇಂದ್ರವಾಗಿರಿಸಿಕೊಂಡು ಇವುಗಳ ನಡುವಿನ ಸಹಸಂಬಂಧದ ನೆಲೆಗಳನ್ನು ಗುರುತಿಸಿಕೊಳ್ಳುವ ಧ್ಯೇಯವನ್ನಿರಿಸಿಕೊಂಡು ಈ ಅಧ್ಯಯನ ಆಕೃತಿ ಪಡೆದಿದೆ. ಈ ಪರಿಕಲ್ಪನೆಗಳನ್ನು ಸೈದ್ಧಾಂತಿಕವಾಗಿ ಅರ್ಥೈಸಿಕೊಂಡು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಕುಂದಾಪುರ ತಾಲೂಕಿನಲ್ಲಿ ಉಂಟುಮಾಡಿರುವ ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಕುರಿತು ಅಧ್ಯಯನ ವಿಶೇಷವಾಗಿ ಬೆಳಕು ಚೆಲ್ಲುತ್ತದೆ. ಕೃಷಿ ಕಾರ್ಮಿಕರು ಮತ್ತು ಇತರ ಕೂಲಿ ಕಾರ್ಮಿಕರು ಬೃಹತ್ ಪ್ರಮಣದಲ್ಲಿರುವ ಕರ್ನಾಟಕ ಕರಾವಳಿಯ ಕುಂದಾಪುರ ತಾಲೂಕಿನಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣವನ್ನು ಯಶಸ್ವಿಯಾಗಿ ಸಾಧಿಸುವ ಹಂತದಲ್ಲಿ ಸ್ವಸಹಾಯ ಗುಂಪುಗಳು ಮತ್ತು ಅವುಗಳ ಮೂಲಕ ಪ್ರಾಪ್ತವಾಗುವ ಕಿರು ಹಣಕಾಸು ವಹಿಸುವ ಪಾತ್ರದ ಸ್ವರೂಪವನ್ನು ಅಧ್ಯಯನ ವಿಶ್ಲೇಷಿಸುತ್ತದೆ. ಮುಖ್ಯವಾಗಿ ಈ ಪರಿಸರದಲ್ಲಿ ಇತರ ಸಂಸ್ಥೆಗಳು ಹುಟ್ಟುಹಾಕಿದ ಸ್ವಸಹಾಯ ಗುಂಪುಗಳಿಗಿಂತ ಭಿನ್ನವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರ ಕೌಟುಂಬಿಕ ಮತ್ತು ಸಾಮಾಜಿಕ ಬದುಕನ್ನು ಪುನರುಜ್ಜೀವನಗೊಳಿಸುತ್ತಿರುವ ಕೈಂಕರ್ಯವನ್ನು ಮತ್ತು ಅಲ್ಲಿ ಎದುರಾದ ಸಮಸ್ಯೆ-ಸವಾಲುಗಳನ್ನು ಅಧ್ಯಯನ ವಿವೇಚಿಸಿದೆ. ಈ ಎಲ್ಲಾ

ಸಂಗತಿಗಳನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಂಡು ಅಧ್ಯಯನದ ಮುಖ್ಯ ಉದ್ದೇಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ.

- ಸಬಲೀಕರಣ ಪರಿಕಲ್ಪನೆಯ ಸ್ವರೂಪ, ವಿನ್ಯಾಸ, ವಿಧಗಳು, ಅದರ ತಾತ್ವಿಕ ಮತ್ತು ಪ್ರಾಯೋಗಿಕ ಆಯಾಮಗಳ ಕುರಿತು ವಿಶ್ಲೇಷಿಸುವುದು.

- ಭಾರತದ ಸಂದರ್ಭದಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯ ಮುಂದಿರುವ ಸವಾಲು ಮತ್ತು ಸಾಧ್ಯತೆಗಳ ಕುರಿತು ಅರುಹುವುದು.

- ಕಿರು ಹಣಕಾಸಿನ ಪರಿಕಲ್ಪನೆ, ಸ್ವರೂಪ, ವ್ಯಾಪ್ತಿ ಮತ್ತು ಅದರ ಸಾಮಾನ್ಯ ವೈಶಿಷ್ಟ್ಯಗಳ ಕುರಿತು ಚರ್ಚಿಸುವುದು ಮತ್ತು ಭಾರತೀಯ ಸಂದರ್ಭದಲ್ಲಿ ಇದು ರೂಪುತಳೆದ ಚಾರಿತ್ರಿಕ ಸಂದರ್ಭ ಮತ್ತು ಅದರ ಬೆಳವಣಿಗೆಯ ಹಂತಗಳನ್ನು ಗುರುತಿಸುವುದು.

- ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಕಿರು ಹಣಕಾಸಿನ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳು ವಹಿಸಿರುವ ಪಾತ್ರ ಮತ್ತು ಉಂಟುಮಾಡಿರುವ ಪರಿಣಾಮಗಳ ಸ್ವರೂಪವನ್ನು ಗುರುತಿಸುವುದು.

- ಸ್ವಸಹಾಯ ಗುಂಪುಗಳ ಪರಿಕಲ್ಪನೆ, ಸ್ವರೂಪ, ವಿನ್ಯಾಸ ಮತ್ತು ಅದರ ಮಹತ್ವದ ಉದ್ದೇಶಗಳ ಕುರಿತು ವಿವರಿಸುವುದು ಮತ್ತು ಸ್ವಸಹಾಯ ಗುಂಪುಗಳು ಹುಟ್ಟಿಕೊಂಡ ಚಾರಿತ್ರಿಕ ಸಂದರ್ಭ ಮತ್ತು ಅದರ ಬೆಳವಣಿಗೆಯ ಹಂತಗಳನ್ನು ಅರ್ಥೈಸುವುದು.

- ಸ್ವಸಹಾಯ ಗುಂಪುಗಳು ಹಳ್ಳಿಯ ಪರಿಸರದಲ್ಲಿ ಉಂಟುಮಾಡಿರುವ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಮತ್ತು ಶೈಕ್ಷಣಿಕ ಕ್ರಾಂತಿಯ ವಿನ್ಯಾಸಗಳನ್ನು ಗುರುತಿಸುವುದು. ಅಂತೆಯೇ ಇವು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಉಂಟುಮಾಡಿರುವ ಬದಲಾವಣೆಯ ಸ್ವರೂಪವನ್ನು ವಿವರಿಸುವುದು.

- ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಈ ಮೂರು ಪರಿಕಲ್ಪನೆಗಳ ನಡುವಿನ ತಾತ್ವಿಕ ಮತ್ತು ಸೈದ್ಧಾಂತಿಕ ಸಂಬಂಧದ ನೆಲೆಗಳನ್ನು ವಿಮರ್ಶಿಸುವುದು.

- ಸ್ವಸಹಾಯ ಗುಂಪುಗಳಿಗೆ ಆರ್ಥಿಕ ನೆರವು ಒದಗಿಸುವ ಕಿರು ಹಣಕಾಸಿನ ಸರಕಾರ ಮತ್ತು ಸರಕಾರೇತರ ಮೂಲಗಳನ್ನು ಗುರುತಿಸುವುದು ಮತ್ತು ಆ ಮೂಲಗಳು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯ ಹಂತದಲ್ಲಿ ಸಕಾಲಿಕವಾಗಿ ನೆರವಾದ ವಿನ್ಯಾಸಗಳನ್ನು ವಿವರಿಸುವುದು.

- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪರಿಕಲ್ಪನೆ, ಸ್ವರೂಪ ಮತ್ತು ವ್ಯಾಪ್ತಿಯ ಕುರಿತು ಪರಿಚಯಿಸುವುದು. ಗ್ರಾಮಾಭಿವೃದ್ಧಿಗೆ ಧರ್ಮಸ್ಥಳ ಮಾದರಿ ಪ್ರೇರಕ ಶಕ್ತಿಯಾಗಿ ಒದಗಿಬಂದ ಚಾರಿತ್ರಿಕ ಸಂದರ್ಭದ ವಿಶ್ಲೇಷಣೆ.

- ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ಥೂಲ ಪರಿಚಯ ಒದಗಿಸುವುದು. ಯೋಜನೆಯು ಬೆಳ್ತಂಗಡಿ ತಾಲೂಕಿನಲ್ಲಿ ಸಾಧಿಸಿದ ಕ್ರಾಂತಿಯ ಪುಟಗಳನ್ನು ಪರಿಚಯಿಸುವುದು, ಅದು ಇತರ ತಾಲೂಕು ಮತ್ತು ಜಿಲ್ಲೆಗಳಿಗೆ ವಿಸ್ತರಿಸುತ್ತ ಬಂದ ಆಯಾಮಗಳನ್ನು ಪರಿಚಯಿಸುವುದು.

- ಶ್ರೀ ಕ್ಷೇತ್ರ ಧರ್ಮಶ್ತಳ ಗ್ರಾಮಾಭಿವೃದ್ಧಿ ಯೋಜನೆಯ ಸಾಮಾಜಿಕ ಉಪಯುಕ್ತ ವಿಸ್ತರಣಾ ಚಟುವಟಿಕೆಗಳ ಸ್ವರೂಪ ಮತ್ತು ಉದ್ದೇಶಗಳ ಕುರಿತು ಚರ್ಚಿಸುವುದು.

- ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ ನೆಲೆಯೂರಿದ ಚಾರಿತ್ರಿಕ ಸಂದರ್ಭವನ್ನು ಗುರುತಿಸುವುದು. ಯೋಜನೆಯ ಬಹುಮುಖಿ ಚಟುವಟಿಕೆಗಳು ಇಲ್ಲಿ ಅನುಷ್ಠಾನಗೊಂಡ ಸಂಗತಿಗಳನ್ನು ಅಂಕಿ ಅಂಶಗಳ ಮೂಲಕ ತಿಳಿಯಪಡಿಸುವುದು.

- ಕುಂದಾಪುರ ತಾಲೂಕಿನಲ್ಲಿ ಸಾಮಾಜಿಕ ಅಸಮಾನ ಸಂಬಂಧದ ಸ್ವರೂಪವನ್ನು ನಿವಾರಿಸುವ ಹಂತದಲ್ಲಿ ಯೊಜನೆಯ ಸ್ವಸಹಾಯ ಗುಂಪುಗಳು ಮತ್ತು ಕಾರ್ಯಚಟುವಟಿಕೆಗಳು ವಹಿಸಿದ ಪಾತ್ರದ ನೆಲೆಗಳನ್ನು ಪರಿಚಯಿಸುವುದು.

- ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರುಗಳ ಸಾಮಾನ್ಯ ಜೀವನಕ್ರಮ, ಜೀವನಾಧಾರ ವೃತ್ತಿ ಮೊದಲಾದ ವಿಚಾರಗಳೆಡೆಗೆ ಬೆಳಕು ಚೆಲ್ಲುವುದು.

- ಯೋಜನೆಯ ಸಹಭಾಗಿಗಳಾದ ನಂತರದ ದಿನಗಳಲ್ಲಿ ಇಲ್ಲಿನ ಗ್ರಾಮೀಣ ಮಹಿಳೆಯರ ಔದ್ಯೋಗಿಕ, ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ಉಂಟಾದ ಬದಲಾವಣೆಯ ಸ್ವರೂಪವನ್ನು ಗುರುತಿಸುವುದು.

ಹೀಗೆ ಹಳ್ಳಿಯ ಮೂಲೆಗಳಲ್ಲಿ ಬದುಕು ಕಟ್ಟಿಕೊಂಡ ಮತ್ತು ಬಡತನದ ಬೇಗೆಯಲ್ಲಿ ಬಳಲುತ್ತಿರುವ ಜನಸಮುದಾಯದ ಅದರಲ್ಲೂ ವಿಶೇಷವಾಗಿ ಮಹಿಳೆಯರ ಜೀವನಮಟ್ಟವನ್ನು ಬಹುವಿಧದಲ್ಲಿ ಸುಧಾರಿಸುವ ಹಂತದಲ್ಲಿ ಸ್ವಸಹಾಯ ಗುಂಪುಗಳು ನಿರ್ವಹಿಸುವ ಪಾತ್ರ ಮತ್ತು ಹೊಣೆಗಾರಿಕೆಯನ್ನು ವಿವೇಚಿಸುವುದು ಅಧ್ಯಯನದ ಹಿಂದಿನ ಮುಖ್ಯ ಧೋರಣೆಯಾಗಿದೆ. ಈ ತಾತ್ವಿಕ ಗ್ರಹಿಕೆಯನ್ನು ಆಧಾರವಾಗಿರಿಸಿಕೊಂಡು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಮಾಜಮುಖಿ ಕಾರ್ಯಕ್ರಮಗಳು ಕರಾವಳಿ ಪರಿಸರದಲ್ಲಿ, ಮುಖ್ಯವಾಗಿ ಕುಂದಾಪುರ ಪರಿಸರದಲ್ಲಿ ಕೈಗೊಂಡ ಸಾರ್ವಜನಿಕ ಉಪಯುಕ್ತ ಕಾರ್ಯಗಳನ್ನು ಒರೆಗೆ ಹಚ್ಚುವುದು ಅಧ್ಯಯನದ ಪ್ರಯತ್ನವಾಗಿದೆ.

೧.೩ ಅಧ್ಯಯನ ವಿಧಾನ

ಈ ಅಧ್ಯಯನವು ಬಹುತೇಕವಾಗಿ ಕ್ಷೇತ್ರಕಾರ್ಯ ಆಧರಿತ ಅಧ್ಯಯನವಾಗಿದೆ. ಕ್ಷೇತ್ರಕಾರ್ಯದ ಮೂಲಕ ದೊರೆಯುವ ಮಾಹಿತಿಗಳನ್ನು ಆಧರಿಸಿ ಈ ಅಧ್ಯಯನವು ಸಂರಚನೆಗೊಂಡಿದೆ. ಅಂತೆಯೇ ಈ ಮಾಹಿತಿಗಳನ್ನು ಆದರಿಸಿ ಕೆಲವು ನಿರ್ಣಯಗಳನ್ನು ಪ್ರಕಟಪಡಿಸಲಾಗುತ್ತದೆ. ಈ ಅಧ್ಯಯನವು ತನ್ನ ವಿಷಯವಸ್ತುವಿಗೆ ಅನುಗುಣವಾಗಿ ರೂಪಿಸಿದ ಊಹಾಕಲ್ಪನೆಯನ್ನು ಆಧರಿಸಿಯೇ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಅಧ್ಯಯನದ ಊಹಾಕಲ್ಪನೆ ಮತ್ತು ಸಂಗ್ರಹಿತ ಮಾಹಿತಿಗೆ ಅನುಗುಣವಾಗಿ ಸಂಶೋಧನ ಸಮಸ್ಯೆ ಎದುರಾಗುತ್ತದೆ. ಹೀಗೆ ಎದುರಾದ ಸಂಶೋಧನ ಸಮಸ್ಯೆಯನ್ನು ಬೇರೆ ಬೇರೆ ಮಾದರಿಗಳಲ್ಲಿ ಬಗೆಹರಿಸಿಕೊಳ್ಳುತ್ತಲೇ ಈ ಅಧ್ಯಯನವು ಕೆಲವು ಫಲಿತಗಳನ್ನು ಮುಂದಿಡುತ್ತದೆ.

ಈ ಸಮೀಕ್ಷಾ ಅಧ್ಯಯನವು ತನ್ನ ಕ್ಷೇತ್ರಕಾರ್ಯದ ಆವರಣವನ್ನಾಗಿ ಕುಂದಾಪುರ ತಾಲೂಕನ್ನು ಆಯ್ದುಕೊಂಡಿದೆ. ಮಾಹಿತಿಗಳ ಸಮರ್ಪಕ ಲಭ್ಯತೆ ಮತ್ತು ವ್ಯಾಪಕವಾದ ಪ್ರಾದೇಶಿಕ ಅವಕಾಶಗಳ ಹಿನ್ನೆಲೆಯಲ್ಲಿ ಕುಂದಾಪುರ ತಾಲೂಕನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ನಿಗದಿಗೊಳಿಸಲಾಗಿದೆ. ಅಧ್ಯಯನಕ್ಕೆ ಸ್ಪಷ್ಟ, ನಿಖರ ಮತ್ತು ವ್ಯವಸ್ಥಿತ ಚೌಕಟ್ಟು ದೊರೆಯಬೇಕಾಗಿರುವ ಹಿನ್ನೆಲೆಯಲ್ಲಿ ಈ ವ್ಯಾಪ್ತಿ ನಿರ್ಣಾಯಕವೆನಿಸಿದೆ. ಕುಂದಾಪುರ ತಾಲೂಕಿನ ಭೌಗೋಳಿಕ ಗಡಿರೇಖೆಗಳನ್ನು ದೃಷ್ಟಿಯಲ್ಲಿರಿಸಿಕೊಂಡೇ

ಕ್ಷೇತ್ರಕಾರ್ಯದ ಪ್ರದೇಶಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಕುಂದಾಪುರ ತಾಲೂಕಿನ ಮೂರು ವಿವಿಧ ವಲಯಗಳಲ್ಲಿನ ನೂರ ಒಂದು ಗ್ರಾಮಗಳಲ್ಲಿ ತೀರಾ ಹಿಂದುಳಿದ ಹಲವು ಗ್ರಾಮಗಳನ್ನು ಕ್ಷೇತ್ರಕಾರ್ಯದ ವ್ಯಾಪ್ತಿಯೊಳಗೆ ತರಲಾಗಿದೆ. ಸಾಮಾಜಿಕ ಮತ್ತು ಆರ್ಥಿಕ ಅವಕಾಶಗಳಿಂದ ವಂಚಿತರಾದ ಸಮುದಾಯಗಳು ನೆಲೆ ಕಂಡಿರುವ ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳನ್ನು ಆದ್ಯತೆಯ ಮೇರೆಗೆ ಕ್ಷೇತ್ರಕಾರ್ಯಕ್ಕಾಗಿ ಆಯ್ದುಕೊಳ್ಳಲಾಗಿದೆ.

ಕುಂದಾಪುರ ತಾಲೂಕಿನ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಈ ಅಧ್ಯಯನ ಕೇಂದ್ರಿತ ಕ್ಷೇತ್ರಕಾರ್ಯದ ಮುಖ್ಯ ಆಕರವಾಗಿವೆ. ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರುಗಳು ಕ್ಷೇತ್ರಕಾರ್ಯದ ಮಾಹಿತಿದಾರರಾಗಿದ್ದಾರೆ. ಕುಂದಾಪುರ ತಾಲೂಕಿನ ವಿವಿಧ ಭೌಗೋಳಿಕ ವಲಯಗಳಲ್ಲಿನ ಒಟ್ಟು ಹತ್ತು ಗ್ರಾಮಗಳನ್ನು ಮಾದರಿ ಸಮೀಕ್ಷೆಯ ವ್ಯಾಪ್ತಿಯೊಳಗೆ ತರಲಾಗಿದೆ. ಹೀಗೆ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಳ್ಳುವಾಗ ವೈವಿಧ್ಯಮಯ ಭೌಗೋಳಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳ ಗ್ರಾಮೀಣ ಪ್ರದೇಶಗಳನ್ನು ಕೇಂದ್ರೀಯ ದೃಷ್ಟಿಯಲ್ಲಿರಿಸಿಕೊಂಡು ಗಮನಹರಿಸಲಾಗಿದೆ. ಸ್ವಸಹಾಯ ಗುಂಪುಗಳ ಮೂಲಕ ಸಾಮುದಾಯಿಕ ಪಾಲ್ಗೊಳ್ಳುವಿಕೆ ಮತ್ತು ಸಾಮಾಜಿಕ ಅವಕಾಶಗಳನ್ನು ಪಡೆದ ಮಹಿಳಾ ಸದಸ್ಯರುಗಳನ್ನು ಮಾಹಿತಿಯ ಆಗರವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಮಹಿಳಾ ಸದಸ್ಯರುಗಳು ಸ್ವಸಹಾಯ ಗುಂಪಿಗೆ ಸೇರುವ ಮೊದಲು ಮತ್ತು ನಂತರದ ದಿನಗಳಲ್ಲಿ ಉಂಟಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸ್ವರೂಪವನ್ನು ಈ ಸಮೀಕ್ಷೆಯ ಮೂಲಕ ಗುರುತಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೇಂದ್ರಿತ ಸಮೀಕ್ಷಾ ಅಧ್ಯಯನಕ್ಕೆ ಅನುಗುಣವಾಗಿ ಪ್ರಶ್ನಾವಳಿಯೊಂದನ್ನು ರೂಪಿಸಲಾಗಿದೆ. (ಪ್ರಶ್ನಾವಳಿ ಮಾದರಿಯನ್ನು ಈ ನಿಬಂಧದ ಅನುಬಂಧ ೧ರಲ್ಲಿ ನೀಡಲಾಗಿದೆ) ಅಧ್ಯಯನದ ಪ್ರಾಥಮಿಕ ಆಕರವನ್ನಾಗಿ ಈ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸ್ವ ಸಹಾಯ ಗುಂಪುಗಳ ಕ್ರಿಯಾಚರಣೆ, ಅವುಗಳ ಸ್ವರೂಪ, ಗ್ರಾಮೀಣ ಪ್ರದೇಶದಲ್ಲಿ ಅವುಗಳ ಅಸ್ತಿತ್ವ, ಸದಸ್ಯರುಗಳ ಪಾಲ್ಗೊಳ್ಳುವಿಕೆ, ಈ ಗುಂಪುಗಳ ಮೂಲಕ ಸ್ವಾವಲಂಬನೆಯನ್ನು ಕಂಡುಕೊಳ್ಳುವ ಬಗೆ, ಗ್ರಾಮೀಣ ಮಹಿಳೆಯರ ಸಹಭಾಗಿತ್ವ, ಮಹಿಳೆಯರ ಶ್ರೇಯೋಭಿವೃದ್ಧಿ ಮೊದಲಾದ ಸಂಗತಿಗಳನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಲಾಗಿದೆ. ಪ್ರಶ್ನಾವಳಿಯನ್ನು ರೂಪಿಸುವ ಹಂತದಲ್ಲಿ ಸ್ವ ಸಹಾಯ ಗುಂಪುಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರ ಕೌಟುಂಬಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಗಮನದಲ್ಲಿಸಿಕೊಂಡು ಸಿದ್ಧಪಡಿಸಲಾಗಿದೆ. ಮಾಹಿತಿದಾರರ ವೈಯಕ್ತಿಕ ಮತ್ತು ಕೌಟುಂಬಿಕ ವಿವರಗಳನ್ನು ಒಳಗೊಂಡಂತೆ ಪ್ರಶ್ನಾವಳಿ ಬೆಳೆಯುತ್ತದೆ. ಅಧ್ಯಯನದ ತಾತ್ವಿಕ ತಳಹದಿಗೆ ದೃಢತೆಯನ್ನು ಒದಗಿಸುವ

ನಿಟ್ಟಿನಲ್ಲಿ ಈ ವೈಯಕ್ತಿಕ ವಿವರಗಳು ಸಾಂದರ್ಭಿಕ ಮಹತ್ವ ಪಡೆಯುತ್ತದೆ. ಪ್ರಶ್ನಾವಳಿ ಒಳಗೊಳ್ಳುವ ಬಹುತೇಕ ಪ್ರಶ್ನೆಗಳು ವಸ್ತುನಿಷ್ಠ ಮಾದರಿಯಲ್ಲಿರುತ್ತವೆ. ಮುಂದೆ ರೂಪಿಸಲಾಗುವ ಅಂಕಿ ಅಂಶಗಳಿಗೆ ನೆರವಾಗುವಂತೆ ಪ್ರಶ್ನಾವಳಿಯನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಕುಂದಾಪುರ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಗುಂಪಿಗೆ ಸೇರಲು ಪ್ರೇರಕವಾದ ಅಂಶಗಳು, ಗುಂಪಿನ ಮೂಲಕ ಆಂತರಿಕ ಮತ್ತು ಪ್ರಗತಿನಿಧಿ ಸಾಲ ಸೌಲಭ್ಯ ಪಡೆದ ಮಾದರಿ, ಸದಸ್ಯರುಗಳ ಔದ್ಯೋಗಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಉಂಟಾದ ಬದಲಾವಣೆಯ ಸ್ವರೂಪದ ಕುರಿತ ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಪಡೆಯಲಾಗುತ್ತದೆ. ಒಟ್ಟಿನಲ್ಲಿ ಮಾದರಿ ಸಮೀಕ್ಷೆಗಾಗಿ ಸಿದ್ಧಪಡಿಸಿದ ಪ್ರಶ್ನಾವಳಿಯ ಮೂಲಕ ಲಭ್ಯವಾದ ಅಂಕಿ ಅಂಶಗಳನ್ನು ಆದರಿಸಿ ಅಧ್ಯಯನ ಬೆಳೆಯುತ್ತದೆ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳು ಬೃಹತ್ ಪ್ರಮಾಣದಲ್ಲಿದ್ದು, ಕಳೆದ ಹಲವು ವರ್ಷಗಳಿಂದೀಚೆಗೆ ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನು ಉಂಟು ಮಾಡಿರುವುದು ಈ ಅಧ್ಯಯನದ ಹಿಂದಿನ ಕಾಳಜಿಯಾಗಿದೆ. ಇಲ್ಲಿನ ಎಲ್ಲಾ ನೂರ ಒಂದು ಗ್ರಾಮಗಳಲ್ಲಿಯೂ ಸಹಸ್ರಾರು ಸಂಖ್ಯೆಯಲ್ಲಿ ಸ್ವಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿದ್ದು ಅಧ್ಯಯನದ ಅವಕಾಶ ಮತ್ತು ವ್ಯಾಪ್ತಿಯನ್ನು ಗಮನದಲ್ಲಿರಿಸಿಕೊಂಡು ಪ್ರಾತಿನಿಧಿಕವಾಗಿ ವಿವಿಧ ಗ್ರಾಮೀಣ ಪ್ರದೇಶಗಳಿಂದ ಆಯ್ದ ನೂರು ಗುಂಪುಗಳನ್ನು ಮಾದರಿ ಸಮೀಕ್ಷೆಗಾಗಿ ಬಳಸಿಕೊಳ್ಳಲಾಗಿದೆ. ಪ್ರತಿ ಗುಂಪಿನ ಅಧ್ಯಕ್ಷರು, ಕಾರ್ಯದರ್ಶಿ ಅಥವಾ ಓರ್ವ ಸದಸ್ಯರನ್ನು ನಿರ್ದಿಷ್ಟ ಗುಂಪಿನ ಮತ್ತು ಆ ಪರಿಸರದ ಪ್ರತಿನಿಧಿಯನ್ನಾಗಿರಿಸಿಕೊಂಡು ಮಾದರಿ ಸಮೀಕ್ಷೆಯ ಮಾಹಿತಿದಾರರನ್ನಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ವಿಭಿನ್ನ ಭೌಗೋಳಿಕ ಪರಿಸರದ, ವಿಭಿನ್ನ ಸಮುದಾಯಗಳ ಮತ್ತು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿರುವ ಗ್ರಾಮೀಣ ಮಹಿಳೆಯರನ್ನು ಗುರುತಿಸಿಕೊಳ್ಳಲಾಗಿದೆ. ಇದರೊಂದಿಗೆ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವ ಹಂತದಲ್ಲಿ ವಿಭಿನ್ನ ವಯೋಮಾನವನ್ನು ಪ್ರತಿನಿಧಿಸುವ ವ್ಯಕ್ತಿಗಳು ನಿರ್ಣಯಕವೆನಿಸುತ್ತಾರೆ. ಈ ಎಲ್ಲಾ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡೆ ಮಾದರಿ ಸಮೀಕ್ಷೆ ರೂಪುಗೊಳ್ಳುತ್ತದೆ.

ಈ ಅಧ್ಯಯನದ ಸಂದರ್ಭದಲ್ಲಿ ಪ್ರಶ್ನಾವಳಿಯನ್ನು ಪ್ರಾಥಮಿಕ ಆಕರವಾಗಿ ಬಳಸಿಕೊಂಡರೆ ಸಂದರ್ಶನ ಮಾದರಿಯನ್ನು ದ್ವಿತೀಯ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ. ಪ್ರ.ಶ್ನಾವಳಿಯ ಮೂಲಕ ಲಭ್ಯವಾದ ಮಹಿತಿಗಳಿಗೆ ಪೂರಕವಾಗಿ ಸಂದರ್ಶನದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯ ಮೂಲಕ ಪ್ರಾಪ್ತವಾಗದ ಹಲವು ವಿಶಿಷ್ಟ ಮತ್ತು ವಿಮರ್ಶಾತ್ಮಕ ವಿಚಾರಗಳು ಸಂದರ್ಶನದ ಮೂಲಕ ದೊರೆಯುತ್ತದೆ.

ಸಂದರ್ಶನ ಮಾದರಿಯ ಮೂಲಕ ಸ್ಪಷ್ಟ, ನಿಖರ ಮತ್ತು ವಿಶ್ಲೇಷಣಾತ್ಮಕ ವಿವರಗಳನ್ನು ಪಡೆಯಲು ಸಾಧ್ಯವಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಪ್ರಮುಖರ ಜೊತೆ ಸಂವಾದ ನಡೆಸುವ ಮೂಲಕ ಈ ಅಧ್ಯಯನ ಇನ್ನಷ್ಟು ದೃಢವಾಗುತ್ತದೆ. ಅಂದರೆ ಈ ಯೋಜನೆಯ ಅಧ್ಯಕ್ಷರು, ಕಾರ್ಯನಿರ್ವಾಹಕ ನಿರ್ದೇಶಕರಿಂದ ತೊಡಗಿ ನಿರ್ದೇಶಕರುಗಳು, ಯೋಜನಾಧಿಕಾರಿಗಳು, ವಲಯ ಮೇಲ್ವಿಚಾರಕರು ಸೇವಾ ನಿರತರು, ಒಕ್ಕೂಟದ ಅಧ್ಯಕ್ಷರು, ಸಲಹೆಗಾರರು ಮೊದಲಾದವರನ್ನು ಸಂದರ್ಶಿಸಿ ಆ ಮೂಲಕ ದೊರೆಯುವ ವಿವರಗಳನ್ನು ಅಧ್ಯಯನಕ್ಕೆ ಪೂರಕವಾಗಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಸಂದರ್ಶನದ ಮೂಲಕ ಪ್ರಕಟಗೊಂಡ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಪಾರದರ್ಶಕ ಮಾಹಿತಿಗಳನ್ನು ಅಧ್ಯಯನ ಸಂಬಂಧಿ ವಿವರಣೆಗಳಿಗೆ ಪೂರಕವಾಗಿ ಬಳಸಿಕೊಳ್ಳಲಾಗುತ್ತದೆ. ಇನ್ನೊಂದೆಡೆಯಲ್ಲಿ ಗ್ರಾಮಾಭಿವೃದ್ಧಿ ಯೋಜನೆಯಿಂದ ಹೊರಗುಳಿದ ಸಮಾಜದ ಇತರ ವ್ಯಕ್ತಿಗಳನ್ನು ಸಂದರ್ಶಿಸುವ ಮೂಲಕ ಭಿನ್ನ ಮಾದರಿಯ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ದೃಶ್ಯ ಮತ್ತು ಶ್ರವಣ ಸಾಧನಗಳನ್ನು ಬಳಸಿಕೊಂಡು ಸಂದರ್ಶನದ ಕೆಲಸಗಳನ್ನು ನಿರ್ವಹಿಸಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕುರಿತಂತೆ ಪತ್ರಿಕೆ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಕಟಗೊಂಡ ಬರಹ, ಸುದ್ದಿ ಮತ್ತು ನುಡಿ ಚಿತ್ರಗಳನ್ನು ಅಗತ್ಯಕ್ಕೆ ಅನುಗುಣವಾಗಿ ಅಥವಾ ಸಂದರ್ಭೋಚಿತವಾಗಿ ಅಲ್ಲಲ್ಲಿ ಅಧ್ಯಾಯ ಟಿಪ್ಪಣೆಗಳೊಂದಿಗೆ ಬಳಸಿಕೊಳ್ಳಲಾಗುತ್ತದೆ. ಈ ವಿವರಗಳು ಯೋಜನೆಯ ಸಾಧ್ಯತೆ ಮತ್ತು ಮಿತಿಗಳನ್ನು ಸಮಾನ ನೆಲೆಯಲ್ಲಿ ಸ್ವೀಕರಿಸುವ ಹಿನ್ನೆಲೆಯಲ್ಲಿ ಈ ಆಕರಗಳು ಮಹತ್ವಪೂರ್ಣವೆನಿಸಿವೆ. ಇವುಗಳಲ್ಲದೆ ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಕಾಲದಿಂದ ಕಾಲಕ್ಕೆ ಪ್ರಕಟಿಸಿದ ವರದಿಗಳನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಿಕೊಳ್ಳಲಾಗಿದೆ.

ಈ ಅಧ್ಯಯನವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲ ಅಧ್ಯಾಯದಲ್ಲಿ ಅಧ್ಯಯನದ ಸ್ವರೂಪ, ವ್ಯಾಪ್ತಿ, ಮುಖ್ಯ ಉದ್ದೇಶಗಳು ಮತ್ತು ಅಧ್ಯಯನ ವಿಧಾನಗಳ ಕುರಿತು ವಿವರಿಸಲಾಗಿದೆ. ಈ ಅಧ್ಯಯನ ಕೈಗೊಳ್ಳಲು ಹಿನ್ನೆಲೆ ಮತ್ತು ಪ್ರೇರಣೆಯಾದ ಸಂಗತಿಗಳ ಕುರಿತು ಸ್ಥೂಲವಾಗಿ ಪರಿಚಯಿಸಲಾಗಿದೆ. ಅಲ್ಲದೆ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಈ ಮೊದಲು ನಡೆದ ಸಮೀಕ್ಷೆ, ವರದಿ ಮತ್ತು ಅಧ್ಯಯನಗಳಿಗಿಂತ ಇದು ಹಲವು ನೆಲೆಗಳಲ್ಲಿ ಭಿನ್ನವಾದ ಮತ್ತು ಇನ್ನು ಹಲವು ನೆಲೆಗಳಲ್ಲಿ ಅದರ ಮುಂದುವರಿಕೆಯಾಗಿಯೇ ನೆಲೆಗೊಂಡ ಆಯಾಮಗಳನ್ನು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪರಿಕಲ್ಪನೆಗಳ ಕುರಿತು ವಿವೇಚಿಸಲಾಗಿದೆ. ಈ ಮೂರು ಪರಿಕಲ್ಪನೆಗಳ ನಡುವಿನ ಅಂತರ್ ಸಂಬಂಧದ ನೆಲೆಗಳನ್ನು ಬಹುಶಿಸ್ತೀಯ ಮಾದರಿಯಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನ ನಡೆಸಲಾಗಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆ

ಆಧುನಿಕ ಸಂದರ್ಭದ ಆದ್ಯತೆಯ ವಿಷಯವಾಗಿದ್ದು ಈ ಹಿನ್ನೆಲೆಯಲ್ಲಿ ಆಕಾರ ಪಡೆದ ಸ್ವಸಹಾಯ ಗುಂಪುಗಳು ಮತ್ತು ಅವು ಒದಗಿಸಿದ ಕಿರು ಹಣಕಾಸಿನ ಪಾತ್ರ ಮತ್ತು ಸ್ವರೂಪವನ್ನು ಕುರಿತು ವಿಶ್ಲೇಷಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಗ್ರಾಮಾಭಿವೃದ್ಧಿಯ ಪರಿಕಲ್ಪನೆಗೆ ಧರ್ಮಸ್ಥಳ ಮಾದರಿ ಪೂರಕವಾಗಿ ಒದಗಿಬಂದ ವಿನ್ಯಾಸಗಳನ್ನು ಗುರುತಿಸಲಾಗಿದೆ. ಧರ್ಮಸ್ಥಳ ಕ್ಷೇತ್ರದ ಸಾಮಾಜಿಕ ಉಪಯುಕ್ತ ಮತ್ತು ವಿಸ್ತರಣಾ ಚಟುವಟಿಕೆಗಳು ಗ್ರಾಮಾಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಒದಗಿಬಂದ ವಿವಿಧ ಹಂತಗಳನ್ನು ವಿವರಿಸಲಾಗಿದೆ. ನಾಲ್ಕನೆಯ ಅಧ್ಯಾಯದಲ್ಲಿ ಶ್ರೀಕ್ಷೇತ್ರ ಧರ್ಮಶ್ತಳ ಗ್ರಾಮಾಭಿವೃದ್ಧಿ ಯೋಜನೆಯ ಕೃಷಿಪರ, ಜನಪರ ಮತ್ತು ಸಮಾಜಪರ ಚಟುವಟಿಕೆಗಳ ಕುರಿತು ಚರ್ಚಿಸಲಾಗಿದೆ. ಯೋಜನೆಯ ಅಂಗವಾಗಿ ರೂಪ ಪಡೆದ ಹಲವು ಮಹತ್ವದ ಕಾರ್ಯಕ್ರಮಗಳ ಸ್ವರೂಪ, ಪ್ರಯೋಜನ ಮತ್ತು ಜನಸಮುದಾಯವನ್ನು ತಲುಪುತ್ತಿರುವ ಬಗೆಗಳ ಕುರಿತಂತೆ ಅಂಕಿ ಅಂಶಗಳ ಮೂಲಕ ವಿವರಿಸಲಗಿದೆ. ಐದನೆಯ ಅಧ್ಯಯದಲ್ಲಿ ಕುಂಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯುಂಪುಗಳು ಗ್ರಾಮೀಣ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಪ್ರೇರಕಶಕ್ತಿಯಾಗಿ ಒದಗಿಬಂದ ಸಂಗತಿಯನ್ನು ಅಂಕಿ ಅಂಶಗಳ ಮೂಲಕ ವಿವರಿಸಲಾಗಿದೆ. ಮಾದರಿ ಸಮೀಕ್ಷೆಗಾಗಿ ಸಿದ್ಧಪಡಿಸಿದ ಪ್ರಶ್ನಾವಳಿಯ ಮೂಲಕ ಪ್ರಾಪ್ತವಾದ ದತ್ತಾಂಶಗಳನ್ನು ಕೋಷ್ಟಕ ಮತ್ತು ನಕ್ಷೆಗಳಲ್ಲಿ ವಿತ್ತರಿಸಲಾಗಿದೆ. ಅಂತೆಯೇ ಈ ದತ್ತಾಂಶಗಳ ಮೂಲಕ ಒದಗಿದ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಒಟ್ಟಿನಲ್ಲಿ ಕುಂದಾಪುರ ತಾಲೂಕಿನಲ್ಲಿ ಶ್ರೀಕ್ಷೇತ್ರ ಗ್ರಾಮಾಭಿವೃದ್ಧಿ ಯೋಜನೆ ಕಳೆದ ಐದಾರು ವರ್ಷಗಳಿಂದೀಚೆಗೆ ಶರವೇಗದಲ್ಲಿ ಹಳ್ಳಿ ಹಳ್ಳಿಗಳನ್ನು ದಾಟಿಬಂದ ಮತ್ತು ಅಲ್ಲಿ ಮಹತ್ವದ ಸಾಮಾಜಿಕ ಪರಿವರ್ತನೆಗಳನ್ನು ಉಂಟುಮಾಡಿದ ಬಗೆಗಳನ್ನು ಈ ಅಧ್ಯಯನ ತನ್ನ ವ್ಯಾಪ್ತಿಯೊಳಗೆ ದಾಖಲಿಸಲು ಪ್ರಯತ್ನಿಸಿದೆ. ಮಾರ್ಚ್, ೨೦೧೧ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಲಭ್ಯವಾದ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಆಧಾರವಾಗಿರಿಸಿಕೊಂಡು ಅಧ್ಯಯನ ಕೈಗೊಳ್ಳಲಾಗಿದೆ. ಇದು ಕುಂದಾಪುರ ತಾಲೂಕಿನ ಗ್ರಾಮೀಣ ಮಹಿಳೆಯರ ಸಬಲೀಕರಣದ ಕುರಿತ ಸಮಗ್ರ ಅಧ್ಯಯನವಲ್ಲ. ಅಥವಾ ಸಂಕೀರ್ಣ ಅಧ್ಯಯನವೂ ಅಲ್ಲ. ಗ್ರಾಮಾಭಿವೃದ್ಧಿ ಯೋಜನೆಯನ್ನು ನೆಪವಾಗಿರಿಸಿಕೊಂಡು ಕುಂದಾಪುರ ತಾಲೂಕಿನಲ್ಲಿ ಅದು ಕ್ರಿಯಾಚರಿಸಿದ ಬಗೆ ಮತ್ತು ಗ್ರಾಮೀಣ ಮಹಿಳೆಯರ ಬದುಕಿಗೆ ಆಶಾಕಿರಣವಾಗಿ ಒದಗಿಬಂದ ನೆಲೆಗಳನ್ನು ಮಾತ್ರ ಇಲ್ಲಿ ಲಭ್ಯ ಮಾಹಿತಿಗಳು ಮತ್ತು ದತ್ತಾಂಶಗಳ ಮೂಲಕ ವಿಶ್ಲೇಷಿಸಲಾಗಿದೆ.

ಅಧ್ಯಾಯ ೨

ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಪರಿಕಲ್ಪನೆ ಮತ್ತು ಸ್ವರೂಪ

ಅಧ್ಯಾಯ ೨

ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಪರಿಕಲ್ಪನೆ ಮತ್ತು ಸ್ವರೂಪ

ಸಬಲೀಕರಣ ಎಂಬ ಪದವು ಇಂಗ್ಲಿಷ್‌ನ Empowerment ಎಂಬ ಪದಕ್ಕೆ ಪರ್ಯಾಯವಾಗಿ ಬಳಕೆಯಾಗುತ್ತಿದೆ. ಸಬಲೀಕರಣ ಎಂಬುದು ಆಧುನಿಕ ಸಂದರ್ಭದಲ್ಲಿ ಉತ್ಪನ್ನಗೊಂಡ ಪರಿಕಲ್ಪನೆ. ಈ ಪದವನ್ನು ಭಾರತದ ಸಂದರ್ಭಕ್ಕೆ ಅನ್ವಯಿಸಿ ಹೇಳುವುದಾದರೆ ೨೦ನೇ ಶತಮಾನದ ಕೊನೆಯ ದಶಕದಲ್ಲಿ ಅಸ್ತಿತ್ವಕ್ಕೆ ಬಂದ ಪರಿಕಲ್ಪನೆ ಇದು. ೧೯೯೦ರ ದಶಕದಲ್ಲಿ ಭಾರತವನ್ನು ಪ್ರವೇಶಿಸಿದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಮುಂದುವರಿದ ಭಾಗವಾಗಿಯೇ ಈ ಪರಿಕಲ್ಪನೆಯನ್ನು ಅಭ್ಯಾಸ ಮಾಡಿಕೊಳ್ಳಲು ಸಾಧ್ಯವಿದೆ.

ಸಬಲೀಕರಣ ಎನ್ನುವಲ್ಲಿ ಬಲವರ್ಧನೆ ಎಂಬ ಧ್ವನಿ ಇದೆ. ಬಲವರ್ಧನೆಯ ಪ್ರಕ್ರಿಯೆಯನ್ನು ಸುಸ್ಥಿರ ಮತ್ತು ವ್ಯವಸ್ಥಿತ ಮಾದರಿಯಲ್ಲಿ ಕೈಗೊಳ್ಳುವ ಪ್ರಕ್ರಿಯೆಯೇ ಸಬಲೀಕರಣ ಎನ್ನಬಹುದು. ಇದು ವ್ಯಕ್ತಿ ಅಥವಾ ಸಮುದಾಯವೊಂದನ್ನು ಹೊಸ ಬಗೆಯಲ್ಲಿ ನಿರ್ಮಾಣ ಮಾಡುವ ಪರಿಕಲ್ಪನೆಯಾಗಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಂಚಿಗೆ ಸರಿದ ಸಮುದಾಯಗಳನ್ನು ಸಶಕ್ತಗೊಳಿಸುವುದು ಸಬಲೀಕರಣ ಪರಿಕಲ್ಪನೆಯ ಮುಂದಿರುವ ಗುರಿಯಾಗಿದೆ. ಹೀಗೆ ಸಬಲೀಕರಣದ ಹಂತದಲ್ಲಿ ಕೈಗೊಳ್ಳುವ ಬಲವರ್ಧನೆಯ ಪ್ರಕ್ರಿಯೆಯು ಸಕಾರಾತ್ಮಕವಾಗಿಯೂ ಮತ್ತು ಶಕ್ತಿಯುತವಾಗಿಯೂ ನೆಲೆಗೊಳ್ಳುತ್ತದೆ ಎಂಬುದನ್ನು ಗಮನಿಸಬೇಕು.

ಸಬಲೀಕರಣ ಎಂಬುದು ಭಾರತೀಯ ಸಂದರ್ಭದಲ್ಲಿ ತೊಂಭತ್ತರ ದಶಕದ ವಿದ್ಯಮಾನವಾಗಿದ್ದು ಇದನ್ನು "ಅಧಿಕಾರ ನೀಡುವುದು", "ತನ್ನೊಳಗೆ ಅಧಿಕಾರ ಸೃಷ್ಟಿಸುವುದು" ಮತ್ತು "ಸಮರ್ಥರನ್ನಾಗಿಸುವುದು" ಎಂದೆಲ್ಲಾ ವ್ಯಾಖ್ಯಾನಿಸಲಾಗುತ್ತದೆ.[೧] ಇದೊಂದು ಬಹು ಆಯಾಮವುಳ್ಳ ಪ್ರಕ್ರಿಯೆಯಾಗಿದ್ದು, ವ್ಯಕ್ತಿಗಳು ಮತ್ತು ಗುಂಪುಗಳು ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಪೂರ್ಣ ವ್ಯಕ್ತಿತ್ವ ಮತ್ತು ಅಧಿಕಾರಗಳನ್ನು ಮನಗಾಣುವಂತೆ ಮಾಡುತ್ತದೆ. ಪಾಶ್ಚಾತ್ಯ ಚಿಂತಕ ಕೆಲ್ಲರ್ (೧೯೯೧) ಅವರು ಅಭಿಪ್ರಾಯಪಡುವಂತೆ "ಸಬಲೀಕರಣವು ಒಂದು ಪ್ರಕ್ರಿಯೆಯಾಗಿದ್ದು, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ವೃದ್ಧಿಸುವುದಕ್ಕಾಗಿ ಆಯ್ಕೆಗಳನ್ನು ಮಾಡಿಕೊಳ್ಳಲು ತಮಗಿರುವ ವೈಯಕ್ತಿಕ ಹಕ್ಕನ್ನು ಪ್ರತಿಪಾದಿಸುವುದಕೋಸ್ಕರ, ಮತ್ತು ತಮ್ಮ ಅಧೀನತೆಯನ್ನು ಪ್ರಶ್ನಿಸುವ ಮತ್ತು ನಿವಾರಿಸುವಲ್ಲಿ ಸಹಾಯ ಮಾಡುವ ಸಂಪನ್ಮೂಲಗಳ ನಿಯಂತ್ರಣಕ್ಕಾಗಿ ತಮ್ಮೊಳಗೆ

ಸಂಘಟಿತರಾಗುವುದಾಗಿದೆ". [೨] ಆಧುನಿಕ ಸಬಲೀಕರಣದ ಪ್ರಕ್ರಿಯೆ ಒಂದು ಅಂತರಾಷ್ಟ್ರೀಯ ಬದ್ಧತೆಯಾಗಿದೆ. ಸಬಲೀಕರಣ ಪರಿಕಲ್ಪನೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣವಾಗಿ ವರ್ಗೀಕರಿಸಬಹುದು.

೨.೧ ಮಹಿಳಾ ಸಬಲೀಕರಣ

ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರ ಪಾಲು ಹೆಚ್ಚು ಕಡಿಮೆ ೭೫ ಪ್ರತಿಶತದಷ್ಟಿದೆ. ಆದರೆ ನಗರ ಪ್ರದೇಶಗಳ ಮಹಿಳೆಯರಿಗೆ ಹೋಲಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರು ಬಹುತೇಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಹೆಚ್ಚಿನೆಲ್ಲಾ ಗ್ರಾಮೀಣ ಮಹಿಳೆಯರು ಬಲು ಹಿಂದಿನಿಂದಲೂ ಬಡತನದ ಬೇಗೆಯಲ್ಲಿ ಬಳಲುತ್ತಿದ್ದಾರೆ, ಮಾತ್ರವಲ್ಲ ಮುಗ್ದರು, ಅನಕ್ಷರಸ್ಥರು ಮತ್ತು ತುಳಿತಕ್ಕೊಳಗಾದವರಾಗಿದ್ದಾರೆ. ಗ್ರಾಮೀಣ ಮಹಿಳೆಯರು ಅಸಂಘಟಿತರಾಗಿದ್ದು ಸೂಕ್ತ ಪ್ರಾತಿನಿಧ್ಯವನ್ನು ಹೊಂದಿಲ್ಲ. ಗ್ರಾಮೀಣ ಮಹಿಳೆಯರಿಗೆ ತರಬೇತಿ ನೀಡುವುದರ ಮೂಲಕ, ಸಂಘಟಿತರನ್ನಾಗಿಸುವುದರ ಮೂಲಕ ಅವರನ್ನು ಹೆಚ್ಚು ಸಶಕ್ತರನ್ನಾಗಿಸಬಹುದು.

ಮಹಿಳಾ ಉನ್ನತಿಗೆ ಸಂಬಂಧಿಸಿದ ದೃಷ್ಟಿಕೋನದಲ್ಲಿ ಈಗ ಬದಲಾವಣೆಯಾಗಿ ಮಹಿಳೆಯರ ಶ್ರೇಯೋಭಿವೃದ್ಧಿಗಿಂತ ಭಿನ್ನವಾಗಿ ಮಹಿಳೆಯರ ಸಬಲೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ೧೯೭೧ರಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಯ ಬಗ್ಗೆ ಸಮಿತಿಯೊಂದನ್ನು ನೇಮಿಸುವುದರ ಮೂಲಕ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಪ್ರಥಮ ಗಂಭೀರ ಪ್ರಯತ್ನ ಮಾಡಲಾಯಿತು. ಇದರ ವರದಿಯನ್ನು ೧೯೭೪ರಲ್ಲಿ ಸಲ್ಲಿಸಲಾಗಿದ್ದು, ೧೯೮೮ರಿಂದ ೨೦೦೦ದ ಅವಧಿಗೆ ಮಹಿಳೆಯರಿಗಾಗಿ ದೂರದೃಷ್ಟಿಯುಳ್ಳ ಯೋಜನೆಯ ರಚನೆಗೆ ಇದು ಕಾರಣವಾಯಿತು. ಮಹಿಳೆಯರ ಉನ್ನತಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಅಭಿವೃದ್ಧಿಯ ಪರ್ಯಾಯ ನೀತಿಯನ್ನು ಅಳವಡಿಸಿಕೊಳ್ಳುವಂತೆ ಈ ಯೋಜನೆ ಒತ್ತಾಯಿಸಿದ್ದರೂ, ಇದುವರೆಗೆ ಮಹಿಳೆಯರ ಉನ್ನತಿಗಾಗಿ ಹೆಚ್ಚುವರಿ ಹಣಕಾಸಿನ ಅನುದಾನವನ್ನು ಒದಗಿಸುವ ಪ್ರಯತ್ನಗಳು ಪ್ರಾಮಾಣಿಕವಾಗಿ ನಡೆದಿಲ್ಲ ಎನ್ನಬಹುದು. ಸರಕಾರ ಮಹಿಳೆಯರ ಸಬಲೀಕರಣಕ್ಕೆ ಅನುಸರಿಸಿದ ಸಮಗ್ರ ನೀತಿಯ ಒಂದು ಭಾಗವಾಗಿ ೧೯೯೨ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ಮತ್ತು ೧೯೯೩ರಲ್ಲಿ ರಾಷ್ಟ್ರೀಯ ಮಹಿಳಾ ಕೋಶವನ್ನು ನೇಮಿಸಿತು. ಎಂಟನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತ ಸರಕಾರ, ಮಾನವ ಸಂಪನ್ಮೂಲ ಅಭಿವೃದ್ಧಿಯನ್ನು ಆದ್ಯತೆಯ ವಿಷಯವನ್ನಾಗಿ ಕೈಗೆತ್ತಿಕೊಂಡಿತು. ಮಾತ್ರವಲ್ಲ ಆರ್ಥಿಕವಾಗಿ ಸ್ವತಂತ್ರರನ್ನಾಗಿ ಮತ್ತು ಸ್ವಾವಲಂಬಿಯನ್ನಾಗಿಸುವ ನಿಟ್ಟಿನಲ್ಲಿ ಮಹಿಳೆಯರನ್ನು, ಮಹಸೀಯರನ್ನು ಮತ್ತು ಮಕ್ಕಳನ್ನು ಮುಖ್ಯವಾಹಿನಿಗೆ ತರುವುದಕ್ಕಾಗಿ ಪ್ರಯತ್ನಗಳನ್ನು ಆರಂಭಿಸಲಾಯಿತು.

ಇಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಒಂಭತ್ತನೇಯ ಪಂಚವಾರ್ಷಿಕ ಯೋಜನೆಯಲ್ಲಿ ಕೂಡ ಮಹಿಳೆಯರ ಸಬಲೀಕರಣ ಪ್ರಮುಖ ಧ್ಯೇಯಗಳಲ್ಲಿ ಒಂದಾಗಿತ್ತು. ಇಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ನ್ಯಾಯಾಂಗ ವಿಷಯಗಳಲ್ಲಿ ಮಹಿಳೆಯರನ್ನು ಸಶಕ್ತರನ್ನಾಗಿಸುವುದಕ್ಕಾಗಿ ಸಮಗ್ರ ದೃಷ್ಟಿಕೋನವನ್ನು ಅಳವಡಿಸಿಕೊಳ್ಳಲಾಯಿತು. ಭಾರತ ಸರಕಾರ ೧೯೯೬ ರಲ್ಲಿ ಮಹಿಳಾ ಸಶಸ್ತ್ರೀಕರಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ಕೂಡ ರೂಪಿಸಿತು.[೩]

೨.೨ ಮಹಿಳೆಯರ ಆರ್ಥಿಕ ಸಬಲೀಕರಣ

ಎಲ್ಲಾ ವಿಧದ ಅಭಿವೃದ್ಧಿಗಳಿಗೆ ಆರ್ಥಿಕ ಅಭಿವೃದ್ಧಿಯೇ ಮೂಲ ಮತ್ತು ಅಗತ್ಯವು ಸಹ ಹೌದು. ಮಹಿಳೆಯರ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಈ ಮಾತು ಹೆಚ್ಚು ಪ್ರಸ್ತುತವೆನಿಸಿದೆ. ಗ್ರಾಮೀಣ ಕುಟುಂಬಗಳು ಮತ್ತು ವಿಶೇಷವಾಗಿ ಅಲ್ಲಿನ ಮಹಿಳೆಯರು ಉದ್ಯೋಗ, ಆಸ್ತಿ, ಶಿಕ್ಷಣ ಮತ್ತು ಕೌಶಲ್ಯದ ಕೊರತೆಯಿಂದ ಬಳಲುತ್ತಿದ್ದಾರೆ. ಅದೇ ಸಮಯದಲ್ಲಿ ಅವರು ಅಸಂಘಟಿತ ವಲಯದಲ್ಲಿ ದುಡಿಯುವ ಮುಖ್ಯ ವರ್ಗವಾಗಿದ್ದಾರೆ. ಆದ್ದರಿಂದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಕೌಶಲ್ಯ ವೃದ್ಧಿ, ಆದಾಯ ತರುವಂತಹ ಚಟುವಟಿಕೆಗಳು ಮತ್ತು ಹಣಕಾಸಿನ ಲಭ್ಯತೆ ಅತ್ಯಗತ್ಯ. ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದರ ಮೂಲಕ ಮತ್ತು ಆಧುನಿಕ ಕೌಶಲ್ಯಗಳನ್ನು ನೀಡುವುದರ ಮೂಲಕ ಮಹಿಳೆಯರ ಆರ್ಥಿಕ ಉನ್ನತಿ ವಿವಿಧ ಪಂಚವಾರ್ಷಿಕ ಯೋಜನೆಗಳ ಮುಖ್ಯ ಗುರಿಯಾಗಿತ್ತು. ತತ್ಪರಿಣಾಮವಾಗಿ, ಪ್ರಸಕ್ತ ಸಂದರ್ಭದಲ್ಲಿ ಕೇಂದ್ರ ಸರಕಾರದ ೬ ಸಚಿವಾಲಯಗಳು ಮತ್ತು ೮ ಇಲಾಖೆಗಳು ಒಳಗೊಂಡಿರುವ ೨೭ ಕಾರ್ಯಕ್ರಮಗಳು ಜಾರಿಯಲ್ಲಿದ್ದು, ಮಹಿಳಾ ಉನ್ನತಿ ಮತ್ತು ಆದಾಯ ತರುವಂತಹ ಚಟುವಟಿಕೆಗಳಿಗೆ ಒತ್ತು ನೀಡುವುದು ಈ ಕಾರ್ಯಕ್ರಮಗಳ ಮುಖ್ಯ ಉದ್ದೇಶ.

ಸಮಗ್ರ ಗಾಮೀಣಾಭಿವೃದ್ಧಿ ಕಾರ್ಯಕ್ರಮ (ಐ.ಆರ್.ಡಿ.ಪಿ) ದಲ್ಲಿ ೪೦ ಶೇಕಡಾದಷ್ಟು ಫಲಾನುಭವಿಗಳು ಮಹಿಳೆಯರು. ಸ್ವದ್ಯೋಗಕ್ಕಾಗಿ ಗ್ರಾಮೀಣ ಯುವ ಜನರಿಗೆ ತರಬೇತಿ ನೀಡುವ ಕಾರ್ಯಕ್ರಮ (ಟ್ರೈಸಂ) ದಲ್ಲಿ ೪೦ ಶೇಕಡಾದಷ್ಟು ಫಲಾನುಭವಿಗಳು ಮಹಿಳೆಯರು. ಜವಾಹರ್ ರೋಜ್ಗಾರ್ ಯೋಜನೆ (ಜೆ.ಆರ್.ವೈ) ಮತ್ತು ಉದ್ಯೋಗ ಭರವಸೆ ಯೋಜನೆ (ಇ.ಎ.ಎಸ್)ಗಳಲ್ಲಿ ಮಹಿಳೆಯರಿಗೆ ೪೦ ಶೇಕಡಾದಷ್ಟು ಪ್ರಾತಿನಿಧ್ಯವನ್ನು ಒದಗಿಸಿದೆ.[೪] ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವ ಮೂಲಕ ಮಹಿಳೆಯರಿಗೆ ಹಣಕಾಸು ಸೌಲಭ್ಯ ಲಭ್ಯವಾಗುವಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಮಹಿಳೆಯರು ಅವಲಂಬನೆ, ಅನಕ್ಷರತೆ, ಸೀಮಿತ ಕೌಶಲ್ಯ, ನಿರ್ಬಂಧಿತ

ಸಂಚಾರ ಮತ್ತು ಸಾಮಾಜಿಕ ಸ್ಥಾನಮಾನದ ಕೊರತೆ ಮೊದಲಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳನ್ನು ಬಗೆಹರಿಸುವುದು ಇಂದಿನ ತುರ್ತು ಅಗತ್ಯಗಳಲ್ಲಿ ಪ್ರಮುಖವೆನಿಸಿದೆ.

೨.೩ ಮಹಿಳೆಯರ ಸಾಮಾಜಿಕ ಸಬಲೀಕರಣ

ಸಾಮಾಜಿಕ ಸಮಾನತೆಯ ಅವಕಾಶ, ಮಾನ್ಯತೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಸ್ಥಾನಮಾನದಲ್ಲಿ ಅಸಮಾನತೆಯನ್ನು ಒಳಗೊಂಡಿರುವುದರಿಂದ ಸಾಮಾಜಿಕ ಸಬಲೀಕರಣವನ್ನು ಸಾಧಿಸುವುದು ಒಂದು ಕಷ್ಟಸಾಧ್ಯವಾದ ಮತ್ತು ದೀರ್ಘಾವಧಿ ಪ್ರಕ್ರಿಯೆಯಾಗಿದೆ. ಈ ದಿಶೆಯಲ್ಲಿ ವಿವಿಧ ಕಾಯ್ದೆಗಳು ಸಾಮಾಜಿಕ ಸಮಾನತೆಗೆ ಕಾನೂನಿನ ಬೆಂಬಲವನ್ನು ನೀಡಬಹುದೇ ಹೊರತು ಹೆಚ್ಚಿನದನ್ನು ಮಾಡಲು ಸಾಧ್ಯವಿಲ್ಲ. ಭಾರತದ ಸಂವಿಧಾನ ಮಹಿಳೆಯರಿಗೆ ಸಮಾನತೆಯನ್ನು ನೀಡುತ್ತದೆ ಮತ್ತು ಮೂಲಭೂತ ಹಕ್ಕುಗಳು ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಘೋಷಿಸುತ್ತದೆ. ಅದೇ ವೇಳೆಗೆ ಭಾರತೀಯ ಸಂವಿಧಾನ, ಧರ್ಮ, ಜನಾಂಗ, ಲಿಂಗ ಅಥವಾ ಜಾತಿಯನ್ನು ಆಧರಿಸಿ ತಾರತಮ್ಯ ಮಾಡುವುದನ್ನು ನಿಷೇಧಿಸುತ್ತದೆ. ಅಲ್ಲದೆ ಉದ್ಯೋಗಕ್ಕೆ ಸಂಬಂಧಿಸಿದಂತೆ ಎಲ್ಲರಿಗೂ ಸಮಾನ ಅವಕಾಶವನ್ನು ಖಾತರಿಪಡಿಸುತ್ತದೆ. ಈ ದಿಸೆಯಲ್ಲಿ ಸಂವಿಧಾನದ ೧೪, ೧೫, ೧೫(೩), ೧೬, ೩೯(ಅ), ೩೯(ಬಿ) ಮತ್ತು ೪೨ನೇ ವಿಧಿಗಳು ಉಲ್ಲೇಖನೀಯ ಪಾತ್ರವಹಿಸಿವೆ. ಮಹಿಳೆಯರ ಸಾಮಾಜಿಕ ಸಬಲೀಕರಣದ ಗುರಿಯನ್ನಿಟ್ಟುಕೊಂಡಿರುವ ಹಲವಾರು ಸಾಮಾಜಿಕ ಕಾಯಿದೆಗಳು ಕೂಡ ಭಾರತದಲ್ಲಿ ಜಾರಿಯಲ್ಲಿವೆ.

ಭಾರತದ ಸಂದರ್ಭದಲ್ಲಿ ಕಳೆದ ೫೦ ವರ್ಷಗಳ ಅವಧಿಯಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಹಲವು ಬಗೆಯ ಏರಿಳಿತಗಳು ಸಂಭವಿಸಿವೆ. ಈ ಹಂತದಲ್ಲಿ ಸರಕಾರ ಮತ್ತು ಸರಕಾರೇತರ ಸಂಘಟನೆಗಳು ಹಮ್ಮಿಕೊಂಡ ಅನೇಕ ಯೋಜನೆಗಳು, ಕಾರ್ಯಕ್ರಮಗಳು ಸಾಫಲ್ಯ ಮತ್ತು ವೈಫಲ್ಯಗಳೆರಡನ್ನೂ ಕಂಡಿವೆ. ಮಹಿಳಾ ಸಾಕ್ಷರತೆಯ ಪ್ರಮಾಣ ೭.೯ ಶೇಕಡದಿಂದ ಸರಿಸುಮಾರು ೬೦ ಶೇಕಡಕ್ಕೇರಿದೆ. ಮಹಿಳೆಯರ ಜೀವನ ನಿರೀಕ್ಷೆಯ ಮಟ್ಟ ೪೧.೭ ರಿಂದ ೬೦.೪ ವರ್ಷಗಳಿಗೇರಿದೆ. ಹೆಣ್ಮಕ್ಕಳ ಮದುವೆಯ ಸರಾಸರಿ ವಯಸ್ಸು ೧೫.೪ ರಿಂದ ೧೯.೫ ವರ್ಷಗಳಿಗೇರಿದೆ. ತಾಯಂದಿರ ಮರಣದ ಪ್ರಮಾಣ ೨೭ ರಿಂದ ೪ ಪ್ರತಿಶತಕ್ಕೆ ಇಳಿದಿದೆ.[೫] ಆದರೂ, ಈಗಲೂ ಸುಮಾರು ೩೦ ಶೇಕಡಾದಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದಾರೆ, ೮೦ ಶೇಕಡಾದಷ್ಟು ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ ಮತ್ತು ಅವರಿಗೆ ಸಮಾನ ಕೆಲಸಕ್ಕೆ ಪುರುಷರಿಗಿಂತ ಕಡಿಮೆ ಕೂಲಿ ನೀಡಲಾಗುತ್ತಿದೆ. ೬೦ ಶೇಕಡಾದಷ್ಟು ಗರ್ಭಿಣಿ ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಮಹಿಳೆಯರ ಮೇಲಿನ ಕ್ರೌರ್ಯ ಮತ್ತು ಹಿಂಸೆ ಹಲವು

ವಿಧವಲ್ಲಿ ಹೆಚ್ಚುತ್ತಿದೆ. ಅತ್ಯಾಚಾರದ ಆರೋಪಿಗಳು ಶಿಕ್ಷೆಗೀಡಾಗುವುದೇ ಅಪರೂಪ ಎನಿಸಿದೆ. ವರದಕ್ಷಿಣೆಯ ಸಾವುಗಳಿಗೆ ಕೊನೆಯಿಲ್ಲದಂತಾಗಿದೆ.

ಭಾರತದಲ್ಲಿ ಸ್ತ್ರೀ ಪುರುಷರ ನಡುವಿನ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ತಾರತಮ್ಯಕ್ಕೆ ಶತಮಾನಗಳ ಚರಿತ್ರೆಯಿದೆ. ಪುರುಷ ಪ್ರಧಾನ ಸಮಾಜ ಮತ್ತು ಪಿತೃಸತ್ತೆಯ ಮೌಲ್ಯಗಳ ಪರಿಣಾಮವಾಗಿ ಮಹಿಳೆ, ಅನೇಕ ಅವಕಾಶಗಳಿಂದ ವಂಚಿತಳಾಗುತ್ತ ದ್ವಿತೀಯ ದರ್ಜೆಯ ಪ್ರಜೆಯಂತೆ ಬದುಕುತ್ತಾ ಬಂದಿದ್ದಾಳೆ. ತನ್ನದೇ ಬದುಕಿನ ನಿರ್ಣಯಗಳನ್ನು ತೆಗೆದುಕೊಳ್ಳಲಾಗದಂಥ ಸಮಾಜದ ಕಟ್ಟುಪಾಡುಗಳಲ್ಲಿ ಬಂಧಿಯಾಗಿದ್ದಾಳೆ. ಪ್ರತಿಯೊಂದಕ್ಕೂ ಪುರುಷರನ್ನೆ ಅವಲಂಬಿಸಿ ಪರಾವಲಂಬಿಯಾಗಿಯೇ ಬದುಕುವ ಅವಳು, ರಾಜಕೀಯ ಚುಕ್ಕಾಣಿ ಹಿಡಿಯುವುದು ಅಪರೂಪದ ವಿಷಯವಾಯಿತು. ಮತದಾನದ ಹಕ್ಕಿಗಾಗಿ ಜಗತ್ತಿನಾದ್ಯಂತ ಎಷ್ಟೆಲ್ಲಾ ಹೋರಾಟ ನಡೆಸಬೇಕಾಗಿ ಬಂದದ್ದನ್ನು ಗಮನಿಸಿದಾಗ ಇದರ ಅರ್ಥ ಇನ್ನೂ ಸ್ಪಷ್ಟವಾಗುತ್ತದೆ. ಸುಮಾರು ೧೮೪೮ರ ಸಮಯದಲ್ಲಿ ನ್ಯೂಯಾರ್ಕಿನಲ್ಲಿ ಮತದಾನದ ಹಕ್ಕಿಗಾಗಿ ಮಹಿಳೆಯರು ಧ್ವನಿ ಎತ್ತಿದರೂ ೧೯೩೦ ರಹೊತ್ತಿಗೆ ಕೇವಲ ೧೫ ರಾಷ್ಟ್ರಗಳಲ್ಲಿ ಮಾತ್ರ ಆಕೆಗೆ ಮತದಾನ ಮಾಡುವ ಹಕ್ಕು ದೊರೆತಿತ್ತು.[೬] ಈ ಅಂಕಿ ಅಂಶಗಳು ಜಾಗತಿಕ ವಲಯದಲ್ಲಿ, ವಿಶೇಷವಾಗಿ ಭಾರತದಲ್ಲಿ ಮಹಿಳೆಯರ ರಾಜಕೀಯ ಮತ್ತು ಸಾಮಾಜಿಕ ಅಸ್ಥಿರತೆಯ ಸ್ವರೂಪವನ್ನು ಪ್ರಕಟಪಡಿಸುತ್ತವೆ.

೨.೪ ಗ್ರಾಮೀಣ ಮಹಿಳೆಯರ ಸಬಲೀಕರಣ

ಭಾರತದಲ್ಲಿ ಔಪಚಾರಿಕ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆಯಿಂದ ಗ್ರಾಮೀಣ ಬಡಜನರಿಗೆ ಲಭ್ಯವಾಗುತ್ತಿದ್ದ ಅಸಮರ್ಪಕ ಹಣಕಾಸು ಮತ್ತು ತತ್ಪರಿಣಾಮವಾಗಿ ಕೃಷಿ ಉತ್ಪಾದಕತೆ ಮತ್ತು ಆದಾಯದ ಮೇಲೆ ಇದರ ವ್ಯತಿರಿಕ್ತ ಪರಿಣಾಮದ ಬಗ್ಗೆ ಸಮಾಜ ವಿಜ್ಞಾನಿಗಳು ಚಿಂತಿತರಾಗಿದ್ದರು. ೧೯೬೯ ರಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ ಗ್ರಾಮೀಣ ಪ್ರದೇಶಗಳಲ್ಲಿನ ಬ್ಯಾಂಕು ಶಾಖೆಗಳ ಸಂಖ್ಯೆಯಲ್ಲಿ ಹೆಚ್ಚಳವುಂಟಾಯಿತು. ಇದರೊಂದಿಗೆ ಸಾಮಾಜಿಕ ಬ್ಯಾಂಕಿಂಗ್‌ಗೆ ಸಂಬಂಧಿಸಿ ಬ್ಯಾಂಕುಗಳ ನೀತಿಗಳಲ್ಲಿ ಕೂಡ ಹಲವು ಬಗೆಯ ಬದಲಾವಣೆಗಳು ಘಟಿಸಿದವು. ಗ್ರಾಮೀಣ ಜನರ ಹಣಕಾಸು ಲಭ್ಯತೆ ಮತ್ತು ವಿವಿಧ ಸಾಮಾಜಿಕ ವರ್ಗಗಳ ನಡುವೆ ಬ್ಯಾಂಕಿಂಗ್ ವ್ಯವಸ್ಥೆಗೆ ಸಂಬಂಧಿಸಿ ಅಸಮಾನತೆ ಕೂಡ ಕಂಡುಬಂತು. ಔಪಚಾರಿಕ ಗ್ರಾಮೀಣ ಬ್ಯಾಂಕಿಂಗ್ ವ್ಯವಸ್ಥೆಯಿಂದ ಸಾಲ ಪಡೆಯುವ ಗ್ರಾಮೀಣ ಬಡಜನರ, ಮುಖ್ಯವಾಗಿ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ. ಇದಕ್ಕೆ ಕಾರಣ ಸಾಲಕ್ಕೆ ಸೂಕ್ತ ಭದ್ರತೆ ಒದಗಿಸಲು ಸಾಧ್ಯವಾಗದಿರುವುದು, ಸಂಕೀರ್ಣ ಆಡಳಿತಾತ್ಮಕ ವಿಧಾನಗಳು, ಬ್ಯಾಂಕು ಉದ್ಯೋಗಿಗಳು ಮತ್ತು ಗ್ರಾಮೀಣ ಜನರ ಮಧ್ಯೆ ಇರುವ ಮಾಹಿತಿ ಕೊರತೆ ಮೊದಲಾದವು.

ಕಠಿಣ ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಇದರಿಂದಾಗಿ ಬಡಜನರಿಗೆ ಸಾಕಷ್ಟು ಹಣಕಾಸು ಲಭ್ಯವಾಗದಿರುವುದರಿಂದ, ಇದು ಕಿರು ಹಣಕಾಸು ಕಾರ್ಯಕ್ರಮಗಳನ್ನು ಆರಂಭಿಸುವಂತೆ ಮತ್ತು ವಿಸ್ತರಿಸುವಂತೆ ಸರಕಾರೇತರ ಸಂಸ್ಥೆಗಳನ್ನು ಪ್ರೇರೇಪಿಸಿತು. ಇದರ ಪರಿಣಾಮವಾಗಿ ಇಂದು ಭಾರತದಲ್ಲಿರುವ ೩೦,೦೦೦ ರಷ್ಟು ಸರಕಾರೇತರ ಸಂಸ್ಥೆಗಳಲ್ಲಿ ಹೆಚ್ಚಿನವು ಕಿರು ಹಣಕಾಸು ಕಾರ್ಯಕ್ರಮಗಳನ್ನು ಆರಂಭಿಸಿವೆ. ಸರಕಾರ ಕೂಡ ರಾಷ್ಟ್ರೀಯ ಮಹಿಳಾ ಕೋಶದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಮೂಲಕ ಸರಕಾರೇತರ ಸಂಸ್ಥೆಗಳು ಸ್ವಸಹಾಯ ಗುಂಪುಗಳನ್ನು ರಚಿಸಿ ಬಡಜನರಿಗೆ ಸಾಲ ಮತ್ತು ಇತರ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವ ಪ್ರಯತ್ನ ನಡೆಸಿದೆ. ನಬಾರ್ಡ್ ಮತ್ತು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕು ಕೂಡ ಕಿರು ಹಣಕಾಸನ್ನು ಬೆಂಬಲಿಸುವ ಮತ್ತು ಆ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗುವ ಕಾರ್ಯಕ್ರಮಗಳನ್ನು ಆರಂಭಿಸಿವೆ.

೨.೫ ಕಿರು ಹಣಕಾಸು: ಪರಿಕಲ್ಪನೆ ಮತ್ತು ಸ್ವರೂಪ

ಕಿರು ಹಣಕಾಸು ಎಂದರೆ ಸಣ್ಣ ಪ್ರಮಾಣದ ಅಥವಾ ಚಿಕ್ಕ ಮೊಬಲಗಿನ ಸಾಲವನ್ನು ಆರ್ಥಿಕ ಚಟುವಟಿಕೆಗಳಿಗೆ ನೀಡುವುದು. ಕಿರು ಹಣಕಾಸು, ಗ್ರಾಮೀಣ ಮತ್ತು ನಗರ ಪ್ರದೇಶಗಳ ಬಡಜನರು ಆದಾಯ ತರುವಂತಹ ಚಟುವಟಿಕೆಗಳನ್ನು ಆರಂಭಿಸಲು, ವಿಸ್ತರಿಸಲು ಮತ್ತು ಕುಟುಂಬದ ಆದಾಯವನ್ನು ಸುಧಾರಿಸಲು ಸಾಧ್ಯವಾಗುವಂತೆ ಉಳಿತಾಯ, ಸಾಲ ಮತ್ತು ವಿಮಾ ಸೌಲಭ್ಯಗಳನ್ನು ಒದಗಿಸುವ ಗುರಿಯನ್ನು ಹೊಂದಿದೆ. ಸ್ವಸಹಾಯ ಗುಂಪುಗಳು, ಚಿಕ್ಕ ಉದ್ಯಮ ಮತ್ತು ಸಣ್ಣ ವ್ಯಾಪಾರ ಮೊದಲಾದವುಗಳಿಗೆ ಈ ಸಾಲವನ್ನು ಒದಗಿಸಲಾಗುತ್ತದೆ. ಅಂದರೆ ಇಂತಹ ಪ್ರತಿಯೊಂದನ್ನು ಒಂದು ಚಿಕ್ಕ ಘಟಕವೆಂದು ಗುರುತಿಸಿ ಅದರ ಸ್ಥಾಪನೆಗೆ ಮತ್ತು ನಿರ್ವಹಣೆಗೆ ಚಿಕ್ಕ ಮೊತ್ತದ ಸಾಲಗಳನ್ನು ಬ್ಯಾಂಕೋದ್ಯಮ ಸಂಸ್ಥೆಗಳ ಮೂಲಕ ಒದಗಿಸಲಾಗುತ್ತದೆ. ಇದರ ಮುಖ್ಯ ಧ್ಯೇಯ ಸ್ವಾವಲಂಬನೆ, ಸ್ವಪರಿಪೂರ್ಣತೆ ಮತ್ತು ಸ್ವಸಹಾಯ.

ಕಿರು ಹಣಕಾಸಿನ ವೈಶಿಷ್ಟ್ಯಗಳು

ಕಿರು ಹಣಕಾಸಿನ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ.

೧. ಕಿರುಹಣಕಾಸಿನ ಕಾರ್ಯಕ್ರಮದಡಿಯಲ್ಲಿ ನೀಡುವ ಸಾಲ ಅತ್ಯಲ್ಪ.

೨. ಕಿರು ಹಣಕಾಸನ್ನು ಮುಖ್ಯವಾಗಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿರುವ ಬಡ ಮತ್ತು ಪುರುಷರು ಮತ್ತು ಮಹಿಳೆಯರನ್ನು ಗಮನದಲ್ಲಿರಿಸಿ ರೂಪಿಸಲಾಗಿದೆ.

೩. ಇದು ಉಳಿತಾಯವನ್ನು ಪ್ರೇರೇಪಿಸುತ್ತದೆ.

೪. ಅತ್ಯಲ್ಪ ನಿರ್ವಹಣಾ ವೆಚ್ಚವನ್ನು ಹೊಂದಿದೆ.

೫. ವ್ಯವಹಾರದಲ್ಲಿ ಪಾರದರ್ಶಕತೆ.

೬. ಅಲ್ಪಾವಧಿ ಮರುಪಾವತಿ ಅವಧಿ.

೭. ಸಾಲ ಮಂಜೂರಾತಿಯಲ್ಲಿ ಉದಾರ ನೀತಿ.

೮. ಭದ್ರತೆಯ ಅವಶ್ಯಕತೆ ಇಲ್ಲ.

೯. ಅವಶ್ಯಕತೆಯನ್ನು ಆಧರಿಸಿ ಸಾಲ ಮಂಜೂರಾತಿ.

೧೦. ಕ್ಲಪ್ತ ಸಮಯದಲ್ಲಿ ಮರುಪಾವತಿ. ಅದರೊಂದಿಗೆ ಕನಿಷ್ಠ ಮತ್ತು ಗರಿಷ್ಠ ಮೊಬಲಗಿನ ಬಗ್ಗೆ ಆರ್.ಬಿ. ಐ. ಯಾವುದೇ ಮಿತಿ ವಿಧಿಸದೆ ಇರುವುದು.

ಕಿರು ಹಣಕಾಸಿನ ಕಾರ್ಯಕ್ರಮಗಳು ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣದ ಉದ್ದೇಶವನ್ನು ಹೊಂದಿವೆ. ಸ್ವಾತಂತ್ರ್ಯಾನಂತರ ಸರಕಾರ ರೂಪಿಸಿದ ಬಡತನ ನಿರ್ಮೂಲನ ಕಾರ್ಯಕ್ರಮಗಳು ಬಡತನವನ್ನು ನಿರ್ಮೂಲನಗೊಳಿಸುವಲ್ಲಿ ಸೀಮಿತ ಯಶಸ್ಸನ್ನು ಸಾಧಿಸಿವೆ. ಜಾಗತಿಕ ಜನಸಂಖ್ಯೆಯಲ್ಲಿ ಭಾರತದ ಪಾಲು ೧೫% ಆಗಿದ್ದರೆ, ಜಗತ್ತಿನ ಬಡವರಲ್ಲಿ ೨೪% ದಷ್ಟು ಜನ ಭಾರತದಲ್ಲಿ ಜೀವಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶಗಳ ಜನರನ್ನು ಮುಖ್ಯವಾಗಿ ಮಹಿಳೆಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಮೇಲೆತ್ತುವ ಪ್ರಯತ್ನ ಮಾಡದಿದ್ದಲ್ಲಿ ಆರ್ಥಿಕ ಉನ್ನತಿ ಒಂದು ಹಗಲು ಕನಸು ಮಾತ್ರ. ಬಡ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯು ಬಡತನ ನಿರ್ಮೂಲನೆಯ ಏಕೈಕ ವಿಧಾನವಾಗಿದೆ. ಪ್ರಸ್ತುತ ಗ್ರಾಮೀಣ ಬಡ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯು ಉನ್ನತ ಗ್ರಾಮೀಣ ಹಣಕಾಸು ಸಂಸ್ಥೆಗಳನ್ನು ಆಧರಿಸಿದೆ. ಇದು ಕಿರು ಹಣಕಾಸು ಕಾರ್ಯಕ್ರಮಗಳ ಉದಯಕ್ಕೆ ಕಾರಣವಾಯಿತು. ಕಿರು ಹಣಕಾಸು ಇತರ ಬಡತನ ನಿರ್ಮೂಲನ ಕಾರ್ಯಕ್ರಮಗಳಿಗಿಂತ ಭಿನ್ನವಾಗಿದೆ. ವಿವಿಧ ಸಂಘ ಸಂಸ್ಥೆಗಳ ರಚನೆಯ ಮೂಲಕ ಬಡತನ ನಿರ್ಮೂಲನೆಯ ಅಸ್ತ್ರವಾಗಿ ಕಿರು ಹಣಕಾಸನ್ನು ಉಪಯೋಗಿಸಬಹುದು. ಕಿರು ಹಣಕಾಸು ಯೋಜನೆಯಡಿಯಲ್ಲಿ ಮಹಿಳೆಯರ ಸಬಲೀಕರಣ ಮತ್ತು ಬಡತನ ನಿರ್ಮೂಲನೆಯ ಕಾರ್ಯಕ್ರಮ ಸ್ವಸಹಾಯ ಸಂಘಗಳ ರಚನೆಯ ಮೂಲಕ ಸಾಧ್ಯ.

ಈ ಕೆಳಕಂಡ ರೀತಿಯಲ್ಲಿ ಭಾರತದಲ್ಲಿ ಕಿರುಹಣಕಾಸು ಕಾರ್ಯಕ್ರಮಗಳು ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣಕ್ಕೆ ವ್ಯಾಪಕ ಅವಕಾಶಗಳನ್ನು ಒದಗಿಸಿದೆ.

೧. ಕಿರು ಹಣಕಾಸು ಕಾರ್ಯಕ್ರಮಗಳು, ಬಡಜನರು ಉಳಿತಾಯ ಮಾಡುವಂತೆ ಮತ್ತು ಆತ್ಮಾಭಿಮಾನವನ್ನು ಬೆಳೆಸಿಕೊಳ್ಳುವಂತೆ ಪ್ರೇರೇಪಿಸುತ್ತವೆ.

೨. ಕಿರು ಹಣಕಾಸು ಕಾರ್ಯಕ್ರಮದಡಿಯಲ್ಲಿ ಬಡಮಹಿಳೆಯರಿಗೆ ಉತ್ಪಾದನೆ ಮತ್ತು ಅನುಭೋಗಕ್ಕೆ ಹೆಚ್ಚಿನ ಹಣಕಾಸು ಲಭ್ಯವಾಗುವುದರಿಂದ ಗ್ರಾಮೀಣ ಲೇವಾದೇವಿಗಾರರ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ. ಇದರಿಂದಾಗಿ ಆರೋಗ್ಯ, ಶಿಕ್ಷಣ ಮೊದಲಾದವುಗಳಿಗೆ ಹೆಚ್ಚಿನ ಹಣ ಖರ್ಚು ಮಾಡಲು ಮಹಿಳೆಯರು ಶಕ್ತರಾಗಿರುತ್ತಾರೆ.

೩. ಮಹಿಳೆಯರು ಆದಾಯ ತರುವಂತಹ ಚಟುವಟಿಕೆಗಳನ್ನು ಆರಂಭಿಸಿ ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ಸಾಧ್ಯ.

೪. ಹೆಚ್ಚಿನ ಹಣಕಾಸು ಸೌಲಭ್ಯ ಮಹಿಳೆಯರು ನಿರ್ಧಾರ ಕೈಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಲು ನೆರವಾಗುತ್ತದೆ. ಕಚ್ಚಾವಸ್ತುಗಳ ಪೂರೈಕೆದಾರರೊಂದಿಗೆ, ಮಾರುಕಟ್ಟೆ, ಮತ್ತು ಬ್ಯಾಂಕು ಶಾಖೆಯೊಂದಿಗೆ ಮಹಿಳೆಯರ ಸಂವಹನ ಅವರನ್ನು ಹೆಚ್ಚು ಹೆಚ್ಚು ವ್ಯವಹಾರ ಚತುರರನ್ನಾಗಿ ಮಾಡುತ್ತದೆ. ಇದು ಸ್ವಂತದ, ಕುಟುಂಬದ ಮತ್ತು ಸಮುದಾಯದ ವಿಷಯಗಳಲ್ಲಿ ಪ್ರಮುಖ ಪಾತ್ರವಹಿಸುವಂತೆ ಮಹಿಳೆಯರನ್ನು ಪ್ರೇರೇಪಿಸುತ್ತದೆ. ಆದ್ದರಿಂದ ಆದಾಯ ತರುವಂತಹ ಚಟುವಟಿಕೆಗಳಿಗೆ ದಾರಿ ಮಾಡಿಕೊಡುವ ಕಿರು ಹಣಕಾಸು ಮಹಿಳೆಯರ ಸಬಲೀಕರಣಕ್ಕೆ ಕೊಡುಗೆಯನ್ನು ನೀಡುತ್ತದೆ.

೫. ಬಡ ಮಹಿಳೆಯರು ತುಂಬಿರುವ ಕಿರು ಹಣಕಾಸು ಗುಂಪುಗಳು ಮಹಿಳೆಯರು ನಾಯಕತ್ವ ಗುಣವನ್ನು ರೂಢಿಸಿಕೊಳ್ಳುವಂತೆ, ಸ್ವ ನಿರ್ವಹಣೆಯನ್ನು ಉತ್ತೇಜಿಸುವಂತೆ ಮತ್ತು ಸ್ವಾವಲಂಬಿಯಾಗುವಂತೆ ಪ್ರೇರೇಪಿಸುತ್ತದೆ.

ಭಾರತದಲ್ಲಿ ಇಂದು ಸ್ವಸಹಾಯ ಗುಂಪುಗಳಿಗೆ ಮತ್ತು ಚಿಕ್ಕ ಆರ್ಥಿಕ ಚಟುವಟಿಕೆಗಳಿಗೆ ಒದಗಿಸಲಾಗುತ್ತಿರುವ ಹಣಕಾಸಿನ ಸೌಲಭ್ಯವನ್ನು ಪ್ರಪಂಚದಲ್ಲಿಯೇ ಅತ್ಯಂತ ದೊಡ್ಡದಾದ ಕಿರು ಹಣಕಾಸಿನ ಕಾರ್ಯಕ್ರಮ ಎಂದು ಹೆಮ್ಮೆಯಿಂದ ಹೇಳಿಕೊಳ್ಳಲಾಗುತ್ತದೆ. ೧೯೯೨ರಲ್ಲಿ ೫೦೦ ಸ್ವಸಹಾಯ ಗುಂಪುಗಳೊಂದಿಗೆ ನಬಾರ್ಡ್ ಆರಂಭಿಸಿದ ಸ್ವಸಹಾಯ ಗುಂಪು-ಬ್ಯಾಂಕು ಜೋಡಣೆಯ ಕಾರ್ಯಕ್ರಮ ಕಳೆದ ೧೪ ವರ್ಷಗಳ ಅವಧಿಯಲ್ಲಿ ಒಂದು ಮಿಲಿಯ ಸ್ವಸಹಾಯ ಗುಂಪುಗಳನ್ನು ಒಳಗೊಂಡಿದೆ. ೨೦೦೪ರ ಮಾರ್ಚ್ ೩೧ರ ವೇಳೆಗೆ ೧೦.೬೪ ಲಕ್ಷ ಸ್ವಸಹಾಯ ಗುಂಪುಗಳು ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆದಿವೆ. ೮.೦೯ ಕೋಟಿ ಬಡಜನರು ಒಳಗೊಂಡಿರುವ ೧.೬೧ ಕೋಟಿ ಬಡ ಕುಟುಂಬಗಳಿಗೆ ಬ್ಯಾಂಕು ಹಣಕಾಸನ್ನು ತಲುಪಿಸುವಲ್ಲಿ ೧೦,೭೯,೦೯೧ ಸ್ವಸಹಾಯ ಗುಂಪುಗಳು ಪ್ರಮುಖ ಪಾತ್ರವಹಿಸಿವೆ. ೨೦೦೪ರ ಮಾರ್ಚ್‌ವರೆಗೆ ೨,೧೨೩ ಕೋಟಿ ರೂಪಾಯಿಗಳ ಕಿರು ಹಣಕಾಸು ಬೆಂಬಲದೊಂದಿಗೆ, ಸ್ವಸಹಾಯ ಗುಂಪುಗಳಿಗೆ ೩,೯೦೪ ಕೋಟಿ ರೂಪಾಯಿಗಳಷ್ಟು ಬ್ಯಾಂಕು ಸಾಲವನ್ನು ಮಂಜೂರು ಮಾಡಲಾಗಿದೆ.[೬]

೨೦೦೭ನೇ ಇಸವಿ ವೇಳೆಗೆ ಈ ಗುಂಪುಗಳ ಸಂಖ್ಯೆ ಸುಮಾರು ೧೪ ಲಕ್ಷಕ್ಕೆ ಮತ್ತು ಅವುಗಳಿಗೆ ಪೂರೈಕೆ ಮಾಡುವ ಸಾಲದ ಮೊತ್ತವು ಸುಮಾರು ೧೫,೦೦೦ ಕೋಟಿ ರೂಪಾಯಿಗಳಿಗೆ ಹೆಚ್ಚಿರುವುದು ಗಮನಾರ್ಹ ಸಂಗತಿಯಾಗಿದೆ. ಇದು ಅಸಾಮಾನ್ಯ ಸಾಧನೆಯಾಗಿದೆ. ಈ ಸಾಧನೆಗೆ ನಬಾರ್ಡ್‌ನ, ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ, ಸಹಕಾರಿ ಬ್ಯಾಂಕುಗಳ, ಖಾಸಗಿ ಬ್ಯಾಂಕುಗಳ ಹಾಗೆಯೇ ಸರಕಾರೇತರ ಸಂಸ್ಥೆಗಳ ಕೊಡುಗೆ ಅಸಾಧಾರಣವಾದದ್ದು.

ಭಾರತದಲ್ಲಿ ಕಿರು ಹಣಕಾಸಿನ ಕಾರ್ಯಕ್ರಮವು ಮುಖ್ಯವಾಗಿ ಸ್ವಸಹಾಯ ಗುಂಪು-ಬ್ಯಾಂಕ್ ಜೋಡಣೆಯ ಕಾರ್ಯಕ್ರಮದ ಆಶ್ರಯದಲ್ಲಿ ವಿಜೃಂಭಿಸುತ್ತಿದೆ. ಬ್ಯಾಂಕುಗಳು ತಮ್ಮ ಉದ್ಯಮದಲ್ಲಿ ನವ ಪ್ರವರ್ತನೆಗೆ ಹಾತೊರೆಯುತ್ತಿರುವಾಗ ಮತ್ತು ಸಾಂಪ್ರದಾಯಿಕ ಸಾಲ ನೀಡಿಕೆಯ ಮಾರ್ಗಗಳಿಗೆ ಅವಕಾಶಗಳು ಕಡಿಮೆಯಾಗುತ್ತಿರುವಾಗ ಕಿರುಹಣಕಾಸಿನ ಕಾರ್ಯಕ್ರಮವು ಹೆಚ್ಚು ಆಕರ್ಷಕವಾಗಿ ಹೊರಹೊಮ್ಮಿದೆ. ಸಾಲ ನೀಡುವ ಸಂದರ್ಭದಲ್ಲಿ ಭದ್ರತೆಗೆ ಬದಲಾಗಿ ಪರಸ್ಪರ ನಂಬಿಕೆ ಮತ್ತು ಸಂಬಂಧಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

೨.೬ ಕಿರು ಹಣಕಾಸು ಮತ್ತು ಗ್ರಾಮಿಣ ಮಹಿಳೆಯರ ಸಬಲೀಕರಣ

ಒಂದು ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಆ ದೇಶ ಮಹಿಳೆಯರಿಗೆ ನೀಡಿದ ಸ್ಥಾನಮಾನ ಮತ್ತು ಪ್ರತಿಷ್ಠೆಯಿಂದ ನಿರ್ದಿಷ್ಟವಾಗಿ ಅಳೆಯಬಹುದು. ಆದುದರಿಂದ ಆರ್ಥಿಕ ಚಟುವಟಿಕೆಯ ಮಟ್ಟ ಮತ್ತು ಸ್ವಾತಂತ್ರ್ಯ ಮಹಿಳೆಯ ನಿಜವಾದ ಸ್ಥಾನಮಾನದ ಅಳತೆಗೋಲಿನ ಸೂಚಕವಾಗಿದೆ. ಮಹಿಳೆಯ ಸ್ಥಾನಮಾನವು ನೇರವಾಗಿ ಆಕೆಯ ಆರ್ಥಿಕ ಮಟ್ಟವನ್ನು ಅವಲಂಬಿಸಿದೆ. ಆಕೆಯ ಸಾಮುದಾಯಿಕ ಪಾಲ್ಗೊಳ್ಳುವಿಕೆಗೆ ಆರ್ಥಿಕ ದೃಢತೆ ನಿರ್ಣಾಯಕವೆನಿಸಿದೆ. ಅಂದರೆ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಅವರಿಗೆ ಎಲ್ಲಾ ರೀತಿಯ ಸವಾಲುಗಳನ್ನು ಎದುರಿಸಲು ಸಹಾಯ ಮಾಡುತ್ತದೆ.

೧೯೯೫ ರಲ್ಲಿ UNDP ಪ್ರಕಟಿಸಿದ ಮಾನವ ಅಭಿವೃದ್ಧಿ ಅಧ್ಯಯನ ವಿಶ್ವದಾದ್ಯಂತ ಮಹಿಳೆಯರ ಸ್ಥಾನಮಾನದ ಕುರಿತು ಮಂಜುಕವಿದಂತಹ ನೋಟವನ್ನು ನಮ್ಮ ಮುಂದಿಡುತ್ತದೆ. ಈ ಅಧ್ಯಯನ ನೀಡಿದಂತಹ ಅತ್ಯಂತ ಮುಖ್ಯ ಅಂಶವೇನೆಂದರೆ ವಿಶ್ವದ ಯಾವುದೇ ದೇಶದಲ್ಲಿಯೂ ಮಹಿಳೆಯು ಪುರುಷನೊಂದಿಗೆ ಸಮಾನ ಸ್ಥಾನಮಾನವನ್ನು ಹಂಚಿಕೊಳ್ಳದೆ ಇರುವಂಥದ್ದು.[8] ಈ ಮಾಹಿತಿ ಜಾಗತಿಕವಾಗಿ ಮಹಿಳೆ ಎದುರಿಸುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಸವಾಲುಗಳ ಕುರಿತು ವಿಷಾದ ವ್ಯಕ್ತಪಡಿಸುವುದರೊಂದಿಗೆ ಈ ವಿಷಮ ಸ್ಥಿತಿಯಿಂದ ಹೊರಬರಬೇಕಾದ ಅನಿವಾರ್ಯವನ್ನು ಮುಂದಿಡುತ್ತದೆ.

ಗ್ರಾಮೀಣ ಮಹಿಳೆ ಅದರಲ್ಲಿಯೂ ಸಮಾಜದ ದುರ್ಬಲ ವರ್ಗಕ್ಕೆ ಸೇರಿದಂತಹ ಮಹಿಳೆಯರಿಗೆ ಸಂಪತ್ತಿನ ಮತ್ತು ಉದ್ಯೋಗಾವಕಾಶಗಳ ಅಭಾವವಿರುತ್ತದೆ. ಅದು ಅವರನ್ನು ಅನುಭೋಗದಿಂದ ವಂಚಿತರನ್ನಾಗಿ ಮಾಡುತ್ತದೆ.

ಜಾಗತೀಕರಣ ಮತ್ತು ಉದಾರೀಕರಣದ ಯುಗದಲ್ಲಿ ಕಾರ್ಯನಿಪುಣತೆ ಇಲ್ಲದವರಿಗೆ ಮತ್ತು ನಿರಕ್ಷರಸ್ಥರಿಗೆ ಅವಕಾಶಗಳು ಇತರರಷ್ಟು ಲಭ್ಯವಾಗಲು ಸಾಧ್ಯವಾಗಿಲ್ಲ. ಬಡ ಮಹಿಳೆಯರು ಸಾಲದ ವಿಷಯದಲ್ಲಿ ಹಿಂದೆ ಉಳಿದಿದ್ದು ಅವರ ಉಳಿತಾಯದ ಪ್ರವೃತ್ತಿ ಲಾಭದಾಯಕವಾಗಿರುವುದಿಲ್ಲ ಎಂದು ಪರಿಗಣಿಸಲಾಗಿದೆ. ಇದು ಅವರನ್ನು ಅಧಿಕ ಬಡ್ಡಿದರ ಮತ್ತು ಲೇವಾದೇವಿದಾರರ ಅಧಿಕ ಜಾಮೀನು ಸಾಲದ ವಿಷವರ್ತುಲದ ಒಳಗೆ ಬೀಳುವಂತೆ ಮಾಡಿದೆ. ಭಾರತದಲ್ಲಿ ಸಾಮಾನ್ಯ ಆರ್ಥಿಕ ಸ್ಥಿತಿ ಅತೃಪ್ತಿಕರವಾಗಿದ್ದು, ಮಹಿಳೆಯರ ಸ್ಥಿತಿಗತಿಯು ಆರೋಗ್ಯ, ವಿದ್ಯಾಭ್ಯಾಸ, ಸ್ವಾತಂತ್ರ್ಯ, ಪೌಷ್ಟಿಕಾಂಶ, ಜೀವಿತಾವಧಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕಳವಳಕಾರಿಯಾಗಿದೆ.

ಈ ಎಲ್ಲಾ ವಿಷಯಗಳನ್ನು ಪರಿಗಣಿಸಿ ಭಾರತ ಸರಕಾರ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನವನ್ನು ಅಭಿವೃದ್ಧಿ ಪಡಿಸಲು ಹಲವಾರು ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿದೆ. ಅವುಗಳಲ್ಲೊಂದು ಇತ್ತೀಚಿನ ಕಿರುಹಣಕಾಸು ಯೋಜನೆ. ಭಾರತದಲ್ಲಿ ಕಿರುಹಣಕಾಸಿನ ಕಾರ್ಯಕ್ರಮದ ಯಶಸ್ಸಿನಲ್ಲಿ ಸ್ವಸಹಾಯ ಸಂಘದ ಪಾತ್ರ ಅತ್ಯಂತ ಪ್ರಮುಖವಾಗಿದೆ. ಕಿರುಹಣಕಾಸಿನ ಕಾರ್ಯಕ್ರಮಗಳು ಬಡತನ ನಿರ್ಮೂಲನಾ ವಿಷಯದಲ್ಲಿ ಮತ್ತು ಮಹಿಳೆಯ ಸಬಲೀಕರಣದ ವಿಷಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇದು ಮಹಿಳೆಯರ ಆರ್ಥಿಕ ಮಟ್ಟವನ್ನು ಸುಧಾರಿಸುವಲ್ಲಿ ಮತ್ತು ಅವರಲ್ಲಿ ಆತ್ಮವಿಶ್ವಾಸವನ್ನು ತುಂಬುವಲ್ಲಿ ಯಶಸ್ವಿಯಾಗಿದೆ.

ಹಳ್ಳಿಗಳ ಉದ್ಧಾರ, ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವುದು, ಇದು ಗಾಂಧೀಜಿ ಕಂಡ ಗ್ರಾಮ ಸ್ವರಾಜ್ಯದ ಕನಸು. ಈ ದಿಸೆಯಲ್ಲಿ ಹಲವಾರು ಸೇವಾ ಸಂಸ್ಥೆಗಳು ಕಾರ್ಯಪ್ರವೃತ್ತವಾಗಿವೆ. ಈ ಹಾದಿಯಲ್ಲಿ ಕಿರು ಹಣಕಾಸು ಎಂಬ ಆರ್ಥಿಕ ನೀತಿ ಬಡಜನಗಳಿಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಆಶಾಜ್ಯೋತಿಯಾಗಿ ಮತ್ತು ಅಭಯಹಸ್ತವಾಗಿ ಕಾರ್ಯನಿರ್ವಹಿಸುತ್ತಿದೆ.

೨.೭ ಸ್ವಸಹಾಯ ಗುಂಪುಗಳು: ಪರಿಕಲ್ಪನೆ ಮತ್ತು ಸ್ವರೂಪ

ಸಮಾನ ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯುಳ್ಳ ಹಾಗೂ ಸ್ವಸಹಾಯ ಮತ್ತು ಪರಸ್ಪರ ಸಹಾಯದ ಮೂಲಕ ಆರ್ಥಿಕ ಉನ್ನತಿಯನ್ನು ಸಾಧಿಸಿಕೊಳ್ಳುವ ಗುರಿ ಹೊಂದಿರುವ ಜನರ ಒಂದು ಗುಂಪನ್ನು

ಸ್ವಸಹಾಯ ಗುಂಪು ಎಂದು ಕರೆಯಲಾಗುತ್ತದೆ. ಇಂತಹ ಒಂದು ಗುಂಪು ೧೦ ರಿಂದ ೨೦ ಜನರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ. ಈ ಸದಸ್ಯರೆಲ್ಲರೂ ಮಹಿಳೆಯಾರಾಗಿರಬಹುದು ಅಥವಾ ಪುರುಷರಾಗಿರಬಹುದು. ನಿರಂತರ ಉಳಿತಾಯ, ಆಂತರಿಕ ಸಾಲ, ಬ್ಯಾಂಕಿನಿಂದ ಸಾಲ, ವೈಯಕ್ತಿಕ ಮತ್ತು ಗುಂಪು ಆರ್ಥಿಕ ಚಟುವಟಿಕೆಗಳ ನಿರ್ವಹಣೆ ಮೊದಲಾದ ಚಟುವಟಿಕೆಗಳ ಮೂಲಕ ಬಡತನ ರೇಖೆಯಿಂದ ಮೇಲೆ ಬರುವುದು ಈ ಸದಸ್ಯರ ಮುಖ್ಯ ಧ್ಯೇಯವಾಗಿರುತ್ತದೆ. ಉಳಿತಾಯಗಳನ್ನು ನಿರಂತರವಾಗಿ ಕೂಡಿಸಲು, ಒಗ್ಗಟ್ಟನ್ನು ಪ್ರದರ್ಶಿಸಲು ಮತ್ತು ಗುಂಪನ್ನು ಬಲಗೊಳಿಸಲು ಇಲ್ಲಿ ವಾರದ ಸಭೆಗಳು ಮುಖ್ಯ ವೇದಿಕೆಗಳಾಗಿರುತ್ತವೆ. ಹಣದ ಉಳಿತಾಯ ಸ್ವಸಹಾಯದ ಒಂದು ಮುಖ್ಯ ಘಟ್ಟ. ಗುಂಪಿನ ಸದಸ್ಯರು ತಮ್ಮ ಉಳಿತಾಯದ ಹಣವನ್ನು ಒಟ್ಟುಗೂಡಿಸುವ ಮೂಲಕ ಮುಂದಿನ ಅನುಕೂಲಕ್ಕಾಗಿಯೇ ಸ್ವಸಹಾಯ ಗುಂಪುಗಳನ್ನು ರಚಿಸಿಕೊಳ್ಳುತ್ತಾರೆ.

ಗುಂಪುಗಳ ರಚನೆಯ ಹಂತದಲ್ಲಿಯೇ ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಬ್ಯಾಂಕುಗಳೊಂದಿಗೆ ಸಂಬಂಧ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಗುಂಪುಗಳು ತಮ್ಮ ಹಣವನ್ನು ಬ್ಯಾಂಕುಗಳಲ್ಲಿ ಜಮಾ ಮಾಡಬೇಕಾಗುತ್ತದೆ. ಗುಂಪುಗಳು ತಮ್ಮ ಉಳಿತಾಯದಲ್ಲಿ ಮೊದಲು ಆಂತರಿಕ ಸಾಲ ಪಡೆಯುವುದು ಮತ್ತು ಮರು ಪಾವತಿ ಮಾಡುವ ರೂಢಿಯು ಮುಂದುವರಿದಲ್ಲಿ, ಅವುಗಳ ಮೌಲ್ಯಮಾಪನ ಮಾಡಿ ಬ್ಯಾಂಕುಗಳಿಂದ ಸಾಲ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು. ಸಾಮಾನ್ಯವಾಗಿ ಬ್ಯಾಂಕಿನವರು ನೇರವಾಗಿ ಸ್ವಸಹಾಯ ಗುಂಪುಗಳಿಗೆ ನೆರವು ಒದಗಿಸುವ ಅಂಶ ಹೆಚ್ಚು ಪ್ರಚಲಿತವಾಗಿದೆ. ಬ್ಯಾಂಕು ಸ್ವಸಹಾಯ ಗುಂಪಿಗೆ ನೀಡಿದ ಸಾಲವನ್ನು ಆ ಸ್ವಸಹಾಯ ಗುಂಪು ತನ್ನ ಸದಸ್ಯರಿಗೆ ವಿತರಿಸುವ ಕ್ರಮ ಕೈಗೊಳ್ಳುತ್ತದೆ.

ಬ್ಯಾಂಕುಗಳೊಂದಿಗೆ ಸಂಪರ್ಕ ಕಲ್ಪಿಸಲು ಸ್ವಸಹಾಯ ಗುಂಪು ಸಾಮಾನ್ಯವಾಗಿ ಕಡೆಯ ಪಕ್ಷ ಆರು ತಿಂಗಳಿಂದ ಸಮರ್ಪಕವಾಗಿ ಮತ್ತು ಪಾರದರ್ಶಕವಾಗಿ ಕಾರ್ಯನಿರ್ವಹಿಸುತ್ತಿರಬೇಕು. ಗುಂಪುಗಳು ಕ್ರಮಬದ್ಧ ಉಳಿತಾಯ ಮತ್ತು ಸಾಲ ನಿರ್ವಹಣೆಯಲ್ಲಿ ತೊಡಗಿದ್ದು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರಬೇಕು. ಗುಂಪುಗಳು ಸರಿಯಾಗಿ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸುತ್ತಿರಬೇಕು. ಗುಂಪು ತನ್ನ ಮೂಲ ಉದ್ದೇಶವಾದ ಪರಸ್ಪರ ಸಹಾಯ ಹಾಗೂ ಒಗ್ಗಟ್ಟನ್ನು ಪ್ರತಿಬಿಂಬಿಸುವಂತಿರಬೇಕು. ಆಗ ಸ್ವಸಾಯ ಗುಂಪಿನ ಪರಿಕಲ್ಪನೆ ಹೆಚ್ಚು ಸಮರ್ಥವಾಗಿ ದೃಢಗೊಳ್ಳುತ್ತದೆ.

೨.೮ ಸ್ವಸಹಾಯ ಗುಂಪು ಮತ್ತು ಗ್ರಾಮೀಣ ಮಹಿಳೆಯರು

ವಿವಿಧ ಸ್ವಯಂ ಸೇವಾ ಸಂಘಗಳು, ಸರಕಾರೇತರ ಸಂಸ್ಥೆಗಳು ಮತ್ತು ಸರ್ಕಾರದ ಉತ್ತೇಜನದೊಂದಿಗೆ ಸ್ವಸಹಾಯ ಸಂಘಗಳ ಮೂಲಕ ಕಾರ್ಯನಿರ್ವಹಿಸುತ್ತಿರುವ ಕಿರುಹಣಕಾಸಿನ ಕಾರ್ಯಕ್ರಮಗಳು ಹಾಗೂ ಯೋಜನೆಗಳು ಗ್ರಾಮೀಣ ಬಡ ಮಹಿಳೆಯರ ಮೇಲೆ ಅನೇಕ ಧನಾತ್ಮಕ ಪರಿಣಾಮಗಳನ್ನು ಬೀರಿವೆ. ಬ್ಯಾಂಕುಗಳ ಸೇವೆಗಳನ್ನು ಬಡ ಜನರಿಗೆ ಅದರಲ್ಲೂ ಮಹಿಳೆಯರಿಗೆ ಪರಿಚಯಿಸುವಲ್ಲಿ, ಒದಗಿಸುವಲ್ಲಿ ಹಾಗೂ ಅವರಲ್ಲಿ ಉಳಿತಾಯದ ಪ್ರವೃತ್ತಿಯನ್ನು ಪ್ರೇರೇಪಿಸುವಲ್ಲಿ ಅದು ಒಂದು ಶಕ್ತಿಯುತ ಸಾಧನವಾಗಿ ಕೆಲಸ ಮಾಡುತ್ತಿದೆ.

ಸ್ವ ಸಹಾಯ ಗುಂಪಿನ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳ ವೈಶಿಷ್ಟ್ಯ ಮತ್ತು ಫಲಾನುಭವಿಗಳ ಮೇಲೆ ಅದರ ಪರಿಣಾಮಗಳ ಕುರಿತು ಈವರೆಗೆ ವಿಭಿನ್ನ ಮಾದರಿಯ ಸಮೀಕ್ಷೆಗಳು ಮತ್ತು ಅಧ್ಯಯನಗಳು ನಡೆದಿವೆ. ಈ ಎಲ್ಲಾ ಅಧ್ಯಯನಗಳು ಸ್ವಸಹಾಯ ಗುಂಪಿನ ಕಾರ್ಯನಿರ್ವಹಣೆ ಮತ್ತು ಕಿರು ಹಣಕಾಸಿನ ಪರಿಕಲ್ಪನೆಯ ಕುರಿತು ಸಕಾರಾತ್ಮಕ ಅಭಿಪ್ರಾಯ ಮತ್ತು ಚಿಂತನೆಯನ್ನು ಪ್ರಕಟಪಡಿಸಿವೆ. ಗುಂಪಿನ ಚಟುವಟಿಕೆಗಳೊಂದಿಗೆ ಸಹಭಾಗಿಗಳಾದ ನಂತರದ ದಿನಗಳಲ್ಲಿ ಫಲಾನುಭವಿಗಳ ನಿತ್ಯಜೀವನದಲ್ಲಿ ಉಂಟಾದ ಗಮನಾರ್ಹ ಬದಲಾವಣೆ ಮತ್ತು ಮೌಲ್ಯಪೂರ್ಣ ಬೆಳವಣಿಗೆಯ ನೆಲೆಗಳನ್ನು ಅಧ್ಯಯನ ಗುರುತಿಸಿದೆ. ಕೆಲವು ಉಲ್ಲೇಖನೀಯ ಅಧ್ಯಯನಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಉದಾಹರಣೆಗೆ ರಾಜಶೇಖರ್ (೨೦೦೦), ಕುಮರನ್ (೨೦೦೧), ಕಲಮ್‌ಕರ್ (೧೯೯೭), ಮಜುಂದಾರ್ (೧೯೯೭), ನಬಾರ್ಡ್ (೨೦೦೨), ಮೊದಲಾದವು ಸ್ವಸಹಾಯ ಸಂಘಗಳು ಬಡವರಲ್ಲಿ ಉಳಿತಾಯದ ಹವ್ಯಾಸವನ್ನು ಬೆಳೆಸುವುದರಲ್ಲಿ ಉತ್ತಮ ಹೆಜ್ಜೆ ಹಾಕಿದೆ ಎಂಬುದನ್ನು ತಿಳಿಯಪಡಿಸುತ್ತದೆ. ಕಿರುಹಣಕಾಸಿನ ಯೋಜನೆಯಿಂದಾಗಿ ಹಳ್ಳಿಯ ಬಡವರು ಅದರಲ್ಲೂ ಮಹಿಳೆಯರು ಅನೇಕ ಉತ್ಪಾದನಾ ಚಟುವಟಿಕೆಗಳನ್ನು ಮಾಡತೊಡಗಿದ್ದಾರೆ. ಇದರಿಂದಾಗಿ ಲೇವಾದೇವಿಗಾರರೊಡನೆ ಮಹಿಳೆಯರ ಅವಲಂಬನೆ ದೊಡ್ಡ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಮಹಿಳೆಯರಿಗೆ ಕಿರುಹಣಕಾಸಿನ ಸೌಲಭ್ಯ ನೀಡಿದ ಪರಿಣಾಮವಾಗಿ ಮಕ್ಕಳ ವಿದ್ಯಾಭ್ಯಾಸ ಅತ್ಯಂತ ಪ್ರಗತಿದಾಯಕವಾಗಿ ಹೊರಹೊಮ್ಮಿದೆ ಎಂದು ಅನೇಕ ಅಧ್ಯಯನಗಳು ತಿಳಿಯಪಡಿಸಿವೆ. ಕಲಮ್‌ಕರ್ (೧೯೯೯) ಅವರು ಕೈಗೊಂಡ ಅಧ್ಯಯನವೊಂದು ವಿವರಿಸಿಕೊಳ್ಳುವಂತೆ ಮಹಿಳೆಯರಿಗೆ ಕೊಡುವ ಸಾಲದ ಪ್ರಮಾಣದಲ್ಲಿ ಕೇವಲ ಶೇ. ೧ರಷ್ಟು ಏರಿಕೆಯಾದಾಗ, ಅದರಿಂದ ಗಂಡು ಮಕ್ಕಳ ಶಾಲೆಯ ದಾಖಲಾತಿಯ ಪ್ರಮಾಣದಲ್ಲಿ ಶೇ.೨.೪ ರಷ್ಟು ಏರಿಕೆಯಾಗಿದೆ ಮತ್ತು ಹೆಣ್ಣು ಮಕ್ಕಳ ಶಾಲೆಯ ದಾಖಲಾತಿಯ ಪ್ರಮಾಣದಲ್ಲಿ ಶೇ. ೧.೯ರಷ್ಟು ಏರಿಕೆಯಾಗಿದೆ. ಆದರೆ ಪುರುಷರಿಗೆ ಕೊಡುವ ಸಾಲದ ಪ್ರಮಾಣದಲ್ಲಿ ಶೇ.

೧ರಷ್ಟು ಏರಿಕೆಯಾದಾಗ ಅದರಿಂದ ಗಂಡು ಮಕ್ಕಳ ಶಾಲೆಯ ದಾಖಲಾತಿಯ ಪ್ರಮಾಣದಲ್ಲಿ ಶೇ. ೩.೧ ರಷ್ಟು ಏರಿಕೆಯಾದರೂ ಹೆಣ್ಣು ಮಕ್ಕಳ ಶಾಲೆಯ ದಾಖಲಾತಿಯ ಪ್ರಮಾಣದಲ್ಲಿ ಯಾವುದೇ ಪರಿಣಾಮವನ್ನು ಅದು ಉಂಟುಮಾಡಿಲ್ಲ.'

ಭಾರತದಲ್ಲಿ ಕಿರುಹಣಕಾಸಿನ ಶೇ. ೭೮ರಷ್ಟು ಫಲಾನುಭವಿಗಳು ಗ್ರಾಮೀಣ ಜನರಾಗಿದ್ದು, ಅದರಲ್ಲೂ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಕಿರುಹಣಕಾಸು ಯೋಜನೆಯ ಮೂಲಕ ಸುಮಾರು ರೂ. ೧,೦೦೦ ರಿಂದ ೫೦,೦೦೦ವರೆಗೆ ಪ್ರತಿ ಸದಸ್ಯರಿಗೆ ಸಾಲದ ರೂಪದಲ್ಲಿ ಹಣ ವಿತರಣೆಯಾಗುತ್ತದೆ. ಸುಮಾರು ಶೇ. ೭೦ರಷ್ಟು ಕಿರುಹಣಕಾಸಿನ ಸಂಸ್ಥೆಗಳು ದಕ್ಷಿಣ ಭಾರತದಲ್ಲಿ ಇದ್ದು ಅದರಲ್ಲೂ ಆಂಧ್ರ ಪ್ರದೇಶ ಪ್ರಥಾಮ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳು ಪ್ರಮುಖವಾಗಿವೆ. ಅಂಕಿ ಅಂಶಗಳನ್ನು ಪರಿಶೀಲಿಸಿದರೆ ಸ್ವಸಹಾಯ ಸಂಘಗಳಲ್ಲಿ ಮಹಿಳೆಯರ ಪ್ರಾಬಲ್ಯ ಎದ್ದು ತೋರುತ್ತದೆ. ಇನ್ನೊಂದು ಗಮನಾರ್ಹ ವಿಷಯವೇನೆಂದರೆ ಶೇ. ೯೫ರಷ್ಟು ಸಾಲ ಮರು ಪಾವತಿ. ಈ ಮಾದರಿಯ ಬೆಳವಣಿಗೆ ವಿಶೇಷವಾಗಿ ಮಹಿಳೆಯರಿಗೆ ಸಾಲ ನೀಡಲು ಬ್ಯಾಂಕುಗಳಿಗೆ ಪ್ರಚೋದನೆ ಮತ್ತು ಉತ್ತೇಜನ ನೀಡಿದೆ.

ಸ್ವ ಸಹಾಯ ಗುಂಪಿನ ಪರಿಕಲ್ಪನೆ ನಮ್ಮಲ್ಲಿ ಮೊದಲಿನಿಂದಲೂ ಅಸ್ತಿತ್ವದಲ್ಲಿದ್ದರೂ ಈ ಪರಿಕಲ್ಪನೆಯನ್ನು 'ಕಿರು ಸಾಲ' ಮತ್ತು 'ಮಹಿಳಾ ಸಬಲೀಕರಣ' ಎಂಬ ಕಾರ್ಯಕ್ರಮದ ಜೊತೆಗೆ ಜೋಡಣೆ ಮಾಡಿದ್ದು ಮಾತ್ರ ಆಧುನಿಕ ಸಂದರ್ಭದ ಬೆಳವಣಿಗೆಯಾಗಿದೆ. 'ಕಿರು ಸಾಲ' ಮತ್ತು 'ಸ್ವ ಸಹಾಯ ಗುಂಪು' ಈ ಕಾರ್ಯಕ್ರಮಗಳ ಹುಟ್ಟಿಗೆ 'ಮಹಿಳಾ ಸಬಲೀಕರಣ' ವಷ್ಟೆ ಕಾರಣವಲ್ಲ. ಬಡವರಿಗೆ ಹಣಕಾಸು ಸಂಸ್ಥೆಗಳಿಂದ ಸಣ್ಣ ಮಟ್ಟಿನ ಸಾಲ ತೆಗೆದುಕೊಳ್ಳಲು ಆಗುವ ತೊಂದರೆ ಮತ್ತು ಹಣಕಾಸು ಸಂಸ್ಥೆಗಳ 'ವ್ಯವಸ್ಥೆಯ ಜಿಗುಟುಗಳೂ ಕೂಡ ಕಾರಣವಾಗಿದೆ.

'ಸ್ವ ಸಹಾಯ ಗುಂಪು' ಮತ್ತು ಅದರಿಂದಾಗಿ 'ಮಹಿಳೆಯರ ಸಬಲೀಕರಣ' ಈ ವಿಷಯದಲ್ಲಿ ಒಂದಕ್ಕೊಂದು ಭಿನ್ನವಾದ ಎರಡು ಅಭಿಪ್ರಾಯಗಳನ್ನು ಕಾಣಬಹುದು. 'ಸ್ವ ಸಹಾಯ ಗುಂಪಿನ'ನ ಚಳುವಳಿಯ ಹುಟ್ಟು, ಮಹಿಳೆ ಎದುರಿಸುತ್ತಿರುವ ಬಡತನ ಮತ್ತು ಅಸಮಾನತೆಯನ್ನೊಳಗೊಂಡಂತೆ ಎಲ್ಲಾ ಸಮಸ್ಯೆಗಳಿಗೂ ಒಂದು ರಾಮಬಾಣ ಎಂಬುದು ಕೆಲವು ಆರ್ಥಿಕ ಚಿಂತಕರ ಅಭಿಪ್ರಾಯವಾಗಿದೆ. ಸ್ವಲ್ಪ ಮಟ್ಟಿನ ಹಣಕಾಸನ್ನು ಬಡವರ ಕೈಯಲ್ಲಿಟ್ಟ ಕೂಡಲೇ ಅವರ ಎಲ್ಲಾ ರೀತಿಯ ಸಬಲೀಕರಣವು ಸಾಧ್ಯವಿಲ್ಲ ಮತ್ತು ಇದು ಮಹಿಳೆಯರಿಗೂ ಅನ್ವಯಿಸುತ್ತದೆ ಎಂಬುದು ಇನ್ನೊಂದು ಚಿಂತಕರ ಗುಂಪಿನ ವಿಚಾರವಾಗಿದೆ. ಆ

ನಡುವೆಯೂ ಸ್ವ ಸಹಾಯ ಗಂಪು ಮತ್ತು ಕಿರು ಸಾಲದ ಮೂಲಕ ಮಹಿಳಾ ಸಬಲೀಕರಣದ ಸಾಧ್ಯತೆಯೇ ಇಂದಿನ ಬಹುಮಂದಿ ವಿದ್ವಾಂಸರ ಅಭಿಮತವಾಗಿದೆ.

ಒಟ್ಟಿನಲ್ಲಿ ಸಬಲೀಕರಣ ಎನ್ನುವುದು ಒಂದು ಕ್ಲಿಷ್ಟವಾದ ಪ್ರಕ್ರಿಯೆ. ಇಲ್ಲಿ ಲಿಂಡಾಮಿಯೋಸ್ಸ್ ಎಂಬ ಬ್ರಿಟಿಷ್ ಚಿಂತಕ 'ಕಿರು ಸಾಲ ಮತ್ತು ಮಹಿಳಾ ಸಬಲೀಕರಣ' ಎಂಬ ತನ್ನ ಲೇಖನದಲ್ಲಿ ಸಬಲೀಕರಣದ ಪರಿಕಲ್ಪನೆಯ ಬಗ್ಗೆ ಬರೆದಿರುವುದನ್ನು ಗಮನಿಸಬಹುದು. ಅವರ ಪ್ರಕಾರ "ಸಬಲೀಕರಣವು ಬದಲಾವಣೆಯ ಒಂದು ಪ್ರಕ್ರಿಯೆ. ಯಾವುದೇ ಅಧಿಕಾರವಿಲ್ಲದ ಅಥವಾ ಸ್ವಲ್ಪ ಅಧಿಕಾರ ಇರುವ ಗುಂಪು, ತಮ್ಮ ಜೀವನದ ಆಯ್ಕೆ ಮಾಡಿಕೊಳ್ಳಲು ಅಧಿಕಾರವನ್ನು ಪಡೆಯುತ್ತದೆಯೋ ಅದೇ ನಿಜವಾದ ಸಬಲೀಕರಣ. ಹಾಗಾಗಿ ಸಬಲೀಕರಣ ಎಂದರೆ ಬದಲಾವಣೆಯ, ಆಯ್ಕೆಯ ಮತ್ತು ಅಧಿಕಾರದ ಪ್ರಕ್ರಿಯೆ".[೧೦] ಸಬಲೀಕರಣದ ಪ್ರಕ್ರಿಯೆಯು ಸಂಸ್ಕೃತಿಯಿಂದ ಸಂಸ್ಕೃತಿಗೆ, ಸ್ಥಳದಿಂದ ಸ್ಥಳಕ್ಕೆ ಎಷ್ಟೇ ವ್ಯತ್ಯಾಸಗಳಿದ್ದರೂ ಸಬಲೀಕರಣದ ಕೆಲವು ನಿರ್ದಿಷ್ಟ ಸೂಚಿಗಳು ಎಲ್ಲಾ ಪರಿಸ್ಥಿತಿಗೂ ಅನ್ವಯಿಸುತ್ತವೆ. ಅವುಗಳೆಂದರೆ :

- ಆರ್ಥಿಕ ಸುಧಾರಣೆ
- ವಸ್ತು ಸ್ಥಿತಿಯಲ್ಲಿ ಸುಧಾರಣೆ
- ಕುಟುಂಬ ಹಾಗೂ ಸಾಮಾಜಿಕ ಸ್ತರಗಳಲ್ಲಿ ನಿರ್ಧಾರದ ಸ್ವಾಯತ್ತತೆ
- ಸುದ್ದಿ ಹಾಗೂ ಮಾಹಿತಿ ಪಡೆಯುವ ಸಾಧ್ಯತೆ
- ಸುಧಾರಿತ ರಾಜಕೀಯ ಪ್ರಜ್ಞೆ
- ಚಲನಶೀಲತೆ

'ಕಿರು ಸಾಲ' ಮತ್ತು ಸ್ವಸಹಾಯ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣ ಸಾಧ್ಯವಾಗುತ್ತಿದೆ ಎಂಬ ಕೂಗು ಎಲ್ಲ ಕಡೆಯಲ್ಲೂ ಕೇಳಿಬರುತ್ತಿರುವ ಈ ಸಮಯದಲ್ಲಿ, ಮೇಲೆ ತಿಳಿಸಿರುವ ಮಹಿಳಾ ಸಬಲೀಕರಣದ ಎಲ್ಲಾ ನಿಶ್ಚಯಾಂಶ ಸೂಚಿಗಳೂ 'ಸ್ವಸಹಾಯ ಗುಂಪುಗಳ' ಮೂಲಕ ತಮ್ಮ ಗುರಿಯನ್ನು ತಲುಪುವಲ್ಲಿ ದೊಡ್ಡ ಪ್ರಮಾಣದ ಸಾಫಲ್ಯವನ್ನು ಕಂಡಿವೆ ಎಂಬುದು ಹಲವು ಬಗೆಯ ಅಧ್ಯಯನಗಳ ಮೂಲಕ ತಿಳಿದುಬರುತ್ತದೆ.

ಅಧ್ಯಾಯ ಟಿಪ್ಪಣಿ

೧. ನೇಮಿಚಂದ್ರ, ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧.

೨. ಮದುಕೇಶ್ವರ್, ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ಸಮತಾ ಅಧ್ಯಯನ ಕೇಂದ್ರ, ಮೈಸೂರು, ೧೯೯೬.

೩. ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಇಲಾಖೆ ಇತ್ತೀಚೆಗೆ ನೀಡಿದ ವರದಿಯ ವಿವರಗಳು.

೪. Centre For Development of Advanced Computing ರ ಅವರ ಅಧ್ಯಯನ ಸಮೀಕ್ಷೆ

೫. ಪುನರುಕ್ತಿ ೪

೬. ಪುನರುಕ್ತಿ ೪

೭. ಪುನರುಕ್ತಿ ೩

೮. ಪುನರುಕ್ತಿ ೪

೯. ಪುನರುಕ್ತಿ ೪

೧೦. ಡಾ. ಜಯಶೀಲ, ಡಾ. ಯೋಗೇಶ್ ಎಸ್.ಎನ್.ಗ್ರಾಮೀಣ ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವ ಸಹಾಯ ಗುಂಪುಗಳು

ಅಧ್ಯಾಯ ೩

ಗ್ರಾಮಾಭಿವೃದ್ಧಿ: ಧರ್ಮಸ್ಥಳ ಮಾದರಿ

೩.೧ ಧರ್ಮಸ್ಥಳ: ಭೌತಿಕ ವಿವರ

೩.೨ ಬಹುಧರ್ಮ ಸಮನ್ವಯ ತಾಣ

೩.೩ ಗ್ರಾಮಾಭಿವೃದ್ಧಿ ಯೋಜನೆ : ಧರ್ಮಸ್ಥಳ ಮಾದರಿ

೩.೪ ಗ್ರಾಮಾಭಿವೃದ್ಧಿ ಯೊಜನೆ: ಕಾರ್ಯನಿರ್ವಹಣ ತಂತ್ರ

೩.೫ ರೈತರ ಬೆನ್ನೆಲುಬಾಗಿ ಗ್ರಾಮಾಭಿವೃದ್ಧಿ ಯೋಜನೆ

೩.೬ ಬೆಳ್ತಂಗಡಿಯ ಸಾಧನೆಗಳು

ಅಧ್ಯಾಯ ೩

ಗ್ರಾಮಾಭಿವೃದ್ಧಿ: ಧರ್ಮಸ್ಥಳ ಮಾದರಿ

೩.೧ ಧರ್ಮಸ್ಥಳ: ಭೌತಿಕ ವಿವರ

ಧರ್ಮಸ್ಥಳ ಭೌತಿಕವಾಗಿ ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿರುವ ಒಂದು ಗ್ರಾಮ. ಆದರೆ ಅದು ದಕ್ಷಿಣ ಭಾರತದ ಪ್ರಸಿದ್ದ ಮತ್ತು ಐತಿಹಾಸಿಕ ದಾರ್ಶನಿಕ ಕ್ಷೇತ್ರವಾಗಿ ಪರಿಣಮಿಸಿದೆ. ಈ ಪ್ರದೇಶವು ಉಜಿರೆ, ಕಲ್ಮಂಜ, ಪುದುವೆಟ್ಟು, ನಿಡ್ಲೆ, ಪಟ್ರಮೆ ಮತ್ತು ಬೆಳಾಲ್ ಗ್ರಾಮಗಳಿಂದ ಆವೃತವಾಗಿದೆ. ಧರ್ಮಸ್ಥಳದ ಪೂರ್ವಕ್ಕೆ ಸಹ್ಯಾದ್ರಿಯ ಶ್ರೇಣಿಯ ದಟ್ಟವಾದ ಅರಣ್ಯ ಪ್ರದೇಶವಿದೆ. ಇಲ್ಲಿನ ಪರಿಸರವು ತೆಂಗು – ಕಂಗುಗಳ ಹಚ್ಚ ಹಸಿರಿನಿಂದ ಕೂಡಿದ್ದು ಪಕ್ಕದಲ್ಲೇ ನೇತ್ರಾವತಿ ನದಿ ಜುಳು ಜುಳು ನಿನಾದದೊಂದಿಗೆ ಹರಿಯುತ್ತಿದೆ. ಇಲ್ಲಿನ ವಾಯುವಿನಲ್ಲಿ ಶೇಕಡ ೭೦–೭೫ರಷ್ಟು ನೀರಿನ ತೇವಾಂಶವಿದ್ದು ಬೇಸಿಗೆಯಲ್ಲಿ ಬೆವರು ತರುವ ಅತಿ ಉಷ್ಣವಿರುತ್ತದೆ. ವರ್ಷಂಪ್ರತಿ ಸರಿಸುಮಾರು ೧೨೦–೧೫೦ ಇಂಚಿನಷ್ಟು ಮಳೆ ಬೀಳುವ ಈ ಪ್ರದೇಶವು ಚಳಿಗಾಲದಲ್ಲಿ ಸಾಮಾನ್ಯ ಹಿತಕರ ವಾತಾವರಣವನ್ನು ಹೊಂದಿದೆ. ಬೆಳ್ತಂಗಡಿ ತಾಲೂಕು ಕೇಂದ್ರವಾಗಿದ್ದು ೧೯ ಕಿ.ಮೀ ದೂರದಲ್ಲಿದೆ. ೨೦೦೧ರ ಜನಗಣತಿಯ ಅನ್ವಯ ಧರ್ಮಸ್ಥಳದ ಜನಸಂಖ್ಯೆ ೯೨೫೮ ಆಗಿರುತ್ತದೆ. ಧರ್ಮಸ್ಥಳ ಪರಿಸರದಲ್ಲಿ ಈವರೆಗೂ ಯಾವುದೇ ಕೈಗಾರಿಕೆ ಆರಂಭಗೊಂಡಿಲ್ಲ ಎನ್ನುವುದು ಇಲ್ಲಿನ ಇನ್ನೊಂದು ವೈಶಿಷ್ಟ್ಯ. ಇಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡ ಜನಸಮುದಾಯ ಮತ್ತು ಇಲ್ಲಿಗೆ ಪ್ರತಿನಿತ್ಯ ಬರುವ ಸಹಸ್ರಾರು ಸಂಖ್ಯೆಯ ಭಕ್ತವೃಂದ ನೈಸರ್ಗಿಕವಾಗಿಯೇ ಜೀಪಿಸಲು ಅನುಗುಣವಾಗುವ ವಾತಾವರಣ ಈ ಕ್ಷೇತ್ರದ್ದು. ಸಣ್ಣ ಪುಟ್ಟ ಹಿಡುವಳಿದಾರರು ಭತ್ತ, ಕಂಗು ಕೃಷಿಯಲ್ಲಿ ನಿರತರಾಗಿದ್ದಾರೆ. ಧರ್ಮಸ್ಥಳ ಕ್ಷೇತ್ರದಲ್ಲಿ ವಿವಿಧ ಉದ್ಯೋಗಗಳನ್ನು ಅವಲಂಬಿಸಿರುವವರು ಬಹುತೇಕ ಈ ಪರಿಸರದವರೇ ಆಗಿದ್ದಾರೆ.

ಉಜಿರೆಯಿಂದ ಮುಂದೆ ಸರಿದು ಧರ್ಮಸ್ಥಳದತ್ತ ಸಾಗುತ್ತಿದ್ದಂತೆ ಶ್ರೀಕ್ಷೇತ್ರದ ಕ್ರಿಯಾ ಯೋಜನೆಗಳು ಸಾಕಾರಗೊಂಡು ಕಣ್ಣೆದುರು ನಿಲ್ಲುತ್ತವೆ. ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು, ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕಾಲೇಜು, ಸಿದ್ಧವನ ಗುರುಕುಲ, ನೇತ್ರಾವತಿ ನದಿಯ ಸ್ನಾನಘಟ್ಟ

ಯಾತ್ರಿಕರನ್ನು ಎದುರುಗೊಳ್ಳುತ್ತವೆ. ಕ್ರಮೇಣ ಮುಂದೆ ಸಾಗಿದಂತೆ ದಟ್ಟ ಅರಣ್ಯ ಪ್ರದೇಶ, ಅದರೊಳಗೆ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರ ಆಕೃತಿಗೊಂಡಿದೆ. ಅಲ್ಲಿಂದ ತುಸು ದೂರದಲ್ಲಿಯೇ ಶ್ರೀ ಕ್ಷೇತ್ರದ ಭವ್ಯ ಮಹಾಪ್ರವೇಶದ್ವಾರ ಎದುರುಗೊಂಡು ಕಣ್ಮನ ಸೆಳೆಯುತ್ತದೆ. ಮುಂದೆ ಭಾವುಕ ಭಕ್ತರ ಸಮೂಹ. ಕ್ಷೇತ್ರ ಪ್ರವೇಶ ಮಾಡಿದೊಡನೆಯೇ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕಟ್ಟಿದ ಅತಿಥಿ ಗೃಹಗಳು. ಎತ್ತರವಾದ ಪ್ರಾಕಾರವನ್ನು ಹೊಂದಿರುವ ಶ್ರೀ ಮಂಜುನಾಥ ಸ್ವಾಮಿಯ ಭವ್ಯ ದೇಗುಲ, ಪೂಜ್ಯ ಹೆಗ್ಗಡೆಯವರ ಬೀಡು, ಧರ್ಮಸ್ಥಳದ ಕಾರಣಿಕ ಪುರುಷ ಅಣ್ಣಪ್ಪ ಸ್ವಾಮಿಯ ಬದಿನಡೆ ಬೆಟ್ಟ, ಎದುರಿಗೆ ಬಾಹುಬಲಿ ವಿಹಾರ, ಚಂದ್ರನಾಥ ಬಸದಿ, ನೆಲ್ಯಾಡಿ ಬೀಡು ಎಲ್ಲವೂ ಸಹ ನೋಡುಗರಲ್ಲಿ ಭಕ್ತಿ ಮತ್ತು ಗೌರವವನ್ನು ಏಕಕಾಲದಲ್ಲಿ ಮೂಡಿಸುತ್ತದೆ. ಪವಿತ್ರ ನೇತ್ರಾವತಿಯಲ್ಲಿ ಮಿಂದು ವೈಮನಸ್ಸುಗಳ ಮಡಿಯೊಂದಿಗೆ ಬಂದ ಭಕ್ತರು ಮಂಜುನಾಥ ಸ್ವಾಮಿಗೆ ವಂದಿಸಿ ಅಲ್ಲಿಂದ ಬೀಡಿಗೆ ಬರುವುದು ಸಾಮಾನ್ಯ ರೂಢಿ. ಬಂದಿರುವ ಭಕ್ತರನ್ನು ಪ್ರೀತಿಯಿಂದ ಮಾತನಾಡಿಸಿ ತಮ್ಮ ಬದುಕಿನ ಸೋಲು ಗೆಲುವುಗಳನ್ನು, ನೋವು ಹತಾಶೆಗಳನ್ನು ನಿವೇದಿಸಿಕೊಂಡು ಶ್ರೀ ಮಂಜುನಾಥ ಸ್ವಾಮಿಯ ಪರವಾಗಿ ಶ್ರೀ ಹೆಗ್ಗಡೆಯವರಿಂದ ಅಭಯಪ್ರದಾನ ಪಡೆಯುವ ದೃಶ್ಯ ಅತ್ಯಂತ ಚೇತೋಹಾರಿಯಾದು ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಾಲಯದ ಎಡಬದಿಯ ಗುಡ್ಡ 'ಬಾಹುಬಲಿ ವಿಹಾರ'ವನ್ನು 'ರತ್ನಗಿರಿ' ಎಂದು ಕರೆಯಲಾಗುತ್ತದೆ. ಅಲ್ಲಿ ಮುವತ್ತೊಂಭತ್ತು ಅಡಿ ಎತ್ತರದ ಪೂರ್ವಾಭಿಮುಖನಾಗಿ ನಿಂತಿರುವ, ಮುಖದಲ್ಲಿ ಮಂದಹಾಸ ತುಳುಕುತ್ತಿರುವ ಗೊಮ್ಮಟನ ಆಕೃತಿಯಿದೆ. ಗೊಮ್ಮಟ ಬೆಟ್ಟದ ಸುತ್ತು ಒಂದು ಪ್ರದಕ್ಷಿಣೆ ಬಂದರೆ ಕಾಣುವ ನಿಸರ್ಗ ಸೌಂದರ್ಯ ಅನುಪಮವಾದುದು.

೩.೨ ಬಹುಧರ್ಮ ಸಮನ್ವಯ ತಾಣ

ಧರ್ಮಸ್ಥಳ ಕ್ಷೇತ್ರವು ಚಾರಿತ್ರಿಕ ಕಾಲಘಟ್ಟದಿಂದಲೂ ಸರ್ವಧರ್ಮ ಸಮನ್ವಯದ ತಾಣವೆನಿಸಿದೆ. ಭಾರತದಂತಹ ಬಹು ಧರ್ಮೀಯ ರಾಷ್ಟ್ರದಲ್ಲಿ ವಿವಿಧ ಮತಧರ್ಮಗಳ ನಡುವೆ ಸಮನ್ವಯ ಇಲ್ಲದೆ ಹೋದರೆ ಶಾಂತಿ, ನೆಮ್ಮದಿ ನೆಲಗೊಳ್ಳುವುದು ಕಷ್ಟಸಾಧ್ಯ. ಕರಾವಳಿಯ ಹಸಿರು ವನಸಿರಿಯ ನಡುವೆ 'ಬೀಡು' ಕಟ್ಟಿಕೊಂಡಿದ್ದ ಹೆಗ್ಗಡೆ ಕುಟುಂಬದವರಿಗೆ ಸುಮಾರು ಎಂಟು ನೂರು ವರ್ಷಗಳ ಹಿಂದೆಯೇ ಈ ಸತ್ಯ ಹೊಳೆದಿತ್ತು. ಧರ್ಮದೇವತೆಗಳ ಆದೇಶದ ರೂಪದಲ್ಲಿ 'ಮಾನವ ಜಾತಿ ತಾನೊಂದೆ' ಎಂಬ ಸತ್ಯ ಹೆಗ್ಗಡೆಯವರಿಗೆ ಹೊಳೆಯಿತೆನ್ನುವುದು ಒಂದು ರೂಪಕ. ಆ ಸತ್ಯವನ್ನು ನಿತ್ಯವಾಗಿಸಿ ಅದಕ್ಕೊಂದು ಸಾಂಸ್ಥಿಕ ರೂಪವನ್ನು ಕೊಟ್ಟವರು ಶ್ರೀ ಬರ್ಮಣ್ಣ ಹೆಗ್ಗಡೆಯವರು. ತಾವು ಜೈನಮತೀಯರಾಗಿದ್ದರೂ ಕರಾವಳಿಯ ನೆಲದಲ್ಲಿ ಆಗ ಗಾಢವಾಗಿ ಆವರಿಸಿಕೊಂಡಿದ್ದ ನಾಥ ಪಂಥದ ಶೈವ ಚಹರೆಯನ್ನು ಪಡೆದಿದ್ದ ಮಂಜುನಾಥನ

ವಿಗ್ರಹವನ್ನು ಸ್ಥಾಪಿಸಿ ವೈಷ್ಣವ ಬ್ರಾಹ್ಮಣರನ್ನು ಪೂಜೆಗೆ ನಿಯುಕ್ತಿ ಮಾಡಿದರು. ಹೀಗೆ ಶೈವ – ವೈಷ್ಣವ – ಜೈನ ಧರ್ಮಗಳು ಈ ಕ್ಷೇತ್ರದಲ್ಲಿ ಸಾಮರಸ್ಯದಿಂದ ಸಮಾವೇಶಗೊಂಡವು. ಬಹುಶಃ ರಾಮಕೃಷ್ಣಾಶ್ರಮವನ್ನು ಬಿಟ್ಟರೆ ಇಂತಹ ಸಮನ್ವಯ ಕೇಂದ್ರ ಇನ್ನೊಂದಿರಲಾರದು. ಹೀಗೆ ಹಲವು ಧರ್ಮಗಳ ಸಂಗಮ ಸ್ಥಾನವಾಗಿ ಧರ್ಮಸ್ಥಳ ತನ್ನ ಗತವೈಭವವನ್ನು ಇಂದಿಗೂ ಮೆರೆಯುತ್ತಿದೆ. ಯಾವುದೇ ರೀತಿಯ ಜಾತಿ, ಮತ, ವರ್ಣ ಮತ್ತು ವರ್ಗ ಭೇದವಿಲ್ಲದೆ ಎಲ್ಲರೂ ಇಲ್ಲಿ ಸಮಾಗಮಗೊಂಡು ದರ್ಶನ ಪಡೆಯುತ್ತಾರೆ. ಊಟ, ವಸತಿ, ದೇವರ ದರ್ಶನ ಎಲ್ಲದರಲ್ಲೂ ಯಾವುದೇ ತರಹದ ಪರಿಭೇದವಿಲ್ಲದೆ ಸಮಾನ ಅವಕಾಶವನ್ನು ಒದಗಿಸಲಾಗುತ್ತದೆ. ಸರ್ವ ಧರ್ಮ ಸಮನ್ವಯದ ಕುರುಹಾಗಿ ಪ್ರತಿ ವರ್ಷವೂ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಸರ್ವ ಧರ್ಮ ಸಮ್ಮೇಳನ ಜರಗುತ್ತದೆ. ಇದೊಂದು ವಿಶಿಷ್ಟ ಸಮಾರಂಭ. ವೇದಿಕೆಯಲ್ಲಾಡಿದ ಮಾತುಗಳು ಶ್ರೀಕ್ಷೇತ್ರದ ಧರ್ಮಾಧಿಕಾರಿಗಳ ಸಿಬ್ಬಂದಿ ವರ್ಗದವರ ನಡೆನುಡಿಗಳಲ್ಲಿ ಅನುಸಂಧಾನಗೊಳ್ಳುವುದನ್ನು ನಿರಂತರವಾಗಿ ಗಮನಿಸಬಹುದಾಗಿದೆ. ಧರ್ಮಸ್ಥಳದ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಜೈನ ಇಂದ್ರರಿಂದ ಪೂಜೆ ಸಲ್ಲುವಂತೆಯೇ, ನಾಥ ಪಂಥದಿಂದ ಪ್ರಭಾವಿತ ಶೈವೀಯ ನೆಲೆಯ ಮಂಜುನಾಥನಿಗೂ ಸ್ಥಾನೀಯ ದೈವಗಳಾದ ಅಣ್ಣಪ್ಪ ಸ್ವಾಮಿ, ಕಲ್ಲೇರಿತ್ತಾಯ, ಮುಂತಾದ ಧರ್ಮ ದೇವತೆಗಳಿಗೂ ಪೂಜೆ ಸಲ್ಲುತ್ತದೆ.[೧]

ಒಟ್ಟಿನಲ್ಲಿ ಧರ್ಮಸ್ಥಳ ಒಂದು ಧರ್ಮ ಸಾಮ್ರಾಜ್ಯ. ಹೆಗ್ಗಡೆಯವರು ಧರ್ಮ ದೇವತೆಗಳ, ಮಂಜುನಾಥ ಸ್ವಾಮಿಯ ಪ್ರತಿನಿಧಿಗಳು. ಪ್ರಸ್ತುತ ಧರ್ಮಾಧಿಕಾರಿಗಳಾಗಿರುವ ರಾಜರ್ಷಿ ಡಾ. ಡಿ ವೀರೇಂದ್ರ ಹೆಗ್ಗಡೆಯವರು ಈ ಧರ್ಮ ದೇವತೆಗಳು, ಮಂಜುನಾಥ ಸ್ವಾಮಿಯ 'ಕೈಯಾಗಿ, ಬಾಯಾಗಿ, ಕಣ್ಣಾಗಿ, ಮತಿಯಾಗಿ' ತತ್ವಾದರ್ಶಗಳನ್ನು ಸಾಕಾರಗೊಳಿಸುವ ಕ್ರಿಯಾ ಶಕ್ತಿಯಾಗಿ ಗೋಚರಿಸುತ್ತಿದ್ದಾರೆ.[೨] ಸರ್ವ ಧರ್ಮಗಳನ್ನು, ಸಮಸ್ತ ಮಾನವ ಕೋಟಿಯನ್ನು ಸಮಾನವಾಗಿ ತಿಳಿಯುವ ಹಾಗೂ ಜನಕಲ್ಯಾಣವನ್ನೇ ತನ್ನ ಬದುಕಿನ ಆದರ್ಶವಾಗಿ ಕಂಡುಕೊಂಡಿರುವ ಫಲವಾಗಿ ಧರ್ಮಸ್ಥಳ ಇಂದು ಧಾರ್ಮಿಕ ಯಾತ್ರಾ ಸ್ಥಳ ಮಾತ್ರವಾಗದೆ ಸಾಂಸ್ಕೃತಿಕ, ಸಾಮಾಜಿಕ ತಾಣವೂ ಆಗಿರುವುದು ಗಮನಾರ್ಹ ಸಂಗತಿ.

೩.೩ ಗ್ರಾಮಾಭಿವೃದ್ಧಿ ಯೋಜನೆ : ಧರ್ಮಸ್ಥಳ ಮಾದರಿ

'ಧರ್ಮಸ್ಥಳ ಮಾದರಿ'ಯೆಂದೇ ಜನಜನಿತವಾದ 'ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ' ದೇಶದಲ್ಲೇ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಸ ಪ್ರಯೋಗ. ಶ್ರೀಕ್ಷೇತ್ರದ ಧರ್ಮಾಧಿಕಾರಿ, ಕರ್ನಾಟಕ ರತ್ನ, ಪದ್ಮಭೂಷಣ ರಾಜರ್ಷಿ ಡಾ. ವೀರೇಂದ್ರ ಹೆಗ್ಡೆಯವರೇ ಈ ಯೋಜನೆಯ ಕನಸಿಗ – ನನಸಿಗ. ಈ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯವಿಧಾನ ಹಾಗೂ ಕಾರ್ಯ ನೈಪುಣ್ಯ, ಸಾಧನೆ,

ಸಾಫಲ್ಯಗಳು ವಿದೇಶಗಳಲ್ಲೂ ಪರಿಚಿತವಾಗಿವೆ. ದೂರದ ಜರ್ಮನಿ, ಮಲೇಶಿಯಾ, ನೇಪಾಳಗಳಿಂದ ಆರ್ಥಿಕ ತಜ್ಞರು, ವಿದ್ವಾಂಸರು, ಸಂಶೋಧಕರು, ಕೃಷಿ ಪರಿಣತರು ಅನನ್ಯವಾದ ಈ ಗ್ರಾಮಾಭಿವೃದ್ಧಿ 'ಮಾದರಿ'ಯನ್ನು ಅಭ್ಯಾಸ ಮಾಡಲು ಆಸಕ್ತಿ ಮತ್ತು ಕುತೂಹಲಗಳೊಂದಿಗೆ ಆಗಮಿಸುತ್ತಿದ್ದಾರೆ.[೭] ತಮ್ಮ ದೇಶಗಳಲ್ಲಿಯೂ ಈ ಮಾದರಿಯನ್ನು ಅಳವಡಿಸಿಕೊಳ್ಳುವ ದೂರದೃಷ್ಟಿ ಅವರದು. ಅದೇ ವೇಳೆಗೆ ಇಲ್ಲಿನ ಪರಿಣತರು ವಿದೇಶಗಳಿಗೆ ತೆರಳಿ ಅಲ್ಲಿನವರಿಗೆ ಸಕಾಲಿಕ ಮಾಹಿತಿ ನೀಡುತ್ತಿದ್ದಾರೆ.

ದೀನ ಜನರ ಪಾಲಿಗೆ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯ ಅವಿಸ್ಮರಣೀಯ ಕೊಡುಗೆ ನೀಡಿದ ಸಂದರ್ಭ ಕೂಡ ಒಂದು ಐತಿಹಾಸಿಕ ಪ್ರಸಂಗದೊಂದಿಗೆ ಸಮ್ಮಿಳಿತವಾಗಿದೆ. ಅಭಿನವ ಚಾವುಂಡರಾಯನೆಂಬ ಕೀರ್ತಿಗೆ ಭಾಜನರಾಗಿ ಡಾ. ಹೆಗ್ಗಡೆಯವರು ಶ್ರೀ ಕ್ಷೇತ್ರದಲ್ಲಿ ೧೯೮೨ ರಲ್ಲಿ ಬಾಹುಬಲಿಯ ೩೯ ಅಡಿ ಎತ್ತರದ ಬೃಹದಾಕಾರದ ಏಕಶಿಲಾ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ತ್ಯಾಗದ ಅಸೀಮ ಸಂಕೇತವಾದ ಬಾಹುಬಲಿಯ ಪ್ರತಿಷ್ಠಾಪನೆಯ ಸವಿನೆನಪಿಗಾಗಿ ತಾಲೂಕಿನ ದುರ್ಬಲ ಸಮುದಾಯದ ಕಲ್ಯಾಣಕ್ಕೆ ನೀಡಿದ ಕೊಡುಗೆಯೇ ಗ್ರಾಮಾಭಿವೃದ್ಧಿ ಯೋಜನೆ. ಜನ ಕಲ್ಯಾಣದ ಹಾದಿಯಲ್ಲಿ ಧರ್ಮಸ್ಥಳ ರೂಪಿಸಿದ ಮೊದಲ ಹೆಜ್ಜೆ ಇದು ಖಂಡಿತ ಅಲ್ಲ. ಪರಂಪರೆಯಿಂದ ನಡೆದು ಬಂದ ದಾನ ಧರ್ಮಗಳ ಎಲ್ಲ ವಿಧಾನಗಳನ್ನೂ ಶ್ರೀ ಕ್ಷೇತ್ರದ ಹೆಗ್ಗಡೆ ಪರಂಪರೆ ಚ್ಯುತಿಯಿಲ್ಲದೆ ಅನೂಚಾನವಾಗಿ ನಡೆಸಿಕೊಂಡು ಬಂದಿದೆ. ೧೯೭೪ರ ಸುಮಾರಿಗೆ ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರ ಧರ್ಮಪತ್ನಿ ಶ್ರೀಮತಿ ಹೇಮವತಿ ಹೆಗ್ಗಡೆಯವರು ಸುತ್ತಮುತ್ತಲಿನ ಬಡಜನರ ಬದುಕಿನ ಸಂಕಷ್ಟಗಳನ್ನು ಅತ್ಯಂತ ಸಮೀಪದಿಂದ ಗ್ರಾಮಗಳಲ್ಲಿ ಗಮನಿಸಿದರು. ಮನೆಗಳಿಗೆ ಸರಿಯಾದ ಗೋಡೆಗಳಿರಲಿಲ್ಲ. ಸೂರಿಗೆ ಹೊದೆಸಲು ಹುಲ್ಲಿರಲಿಲ್ಲ. ಒಳಗೆ ನುಗ್ಗಿದರೆ ಬಾಗಿಲುಗಳಿರಲಿಲ್ಲ. ರಾತ್ರಿಯ ಕಗ್ಗತ್ತಲನ್ನು ಹೊಡೆದೋಡಿಸಲು ಬೇಕಾದ ಬೆಳಕು ನೀಡಲು ಒಂದು ಎಣ್ಣೆಯ ಬುಡ್ಡಿ ಕೂಡ ಇರದ ಪ್ರದೇಶಗಳು ಅವರ ಅರಿವಿಗೆ ಬಂತು.

ಕಷ್ಟ ಕಾರ್ಪಣ್ಯ ಸಮ್ಮಿಲಿತ ಬದುಕಿನಲ್ಲಿ ಇದ್ದದ್ದು ಬರಿಯ ಕೊರತೆ. ಅದನ್ನು ನಿವಾರಿಸಿಕೊಳ್ಳುವ ಛಲವೂ ಹಳ್ಳಿಯ ಜನರಲ್ಲಿ ಇರಲಿಲ್ಲ. ಛಲ ಇದ್ದವರಿಗೂ ಆರ್ಥಿಕ ಸಂಪನ್ಮೂಲ ಹೊಂದಿಸಿಕೊಳ್ಳಲು ದಾರಿ ಇರಲಿಲ್ಲ. ಇಂಥ ದುರ್ಬಲರ ಮನೆ ಬೆಳಗಲು "ಗ್ರಾಮೀಣ ಕೈತುತ್ತು ಯೋಜನೆ" ಎಂಬ ವಿಶಿಷ್ಟ ಕೊಡುಗೆಯನ್ನು ಧರ್ಮಸ್ಥಳದ ವತಿಯಿಂದ ಒದಗಿಸಲಾಯಿತು.[೮] ಪ್ರತಿಯೊಂದು ಬಡ ಕುಟುಂಬಕ್ಕಾಗಿ ಒಂದು ಬುಟ್ಟಿಯಲ್ಲಿ ಬಟ್ಟೆಗಳು, ದೀಪವುರಿಸಲು ಕಂದೀಲು, ಕೆಲವು ಪಾತ್ರೆಗಳು ಹೀಗೆ ಅನೇಕ ಗೃಹ ಬಳಕೆಯ ಸಾಮಾಗ್ರಿಗಳನ್ನಿರಿಸಿದರು. ಪುದುವೆಟ್ಟು ಗ್ರಾಮದ ಯುವತಿ ಮಂಡಲವಲ್ಲಿ ನಡೆದ ಸಮಾರಂಭದಲ್ಲಿ ಈ ತುತ್ತನ್ನು ಎಲ್ಲ ಮನೆಗಳವರಿಗೂ ನೀಡಿ ಕಣ್ಣೊರೆಸಿ ಸಾಂತ್ವನ ಹೇಳಿದರು. ನಾವು ನೀಡುವ ದಾನದ ಒಂದಂಶ

ನಮ್ಮ ಸುತ್ತು ಮುತ್ತಲಿನ ಕಡು ಬಡವರಿಗೆ ಸೇರಬೇಕು. ಅವರ ಆರ್ಥಿಕ ಪುನಶ್ಚೇತನಕ್ಕೆ ನಾಂದಿಯಾಗಬೇಕು ಎಂಬ ನಿರ್ಧಾರದ ಅಮೃತಫಲ ಆಗಲೇ ಹೆಗ್ಗಡೆಯವರ ಹೃದಯದಲ್ಲಿ ಮೊಳಕೆಯೊಡೆದು ಬೆಳೆಯತೊಡಗಿತು.

ಗ್ರಾಮೀಣಾಭಿವೃದ್ಧಿಯ ದಿಸೆಯಲ್ಲಿ ಜಿಲ್ಲೆಯಲ್ಲಿ ನಡೆದ ಒಂದೆರಡು ಸಣ್ಣ ಪ್ರಯತ್ನಗಳು ಕೂಡ ಡಾ. ಹೆಗ್ಗಡೆಯವರ ಗಮನಕ್ಕೆ ಬಂದಿದ್ದವು. ಮಣಿಪಾಲದಲ್ಲಿ ದಿವಂಗತ ಟಿ.ಎ. ಪೈಯವರ ನೇತೃತ್ವದಲ್ಲಿ ಫೋರ್ಡ್ ಫೌಂಡೇಶನ್ ನೆರವಿನಿಂದ ನಡೆದ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ, ಅದೇ ರೀತಿ ಸಿಂಡಿಕೇಟ್ ಬ್ಯಾಂಕಿನವರು ಆಯೋಜಿಸಿದ ಫಾರಂ ಕ್ಲಿನಿಕ್ ಕಾರ್ಯಕ್ರಮ ಇವೆಲ್ಲ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ರೂಪಿಸಿದ್ದ ಸುಧಾರಣೆಯ ದಾರಿಗಳನ್ನು ಹೆಗ್ಗಡೆಯವರು ಗುರುತಿದರು. ಇದೇ ದಿನಗಳಲ್ಲಿ ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ "ಕುಗ್ರಾಮ" ಗುರುತಿಸುವ ಸ್ಪರ್ಧೆಯನ್ನು ಉದಯವಾಣಿ ಪತ್ರಿಕೆ ನಡೆಸಿತು. ಬೆಳಕಿಲ್ಲದ, ದಾರಿಯಿಲ್ಲದ, ಚಿಕಿತ್ಸಾಲಯವಿಲ್ಲದ, ದೂರವಾಣಿಯಿಲ್ಲದ, ಏನೇನೂ ಇಲ್ಲದ ಬೆಳ್ತಂಗಡಿ ತಾಲೂಕಿನ ದಿಡುಪೆ ಗ್ರಾಮ ತೀವ್ರ ಸ್ವರೂಪದ ಸಂಕಷ್ಟದಲ್ಲಿರುವ ಕುಗ್ರಾಮ ಎನಿಸಿಕೊಂಡಿತು." ಈ ಪರಿಸ್ಥಿತಿ ಡಾ. ಹೆಗ್ಗಡೆಯವರ ಮೃದು ಮನಸ್ಸಿನ ತಲ ಸ್ಪರ್ಶಿಸಿತು. ದಾನವಾಗಿ ಕೊಡುವ ಹಣವನ್ನು ಸಮಗ್ರ ತಾಲೂಕಿಗೆ ಬಳಸಿಕೊಳ್ಳುವ ಕುರಿತು ಚಿಂತನೆ ಮೂಡಿತು.

ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಕೂಸನ್ನು ಪಸರಿಸಲು ಹೆಗ್ಗಡೆಯವರು ಅನುಭವಿಸಿದ ವೇದನೆ ಒಂದು ದಶಕಕ್ಕಿಂತ ಹೆಚ್ಚಿನ ಕಾಲದ್ದು. ಶ್ರೀ ಸನ್ನಿಧಿಗೆ ಬರುತ್ತಿದ್ದ ಜನರನ್ನು ಕಾಣುವಾಗ, ಅವರು ನೋವಿನ ಚಿತ್ರಣವನ್ನು ತಮ್ಮೆದುರು ಬಿಚ್ಚಿಡುವಾಗ ಈ ಬದುಕಿನಲ್ಲಿ ನಲಿವಿಗಿಂತ ನೋವಿನ ಅವಗಾಹನೆಯೇ ಅಧಿಕವಾಗಿದೆ ಎಂಬುದು ಅವರ ಹೃದಯವನ್ನು ಕಲಕುತ್ತಲೇ ಇತ್ತು. ಎಲ್ಲ ಸಮಸ್ಯೆಗಳಿಗೂ ಬಡತನ, ಅಜ್ಞಾನ, ಮೂಢನಂಬಿಕೆಗಳೇ ಮೂಲವಾಗಿದ್ದುದು ವಿಷಾದದ ವಿಷಯವಾಗಿತ್ತು ಆ ಎಲ್ಲಾ ಜನಸಮುದಾಯ ಒಂದಿಷ್ಟು ಸಾಂತ್ವಸ, ಭರವಸೆ ಮತ್ತು ಜೀವನಪ್ರೀತಿಯನ್ನು ಬಯಸುತ್ತಿದ್ದರು.

ಕರ್ನಾಟಕದಲ್ಲಿ ಭೂ ಸುಧಾರಣೆಯ ಶಾಸನ ಜಾರಿಗೆ ಬಂದುದರ ಪರಿಣಾಮವನ್ನೂ ಡಾ. ಹೆಗ್ಗಡೆಯವರು ಗಮನಿಸಿದ್ದರು. 'ಉಳುವವನೇ ಹೊಲದೊಡೆಯ' ಎಂದು ಸರಕಾರ ಘೋಷಿಸಿತು. ಇದ್ದಕ್ಕಿದ್ದಂತೆ ಭೂಮಿಯ ಯಜಮಾನಿಕೆಯನ್ನು ಉಳುವವನಿಗೆ ಹಂಚಿಕೆ ಮಾಡುವ ಪ್ರಯತ್ನಗಳು ತೀವ್ರಗತಿಯಲ್ಲಿ ನಡೆದವು. ಆದರೆ ಅದನ್ನು ಸದ್ಬಳಕೆ ಮಾಡಿ, ಕೃಷಿ ಸಂಪದ್ಭರಿತಗೊಳಿಸಲು ಬೇಕಾದ ತಂತ್ರಜ್ಞಾನ, ಆರ್ಥಿಕ ಶಕ್ತಿ ಅವರ ಮನೆ ಬಾಗಿಲನ್ನು ಇನ್ನೂ ತಲುಪಿರಲಿಲ್ಲ. ಆರ್ಥಿಕ ದೌರ್ಬಲ್ಯದಿಂದಾಗಿ ಈ ಭೂಮಿಯ ಒಡೆಯರಿಗೆ ಭೂಮಿಯಲ್ಲಿ ಕೃಷಿ ಮಾಡುವುದಂತಿರಲಿ, ಭೂಮಿಯ ಸುತ್ತಲೂ ಭದ್ರವಾದ

ಬೇಲಿ ಹಾಕಲೂ ಅವರಲ್ಲಿ ಹಣವಿರಲಿಲ್ಲ. ಅದರೊಂದಿಗೆ ಆಸಕ್ತಿಯೂ ಇರಲಿಲ್ಲ. ಭೂಮಿಯನ್ನು ಬರಡುಗೊಳಿಸಿ, ಆ ಭೂಮಿಯಲ್ಲಿ ಬೆಳೆ ಬರುವುದಿಲ್ಲ ಎಂಬ ತೀರ್ಮಾನಕ್ಕೆ ಬಂದು, ಯಾರದೋ ಮನೆಯ ಜೀತದಾಳುಗಳಾಗಿ ಬದುಕಿನ ಚಕ್ರ ತಿರುಗಿಸುತ್ತಿದ್ದರು. ಗ್ರಾಮದ ಬೆನ್ನೆಲುಬಾಗಬೇಕಿದ್ದ ಕೃಷಿ ಅಭಿವೃದ್ಧಿಯನ್ನು ಕಡೆಗಣಿಸಿ, ನೂರಾರು ಎಕರೆ ಭೂಮಿಯನ್ನು ಹಾಳುಗೆಡವಿದ್ದರು. ಒಡೆಯರಿಗೆ ಗೇಣಿ ಕೊಡಬೇಕೆಂಬ ಬದ್ಧತೆಯಿಂದ ಸರಕಾರ ಅವರನ್ನು ವಿಮುಕ್ತಗೊಳಿಸಿತ್ತು. ಆದರೆ ಮಾರ್ಗದರ್ಶನ ಮತ್ತು ಬಂಡವಾಳದ ಅಭಾವದಿಂದ ಕೈಗೆ ಸಿಕ್ಕಿದ ಮಾಣಿಕ್ಯದಂತಹ ಭೂಮಿಯೂ ಯಾವುದೇ ರೀತಿಯ ಬೆಳೆ ಕಾಣದೆ ಪೂರ್ತಿಯಾಗಿ ಬರಡಾಗಿತ್ತು.

ಇನ್ನೊಂದೆಡೆ ಭೂಹೀನ ಕುಟುಂಬಗಳು ಸರಕಾರಿ ನೆಲದಲ್ಲಿ ಆಕ್ರಮಣ ಮಾಡಿ ಜೋಪಡಿ ಕಟ್ಟಿಕೊಂಡು ನೆಲೆಸಿದ್ದರು. ಕೃಷಿ ಮಾಡಲು ಅವರಲ್ಲಿ ಹಣವಿರಲಿಲ್ಲ. ಬೇರೆಡೆಗೆ ಕೂಲಿಗೆ ಹೊಗಿ ಹಣ ಸಂಪಾದಿಸದಿದ್ದರೆ ಹೊತ್ತಿನ ತುತ್ತಿಗೆ ಗತಿಯಿರಲಿಲ್ಲ. ಯಾವ ಆರ್ಥಿಕ ಸಂಸ್ಥೆಗಳೂ ಅವರ ಬದುಕಿಗೆ ಭರವಸೆ ತುಂಬುವಂತೆ ಒಂದೇ ಒಂದು ಪೈಸೆಯನ್ನು ಸಾಲವಾಗಿ ಕೊಡುವ ಪರಿಸ್ಥಿತಿ ಇರಲಿಲ್ಲ.

ಈ ಎರಡೂ ಮಾದರಿಯ ಜನರಿಗೆ ನೇರವಾಗಿ ಸಹಾಯ ಮಾಡಿದರೆ ತುಂಡು ಜಮೀನುಗಳ ಕೃಷಿ ಸಮೃದ್ಧಿಯಾಗುತ್ತದೆ. ಸೌಲಭ್ಯ ವಂಚಿತರು ಸಬಲರಾಗುತ್ತಾರೆ. ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಗ್ರಾಮೀಣರು ಒಂದಾಗುವುದರ ಮೂಲಕ ಸ್ಥಳೀಯ ಸಂಪನ್ಮೂಲಗಳನ್ನು ಉಪಯೋಗಿಸಲು ಪ್ರೇರಣೆ ನೀಡಬೇಕು ಎಂದು ಡಾ. ಹೆಗ್ಗಡೆಯವರು ಸಂಕಲ್ಪ ಮಾಡಿದರು. ದುರ್ಬಲರ ಸಬಲೀಕರಣಕ್ಕೆ ಶಾಶ್ವತವಾದ ಕೃಷಿ ಯೋಜನೆಗಳು ಸಿದ್ಧವಾಗಬೇಕು, ಕೃಷಿಯೇತರ ಚಟುವಟಿಕೆಗಳೂ ವಿಸ್ತರಿಸಬೇಕು, ಸಮೂಹ ಪಾಲುದಾರಿಕೆಗೆ ನೀಡುವ ಉತ್ತೇಜನದಿಂದ ಸಮುದಾಯ ಮತ್ತು ಗ್ರಾಮಗಳ ಅಭಿವೃದ್ಧಿಯಾಗಬೇಕು, ಶಿಸ್ತು, ಬದ್ಧತೆ, ನೈತಿಕ ಮೌಲ್ಯಗಳು ಮತ್ತು ಧರ್ಮಪ್ರಜ್ಞೆಯನ್ನು ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಬೇಕು ಎಂಬ ಧ್ಯೇಯೋದ್ದೇಶಗಳಿರಬೇಕೆಂದು ನಿರ್ಧರಿಸಿದರು.[೬]

ಬಾಹುಬಲಿ ವಿಗ್ರಹ ಪ್ರತಿಷ್ಠಾಪನೆಯ ಸಂದರ್ಭ ೩೪ರ ಹರೆಯದಲ್ಲೇ ತಾಲೂಕಿನ ಜನತೆಗೆ ಬಾಹುಬಲಿಗಿಂತಲೂ ಎತ್ತರವಾದ ಸಮಗ್ರ ಗ್ರಾಮೀಣಾಭಿವೃದ್ಧಿಯ ಯೋಜನೆಯನ್ನು ಕೊಡುಗೆಯಾಗಿ ನೀಡಿದ ಡಾ. ಹೆಗ್ಗಡೆಯವರು ಸಮಷ್ಟಿಯಾಗಿ ಜಗತ್ತಿನಲ್ಲೇ ಉನ್ನತವೆನಿಸಬಲ್ಲ ಸಮಾಜ ಸೇವೆಯನ್ನು ಜನಕಲ್ಯಾಣ ಪಥಕ್ಕೆ ನೀಡಿದ ಕೀರ್ತಿಗೆ ಭಾಜನರಾದರು. ಈ ಯೋಜನೆಯ ಪರಿಕಲ್ಪನೆ ರೂಪ ಪಡೆದದ್ದು ೧೯೮೧ರಲ್ಲಿ. ಧರ್ಮಸ್ಥಳಕ್ಕೆ ಸಮೀಪದ ಪುದುವೆಟ್ಟಿನಲ್ಲಿ ಆರಂಭಗೊಂಡ ಈ ಯೋಜನೆ ಕ್ಷೇತ್ರದ ಆದಾಯದಿಂದ ದೇಣಿಗೆಯಾಗಿ ನೀಡುವ 'ಗ್ರಾಮೀಣ ಕೈತುತ್ತು ಯೋಜನೆ'ಯ ರೂಪದಲ್ಲಿದ್ದಿತ್ತು. ಮುಂದೆ ೧೯೮೨ರಲ್ಲಿ

ಧರ್ಮಸ್ಥಳದ ಬಾಹುಬಲಿ ವಿಗ್ರಹ ಪ್ರತಿಷ್ಠೆಯ ಸಂದರ್ಭದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಆ ಐತಿಹಾಸಿಕ ಘಟನೆಯ ನೆನಪಿಗಾಗಿ ಬಡ ಜನರ ಕಲ್ಯಾಣಕ್ಕಾಗಿ ಒಂದು ಸಮಗ್ರ ಯೋಜನೆಯನ್ನು ರೂಪಿಸುವ ತನ್ನ ಇಂಗಿತವನ್ನು ಡಾ. ವೀರೇಂದ್ರ ಹೆಗ್ಗಡೆಯವರು ಘೋಷಿಸಿದರು. ಇದಕ್ಕಾಗಿ ಆರಂಭದಲ್ಲಿ ಬುಡಕಟ್ಟು ಸಮುದಾಯಕ್ಕೆ ಸೇರಿದ ರಾಣೆಯವರು ಹೆಚ್ಚಾಗಿ ನೆಲೆಸಿರುವ ಹತ್ಯಡ್ಕ ಗ್ರಾಮದ 'ಕುಂಟಲಪಲ್ಕೆ' ಎಂಬ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಶ್ರೀ ಹೆಗ್ಗಡೆಯವರು ದೇಶದ ಉದ್ದಗಲಕ್ಕೂ ಸಂಚರಿಸಿ ಯಶಸ್ವೀ ಗ್ರಾಮೀಣ ಅಭಿವೃದ್ಧಿ ಯೋಜನಾ ಕಾರ್ಯಕ್ರಮಗಳನ್ನು ಅಭ್ಯಾಸ ಮಾಡಿದರು. ಕೃಷಿ ರಂಗದಲ್ಲಿ ದೇಶದಲ್ಲಿಯೇ ಕ್ರಾಂತಿ ಮಾಡಿದ ಸಿಂಡಿಕೇಟ್ ಬ್ಯಾಂಕಿನ 'ಫಾರ್ಮ್ ಕ್ಲಿನಿಕ್' ಹಾಗೂ 'ಸಿಂಡಿಕೇಟ್ ಕೃಷಿ ಪ್ರತಿಷ್ಠಾನ'ಗಳ ಕಾರ್ಯವೈಖರಿಯನ್ನು ಅಧ್ಯಯನ ಮಾಡಿ ಅಲ್ಲಿನ ಗುಣಾತ್ಮಕ ಅಂಶಗಳನ್ನು ಅಳವಡಿಸಿಕೊಳ್ಳಲು ಯೋಚಿಸಿದರು. ನಿರ್ದಿಷ್ಟ ಗ್ರಾಮೀಣ ಪ್ರದೇಶವೊಂದರ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿರಿಸಿಕೊಂಡು, ಅಲ್ಲಿನ ಪ್ರತಿ ಕುಟುಂಬದ ಶ್ರೇಯೋಭಿವೃದ್ಧಿಯನ್ನು ಕೇಂದ್ರ ಕಾಳಜಿಯಾಗಿರಿಸಿಕೊಂಡು ರೂಪುತಳೆದ ಯೋಜನೆ ಇದು. ಗ್ರಾಮೀಣ ಪರಿಸರದಲ್ಲಿನ ದೀನ ದಲಿತರ, ನಿರ್ಗತಿಕರ, ಹಿಂದುಳಿದ ವರ್ಗದವರ ಮತ್ತು ಅವಕಾಶಗಳಿಂದ ವಂಚಿತರಾದ ಮುಗ್ಧ ಜನರಿಗೆ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅವಕಾಶಗಳನ್ನು ಒದಗಿಸುವ ಸದುದ್ದೇಶದ ಹಿನ್ನೆಲೆಯಲ್ಲಿ ಈ ಯೋಜನೆ ಆಕಾರ ಪಡೆಯಿತು. ಹೀಗೆ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ಆರಂಭದ ದಿನಗಳಿಂದಲೇ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ರೂಪುರೇಷೆಗಳನ್ನು ತನ್ನದೇ ಆದ ವಿನೂತನ ಮತ್ತು ವಿಶಿಷ್ಟ ರೀತಿಯಲ್ಲಿ ರೂಪಿಸಿಕೊಂಡು, ತಾನು ಕೇಳಿದ, ಕಂಡ, ತನ್ನ ಅನುಭವಕ್ಕೆ ಬಂದ 'ಆಕೃತಿ'ಗಳನ್ನು ನಮ್ಮ ಪರಿಸರಕ್ಕೆ ತಕ್ಕಂತೆ ಒಗ್ಗಿಸಿಕೊಂಡು ಈ ಜನಕಲ್ಯಾಣ ಯೋಜನೆಯನ್ನು ರೂಪಿಸಿದರು. ಈ ಯೋಜನೆಯ ಪರಿಕಲ್ಪನೆ ಮತ್ತು ಅದರ ಸ್ವರೂಪದ ಕುರಿತು ಹಿರಿಯ ಚಿಂತಕ ದಿವಂಗತ ಡಾ. ನಿ. ಮುರಾರಿ ಬಲ್ಲಾಳರು ಹೀಗೆ ನಿರೂಪಿಸುತ್ತಾರೆ. "ಶ್ರೀಕ್ಷೇತ್ರದಲ್ಲಿ ಪರಂಪರಾಗತವಾಗಿ ನಡೆದುಕೊಂಡು ಬರುತ್ತಿದ್ದ ವಿವಿಧ ರೀತಿಯ ದಾನಗಳ ವಿಶಿಷ್ಟ ಪದ್ಧತಿಯೇ ಹೆಗ್ಗಡೆಯವರ ಚಿಂತನೆಯ ಫಲವಾಗಿ ಇಂದು 'ಗ್ರಾಮಾಭಿವೃದ್ಧಿ ಯೋಜನೆ'ಯಾಗಿ ಮೂರ್ತರೂಪದಲ್ಲಿ ಹೊರಹೊಮ್ಮಿತು ಎಂಬುದನ್ನು ನಾವು ನೋಡಿದ್ದೇವೆ. ದೇವಾಲಯದ ಮೂಲಕ ಸಂಗ್ರಹವಾಗುತ್ತಿದ್ದ ಕಾಣಿಕೆಗಳಲ್ಲಿ ಗಣನೀಯ ಅಂಶವನ್ನು ಸಂಕಷ್ಟದಲ್ಲಿರುವ ಬಡಕುಟುಂಬಗಳ ತುರ್ತು ಅಗತ್ಯಗಳಿಗೆ ತಕ್ಕಂತೆ ದಾನ ರೂಪದಲ್ಲಿ ಹಿಂದೆ ವಿನಿಯೋಗಿಸುತ್ತಿದ್ದರೆ ಇಂದು ಇದರ ಜೊತೆಗೆ ಶ್ರೀ ಹೆಗ್ಗಡೆಯವರು ಒಂದು ತಾಲೂಕಿನ ಸಾರ್ವತ್ರಿಕ ದಾರಿದ್ರ್ಯ – ಅಜ್ಞಾನಗಳನ್ನು ಹೋಗಲಾಡಿಸಿ ಅಲ್ಲಿನ ಆರ್ಥಿಕ ನಕ್ಷೆಯನ್ನೇ ಪುನರ್ರಚಿಸುವ ಸಲುವಾಗಿ ಗ್ರಾಮಾಭಿವೃದ್ಧಿ ಯೋಜನೆಗೆ ಹಣ ಹರಿಸಲು ಆರಂಭಿಸಿದರು. ಕಡು

ಬಡವನೂ ಕೂಡ ತನ್ನ ಅನ್ನವನ್ನು ತಾನೇ ಗೌರವದಿಂದ ಗಳಿಸಿ ಉಣ್ಣುವಂತಾಗಬೇಕು ಎಂಬ ಪವಿತ್ರ ಸಂಕಲ್ಪದೊಂದಿಗೆ ಯೋಜನೆಯ ನಾಂದಿಯಾಯಿತು". [೬]

ಕೃಷಿ ಕೇಂದ್ರಿತ ಆರ್ಥಿಕ ಚಟುವಟಿಕೆಯೇ ಪ್ರಧಾನವಾಗಿರುವ ಕರಾವಳಿಯ ಗ್ರಾಮೀಣ ಪ್ರದೇಶಗಳಲ್ಲಿ ಯೋಜನೆಯು ಬೇಸಾಯ ಮತ್ತು ಅದಕ್ಕೆ ಸಂಬಂಧಪಟ್ಟ ಕಸುಬು – ಕರಕೌಶಲ್ಯಗಳ ನೈಪುಣ್ಯ ಹೆಚ್ಚಳಕ್ಕೆ ಒತ್ತು ನೀಡಿತು. ಕೃಷಿ ಭೂಮಿಯ ಉತ್ಪನ್ನವನ್ನು ಹೆಚ್ಚಿಸಿ ಬಡಕುಟುಂಬಗಳಲ್ಲಿ ಭೂಮಿಯ ಹೊರತು ದೊರೆಯುವ ಮಾನವ ಸಂಪನ್ಮೂಲವನ್ನು ಸೂಕ್ತ ರೀತಿಯಲ್ಲಿ ಬಳಸಿ ಹಳ್ಳಿಗಳ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳನ್ನು ಸುಧಾರಿಸುವುದು ಈ ಯೋಜನೆಯ ಪ್ರಮುಖ ಕಾರ್ಯ ವಿಧಾನವಾಯಿತು. ಇದರ ಜತೆಗೆ ಬಡ ಕುಟುಂಬಗಳ ಆದಾಯ ಹೆಚ್ಚಿಸುವ ಸಲುವಾಗಿ, ಅವರ ಉತ್ಪಾದನಾ ಕೌಶಲ್ಯವನ್ನು ವೊನೆಗೊಳಿಸಿ ಅವರ ನಿತ್ಯದ ಆದಾಯದ ಮೂಲವನ್ನು ವೃದ್ಧಿಸುವ ಪ್ರಯತ್ನ ಮಾಡಲಾಯಿತು. ಈ ಹಿನ್ನೆಲೆಯಲ್ಲಿ ಕೃಷಿಪೂರಕ ಕಸುಬು, ಉಪಕಸುಬುಗಳಾದ ಪಶುಸಂಗೋಪನೆ, ಜೇನು ಸಾಕಣೆ, ಮಡಿಕೆ ತಯಾರಿ, ಹಂದಿ ಸಾಕಣೆ, ರೇಶ್ಮೆ ಹುಳು ಸಾಕಣೆ ಮುಂತಾದ ಅಸಾಂಪ್ರದಾಯಿಕ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ ತರಬೇತಿ ನೀಡಲು ಯೋಜನೆ ಹಾಕಿಕೊಳ್ಳಲಾಯಿತು. ಈ ಬಗೆಯ ಕ್ರಿಯಾಯೋಜನೆಗಳನ್ನು ಕಾರ್ಯಗತಗೊಳಿಸುವಾಗ, ತಾತ್ವಿಕ ಸಿದ್ಧಾಂತಗಳಿಗಷ್ಟೇ ಮನ್ನಣೆ ನೀಡದೆ ಫಲಾನುಭವಿಗಳನ್ನು ಗುರುತಿಸುವ ಸಂದರ್ಭದಲ್ಲಿ ಪ್ರಾಯೋಗಿಕ ಅನುಭವಗಳಿಗೆ ಆದ್ಯತೆ ನೀಡಲಾಗುತ್ತಿತ್ತು. ಕಾಲದಿಂದ ಕಾಲಕ್ಕೆ, ಫಲಾನುಭವಿಗಳ ಬೇಡಿಕೆಗಳಿಗನುಸಾರವಾಗಿ ಪರಿಸರ ಮತ್ತು ಸಂದರ್ಭಕ್ಕೆ ತಕ್ಕಂತೆ ಸಕಾಲಿಕ ಮತ್ತು ಪ್ರಗತಿಪರ ಬದಲಾವಣೆಗಳನ್ನು ಮಾಡಿಕೊಳ್ಳಲಾಯಿತು. ಈ ಬಗೆಯ ಪರಿವರ್ತನಾಶೀಲ ಗುಣವೇ ಗ್ರಾಮಾಭಿವೃದ್ಧಿ ಯೋಜನೆಯ ಯಶಸ್ಸಿನ ಮೂಲ ಎನ್ನಬಹುದು. ಹೀಗೆ ಫಲಾನುಭವಿ ಕುಟುಂಬಗಳ ಅಭಿವೃದ್ಧಿಯೇ ಯೋಜನೆಯ ಪರಮಗುರಿಯಾಗಿ ಕೆಲಸ ಸಾಗತೊಡಗಿತು. ಕುಟುಂಬದಲ್ಲಿನ ಲಭ್ಯ ಸಂಪನ್ಮೂಲಗಳ ಶಕ್ತಿ ಹಾಗೂ ಕೌಶಲಕ್ಕನುಸರಿಸಿ ಬೇರೆ ಬೇರೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲಾಗುತ್ತಿತ್ತು. ಅವರಿಗೆ ಲಭ್ಯವಿರುವ ಭೂಮಿ, ನೀರಾವರಿ ಸೌಲಭ್ಯಗಳನ್ನು ಬಳಸಿಕೊಂಡು ದೀರ್ಘಾವಧಿಯಲ್ಲಿ ಫಲ ನೀಡುವ ರಬ್ಬರ್, ಅಡಿಕೆ, ಗೇರು ಬೆಳೆ ಹಾಗೂ ಕೂಡಲೇ ಫಲ ಬಿಡುವ ತೋಟಗಾರಿಕೆಯನ್ನು ಪ್ರೋತ್ಸಾಹಿಸುವ ಮೂಲಕ ಅವರ ಆದಾಯವನ್ನು ಹೆಚ್ಚಿಸುವ ಪ್ರಯತ್ನ ನಡೆಸಲಾಯಿತು. ಈ ಮೂಲಕ ಫಲಾನುಭವಿಗಳು ತಮ್ಮ ಆರ್ಥಿಕ, ಸಾಮಾಜಿಕ ಸಾಂಸ್ಕೃತಿಕ ಉನ್ನತಿಯನ್ನು ತಾವೇ ಸಾಧಿಸಿಕೊಂಡು ತಮ್ಮ ಕಾಲ ಮೇಲೆ ತಾವೇ ನಿಲ್ಲುವಂತಾಗಬೇಕೆನ್ನುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸಣ್ಣ ಮತ್ತು ಅತಿಸಣ್ಣ ರೈತರಿಗೆ ಒಗ್ಗುವ, ಅವರ ಚೈತನ್ಯಕ್ಕೆ ಒಪ್ಪುವ, ಸರಳ ತಾಂತ್ರಿಕತೆಯನ್ನು ಬಳಸುವಲ್ಲಿ ಅವರಿಗೆ ಸೂಕ್ತ ಮಾರ್ಗದರ್ಶನ ಹಾಗೂ ತರಬೇತಿ ನೀಡುವ ಮೂಲಕ ಫಲಾನುಭವಿಗಳ ಮನೋಭಾವವನ್ನು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅರ್ಥಪೂರ್ಣವಾಗಿ ಭಾಗವಹಿಸುವುದಕ್ಕೆ ಆದ್ಯತೆ ನೀಡಲಾಗುತ್ತದೆ. ಇಂತಹ ಸಮುದಾಯ ಹಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನೇ ಬಳಸಲಾಗುತ್ತಿದೆ.

ಸ್ವಂತ ಜಮೀನು ಇದ್ದಾಗಲೂ ಅದರಲ್ಲಿ ದುಡಿಯಲು ಸಮಯ ಇಲ್ಲದೆ ಕೂಲಿ ಕೆಲಸಗಳಲ್ಲಿ ನಿರತವಾದ ಮಂದಿಗೆ ತಮ್ಮ ನೆಲದಲ್ಲಿ ದುಡಿಯುವಷ್ಟು ಕಾಲ ಅವರ ನಿತ್ಯದ ಅವಶ್ಯಕತೆಗೆ ತಕ್ಕಂತೆ ಆಹಾರ ಸಾಮಗ್ರಿಯನ್ನು ವಿತರಿಸುವ ಒಂದು ಮಹತ್ವಪೂರ್ಣ ಕಾರ್ಯಕ್ರಮವನ್ನು ಈ ಯೋಜನೆಯು ಹಾಕಿಕೊಂಡಿದೆ. ಈ ವ್ಯವಸ್ಥೆಯು ಮಾನವ ಶಕ್ತಿಯ ಹೊರತು ಯಾವುದೇ ಸಂಪನ್ಮೂಲಗಳಿಲ್ಲದ ಕಡುಬಡವರ ಸ್ವಯಂ ಸಹಾಯ ಆಧಾರಿತ ಅಭಿವೃದ್ಧಿ ಕಾರ್ಯಕ್ರಮಕ್ಕೆ ಹೊಸ ಉಲ್ಲಾಸವನ್ನು ಮೂಡಿಸಿತು. ತಮ್ಮ ಭೂಮಿಯಲ್ಲಿ ತಾವೇ ದುಡಿಯಲು ತೊಡಗಿದ್ದರಿಂದ ಅವರ ಆದಾಯವು ಇಮ್ಮಡಿಯಾಯಿತು, ದಕ್ಷತೆ ಹೆಚ್ಚಿತು. ಇಂತಹ ಫಲಾನುಭವಿಗಳಿಗೆ ನೇರ ಆರ್ಥಿಕ ನೆರವು ನೀಡುವ ಬದಲು ಬೇರೆ ಆರ್ಥಿಕ ಸಂಘಟನೆಗಳಿಂದ ಸಾಲ ಸೌಲಭ್ಯವನ್ನು ನೀಡಲಾಯಿತು. ಅಷ್ಟೇ ಅಲ್ಲ ಅವರ ಉತ್ಪನ್ನಗಳಿಗೆ, ಅವರ ಕರಕುಶಲ ಸಾಮಗ್ರಿಗಳಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲಾಯಿತು. ಜೊತೆಗೆ ಸರಕಾರಿ ಸೌಲಭ್ಯಗಳು ಇವರನ್ನು ತಲಪುವಂತೆ ಮಾಡುವಲ್ಲಿ ಈ ಯೋಜನೆಯ ಸಿಬ್ಬಂದಿಗಳು ನಿರಂತರವಾಗಿ ಸಹಕರಿಸುತ್ತ ಬಂದಿರುವುದನ್ನು ಗಮನಿಸಬಹುದಾಗಿದೆ.

ಗ್ರಾಮವೊಂದು ತನ್ನಲ್ಲಿ ಅಂತಸ್ಥಗೊಳಿಸಿಕೊಂಡಿರುವ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ಸಾಧ್ಯತೆಗಳನ್ನು ಅದರ ಸರ್ವಾಂಗೀಣ ವಿಕಾಸದ ನೆಲೆಯಲ್ಲಿ ಬಳಸಿಕೊಳ್ಳಲು ಯೋಜನೆಯ ಹರಿಕಾರರು ಯೋಚಿಸಿದರು. ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳ ಜೀವದ್ರವ್ಯಗಳನ್ನು ಫಲಾನುಭವಿಗಳ ಸಾಮಾಜಿಕ, ಆರ್ಥಿಕ ಕಲ್ಯಾಣಕ್ಕಾಗಿ ಯಾವ ಫಲಾಪೇಕ್ಷೆಯೂ ಇಲ್ಲದೆ ಬಳಸಿಕೊಳ್ಳುವ ಕ್ರಿಯಾಯೋಜನೆ ಹಾಕಿಕೊಂಡರು. ಕೋಲ, ನೇಮ, ಭಜನೆ, ಸಾಮೂಹಿಕ ಸತ್ಯನಾರಾಯಣ ಪೂಜೆ ಮುಂತಾದ ಧಾರ್ಮಿಕ ಸಮಾರಂಭಗಳು ಊರವರ ಜಾತಿ ವ್ಯವಸ್ಥೆಯ ನಿರಸನ ಮಾಡುವುದರ ಮೂಲಕ ಸಾಮಾಜಿಕ ಹಿತಕ್ಕಾಗಿ ದುಡಿಯುವಂತೆ ಪ್ರೇರಣೆ ನೀಡಿದವು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ವ್ಯವಸ್ಥೆಯಲ್ಲಿ ಕಾರ್ಯ ಕ್ಷೇತ್ರ ಹಂತ, ಮೇಲ್ವಿಚಾರಣೆ ಹಂತ ಮತ್ತು ವರಿಷ್ಠ ಮಂಡಳಿಯ ಹಂತ - ಹೀಗೆ ಮೂರು ನೆಲೆಗಳಿರುತ್ತವೆ. ಈ ಮೂರು

ಹಂತಗಳೊಳಗೆ ಅಂತರ್ ಸಂಬಂಧ ಇದ್ದೇ ಇರುತ್ತದೆ. ಈ ಮೂರು ಹಂತದ ವ್ಯವಸ್ಥೆಗಳು ಪರಸ್ಪರ ಅನುಭವಗಳನ್ನು ಹಂಚಿಕೊಳ್ಳುತ್ತಿರುತ್ತವೆ ಹಾಗೂ ಮಾರ್ಗದರ್ಶನ ಮಾಡುತ್ತಿರುತ್ತವೆ.

೩.೪ ಗ್ರಾಮಾಭಿವೃದ್ಧಿ ಯೋಜನೆ: ಕಾರ್ಯನಿರ್ವಹಣ ತಂತ್ರ

ಸಮಾಜದ ಬೆನ್ನೆಲುಬಾದ ರೈತರಿಗೆ ಅವರ ಶಕ್ತಿ ಮತ್ತು ಮಿತಿ ಎರಡನ್ನೂ ತಿಳಿಸುವ ಸಲುವಾಗಿ ೧೯೮೦ರ ದಶಕದ ಆರಂಭದಲ್ಲಿ ವ್ಯವಸ್ಥಿತವಾದ ಸಮೀಕ್ಷೆಯನ್ನು ಮೊದಲು ನಡೆಸಲಾಯಿತು. ಭೂ ಶಕ್ತಿ (ಒಂದರಿಂದ ಮೂರು ಎಕರೆಯಷ್ಟು ಹಿಡುವಳಿ ಇರುವ ರೈತರ ಗಣತಿ), ಜಲ ಶಕ್ತಿ (ನೀರಿನ ಮೂಲ, ಸಾಮರ್ಥ್ಯದ ಲೆಕ್ಕಾಚಾರ), ಜನ ಶಕ್ತಿ (ದುಡಿಯುವ ಕೈ, ತಿನ್ನುವ ಬಾಯಿ ಇದರ ಗಣತಿ), ಕೃಷಿ ಶಕ್ತಿ (ಭತ್ತ ಬೆಳೆಯುವ ಗದ್ದೆ ಅಲ್ಲದೆ, ತೆಂಗು, ಹಲಸು, ಮಾವು, ಗೇರು ಮುಂತಾದ ತೋಟಗಳ ಗಣತಿ) ಇವುಗಳನ್ನು ವ್ಯವಸ್ಥಿತವಾಗಿ ಬೆಳ್ತಂಗಡಿ ತಾಲೂಕಿಗೆ ಅನ್ವಯಿಸಿ ಸಮೀಕ್ಷೆ ನಡೆಸಿದಾಗ ಆ ತಾಲೂಕಿನ ಕೊರತೆ ಹಾಗೂ ಸಾಧ್ಯತೆ ಇವೆರಡೂ ಸಂಗತಿಗಳು ತಿಳಿದುಬಂದವು.

ಮೊದಲಿಗೆ ಬೆಳ್ತಂಗಡಿ ತಾಲೂಕಿನ ೮೧ ಗ್ರಾಮಗಳಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ದಕ್ಷಿಣ ಕನ್ನಡದ ಪಶ್ಚಿಮ ಬೆಟ್ಟದ ಸೆರಗಿನಲ್ಲಿರುವ ಈ ತಾಲೂಕು ಆರ್ಥಿಕವಾಗಿ, ಸಮಾಜಿಕವಾಗಿ ತೀರಾ ಹಿಂದುಳಿದ ತಾಲೂಕಾಗಿತ್ತು. ಈ ತಾಲೂಕಿನ ಒಟ್ಟು ಭೂ ಪ್ರದೇಶದ ಶೇಕಡಾ ೩೦ರಷ್ಟು ಭಾಗ ಅರಣ್ಯ ಪ್ರದೇಶವಾಗಿದ್ದು, ರಾಣೆ, ಕುಡುಬಿ, ಮಲೆಕುಡಿಯ, ಕೊರಗ ಮುಂತಾದ ಬುಡಕಟ್ಟು ಸಮುದಾಯಗಳು ವಾಸ ಮಾಡುತಿದ್ದರು. ಈ ಯೋಜನೆಯ ಕ್ರಿಯಾ ವ್ಯಾಪ್ತಿಯೊಳಗೆ ೧೪,೨೬೬ ಕುಟುಂಬಗಳು ಬಂದುವು. ಅವುಗಳಿಂದ ೨೬೨೩ ಸ್ವಸಹಾಯ ಗುಂಪುಗಳನ್ನು ಸಂಘಟಿಸಲಾಯಿತು. ಈ ಫಲಾನುಭವಿ ಸ್ವಸಹಾಯ ಗುಂಪುಗಳಲ್ಲಿ ಶೇಕಡಾ ೮೧.೩೯ ಹಿಂದುಗಳು, ೧೨.೮೫ ಮುಸ್ಲಿಮರು, ೮.೯೬ ಕ್ರೈಸ್ತರು ಮತ್ತು ಶೇಕಡಾ ೭.೮೦ ಜೈನರು. ಹಿಂದುಗಳಲ್ಲಿ ೧೫.೪೬ ಮಂದಿ ಪರಿಶಿಷ್ಟ ವರ್ಗಕ್ಕೆ ಸೇರಿದವರು. ಫಲಾನುಭವಿ ಕುಟುಂಬಗಳ ಮುಖ್ಯಸ್ಥರಲ್ಲಿ ಶೇಕಡಾ ೨೦.೯೩ ಮಂದಿ ಅನಕ್ಷರಸ್ಥರು. ಈ ಫಲಾನುಭವಿಗಳಲ್ಲಿ ಹೆಚ್ಚಿನವರು ಕೃಷಿ ಕಾರ್ಮಿಕರು ಮತ್ತು ಕುಶಲಕರ್ಮಿಗಳು. ಶೇಕಡಾ ೬೯.೫೭ ಕೃಷಿ ಕಾರ್ಮಿಕರು, ೧೬.೪೦ ಕೃಷಿಕರು ಮತ್ತು ೮.೨೫ ಮಂದಿ ಕುಶಲಕರ್ಮಿಗಳು. ಹೆಚ್ಚಿನ ಫಲಾನುಭವಿ ಕುಟುಂಬಗಳು ಕಾಡು ಪ್ರದೇಶವನ್ನು ಅತಿಕ್ರಮಣ ಮಾಡಿಕೊಂಡ ಸಣ್ಣ ಸಣ್ಣ ತುಂಡು ಭೂಮಿಯಲ್ಲಿ ಪಟ್ಟಾ ಹಕ್ಕು ರಹಿತವಾಗಿ ನೆಲಸಿದ್ದರು. ಇವರಲ್ಲಿ ಸಣ್ಣ ಹಿಡುವಳಿದಾರರು ಶೇಕಡಾ ೨೨ರಷ್ಟಿದ್ದರು. ಈ ಪೈಕಿ ಶೇಕಡಾ ೯೦.೫೪ರಷ್ಟು ಹಿಡುವಳಿಗಳು ಮೂರು ಎಕರೆಗಳಿಗಿಂತಲೂ ಕಡಿಮೆ ಇದ್ದವು. ಒಂದು ಎಕರೆಗಿಂತಲೂ ಕಡಿಮೆ ಭೂಮಿ ಇರುವವರು ಶೇಕಡಾ ೫೫.೮ರಷ್ಟಿದ್ದರು. ಈ ಫಲಾನುಭವಿ ಕುಟುಂಬಗಳಲ್ಲಿ ಶೇಕಡಾ ೫೬.೨೪ರಷ್ಟು ಕುಟುಂಬಗಳಿಗೆ ಕುಡಿಯುವ

ನೀರಿನ ಸೌಲಭ್ಯ ಇರಲಿಲ್ಲ. ಈ ಪ್ರದೇಶದಲ್ಲಿ ನೀರಾವರಿ ಸೌಲಭ್ಯ ಇಲ್ಲದಿರುವುದರಿಂದ ಇವರು ತಮ್ಮ ಭೂಮಿಯಲ್ಲಿ ಉತ್ಸಾಹದಿಂದ ಕೃಷಿ ಕಾರ್ಯ ಕೈಗೊಳ್ಳಲು ಸಾಧ್ಯವಗಲಿಲ್ಲ. ಶೇಕಡಾ ೨೨.೮೮ ಮಂದಿಗೆ ಮಾತ್ರ ನೀರಿನ ಸೌಲಭ್ಯವಿದ್ದು, ಸ್ವಲ್ಪ ಮಟ್ಟಿಗೆ ಕೃಷಿ ಕಾರ್ಯ ನಡೆಸಿಕೊಂಡು ಬರುತ್ತಿದ್ದರು. [೧೦] ಈ ಕುಟುಂಬಗಳಲ್ಲಿ ಹಲವರಿಗೆ ಕೃಷಿ ಕರ್ಮಕ್ಕೆ ಅನಿವಾರ್ಯವಾದ ಹಾರೆ, ಪಿಕ್ಕಾಸಿ, ನೊಗ ನೇಗಿಲುಗಳನ್ನು ಹೊಂದುವ ಶಕ್ತಿಯೂ ಇರಲಿಲ್ಲ. ಕೃಷಿಗೆ ಅವಶ್ಯವಾದ ದನ, ಎತ್ತು, ಕೋಣ ಮುಂತಾದ ಜಾನುವಾರು ಶಕ್ತಿ ಕನಿಷ್ಠ ಪ್ರಮಾಣದಲ್ಲಿತ್ತು.

ಈ ಬಡ ಫಲಾನುಭವಿ ಕುಟುಂಬಗಳು ಬಹುತೇಕವಾಗಿ ಹುಲ್ಲು, ಮಡಲು ಹೊದಿಸಿದ ಮನೆಗಳಲ್ಲಿ ವಾಸವಾಗಿದ್ದರು. ಬಹುತೇಕ ಮನೆಯ ಗೋಡೆ ಮಣ್ಣಿನವುಗಳಾಗಿದ್ದು ಇನ್ನು ಅನೇಕ ಮನೆಗಳಿಗೆ ಮಣ್ಣಿನ ಗೋಡೆಯೂ ಇರಲಿಲ್ಲ. ಶೇಕಡಾ ೨೪.೩ರಷ್ಟು ಮಂದಿಯ ಮನೆಗಳಿಗೆ ಹಂಚು ಹೊದಿಸುವ ಪ್ರಯತ್ನ ಯೋಜನೆಯ ಮೂಲಕ ನಡೆಯಿತು. ಶೇಕಡಾ ೮೯ ಕುಟುಂಬಗಳ ಅಡುಗೆ ಮನೆಯೊಳಗೆ ಅತ್ಯವಶ್ಯವಾದ ಪಾತ್ರೆಗಳೂ ಇರಲಿಲ್ಲ. ಇಲ್ಲಿನ ಫಲಾನುಭವಿ ಗುಂಪುಗಳಲ್ಲಿ ಶೇಕಡಾ ೮ರಷ್ಟು ಮಂದಿ ಉಳಿತಾಯ ಮಾಡುವ ಸ್ಥಿತಿಯಲ್ಲಿದ್ದು, ಉಳಿದ ೯೨ ಶೇಕಡಾ ಉಳಿತಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. [೧೧]

ಮೊದಲಿಗೆ ಐದು ವರ್ಷದ ಯೋಜನೆಗೆ ನೀಲಿ ನಕ್ಷೆಯನ್ನು ಸಿದ್ಧಪಡಿಸಲಾಯಿತು. ತರಕಾರಿ, ವೀಳ್ಯದೆಲೆ, ತೋಟಗಾರಿಕೆ, ಹೈನುಗಾರಿಕೆ, ಜೇನು ಸಾಕಣೆ, ಕೊಳಿ ಸಾಕಣೆಯಂಥ ಅಲ್ಪಾವಧಿ ಕೃಷಿ ಕಾರ್ಯಕ್ರಮಗಳನ್ನು ರೂಪಿಸಿ ರೈತನಿಗೆ ಪ್ರತಿ ವಾರಕ್ಕೆ, ಪ್ರತಿ ತಿಂಗಳಿಗೆ ಆದಾಯ ಬರುವಂತೆ ಸೂಕ್ತ ಏರ್ಪಾಟು ಮಾಡಲಾಯಿತು.

ಸ್ವಸಹಾಯ ಗುಂಪುಗಳಿಗೆ 'ಪ್ರಗತಿ ಬಂಧು' ಎಂದು ಹೆಸರಿಟ್ಟು ಕರೆಯಲಾಯಿತು. ವಾಸ್ತವವಾಗಿ ನಬಾರ್ಡ್ ಕನಿಷ್ಠ ೧೫ ಮಂದಿ ಸದಸ್ಯರ ಸ್ವಸಹಾಯ ಗುಂಪುಗಳಿಗೆ ಮಾನ್ಯತೆ ನೀಡುತ್ತದೆ. ಆದರೆ ಕರಾವಳಿಯ ವಿಶಿಷ್ಟ ಸಂದರ್ಭವನ್ನು ಅವರಿಗೆ ಮನವರಿಕೆ ಮಾಡಿಕೊಟ್ಟು ಇಲ್ಲಿ ಹತ್ತು ಮಂದಿ ಸದಸ್ಯರ ಸ್ವ ಸಹಾಯ ಗುಂಪುಗಳನ್ನು ರಚಿಸಲಾಯಿತು. ಈ ಗುಂಪುಗಳು ತಮ್ಮ ಕಾರ್ಯಕ್ರಮವನ್ನು ತಾವೇ ರೂಪಿಸಿಕೊಳ್ಳಬೇಕು, ಆ ಮೂಲಕ ಸ್ವಾವಲಂಬಿಗಳಾಗಲು ಪ್ರಯತ್ನಿಸಬೇಕು ಎಂಬ ಮಹತ್ವದ ಗುರಿಯೊಂದಿಗೆ ದಿಟ್ಟ ಹೆಜ್ಜೆಯನ್ನಿಡಲಾಯಿತು. ಸಂದರ್ಶನವೊಂದರಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರು "ನಮ್ಮದು ಮಾರ್ಗದರ್ಶಿ ಪಾತ್ರ, ಸಹಾಯಕ ಕೊಂಡಿ. ಈ ಗುಂಪುಗಳಿಗೆ ನಮ್ಮ ಅವಲಂಬನೆ ಇರಬಾರದು. ಕ್ರಮೇಣ ಅವು ಸ್ವತಂತ್ರವಾಗಬೇಕು ಎಂಬುದು ಗುಂಪು ರಚನೆಗೆ ಇದ್ದ ಉದ್ದೇಶ" ಎಂದಿದ್ದಾರೆ. [೧೨]

ಮೊದಲಿಗೆ ಬೆಳ್ತಂಗಡಿ ತಾಲೂಕಿನಲ್ಲಿ ಈ ಕ್ರಿಯಾ ಯೋಜನೆಯನ್ನು ಪ್ರಾಯೋಗಿಕವಾಗಿ ಸಂಘಟಿಸಿ ೨೬೨೩ ಸ್ವ ಸಹಾಯ ಗುಂಪುಗಳನ್ನು ರಚಿಸಲಾಯಿತೆಂದು ಈ ಮೊದಲೇ ತಿಳಿಸಲಾಗಿದೆ. ಈ ಗುಂಪುಗಳ ಪ್ರತಿ ಸದಸ್ಯ ಪ್ರತಿವಾರಕ್ಕೆ ೧೦ ರೂಪಾಯಿ ಉಳಿತಾಯ ಮಾಡಬೇಕು. ವಾರಕ್ಕೆ ಒಮ್ಮೆ ಶ್ರಮ ವಿನಿಯೋಗವನ್ನು ಸರತಿಯಂತೆ ಮಾಡಿ, ಸಾರ್ವಜನಿಕ ಕೆಲಸ ಮಾಡಬೇಕು ಎಂಬ ನಿಯಮವನ್ನು ಅಳವಡಿಸಿ ಅದಕ್ಕೆ ಅನುಗುಣವಾಗುವಂತೆ ಸೂಕ್ತ ನಿರ್ದೇಶನ ನೀಡಲಾಯಿತು. ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆ ಆ ಕಾಲಕ್ಕೆ ರೂಪಿಸಿದ ಶ್ರಮ ವಿನಿಯೋಗ ಕಲ್ಪನೆ ವಿಶಿಷ್ಟ ಬಗೆಯದು. ಸಾರ್ವಜನಿಕವಾಗಿ ಅಗತ್ಯವಾದ ಕೆಲಸವನ್ನು ಸ್ವಸಹಾಯ ಗುಂಪಿನ ಎಲ್ಲ ಸದಸ್ಯರೂ ಸೇರಿ ಮಾಡಿಕೊಡುವ ಈ ವ್ಯವಸ್ಥೆ ಕ್ರಮೇಣ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ಪರಿಚಯಿಸಿತು.

ಶ್ರಮ ವಿನಿಮಯದ ಮೂಲಕ ಪ್ರತಿಯೊಬ್ಬನ ದಿನದ ದುಡಿಮೆಗೆ ತಲಾ ೫೦ ರೂಪಾಯಿಯಂತೆ ಅಂದಾಜು ಲೆಕ್ಕ ಹಾಕಿ ಮುಂದಿನ ಹತ್ತು ವರ್ಷಗಳಲ್ಲಿ ೨೩.೪೩ ಕೋಟಿ ರೂಪಾಯಿ ಮೌಲ್ಯದ ೪೮೨೫೪೨ ಮಾನವ ದಿನಗಳ ಕೆಲಸ ನಡೆದಿದೆ. ನಬಾರ್ಡ್ ಕಾರ್ಯಕ್ರಮದಲ್ಲಿ ೩.೬೦ ಕೋಟಿ ರೂಪಾಯಿಗಳನ್ನು ಪ್ರಗತಿ ನಿಧಿ (ಸಾಲ) ರೂಪದಲ್ಲಿ ಪಡೆಯಲಾಗಿದೆ. ಈ ಸ್ವ ಸಹಾಯ ಸಂಘಗಳ ಮೂಲಕ ೧೧.೨೪ ಕೋಟಿ ರೂಪಾಯಿಗಳ ಸಾಲದ ವ್ಯವಹಾರ ನಡೆಸಿ ಸಾಲ ಮರುಪಾವತಿಯಲ್ಲಿ ಶೇಕಡಾ ನೂರರ ಸಮರ್ಪಕತೆಯನ್ನು ಕಾಯ್ದುಕೊಂಡಿರುವುದು ಒಂದು ರಾಷ್ಟ್ರೀಯ ಹೆಗ್ಗಳಿಕೆ.[೧೩]

ಸದ್ಯ ಈ ಯೋಜನೆಯು ಬೆಳ್ತಂಗಡಿ, ಕಾರ್ಕಳ, ಪುತ್ತೂರು, ಮಂಗಳೂರು, ಬಂಟ್ವಾಳ, ಸುಳ್ಯ, ಉಡುಪಿ, ಕುಂದಾಪುರ, ಕುಮಟಾ, ಹೊನ್ನಾವರ, ಸಿರ್ಸಿ ಮತ್ತು ದಾಂಡೇಲಿ ಮೊದಲಾದ ತಾಲೂಕುಗಳ ಬಹುತೇಕ ಎಲ್ಲ ಹಳ್ಳಿಗಳನ್ನು ತೀವ್ರಗತಿಯಲ್ಲಿ ಆವರಿಸಿಕೊಂಡಿದ್ದು ಕರ್ನಾಟಕ ರಾಜ್ಯದ ಹನ್ನೊಂದು ಜಿಲ್ಲೆಗಳಿಗೆ ವಿಸ್ತರಣೆಗೊಂಡಿದೆ.

ಪ್ರತಿ ವರ್ಷ ೮೦೦ಕ್ಕೂ ಹೆಚ್ಚು ಕೃಷಿ ಪ್ರಾತ್ಯಕ್ಷಿಕೆಗಳು ೪೦೦ಕ್ಕೂ ಹೆಚ್ಚು ಕೃಷಿ ತರಬೇತಿಗಳು, ೧೦೦ ರಿಂದ ೨೦೦ ಕೃಷಿ ಪ್ರವಾಸಗಳು ಮತ್ತು ಕೃಷಿ ಮೇಳಗಳನ್ನು ಸಂಘಟಿಸಿ ಕನಿಷ್ಠ ೪೦,೦೦೦ ಮಂದಿ ರೈತರಿಗೆ ವಿವಿಧ ಕೃಷಿ ತಂತ್ರಜ್ಞಾನಗಳನ್ನು ಪರಿಚಯಿಸಲಾಗುತ್ತದೆ.

೩.೫ ರೈತರ ಬೆನ್ನೆಲುಬಾಗಿ ಗ್ರಾಮಾಭಿವೃದ್ಧಿ ಯೋಜನೆ

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಆರಂಭದ ದಿನಗಳಿಂದಲೂ ಬೆಳ್ತಂಗಡಿ ತಾಲೂಕಿನಲ್ಲಿ ಮಹತ್ವದ ಪ್ರಯೋಗಗಳನ್ನು ಕೈಗೊಂಡಿದೆ. ಮುಖ್ಯವಾಗಿ ಈ ಪರಿಸರದ

ಭೂಹಿಡುವಳಿದಾರರು ತಮ್ಮ ಜಮೀನಿನಲ್ಲಿ ವಿವಿಧ ಮಾದರಿಯ ಬೆಳೆಗಳನ್ನು ಬೆಳೆಯುವ ಮೂಲಕ ಭೂಸಂಪತ್ತು ಮತ್ತು ಮಾನವ ಸಂಪತ್ತು ಪರಿಣಾಮಕಾರಿಯಾಗಿ ವಿನಿಯೋಗವಾಗುವ ಮೂಲಕ ಬಡಜನರ ಜೀವನಮಟ್ಟ ಸುಧಾರಣೆಯಾಗಬೇಕೆಂಬ ಪ್ರಾಮಾಣಿಕ ಕಾಳಜಿ ಯೋಜನೆಯದ್ದಾಗಿದೆ. ಬೆಳ್ತಂಗಡಿ ತಾಲೂಕಿನಲ್ಲಿ ಯೋಜನೆಯು ತನ್ನ ಆರಂಭದ ವರ್ಷಗಳಲ್ಲಿ ೫.೨೦ ಲಕ್ಷ ಅಡಿಕೆ ಸಸಿಗಳು, ೨.೨೫ ಲಕ್ಷ ತೆಂಗಿನ ಸಸಿಗಳು, ೧.೮೫ ಲಕ್ಷ ಗೇರು ಸಸಿಗಳು ಮತ್ತು ೧.೯೪ ಲಕ್ಷ ರಬ್ಬರ್ ಸಸಿಗಳನ್ನು ರೈತರಿಗೆ ಉಚಿತವಾಗಿ ನೀಡಿದೆ. ೧೩,೦೦೦ ಕುಟುಂಬಗಳಿಗೆ ಕೆರೆ, ಬಾವಿಗಳ ರಚನೆಗಾಗಿ, ೨,೮೦೦ ಕುಟುಂಬಗಳಿಗೆ ನಿರಾವರಿ ಪಂಪುಸೆಟ್ಟುಗಳ ಒದಗಣೆಗಾಗಿ ಮತ್ತು ೫,೪೦೦ ಕುಟುಂಬಗಳಲ್ಲಿ ಸುಧಾರಿತ ನೀರಾವರಿ ವಿಧಾನಗಳನ್ನು ಅಳವಡಿಸಿಕೊಳ್ಳಲು ನೆರವು ನೀಡಲಾಗಿದೆ. ಅಗಳು, ಬೇಲಿಗಳನ್ನು ರಚಿಸುವವರಿಗೆ ನೆರವು ನೀಡುವುದರ ಮೂಲಕ ૩೦,೦೦೦ ಎಕ್ರೆಗೂ ಮೀರಿದ ಕೃಷಿ ಭೂಮಿಗೆ ಕಾಡು ಪ್ರಾಣಿಗಳಿಂದ ರಕ್ಷಣೆಯನ್ನು ಒದಗಿಸಲಾಗಿದೆ. ಸುಮಾರು ೫,೦೦೦ ಎಕ್ರೆ ಬಂಜರು ಭೂಮಿಯನ್ನು ಗೇರು ಹಾಗೂ ರಬ್ಬರ್ ತೋಟಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ.[೧೪]

ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯ ಕಲ್ಪನೆಯನ್ನು ರೂಪಿಸುವಾಗ ಮುಖ್ಯವಾಗಿ ಕೃಷಿಕರಿಗೆ ಆದ್ಯತೆಯ ಮೇರೆಗೆ ಹೆಚ್ಚಿನ ಗಮನ ನೀಡಲಾಯಿತು. ಪಾಳುಬಿದ್ದ ಕೃಷಿ ಭೂಮಿಯ ಉಪಯೋಗಕ್ಕೆ ನೆರವಾಗುವುದೇ ನಿಜವಾದ ಗ್ರಾಮಾಭಿವೃದ್ಧಿ ಎಂಬುದನ್ನು ಅರಿತು ತುಂಡು ಭೂಮಿ ಇದ್ದವರನ್ನು ಮಾತ್ರ ಸಂಪರ್ಕಿಸಿ ಅವರ ಒಡೆತನದಲ್ಲಿ ಹಾಳುಬಿದ್ದ ಭೂಮಿಯನ್ನು ಕೃಷಿ ಮಾಡಲು ಪ್ರಯೋಜಿಸಲಾಯಿತು. ಅದಕ್ಕಾಗಿ ಒಂದು ಹಿಡುವಳಿ ಯೋಜನೆಯನ್ನು ರೂಪಿಸಿ ಬೇಲಿ, ಅಗಳು, ನೀರಾವರಿ, ತೋಟ – ಹೀಗೆ ಏನೇನೆಲ್ಲ ಬೇಕೋ ಅದನ್ನೆಲ್ಲ ಮಾಡಲು ಅಗತ್ಯವಾದ ನೆರವು ಮಾರ್ಗದರ್ಶನ ನೀಡುವುದರೊಂದಿಗೆ ಕೃಷಿ ಉನ್ನತಿಗೆ ಬೇಕಾದ ಬೀಜ, ಗೊಬ್ಬರಗಳನ್ನು ಕೂಡ ಪೂರೈಸಬೇಕು ಎಂಬ ಪ್ರಾರಂಭಿಕ ಸಿದ್ಧಾಂತವೊಂದನ್ನು ರೂಪಿಸಿಕೊಂಡಿದ್ದರು.

ಬೆಳ್ತಂಗಡಿ ತಾಲೂಕಿನಲ್ಲಿ ೧೮ ಸಹಸ್ರ ಸಣ್ಣ ಮತ್ತು ಅತೀ ಸಣ್ಣ ಕೃಷಿಕರನ್ನು ಸಮೀಕ್ಷೆಯ ಮೂಲಕ ಗುರುತಿಸಲಾಯಿತು. ಅವರಲ್ಲಿ ಬಹುತೇಕ ಮಂದಿ ಸೌಲಭ್ಯ ವಂಚಿತರಾಗಿ ಯಾರದೋ ಮನೆಯ ಕೃಷಿ ಕೂಲಿಗಳಾಗಿ ದುಡಿಯುತ್ತ ಭೂಮಿಯನ್ನು ಬರಡಾಗಿಸಿದ್ದರು. ಭೂಮಿಯನ್ನು ಕೃಷಿಗೆ ಯೋಗ್ಯವನ್ನಾಗಿ ಮಾರ್ಪಡಿಸಲು ಇರುವ ಅವಕಾಶವನ್ನು ಅರಿಯದಾಗಿದ್ದಾರೆ ಎನ್ನುವ ಕಠೋರ ವಾಸ್ತವ ಸಮೀಕ್ಷೆಯಿಂದ ವ್ಯಕ್ತವಾಯಿತು.

ತಾವು ರೂಪಿಸಿದ ಯೋಜನೆಯಿಂದ ಪ್ರಯೋಜನ ಹೊಂದಿ ಕೃಷಿ ಮಾಡಲು ಪ್ರೇರೇಪಿಸಲೆಂದು ಡಾ. ಹೆಗ್ಗಡೆಯವರು ಯೋಜನೆಯ ಕಾರ್ಯಕರ್ತರ ಒಂದು ಪಡೆಯನ್ನೇ ನಿರ್ಮಿಸಿದರು. ಪ್ರತಿ ಮನೆಗೂ ಕಾರ್ಯಕರ್ತರು ಭೇಟಿ ನೀಡಿ ಇದನ್ನು ಮನದಟ್ಟುಗೊಳಿಸಲು ಪ್ರಯತ್ನಿಸಿದಾಗ ಬಂದ ಪ್ರತಿಕ್ರಿಯೆ ತೀರ ಕೆಟ್ಟದಾಗಿತ್ತು. "ಧರ್ಮಸ್ಥಳದಲ್ಲಿ ಸಾಕಷ್ಟು ಹಣವಿದೆ, ನಮಗೆ ಬೇಕಾದುದನ್ನೆಲ್ಲ ದಾನವಾಗಿ ಕೊಡಬಹುದಲ್ಲವೇ? ನಾವೇ ಯಾಕೆ ದುಡಿಯಬೇಕು"? ಎಂದು ಪ್ರಶ್ನಿಸಿದವರಿದ್ದರು. ಯೋಜನೆಯ ಸೇವಾನಿರತರು ದೂರದಲ್ಲಿ ಬರುವಾಗಲೇ ತಮ್ಮನ್ನು ಇವರೇನೋ ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆಂದು ಭಾವಿಸಿ ಈ ಕೃಷಿ ಕೆಲಸ ತಮ್ಮಿಂದ ಆಗಲಿಕ್ಕಿಲ್ಲ ಎಂಬ ತೀರ್ಮಾನಕ್ಕೆ ಬಂದು ಹಿತ್ತಲ ಬಾಗಿಲಿನಿಂದ ತಪ್ಪಿಸಿಕೊಂಡವರಿದ್ದರು. ಬಡ ಜನರಿಗೆ ಸಾಲ ಕೊಟ್ಟು ಅವರ ಭೂಮಿಯನ್ನು ಆಕ್ರಮಿಸಿಕೊಳ್ಳಲು ಮಾಡಿದ ಹುನ್ನಾರ ಇದೆಂಬ ಭಯಂಕರ ಕಲ್ಪನೆಯನ್ನೇ ಊರು ತುಂಬ ಹರಿಯಬಿಟ್ಟು ಯೋಜನೆಯನ್ನು ಬುಡಮೇಲುಗೊಳಿಸಲು ಯತ್ನಿಸಿದರೂ ಇದ್ದರು. ಆದರೂ ಸೇವಾ ನಿರತರು ಸವಾಲಿನ ಅನುಷ್ಠಾನದಲ್ಲಿ ಹಿಂದೆಗೆಯದೆ ಬೆಳ್ತಂಗಡಿ ತಾಲೂಕಿನ ಪ್ರತಿ ಗ್ರಾಮದಲ್ಲೂ ಒತ್ತಡ ಒತ್ತಾಯಗಳಿಂದ ಕೆಲವರನ್ನಾದರೂ ಮನವೊಲಿಸುವಲ್ಲಿ ಸಫಲರಾದರು. ಎಲ್ಲ ದೇವರಿಗಿಂತ ಅನ್ನದೇವರು ಮೇಲೆಂಬಂತೆ ಕೃಷಿಯಲ್ಲಿ ಭವಿಷ್ಯದ ಅಭಿವೃದ್ಧಿಗೆ ಇರುವ ಅವಕಾಶ ಇನ್ನೊಂದರಲ್ಲಿ ಇಲ್ಲವೆಂಬ ಮನವರಿಕೆ ಮಾಡುವಲ್ಲಿ ಅವರು ಗೆಲವು ಪಡೆದರು.

ಯೋಜನೆಯು ಸಣ್ಣ ಮತ್ತು ಬಡ ರೈತರಿಗೆ ಸಹಾಯಹಸ್ತ ಚಾಚಲು ತೊಡಗಿದ ಆರಂಭದ ದಿನಗಳಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಹಲವಾರು ಗ್ರಾಮೀಣ ನಿವಾಸಿಗಳ ಮನೆಗಳಲ್ಲಿ ಹಾರೆ, ಗುದ್ದಲಿಯಂತಹ ಕೃಷಿ ಉಪಕರಣಗಳು ಕೂಡ ಇರಲಿಲ್ಲ. ಅವರಿಗೆ ಅಂತಹ ಸಲಕರಣೆಗಳನ್ನು ಸೇವಾನಿರತರು ಒದಗಿಸಿದರು. ಗದಗಿನ ತೋಂಟದಾರ್ಯ ಮಠದ ಸ್ವಾಮಿಗಳು ಈ ಸಂದರ್ಭವನ್ನು 'ಹಾರೆ ಗುದ್ದಲಿಗಳ ರೂಪದಲ್ಲಿ ಮಂಜುನಾಥ ಸ್ವಾಮಿ ಬಡ ರೈತರ ಮನೆಗಳನ್ನು ಪ್ರವೇಶಿಸಿದ' ಎಂದು ಅರ್ಥಗರ್ಭಿತವಾಗಿ ಬಣ್ಣಿಸಿದ್ದಾರೆ.[೧೫]

ಹಾರೆ ಗುದ್ದಲಿಗಳು ಬಂದವು ಆದರೆ ನಮ್ಮ ಭೂಮಿಯಲ್ಲೇ ನಾವು ಕೃಷಿ ಮಾಡುತ್ತಿದ್ದರೆ ಊಟ ಮಾಡುವುದು ಬೇಡವೆ? ಬೇರೆಡೆ ಕೂಲಿ ಮಾಡಿ ಬದುಕುತ್ತಿದ್ದವರೆಲ್ಲ ಮುಂದಿರಿಸಿದ ಪ್ರಶ್ನೆ ಇದು. ಈ ಪ್ರಶ್ನೆಗೆ ಉತ್ತರ ರೂಪದಲ್ಲಿ ಡಾ. ಹೆಗ್ಗಡೆಯವರು ಒದಗಿಸಿದ ವರಪ್ರಸಾದವೇ ಕೂಲಿಗಾಗಿ ಕಾಳು ಕೊಡುವ ಯೋಜನೆ.

ಪ್ರತಿಯೊಬ್ಬನೂ ಅವನ ಭೂಮಿಯಲ್ಲಿ ಕೃಷಿ ಮಾಡುವ ದಿನಗಳನ್ನು ಲೆಕ್ಕಾಚಾರ ಮಾಡಿ, ಸೇವಾನಿರತರ ಮೂಲಕ ಪ್ರತಿವಾರವೂ ಅವರಿಗೆ ಅಕ್ಕಿ ಹಂಚುವ ಕಾರ್ಯ ನಡೆದದ್ದು ನಿರಂತರ ಎಂಟು ತಿಂಗಳುಗಳ ಕಾಲ. ಇಂತಹ ಧರ್ಮಕಾರ್ಯ ಇನ್ನೊಂದೆಡ ನಡೆದ ಉದಾಹರಣೆಗಳಿಲ್ಲ.

ಹೀಗೆ ತಾವು ಮಾಡಿದ ಸ್ವಂತ ಕೆಲಸಕ್ಕೆ ಧರ್ಮಸ್ಥಳದಿಂದ ಕೂಲಿ ಪಡೆದ ರೈತರು ತಮ್ಮ ಭೂಮಿಗೆ ಬೇಲಿ ಭದ್ರಪಡಿಸಿದರು. ಅಗಳು ಹಾಕಿದರು. ಬಾವಿ ತೋಡಿ ನೀರುಣಿಸಿದರು. ನೆಲ ಸಮತಟ್ಟು ಮಾಡಿದರು. ಪ್ರತಿಯೊಂದು ಕೆಲಸದ ಉಸ್ತುವಾರಿಯನ್ನು ಆಯಾ ಪ್ರದೇಶದ ಸೇವಾನಿರತರು ನೋಡಿಕೊಂಡರು. ಪ್ರತಿ ಗ್ರಾಮದಲ್ಲೂ ಒಬ್ಬ ಸೇವಾನಿರತರಿದ್ದರು. ಕಾಲ್ನಡಿಗೆಯಲ್ಲೋ, ಬೈಸಿಕಲ್‌ನಲ್ಲೋ ಹಳ್ಳ ಕೊಳ್ಳ, ಏರು ತಗ್ಗುಗಳಲ್ಲಿ ಹೋಗಿ ಪ್ರತಿ ಮನೆಯ ಪ್ರತಿಯೊಬ್ಬ ರೈತರ ನಿರಂತರ ಸಂಪರ್ಕವನ್ನಿರಿಸಿಕೊಂಡಿದರು. ಯೋಜನೆಯ ಕೃಷಿ ಅಧಿಕಾರಿಗಳು ಕಾಲದಿಂದ ಕಾಲಕ್ಕೆ ಸಕಾಲಿಕ ಮಾರ್ಗದರ್ಶನ ನೀಡಿದರು. ಸ್ವತ: ಹೆಗ್ಗಡೆ ದಂಪತಿಗಳೇ ಬಡವರ ಹೊಲಗದ್ದೆಗಳಿಗೆ ಭೇಟಿ ನೀಡುತ್ತಿದ್ದರು. ಯಾವ ಕೆಲಸದಲ್ಲೂ ಕಾಟಾಚಾರದ ಮಾತಿರಲಿಲ್ಲ. ಅಲ್ಲಿ ಒಪ್ಪ, ಓರಣ, ಶಿಸ್ತುಬದ್ಧತೆ ಇರಬೇಕು. ಕೆಲಸವು ಸರಿಯಾಗದಿದ್ದರೆ ಮತ್ತೊಮ್ಮೆ ಅದನ್ನೇ ಮಾಡಿಸುವವರೆಗೂ ಬೆನ್ನು ಬಿಡಲಿಲ್ಲ. ಅವರು ಸೂಚಿಸಿದ ಅನುದಾನ ಎಷ್ಟು ದೊಡ್ಡದಾಗಿದ್ದರೂ ಅವರ ಕಾರ್ಯಕ್ಷಮತೆಯಲ್ಲಿ ವಿಶ್ವಾಸವಿರಿಸಿ ಡಾ। ಹೆಗ್ಗಡೆಯವರು ಒದಗಿಸುತ್ತಿದ್ದರು.

ಕೃಷಿ ಅಭಿವೃದ್ಧಿಯ ಪ್ರತಿಯೊಂದು ಅಗತ್ಯವನ್ನೂ ಸೂಕ್ಷ್ಮವಾಗಿ ಗುರುತಿಸಿ ಅವರಿಗೆ ಬೇಕಾದುದನ್ನೆಲ್ಲ ಒದಗಿಸುವ ಕಾರ್ಯಕ್ರಮವೂ ನಡೆಯಿತು. ಉತ್ತಮ ತಳಿಯ ತೆಂಗು, ಅಡಿಕೆ ಬೀಜಗಳು, ಕಾಳು ಮೆಣಸಿನ ಹಂಬುಗಳು, ರಬ್ಬರ್ ಗಿಡಗಳು ಇದನ್ನೆಲ್ಲ ಫಲಾನುಭವಿಗಳ ಮನೆ ಬಾಗಿಲಿಗೆ ತಂದುಕೊಟ್ಟು, ನಾಟಿ ಮಾಡಿಸಿ, ನಿತ್ಯ ನೀರು ಎರೆಯುತ್ತಾರೋ ಎಂದು ಸೇವಾನಿರತರು ನೋಡಿಕೊಂಡರು. ಧರ್ಮಸ್ಥಳದಿಂದಲೇ ಒದಗಿಸಿದ ರಸಗೊಬ್ಬರವನ್ನು ತಾವೇ ನಿಂತು ಗಿಡಗಳ ಬುಡಕ್ಕೆ ಹಾಕಿಸಿ, ನೀರು ಹೊಯ್ಯುವ ತನಕ ಬಿಡಲಿಲ್ಲ. ಹೀಗಾಗಿ ಬಂಜರು ಭೂಮಿಯಲ್ಲಿ ಹಸಿರು ಅರಳಿತು, ನಳನಳಿಸಿತು. ಹಸಿರಿನ ಉಸಿರು ಧವಳಗಿರಿಗೇರಿತು.

ಏಪ್ರಿಲ್ ತಿಂಗಳ ಬಿರುಬೇಸಿಗೆಯ ಒಂದು ದಿನ ಯೋಜನೆಯ ಅಧಿಕಾರಿಯೊಬ್ಬರು ಒಂದು ಹಳ್ಳಿಯ ರೈತರ ಮನೆಗೆ ಹೋಗಿ ಕುಡಿಯಲು ನೀರು ಕೇಳಿದರು. ಮನೆಯಾಕೆ ತಂದುಕೊಟ್ಟ ನೀರು ತುಂಬಿದ ಲೋಟವನ್ನು ಗಮನಿಸಿದಾಗ ಹಸಿರು ಬಣ್ಣ ಪಾಚಿಗಟ್ಟಿ, ಅದನ್ನು ತೊಳೆಯದೆ ಸಾಕಷ್ಟು ಕಾಲವಾಗಿರುವುದನ್ನು ಲೋಟದ ದುರ್ವಾಸನೆ ಸಾರಿ ಹೇಳುತ್ತಿತ್ತು. ನೀರು ಕುಡಿಯಲು ಅವರಿಗೆ ಸಾಧ್ಯವಾಗಲಿಲ್ಲ. ಅದರ ಜೊತೆಗೆ ಆ ಮನೆಯಲ್ಲಿ, ಅಂತಹ ಅನೇಕ ಮನೆಗಳಲ್ಲಿ ಲೋಟಗಳೇ ಇಲ್ಲ ಎನ್ನುವ ಕಠೋರ ವಾಸ್ತವ ಮಾತ್ರ ತಿಳಿಯಿತು. ಬಡತನದ ಪರಿಣಾಮವಾಗಿ ದಿನಬಳಕೆಯ ಉಪಕರಣಗಳನ್ನು ಕೊಳ್ಳುವುದಕ್ಕೂ ಅವರಿಗೆ ಅವಕಾಶವಿರಲಿಲ್ಲ.

ಈ ವಿಷಯವನ್ನು ಡಾ. ಹೆಗ್ಗಡೆಯವರ ಗಮನಕ್ಕೆ ತಂದಾಗ ಅವರು ಯೋಚನೆಗೊಳಗಾದರು. ಏಕೆಂದರೆ ಸರಕಾರದಿಂದ ಸಿಗುವ ಅನೇಕ ಕಲ್ಯಾಣ ಕಾರ್ಯಕ್ರಮಗಳ ಸಾಲ ಯೋಜನೆಯನ್ನು ಜನರು ಸದುಪಯೋಗ ಮಾಡುತ್ತಿಲ್ಲ. ದನ ಕೊಳ್ಳಲು ಸಾಲ ಸಿಕ್ಕಿದರೆ ಕಡಿಮೆ ಬೆಲೆಗೆ ದನ ಕೊಳ್ಳುತ್ತಾನೆ. ಹಣವನ್ನು ಮಿಗಿಸಿ ಮನೆಯ ಅಗತ್ಯಗಳನ್ನು ಪೂರೈಸಿಕೊಳ್ಳುವನೇ ವಿನಃ ಒಂದು ಹಟ್ಟಿ ಕೂಡ ಕಟ್ಟುವುದಿಲ್ಲ. ಹೀಗಾಗಿ ಅವನಿಗೆ ನೀಡಿದ ಸೌಲಭ್ಯಗಳನ್ನು ದುರುಪಯೋಗಪಡಿಸದೆ ಸದ್ಬಳಕೆ ಮಾಡಬೇಕಿದ್ದರೆ ಅವನ ಮೂಲಭೂತ ಕೊರತೆಗಳನ್ನು ನೀಗಿಸುವುದು ಅವಶ್ಯವಾದುದೆಂದು ಮನಗಂಡರು.

ಇದಕ್ಕಾಗಿ ಯೋಜನೆಯ ಆರಂಭದಲ್ಲೇ ಫಲಾನುಭವಿಯ ಕುಟುಂಬಕ್ಕೆ ಚಾಪೆ, ತಟ್ಟೆ, ಕೊಡ ಮುಂತಾದ ಗೃಹಬಳಕೆಯ ಉಪಕರಣಗಳನ್ನು ನೀಡುವ ಕಾರ್ಯಕ್ರಮವೂ ನಡೆಯಿತು. ಜೊತೆಗೆ ಅವರ ನೈತಿಕ ಸ್ಥೈರ್ಯವನ್ನು ಇಮ್ಮಡಿಗೊಳಿಸಲು ಮಂಜುನಾಥ ಸ್ವಾಮಿಯ ಚಿತ್ರವನ್ನು ಕೊಡಲಾರಂಭಿಸಿದರು. ಯೋಜನೆಯ ನೆರಳಿನಲ್ಲಿ ವಿಶ್ರಮಿಸುತ್ತಿದ್ದ ಅನ್ಯಮತೀಯರಿಬ್ಬರು ತಮಗೂ ಹೀಗೊಂದು ಚಿತ್ರ ದೊರಕಿದಾಗ ಇದು ತಮ್ಮ ಮತದ ಮೇಲೆ ನಡೆದ ಆಕ್ರಮಣವೆಂದಾಗಲೀ, ಒತ್ತಡವೆಂದಾಗಲೀ ಭಾವಿಸಲಿಲ್ಲ. ಭಕ್ತಿ, ಶ್ರದ್ಧೆಗಳಿಂದ ಆ ವರ್ಣಚಿತ್ರವನ್ನು ತಮ್ಮ ಮನೆಯ ಗೋಡೆಯಲ್ಲಲಂಕರಿಸಿ, ಜಾತ್ಯಾತೀತ ಭಾವನೆಯಿಂದ ಆತ್ಮವಿಶ್ವಾಸವನ್ನು ಸಂವರ್ಧಿಸಿಕೊಂಡರು. ಇಂತಹ ಉದಾಹರಣೆಗಳು ಅನೇಕ. ಜೊತೆಗೆ ಮನೆಯ ಪಾತ್ರೆ ಉಪಕರಣಗಳ ಅನುದಾನದಿಂದ ಫಲಾನುಭವಿಗಳ ಮುಖದಲ್ಲಿ ಕಾಣಿಸಿದ ಸಂತೃಪ್ತಿ, ನೆಮ್ಮದಿಗೆ ಬೆಲೆ ಕಟ್ಟುವಂತಿರಲಿಲ್ಲ.

೩.೬ ಬೆಳ್ತಂಗಡಿಯ ಸಾಧನೆಗಳು

ಧರ್ಮಸ್ಥಳದ ಗ್ರಾಮಾಭಿವೃದ್ಧಿ ಯೋಜನೆಯು ಬೆಳ್ತಂಗಡಿ ತಾಲೂಕನ್ನು ಪ್ರವೇಶಿಸಿದ ಕೆಲವೇ ವರ್ಷಗಳಲ್ಲಿ ಮಹತ್ವದ ಮತ್ತು ತೀವ್ರ ಸ್ವರೂಪದ ಪ್ರಗತಿದಾಯಕ ಹೆಜ್ಜೆಗಳನ್ನು ಕಂಡು ಅನುಭವಿಸಿತು. ಈ ಮಾದರಿಯ ಕ್ರಾಂತಿಕಾರಕ ಪ್ರಯತ್ನ ಸರಕಾರದ ಕಾರ್ಯಕ್ರಮಗಳನ್ನೇ ನಾಚಿಸುವಂತಿತ್ತು ೨೪,೦೦೦ ಗ್ರಾಮೀಣ ಬಡ ಕುಟುಂಬಗಳ ಅಭಿವೃದ್ಧಿ ಯೋಜನೆ ತಯಾರಿ, ೯,೦೦೦ ಎಕ್ರೆ ಪ್ರದೇಶದಲ್ಲಿ ತೆಂಗು, ಅಡಿಕೆ, ಗೇರು, ರಬ್ಬರ್ ಮುಂತಾದ ಬೆಳೆಗಳನ್ನು ಬೆಳೆಸಲು ಪ್ರೋತ್ಸಾಹ, ೨೧,೦೦೦ ಎಕ್ರೆ ಕೃಷಿ ಭೂಮಿಗೆ ಯೋಗ್ಯ ನೀರಾವರಿ ವ್ಯವಸ್ಥೆ, ೮೨,೦೦೦ ಕುಟುಂಬಗಳಿಗೆ ಉತ್ತಮ ವಸತಿ ವ್ಯವಸ್ಥೆ, ೧೮,೦೦೦ ಕುಟುಂಬಗಳಿಗೆ ಶೌಚಾಲಯಗಳ ನಿರ್ಮಾಣ, ೧,೨೦೦ ಕುಟುಂಬಗಳಿಗೆ ವಿದ್ಯುತ್ ಸಂಪರ್ಕ, ೩,೪೩೦ ಕುಟುಂಬಗಳಿಗೆ ಸೌರ ವಿದ್ಯುತ್, ೨,೪೦೦ ಕುಟುಂಬಗಳಲ್ಲಿ ಗೋಬರ್ ಅನಿಲ ಸ್ಥಾವರಗಳ ರಚನೆ, ೩೫,೦೦೦ ಕುಟುಂಬಗಳನ್ನೊಳಗೊಂಡ ೪,೨೩೦ ಸ್ವಸಹಾಯ ಸಂಘಗಳ ರಚನೆ, ಪ್ರಾಥಮಿಕ ಶಾಲೆಗಳ ಮೂಲಭೂತ ಸೌಕರ್ಯಗಳ ವೃದ್ಧಿ, ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಪ್ರಯತ್ನ, ೭,೦೦೦ ಕ್ಕೂ ಮಿಕ್ಕಿದ ವಿವಿಧ ಸಮುದಾಯ ಅಭಿವೃದ್ಧಿ ಕಾಮಗಾರಿಗಳ

ಅನುಷ್ಠಾನ, ೮,೦೦೦ ಕ್ಕೂ ಮಿಕ್ಕಿದ ಮದ್ಯಪಾನಿಗಳ ಮನಃಪರಿವರ್ತನೆ ಮುಂತಾದವುಗಳನ್ನು ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲಕ ಸಾಧಿಸಲಾಗಿದೆ.[೧೬]

ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳಲ್ಲಿ ಒಂದು ಹೆಕ್ಟೇರ್‌ಗಿಂತಲೂ ಕಡಿಮೆ ಹಿಡುವಳಿಯನ್ನು ಹೊಂದಿರುವ ಬಡ ರೈತರ ಸ್ವಾವಲಂಬನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರ ಕೃಷಿ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಸಣ್ಣ ಹಿಡುವಳಿಗಳನ್ನು ಲಾಭದಾಯಕ ಕೃಷಿ ಕಾರ್ಯಗಳಿಗೆ ಬಳಸಿಕೊಳ್ಳಲು ವಿವಿಧ ತಂತ್ರಗಳನ್ನು ಅಳವಡಿಸಿ ಯಶಸ್ಸು ಕಾಣಲಾಗಿದೆ. ಪ್ರತಿಯೊಬ್ಬ ರೈತರ ಹಿಡುವಳಿಗೆ ಅನುಗುಣವಾಗಿ ಯೋಜನಾಬದ್ಧ ಕೃಷಿ ಅಭಿವೃದ್ಧಿಗೆ ಪ್ರೇರಣೆ ನೀಡಲಾಗಿದೆ. ಅಲ್ಪಾವಧಿ ಮತ್ತು ದೀರ್ಘಾವಧಿ ಬೆಳೆಗಳು, ಮಿಶ್ರಬೆಳೆ, ಅಂತರ ವ್ಯವಸಾಯ ಮುಂತಾದ ಕೃಷಿ ಪದ್ಧತಿಗಳನ್ನು ಸಣ್ಣ ಹಿಡುವಳಿದಾರರು ಕೈಗೊಳ್ಳುವಂತೆ ನಿರಂತರ ಪ್ರೋತ್ಸಾಹ, ತರಬೇತಿ ಮತ್ತು ಮಾರ್ಗದಶನ ನೀಡಲಾಯಿತು. ಆಹಾರದ ಬೆಳೆಗಳೊಂದಿಗೆ ವಾಣಿಜ್ಯ ಬೆಳೆಗಳನ್ನು ವ್ಯಾಪಕಗೊಳಿಸಿ ಆರ್ಥಿಕ ಚೇತರಿಕೆಗೆ ಸಹಕರಿಸಲಾಯಿತು. ೨೦,೦೦೦ ಕ್ಕೂ ಹೆಚ್ಚು ರೈತ ಕುಟುಂಬಗಳು ನೀರಾವರಿ ಯೋಜನೆಗಳ ಪ್ರಯೋಜನ ಪಡೆಯುತ್ತಿದ್ದು ಸ್ವಾವಲಂಬಿ ಪ್ರಗತಿಪರ ರೈತರಾಗಿ ಮುಂದುವರಿಯುತ್ತಿದ್ದಾರೆ.

ಗ್ರಾಮಾಭಿವೃದ್ಧಿ ಯೋಜನೆಯ ಅನುಷ್ಠಾನ ಅತ್ಯಂತ ಸರಳ ಮತ್ತು ಸುಲಭ ಎಂದು ಡಾ. ಹೆಗ್ಗಡೆಯವರು ಎಂದಿಗೂ ಭಾವಿಸಲಿಲ್ಲ. ದುರ್ಬಲರಲ್ಲಿ ಕೃಷಿಗೆ ಆದ್ಯತೆ ನೀಡುವುದರಿಂದ ಶೋಷಿತರ ಮತ್ತು ಶೋಷಕರ ನಡುವೆ ಒಂದು ಕಂದಕ ನಿರ್ಮಾಣವಾಗಬಹುದೆಂಬ ಭಯ ಅವರನ್ನು ಕಾಡುತ್ತಿತ್ತು. ಅರ್ಧ ಎಕರೆ ಭೂಮಿ ಇರುವವನು ಅಲ್ಪಕಾಲಿಕ ಬೆಳೆ ಬೆಳೆಯುವುದರಿಂದ ಅದರ ಆರೈಕೆಯಲ್ಲಿ ಮನೆಯಲ್ಲಿ ಉಳಿದನಾದರೆ ಅದರಿಂದ ಅವನ ಜೀವನಕ್ಕೆ ಬೇಕಾದಷ್ಟು ಬೆಳೆಯಲು ಸಾಧ್ಯವಿರಲಿಲ್ಲ. ಕೂಲಿಗೆ ಹೊರಗೆ ಹೋದರೆ ಬೆಳೆ ಸಫಲವಾಗಲು ಅವಕಾಶವಿರಲಿಲ್ಲ. ಅಲ್ಲದೆ ತಮಗೆ ಕೂಲಿಗೆ ಜನ ಸಿಗಲಿಲ್ಲ ಎನ್ನುವ ಒಂದೇ ಕಾರಣಕ್ಕೆ ಭೂಮಾಲೀಕರೂ ಅವನನ್ನು ದ್ವೇಷಿಸಲು ಸಾಧ್ಯವೂ ಇತ್ತು.

ಆದರೆ ದೀರ್ಘಕಾಲಿನ ಕೃಷಿಗೆ ರೈತ ತೊಡಗಿದರೆ ಪ್ರತಿದಿನ ಅದರ ಪಕ್ಕವೇ ಇರಬೇಕಾಗಿಲ್ಲ. ಬೇರೆಡೆಗೂ ನಿಯಮಿತವಾಗಿ ದುಡಿಯಲು ಹೋದರೆ ಕೈಗೆ ಒಂದಿಷ್ಟು ಹಣ ಬರುತ್ತದೆ, ಸಾಮಾಜಿಕ ಸಾಮರಸ್ಯವೂ ಕೆಡುವುದಿಲ್ಲ. ಎಂಬ ದೂರದೃಷ್ಟಿಯನ್ನು ಇರಿಸಿಕೊಂಡುದರ ಫಲವಾಗಿ ಡಾ. ಹೆಗ್ಗಡೆಯವರು ಅಡಿಕೆ, ತೆಂಗು, ಗೇರು, ರಬ್ಬರ್ ಮೊದಲಾದ ದೀರ್ಘಕಾಲೀನ ವ್ಯವಸಾಯಕ್ಕೆ ಆದ್ಯತೆ ಒದಗಿಸಿದರು. ಬಾಳೆ, ಶುಂಠಿ, ಮೆಣಸು, ತರಕಾರಿ, ಅರಿಶಿಣ ಇತ್ಯಾದಿ ಅಲ್ಪಕಾಲಿಕ ವ್ಯವಸಾಯಗಳನ್ನೂ ಕೈಗೊಳ್ಳಲು ಪ್ರೇರೇಪಿಸಿದರು.

ಈ ಪ್ರೇರಣೆಯ ಹಿಂದೆ ಸಾಹುಕಾರರ ಮನೆಯಿಂದ ದುಡಿಮೆಯ ವಿಮೋಚನೆಯಾಗಲೀ, ಜೀತಮುಕ್ತಗೊಳಿಸುವ ಕನಸಾಗಲಿ ಹೆಗ್ಗಡೆಯವರಿಗಿರಲಿಲ್ಲ. ಅವರಿಗಿದ್ದುದು ಪ್ರಾಮಾಣಿಕ ಬದುಕಿನ ಕೊಡುಗೆಯ ಆಶಯ. ಇದರಿಂದ ಮಾನವೀಯ ಸಂಬಂಧಗಳ ಮೌಲ್ಯ ಹೆಚ್ಚಿಸಿದರು. ಅಭಿವೃದ್ಧಿಗೊಳಿಸಿದರು. ದುಡಿಯುವ, ದುಡಿಸುವವನ ನಡುವೆ ಕಂದಕವುಂಟಾಗದೆ ಅನ್ಯೋನ್ಯವಾಗಿ ಬದುಕುವ ಕಲೆಯನ್ನು ಮೂರ್ತಗೊಳಿಸಿದರು. ನಿಧಾನವಾಗಿ ತನ್ನ ಭೂಮಿಯಲ್ಲಿ ಉತ್ಪನ್ನ ಬರುವ ಹೊತ್ತಿಗೆ ತನ್ನ ಬದುಕಿನ ಗುರಿಯನ್ನು ತಾನೇ ನಿರ್ಧರಿಸಲು ರೈತನಿಗೆ ಸಾಧ್ಯವೂ ಆಯಿತು.

ಏಕಕಾಲದಲ್ಲಿ ಫಲಾನುಭವಿ ರೈತರು ದೀರ್ಘಕಾಲೀನ ಕೃಷಿಯಲ್ಲಿ ತೊಡಗಲೂ ಇಲ್ಲ. ಮೊದಲು ನೆಲವನ್ನು ಸಮತಟ್ಟುಗೊಳಿಸಲು ಆದ್ಯತೆ, ಬಳಿಕ ಹೊಂಡ ತೆಗೆಸಲು ಗಮನ, ಮತ್ತೆ ಗಿಡ ನಾಟಿ, ಬೇಸಿಗೆಯಲ್ಲಿ ನೀರಾವರಿ, ಈ ವಿಧಾನದಿಂದ ತಾಲೂಕಿನ ೬೦,೦೦೦ ಎಕರೆ ವಿಸ್ತೀರ್ಣದಲ್ಲಿ ದೀರ್ಘಕಾಲೀನ ಕೃಷಿಯು ಅಭಿವೃದ್ಧಿ ಹೊಂದಿ, ನೀರಾವರಿಯಿಂದ ನೆಲ ತಂಪಾದುದು ಕೇವಲ ದಶಕದೊಳಗಿನ ಸಾಧನೆ. ಈ ನಡುವೆ ಹಗ್ಗಡೆಯವರು ಯೋಜನೆಯ ಬೆಳವಣಿಗೆಯ ಹಂತದಲ್ಲಿ ಎದುರಾಗುವ ಸಲಾಲುಗಳಿಗೆ ಮುಖಾಮುಖಿಯಾಗುತ್ತಲೇ ಇದ್ದರು. ಅನೇಕ ಮಂದಿ ಫಲಾನುಭವಿಗಳ ಅಸಹಕಾರದ ನಡುವೆಯೂ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಬಲಗೊಳಿಸುವ ಹಂತದಲ್ಲಿ ಹೆಗ್ಗಡೆಯವರ ಮತ್ತು ಯೋಜನೆಯ ಪಾತ್ರ ಅತ್ಯಂತ ಮಹತ್ವದ್ದೆನಿಸಿದೆ.

೧೯೯೦ ರ ವರೆಗೆ ಗುರುತಿಸಲಾದ ೧೮,೦೦೦ ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಿಗೆ ಯೋಜನೆಯ ಲಾಭ ತಲುಪಿಸುವ ಗುರಿಯಲ್ಲಿ ಸ್ಪರ್ಧೆಗಿಳಿದ ಎಂಟು ಸಹಸ್ರ ಕುಟುಂಬಗಳು ಮುಂದೆ ಬಂದವು. ಆದರೆ ೧೦,೦೦೦ ಕುಟುಂಬಗಳು ಕಠಿಣ ಪರಿಶ್ರಮಕ್ಕೆ ಒಗ್ಗದೆ, ಯೋಜನೆಯ ಅರ್ಧ ಫಲವನ್ನು ಗಳಿಸಿ ಹಿಂದೆ ಸರಿದವು. ಜೊತೆಗೆ ಬಂದ ಕುಟುಂಬಗಳು ಆರ್ಥಿಕ ಉನ್ನತಿ ಸಾಧಿಸಿದಾಗ ಹಿಂದೆ ಉಳಿದವರು ಅಸಮತೋಲನಕ್ಕೆ ಗುರಿಯಾದರು.[೧೨]

ಯೋಜನೆಯ ಫಲಾನುಭವಿಗಳೆನಿಸಿ ಕಾಯಕವನ್ನಾರಂಭಿಸಿದವರ ಕೃಷಿ ತುರುಸಿನಿಂದ ನಡೆವಾಗ ೧೯೮೫ ರಲ್ಲಿ ಒದಗಿದ ಆತಂಕವೆಂದರೆ ನೆಟ್ಟ ಗಿಡಗಳಿಗೆ ನೀರುಣಿಸುವ ಸಮಸ್ಯೆ. ಸ್ವಶ್ರಮದಿಂದ ಕೆರೆ, ಬಾವಿ ಮಾಡಿದ್ದರು. ಸಮೃದ್ಧ ಜಲದಾಸರೆಯೂ ಸಿಕ್ಕಿದೆ. ಆದರೆ ನೀರು ಮೇಲೆತ್ತಲು ಪಂಪಸೆಟ್‌ನ ಸೌಲಭ್ಯ ಯಾರಲ್ಲೂ ಇರಲಿಲ್ಲ. ಅನೇಕರ ಭೂಮಿ ಸರಕಾರದ ಅಕ್ರಮ ನೆಲ. ಇನ್ನೂ ಸಕ್ರಮಗೊಂಡು ಪಹಣಿ ಪತ್ರ ಸಿಕ್ಕಿರಲಿಲ್ಲ. ಯಾವ ದಾಖಲೆಯೂ ಇಲ್ಲದವರಿಗೆ ಸಾಲ ಕೊಡಲು ಬ್ಯಾಂಕಿನವರೂ ಸಿದ್ಧರಿರಲಿಲ್ಲ.

ಆಗ ಡಾ. ಹೆಗ್ಗಡೆಯವರು ತಮ್ಮ ವೈಯಕ್ತಿಕ ವರ್ಚಸ್ಸನ್ನು ಬಳಸಿ, ಇಂತಹ ಅಸಹಾಯಕರಿಗೆ ನೆರವಾದರು. ಬ್ಯಾಂಕುಗಳ ಮುಖ್ಯಸ್ಥರನ್ನು ಸಂಪರ್ಕಿಸಿ ದಾಖಲೆಗಳಿಲ್ಲದಿದ್ದರೂ ಅವರಿಗೆ ಸಾಲದ ಮೂಲಕ ಪಂಪ್‌ಸೆಟ್ ಒದಗಿಸಲು ಒಡಂಬಡಿಸಿದರು. ಸ್ವತ: ತಾವೇ ಯೋಜನೆಯ ಮೂಲಕ ಭದ್ರತೆ ಒದಗಿಸಿದರು. ಪಂಪು, ಪೈಪ್ ಕೊಳ್ಳಲು ಪ್ರತ್ಯೇಕ ಸಹಾಯಧನ ನೀಡಿದರು. ೧೯೮೮ ರಲ್ಲಿ ಸಾವಿರ ಪಂಪ್‌ಸೆಟ್‌ಗಳ ವಿತರಣೆಯ ಐತಿಹಾಸಿಕ ಸಮಾರಂಭ ನಡೆಯಿತು. ಬೆಳೆಗೆ ನೀರುಣಿಸಲು ನಿರಾತಂಕವಾಯಿತು.

ಯಾವುದೇ ವ್ಯಾಧಿಗೂ ಚಿಕಿತ್ಸೆ ಇದೆ. ಆದರೆ ಅಜ್ಞಾನವೆಂಬ ಖಾಯಿಲೆಯಿಂದ ಬರುವ ಹಾನಿಗೆ ಮದ್ದೇ ಇಲ್ಲ ಎಂಬುದು ಬಲ್ಲವರ ಮಾತು. ತಾಲೂಕಿನ ಎಲ್ಲ ಅನಕ್ಷರಸ್ಥರಿಗೆ ಅಕ್ಷರವಂತರು ಬರಹ ಕಲಿಸುವ ಸಲುವಾಗಿ ಜ್ಞಾನಜ್ಯೋತಿ ರಾತ್ರಿ ಶಾಲೆಗಳನ್ನು ಹುಟ್ಟುಹಾಕಿ ಅಕ್ಷರಹೀನರ ಸಂಖ್ಯೆಯನ್ನು ಅಳಿಸಿಹಾಕಲು ಸಮರ್ಥರಾದದ್ದು ಗ್ರಾಮೀಣ ಅಭ್ಯುದಯದ ಒಂದು ಅಂಗವೆಂದೇ ಹೇಳಬಹುದು. ೧೯೮೮ ರಲ್ಲಿ ಆರಂಭಗೊಂಡು ವರ್ಷ ಕಳೆಯುವುದರೊಳಗೆ ಸಂಪೂರ್ಣ ಸಾಕ್ಷರತೆ ಸಾಧ್ಯವಾಯಿತು. ಕೇಂದ್ರ ಸರಕಾರದ ಸಂಪೂರ್ಣ ಸಾಕ್ಷರತಾ ಆಂದೋಲನದ ಸಹಯೋಗದೊಂದಿಗೆ ನಡೆದ ಈ ಕಾರ್ಯಕ್ರಮ ಗ್ರಾಮಾಭಿವೃದ್ಧಿ ಯೋಜನೆಯು ಇತರರೊಂದಿಗೆ ಸೇರಿ ನಡೆಸಿದ ಪಾಲುದಾರಿಕೆಯ ಪ್ರಥಮ ಕಾರ್ಯಕ್ರಮ ಎಂದು ಹೇಳಬಹುದು. ಅಕ್ಷರದ ಅರಿವು ಮೂಡಿಸುವ ಈ ಯೋಜನೆ ನಿಲ್ಲದೆ ನಿರಂತರ ನಡೆಯಬೇಕು. ಅರ್ಧ ಕಲಿತವರ ಕಲಿಕಾ ಉತ್ಸಾಹ ಬತ್ತದೆ ಮುಂದುವರೆಯಬೇಕೆಂಬ ಉದ್ದೇಶದಿಂದ ಅರ್ಧದಲ್ಲೇ ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಕರೆತಂದು ವಿದ್ಯಾವಾಹಿನಿಗೆ ಸೇರಿಸುವ ಕಾರ್ಯವೂ ಗ್ರಾಮಾಭಿವೃದ್ಧಿಯ ಮಹತ್ವದ ಒಂದಂಶವೆನಿಸಿತು.

ಯೋಜನೆಯ ಅಧ್ಯಕ್ಷರಾದ ಡಾ. ಹೆಗ್ಗಡೆಯವರು ರಾಜಕೀಯವಾಗಿ ತಟಸ್ಥ ನಿಲುವನ್ನು ತಳೆದಿರುವುದರಿಂದ ಕಾರ್ಯಕರ್ತರಿಗೂ ಪಕ್ಷಾತೀತವಾಗಿ ಕೆಲಸ ಮಾಡುವುದು ಸುಲಭವಾಗಿದೆ. ರಾಜಕೀಯ ಒಲವು ಗ್ರಾಮಗಳಲ್ಲಿಯೂ ಇದೆ. ಆದರೆ ರಾಜಕೀಯ ವಿಚಾರಗಳು ಮತ್ತು ಸಂಘಟನೆಗಳು ಬರುವುದು ಬೇಡ ಎಂಬುದು ಯೋಜನೆಯ ಅಪೇಕ್ಷೆಯಾಗಿತ್ತು. ಆದರೂ ರಾಜಕೀಯ ಪ್ರವೇಶ ಎಂಬುದು ಪ್ರಗತಿಯ ಒಂದು ಹಂತ ಹಾಗೂ ಅದು ನಾಯಕತ್ವದ ಲಕ್ಷಣ ಎಂದು ಯೋಜನೆಯು ಪರಿಭಾವಿಸಿದೆ. ಆರ್ಥಿಕ ಸಬಲೀಕರಣವಾದಾಗ ಹಾಗೂ ವ್ಯಕ್ತಿಯ ಅನುಭವ ಪಕ್ವವಾದಾಗ ರಾಜಕೀಯ ಪ್ರವೇಶ ಅಪೇಕ್ಷಣೀಯವಾಗುತ್ತದೆ. ಆದ್ದರಿಂದಲೇ ಯೋಜನೆಯ ಗುಂಪುಗಳ ಸದಸ್ಯರು ರಾಜಕೀಯದಲ್ಲಿ ಸಕ್ರಿಯರಾಗಿರುವುದನ್ನು ಪರಿಶೀಲಿಸಬಹುದು. ಗ್ರಾಮ ಪಂಚಾಯತ್ ಸದಸ್ಯರಿಂದ ಹಿಡಿದು ರಾಜಕೀಯದ ವಿವಿಧ ಹಂತಗಳಲ್ಲಿ ಹಾಗೂ ಸಹಕಾರಿ ರಂಗದಲ್ಲಿ ಸಕ್ರಿಯರಾಗಿರುವ ಸದಸ್ಯರ ದೊಡ್ಡ ಬಳಗವನ್ನೇ ಯೋಜನೆ ಹೊಂದಿದೆ. ಯೋಜನೆಯಿಂದ ಒಳ್ಳೆಯ ಸಂಸ್ಕಾರ ಪಡೆದು ರಾಜಕೀಯ ಪ್ರವೇಶ ಮಾಡಿದ ಸದಸ್ಯರು

ಭ್ರಷ್ಟಾಚಾರದಿಂದ ಮುಕ್ತವಾದ ಆಡಳಿತವನ್ನು ನೀಡುವರೆಂಬ ಆಶಯವೂ ಇದರ ಹಿಂದಿದೆ. ಜೊತೆಗೆ ಸಾಮಾನ್ಯ ಜನರಿಗೂ ಸರಕಾರದ ಸವಲತ್ತುಗಳನ್ನು ಪರಿಚಯಿಸಿ, ಅವುಗಳನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಮಾಡುವುದು ಸುಲಭ ಸಾಧ್ಯವಾಗಿದೆ.

ರೈತರು ಹಾಗೂ ಬಡಜನರಲ್ಲಿ ಹೊಸ ಸಂಚಲನವನ್ನೇ ಮೂಡಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನೋಡ ನೋಡುತ್ತಲೇ ಮೂರು ದಶಕಗಳ ಸಾರ್ಥಕ ಸೇವೆಯನ್ನು ಪೂರೈಸಿದೆ. ಈ ಅವಧಿಯಲ್ಲಿ ಯೋಜನೆ ತನ್ನ ವಿಭಿನ್ನ ಕ್ಷೇತ್ರಗಳಲ್ಲಿ ಅನೇಕ ತರಹದ ಸವಾಲುಗಳನ್ನು ಕಂಡು ಅನುಭವಿಸಿದೆ. ಆ ನಡುವೆಯೂ ನಾಡಿನ ಉದ್ದಗಲಕ್ಕೂ ಗ್ರಾಮೀಣ ಜನಸಮುದಾಯ ತೋರಿಸಿದ ಅತ್ಯುತ್ಸಾಹ ಮತ್ತು ವಿಶ್ವಾಸದ ಪ್ರತಿಫಲನವೆಂಬಂತೆ ಯೋಜನೆ ಉನ್ನತಿಯ ಶಿಖರದತ್ತ ದಾಪುಗಾಲಿರಿಸಿದೆ. ಯೋಜನೆಯ ಅಧ್ಯಕ್ಷರಾಗಿ ಅದರ ಎಲ್ಲ ಕಾರ್ಯಕ್ರಮಗಳನ್ನು ರೂಪಿಸಿ, ನಿರಂತರ ಮಾರ್ಗದರ್ಶನದ ಮೂಲಕ ಅಭೂತಪೂರ್ವ ಯಶಸ್ವಿಗೆ ಕಾರಣರಾದ ಡಾ। ಡಿ. ವೀರೇಂದ್ರ ಹೆಗ್ಗಡೆಯವರು ಈ ಪರಿಕಲ್ಪನೆಯನ್ನು ನೆಪವಾಗಿರಿಸಿಕೊಂಡು ಸಮಾಜದ ಏಳಿಗೆಗಾಗಿ ಅವಿರತ ಶ್ರಮಿಸಿದ್ದಾರೆ. ಈ ಮಾದರಿಯ ಅನೇಕ ಜನಕಲ್ಯಾಣ ಕಾರ್ಯಕ್ರಮಗಳ ಮೂಲಕ ಧರ್ಮಸ್ಥಳ ಕ್ಷೇತ್ರವನ್ನು ಸಮಾಜಮುಖಿಯಾಗಿ ಮುನ್ನಡೆಸಿ ನಾಡಿನ ಲಕ್ಷಾಂತರ ಕುಟುಂಬಗಳು ಶ್ರೀ ಮಂಜುನಾಥ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ಕೈಜೋಡಿಸಿದ ಸಹಸ್ರಾರು ಮಂದಿ ಸಿಬ್ಬಂದಿಗಳ ಅವಿರತ ಶ್ರಮ ಸಾರ್ಥಕವೆನಿಸಿದೆ. ಗ್ರಾಮಾಭಿವೃದ್ಧಿಯ ಕನಸನ್ನು ಸಾಕಾರಗೊಳಿಸಿ, ಜನತೆಗೆ ಬೆಳ್ಳಿಯ ಬೆಳಕನ್ನು ಹರಿಸಿ ಬಾಳನ್ನು ಹಸನು ಮಾಡುವ ಈ ಕಾರ್ಯ ಜಗದ್ವಿಖ್ಯಾತವಾಗಿದೆ.

ಅಧ್ಯಾಯ ಟಿಪ್ಪಣಿ

೧. ಡಾ. ಪ್ರಜ್ಞಾ ಅಮ್ಮೆಂಬಳ, ಶ್ರೀಕ್ಷೇತ್ರ ಧರ್ಮಸ್ಥಳ: ಬಹುಮುಖಿ ಅಧ್ಯಯನ, ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲಮಹಾ ಸಂಸ್ಥಾನ, ರಾಯಚೂರು, ೨೦೦೯.

೨. ಪುನರುಕ್ತಿ ೧

೩. ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಲ್. ಎಚ್ ಮಂಜುನಾಥ್ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಲಭ್ಯವಾದ ಮಾಹಿತಿ.

೪. "ಬೆಳ್ಳಿ ಬೆಳಕು" ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬೆಳ್ಳಿಹಬ್ಬದ ನೆನಪಿನ ಸಂಪುಟ.

೫. ಪುನರುಕ್ತಿ ೪

೬. ಪುನರುಕ್ತಿ ೩

೭. "ಪ್ರಗತಿಯ ಪಥದಲ್ಲಿ ಗ್ರಾಮಾಭಿವೃದ್ಧಿ ಯೋಜನೆ" ಡಾ. ನಿ. ಮುರಾರಿ ಬಲ್ಲಾಳ (ಲೇಖನ) ಉದಯವಾಣಿ ಕನ್ನಡ ದೈನಿಕ.

೮. ಪುನರುಕ್ತಿ ೩

೯. ಪುನರುಕ್ತಿ ೩

೧೦. ಪುನರುಕ್ತಿ ೩

೧೧. ಪುನರುಕ್ತಿ ೩

೧೨. ಡಾ. ವೀರೇಂದ್ರ ಹೆಗ್ಗಡೆಯವರು ಮಂಗಳೂರು ಆಕಾಶವಾಣಿಗೆ ನೀಡಿದ ಸಂದರ್ಶನದಲ್ಲಿ ಲಭ್ಯವಾದ ಮಾಹಿತಿ.

೧೩. ಪುನರುಕ್ತಿ ೩

೧೪. ಪುನರುಕ್ತಿ ೪

೧೫. ಗದುಗಿನ ತೋಂಟದಾರ್ಯ ಸ್ವಾಮಿಗಳು ಧರ್ಮಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಮಾಡಿದ ಭಾಷಣದಲ್ಲಿ ಲಭ್ಯವಾದ ಮಾಹಿತಿ.

೧೬. ಪುನರುಕ್ತಿ ೪

೧೭. ಪುನರುಕ್ತಿ ೪

ಅಧ್ಯಾಯ ೪

ಪ್ರಗತಿ ಪಥದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

ಅಧ್ಯಾಯ ೪

ಪ್ರಗತಿ ಪಥದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

ಶ್ರೀ ಕ್ಷೇತ್ರ ಧರ್ಮಸ್ಥಳ ಈ ದೇಶದ ಸುಸಂಪನ್ನ ಧಾರ್ಮಿಕ ನೆಲೆಬೀಡು. ಧರ್ಮದ ಪ್ರತಿಯೊಂದು ಅಂಗವನ್ನೂ ಸಾರ್ಥಕತೆಯ ಚೌಕಟ್ಟಿನಲ್ಲಿರಿಸಿ ದಾನ ಧರ್ಮಗಳ ಪರಮ ಸೀಮೆಯಲ್ಲಿ ಅನ್ವರ್ಥಗೊಂಡಿದೆ. ಬಹುಮುಖಿ ಸಾಮಾಜಿಕ ಸೇವೆಗೆ ಹಿಡಿದ ಕೈಗನ್ನಡಿಯಾಗಿದೆ. ಶೈಕ್ಷಣಿಕವಾಗಿ ಮಾದರಿಯ ಶೃಂಗದಲ್ಲಿದೆ. ದಾನದ ಬಹು ಎಲ್ಲೆಗಳನ್ನು ದಾಟಿ ಅನ್ನದಾನ, ಆರೋಗ್ಯ ದಾನ, ವಸ್ತ್ರದಾನ, ಅಭಯದಾನ, ವಿದ್ಯಾದಾನ ವೃಷ್ಟಿಯಲ್ಲಿ ಕೋಟ್ಯಂತರ ಜನರ ಹೃದಯವನ್ನು ಮುಟ್ಟಿದೆ. ಆಧ್ಯಾತ್ಮಿಕವಾಗಿ ನೊಂದವರ ಮನದ ಕದ ತಟ್ಟಿದೆ. ನಾಡಿನ ಯಾವುದೇ ಮೂಲೆಗೂ ಧರ್ಮಸ್ಥಳದ ಸೇವಾಕಾರ್ಯದ ಅಲೆ ಪಸರಿಸಿ ಜನರ ನೋವನ್ನು ನಿವಾರಿಸಿ, ನಲಿವು ಮೂಡಿಸಲು ಸಮರ್ಥವಾಗಿದೆ. “ಗಗನಂ ಗಗನಾಕಾರಂ ಸಾಗರಂ ಸಾಗರೋಪಮಂ” ಎಂಬಂತೆ ಧರ್ಮಸ್ಥಳದ ಸುವ್ಯವಸ್ಥಿತ, ಶಿಸ್ತುಬದ್ಧ, ಜನಮನ ಗೆಲ್ಲುವ ಎಲ್ಲ ಚಟುವಟಿಕೆಗಳನ್ನು ಗಮನಿಸಿದರೆ ಧರ್ಮಸ್ಥಳಕ್ಕೆ ಧರ್ಮಸ್ಥಳವೇ ಸಾಟಿ ಅಥವಾ ಧರ್ಮಸ್ಥಳಕ್ಕೆ ಧರ್ಮಸ್ಥಳವೇ ಮಾದರಿ ಎಂಬ ಸಂಗತಿ ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ಮನವರಿಕೆಯಾಗುತ್ತದೆ.

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ದೂರದರ್ಶಿತ್ವದಲ್ಲಿ ೧೯೮೨ರಲ್ಲಿ ಪ್ರಾರಂಭಗೊಂಡ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕಳೆದ ಸುಮಾರು ಮೂರು ದಶಕಗಳಿಂದ ಸಣ್ಣ ರೈತರು, ಕುಶಲಕರ್ಮಿಗಳು ಮತ್ತು ದುರ್ಬಲ ವರ್ಗದವರಿಗೆ ತನ್ನ ಸಾರ್ಥಕ ಸೇವೆಯನ್ನು ನೀಡುತ್ತಾ ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಮುಖಾಂತರ ಆರಂಭಗೊಂಡ ಈ ಯೋಜನೆಯು ಹಲವಾರು ಪ್ರಯೋಗಗಳನ್ನು ಮಾಡಿ ಅವು ಯಶಸ್ಸು ಕಂಡ ನಂತರ ಇದೀಗ ಬೇರೆ ಕಡೆಗಳಲ್ಲಿಯೂ ತನ್ನ ಕಾರ್ಯಕ್ರಮಗಳನ್ನು ಕ್ರಮೇಣ ವಿಸ್ತರಿಸುತ್ತ ಬಂದಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ಈ ಯೋಜನೆಯು ಕರ್ನಾಟಕದ ಹನ್ನೊಂದು ವಿವಿಧ ಜಿಲ್ಲೆಗಳಲ್ಲಿ ವ್ಯಾಪಿಸಿಕೊಂಡಿದ್ದು ೨೦೧೨-೧೩ರ ಆರ್ಥಿಕ ವರ್ಷದಲ್ಲಿ ಒಟ್ಟು ಹದಿನಾರು ಜಿಲ್ಲೆಗಳಿಗೆ ವಿಸ್ತರಿಸುವ ಗುರಿಯನ್ನು ಹೊಂದಲಾಗಿದೆ. ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುತ್ತಿರುವ ಫಲಾನುಭವಿಗಳನ್ನು ಗಮನದಲ್ಲಿರಿಸಿಕೊಂಡು ಅವರಿಗೆ ಅನುಕೂಲವಾಗುವಂತೆ ಕಾಲದಿಂದ ಕಾಲಕ್ಕೆ ಯೋಜನೆಯು ತನ್ನ ಕಾರ್ಯಕ್ರಮಗಳನ್ನು ಮರುಯೋಜಿಸಿಕೊಂಡು ಬರುತ್ತಿದೆ. ವರ್ಷದಿಂದ ವರ್ಷಕ್ಕೆ ಯೋಜನೆಯ ಸಹಭಾಗಿಗಳ ಮತ್ತು ಪಾಲುದಾರರ ಸಂಖ್ಯೆ ನಿರೀಕ್ಷೆಗೂ ಮೀರಿ ಗಣನೀಯವಾಗಿ ವೃದ್ಧಿಯಾಗುತ್ತಿದ್ದು ಮಹತ್ವದ ಯಶಸ್ಸು ಕಂಡಿದೆ.

೪.೧ ಸಮುದಾಯ ಉದ್ಧಾರದ ಗುರಿ

ಸಮಾಜದ ಕಟ್ಟಕಡೆಯ ಜನರ ಹೃದಯವನ್ನು ತಲುಪುವ, ಅವರ ನೋವು-ಕೊರತೆಗಳನ್ನು ನಿವಾರಿಸುವ ಕಳಕಳಿಯಿಂದ ಪ್ರಾರಂಭವಾದದ್ದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ. ೧೯೮೨ರಲ್ಲಿ ಬೆಳ್ತಂಗಡಿ ತಾಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಅಭಿವೃದ್ಧಿಯನ್ನು ಈಡೇರಿಸುವ ಗುರಿ ಹೊತ್ತುಕೊಂಡು ಡಾ. ಹೆಗ್ಗಡೆಯವರು ಸಾಕಾರಗೊಳಿಸಿದ ಒಂದು ಪ್ರಯೋಗವಿದು. ತನ್ನ ನೆರಳಿಗೆ ಬಂದ ೧೦ ಸಾವಿರ ಕುಟುಂಬಗಳ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯನ್ನು ಸಾಧಿಸಿ ತನಗೆ ತಾನೇ ಅದು ಮಾದರಿಯಾಗಿದೆ. ಅಜ್ಞಾನ, ಬಡತನ, ಮೂಢನಂಬಿಕೆ, ಅಸಮಾನತೆಗಳ ಬೇರನ್ನು ಕಿತ್ತೊಗೆದು ಸಾಮಾಜಿಕ ದೃಢತೆಯನ್ನು ಒದಗಿಸಲು ಸಫಲವಾಗಿದೆ.

ಈ ಯೋಜನೆಯು ಅನುಷ್ಠಾನಗೊಂಡು ಸುಮಾರು ೩೦ ವರ್ಷಗಳು ನಡೆದು ಬಂದಿವೆ. ಇದರ ಪರಿಣಾಮವಾಗಿ ಬೆಳ್ತಂಗಡಿ ತಾಲೂಕು ಮೊದಲ್ಗೊಂಡು ಇಂದು ಅನೇಕ ತಾಲೂಕುಗಳಲ್ಲಿ , ಜಿಲ್ಲೆಗಳಲ್ಲಿ ಮಹತ್ತರ ಪರಿವರ್ತನೆಯ ಕ್ರಾಂತಿಯೇ ನಡೆದಿದೆ. "ಮಾನವಕುಲ ತಾನೊಂದೇ ವಲಂ" ಎನ್ನುವ ಕವಿವಾಣಿಯಂತೆ ಗ್ರಾಮಾಭ್ಯುದಯದ ಸಮಷ್ಟಿಯ ಕನಸನ್ನು ನನಸಾಗಿಸುವ ಪ್ರಯತ್ನದಲ್ಲಿ ಜಾತಿ ವರ್ಗೀಕರಣ ಮಾಡದೆ ಇವನು ತನ್ನವ ಅವನು ಪರರವ ಎಂಬ ಭೇದವೆಣಿಸದೆ ಎಲ್ಲರಿಗೂ ಎಲ್ಲ ರೀತಿಯ ಸಹಾಯಹಸ್ತ ಚಾಚಿ ಬಡತನದ ಅಧೋಲೋಕದಿಂದ ಪ್ರಗತಿಯ ಪರಮೋಚ್ಛ ಜಗತ್ತಿಗೆ ಕರೆತಂದಿದೆ. ಈ ಯೋಜನೆಯನ್ನು ಸಾರ್ಥಕಗೊಳಿಸುವಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ವ್ಯವಸ್ಥೆ ಹಲವಾರು ಕೋಟಿ ರೂಪಾಯಿಗಳನ್ನು ವ್ಯಯಿಸಿದರೂ ಡಾ. ಹೆಗ್ಗಡೆಯವರ ಮಾತುಗಳು ಈ ವಿಚಾರವನ್ನು ಇನ್ನಷ್ಟು ಸ್ಪಷ್ಟಪಡಿಸುತ್ತವೆ. "ನಮ್ಮ ಯೋಜನೆಯ ಕಾರ್ಯಕರ್ತರು, ಅಧಿಕಾರಿಗಳು, ಯೋಜನೆಯ ಪ್ರಗತಿಯನ್ನು ವಿವರಿಸುವಾಗ ಎಷ್ಟು ಕುಟುಂಬಗಳಿವೆ, ಎಷ್ಟು ಪ್ರದೇಶದಲ್ಲಿ ಎಷ್ಟು ಚಟುವಟಿಕೆಯಲ್ಲಿ ಎಷ್ಟು ಮೊತ್ತದ ವಿನಿಯೋಗದೊಂದಿಗೆ ಲಾಭ ದೊರೆತಿದೆ ಎಂದು ವಿವರಿಸುವಾಗ ಮನಸ್ಸಿಗೆ ಆನಂದವಾದರೂ ಗ್ರಾಮೀಣರು ಬಂದು ನಮ್ಮಲ್ಲಿ ಚರ್ಚಿಸುವಾಗ ಅವರ ಮುಖಗಳು ಪ್ರದರ್ಶಿಸುವ ಧನ್ಯತೆ, ಕಣ್ಣುಗಳಲ್ಲಿ ಸೂಸುವ ಆತ್ಮವಿಶ್ವಾಸ, ಎಲ್ಲವನ್ನೂ ಮೀರಿಸಿ ನಮ್ಮೊಂದಿಗೆ ಯೋಜನೆಯ ಜತೆಗೆ ಬೆಳೆಯಲು ಆಶಿಸುವ ಆತ್ಮೀಯತೆ. ಇವು ನಮ್ಮನ್ನು ಹೆಚ್ಚು ಕಟ್ಟಿಹಾಕಿವೆ. ಈ ಯೋಜನೆಯ ಬಗೆಗೆ ನಾವು ಕಂಡ ಕನಸುಗಳೂ ನನಸಾದ ಸಂತೃಪ್ತಿ ಮೂಡುತ್ತದೆ..."[೧]

ಡಾ. ವೀರೇಂದ್ರ ಹೆಗ್ಗಡೆಯವರು ಈ ಯೋಜನೆಯ ಮೂಲಕ ಒಂದು ಬೃಹತ್ ಸಮುದಾಯದ ಬಹುಕಾಲದ ಬದುಕಿನ ಹಣೆಬರಹವನ್ನು ತಿದ್ದಿದ್ದಾರೆ. ಆತ್ಮಸ್ಥೈರ್ಯವನ್ನು ತುಂಬಿ ತನ್ನ ಕಾಲಿನ ಮೇಲೆ ನಿಂತು ಬದುಕಲು ಕಲಿಸಿದ್ದಾರೆ. ಸ್ವಂತ ಬದುಕು ಗರಿ ಕಟ್ಟಿಕೊಳ್ಳಲು ಬಂಡವಾಳ, ಮಾರ್ಗದರ್ಶನ ಒದಗಿಸಿ

ಹಾರಲರಿಯದ ಹಕ್ಕಿಗೆ ರೆಕ್ಕೆ ಬಿಗಿದು ಹಾರಲು ಬೆನ್ನು ತಟ್ಟಿದ್ದಾರೆ. ಬಡತನದ ಕಹಿ ನೆನಪುಗಳಿಂದ ಪಾರಾಗಿ ಶ್ರಮ ಜೀವನದ ಬಲದಿಂದ ಮೇಲೇರಲು ಸಹಾಯ ನೀಡಿ, ಸಾಧನೆಯ ಸಿಹಿಯನ್ನು ಸವಿಯಲು ಕಾರಣರಾಗಿದ್ದಾರೆ. ಧಾರ್ಮಿಕ ಕೇಂದ್ರವೊಂದು ತನ್ನ ಆದಾಯವನ್ನು ಸಮಾಜದ ದುರ್ಬಲ ಜನರ ಸಬಲೀಕರಣಕ್ಕೆ ಬಳಸಿ ಕೆರೆಯ ನೀರನು ಕೆರೆಗೆ ಚೆಲ್ಲಿ ಬದುಕಿದ್ದು ಈ ಜಗತ್ತು ಇದುವರೆಗೆ ಉಲ್ಲೇಖಿಸಬಹುದಾದ ಘಟನೆಯೆಂದೇ ಹೇಳಬಹುದು. ಹೊಸ ಇತಿಹಾಸ ಬರೆದ ಈ ವಿರಾಟ್ ಪುರುಷ ಎಲ್ಲರಿಗಿಂತ, ಎಲ್ಲಕ್ಕಿಂತ ಎತ್ತರದಲ್ಲಿ ಕಂಗೊಳಿಸುತ್ತಿದ್ದಾರೆ.

೪.೨ ಕಿರು ಆರ್ಥಿಕ ವ್ಯವಹಾರ: ಬಡವರ ಕೈಗೆ ಬಂಡವಾಳ

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಬ್ಯಾಂಕಿಂಗ್ ಕ್ಷೇತ್ರದ ತವರೂರು. ರಾಷ್ಟ್ರದ ಪ್ರಮುಖ ಬ್ಯಾಂಕುಗಳಾದ ಕೆನರಾ, ಕಾರ್ಪೊರೇಶನ್, ಸಿಂಡಿಕೇಟ್, ವಿಜಯಾ ಮತ್ತು ಕರ್ನಾಟಕ ಬ್ಯಾಂಕುಗಳು ಜನ್ಮ ತಾಳಿದ್ದು ಇಲ್ಲಿಯೇ. ಈ ಬ್ಯಾಂಕುಗಳ ಶಾಖಾ ಜಾಲದಿಂದಾಗಿ ಜಿಲ್ಲೆಯ ಮೂಲೆ ಮೂಲೆಗಳಲ್ಲಿಯೂ ಬ್ಯಾಂಕಿಂಗ್ ಸೌಲಭ್ಯ ಜನಸಾಮಾನ್ಯರಿಗೆ ಸುಲಭವಾಗಿ ಲಭ್ಯವಾಗಿದೆ. ಪರಿಸ್ಥಿತಿ ಹೀಗಿದ್ದರೂ, ೧೯೮೫ರಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಯತ್ನದಿಂದ ಸಹಸ್ರಾರು ಕೃಷಿಕರಿಗೆ ಪಂಪು ಖರೀಧಿಸುವ ಸಲುವಾಗಿ ಸಾಲ ಕೇಳಲು ಹೊರಟರೆ, ಸೌಲಭ್ಯ ದೊರೆತದ್ದು ಬೆರಳೆಣಿಕೆಯ ಮಂದಿಗೆ ಮಾತ್ರ! ಅಂತಿಮವಾಗಿ ಯೋಜನೆಯ ಅಧ್ಯಕ್ಷ ಡಾ। ವೀರೇಂದ್ರ ಹೆಗ್ಗಡೆಯವರು ಶಾಖಾಧಿಕಾರಿಗಳ ಸಭೆಯೊಂದನ್ನು ಕರೆದು ಚರ್ಚಿಸಿ ವೈಯಕ್ತಿಕ ವಿನಂತಿ ಮಾಡಿ, ಕೃಷಿಕರಿಗೆ ಯೋಜನೆಯ ಬೆಂಬಲವನ್ನು ಘೋಷಿಸಿ ಸಾಲ ಕಟ್ಟಿಸುವ ಜವಾಬ್ದಾರಿ ಹೊತ್ತ ಅನಂತರವೇ ಸುಮಾರು ಒಂದು ಸಾವಿರ ಕೃಷಿಕರಿಗೆ ಸಾಲ ದೊರೆಯಿತು.

೧೯೯೧ರಲ್ಲಿ ಯೋಜನೆಯ ಕಾರ್ಯಕ್ಷಮತೆಯ ಕುರಿತು ಅಧ್ಯಯನ ಮಾಡಲು ಬೆಂಗಳೂರಿನ ಸಂಶೋಧನಾ ಸಂಸ್ಥೆ ಒಱಆಖ ಯೋಜನೆಯ ಲಾಭ ಸಂಪೂರ್ಣವಾಗಿ ದೊರೆಯದಿರಲು ಕೃಷಿಕರಲ್ಲಿ ಬಂಡವಾಳದ ಕೊರತೆಯೇ ಮುಖ್ಯ ಕಾರಣ ಎಂದು ಬೊಟ್ಟು ಮಾಡಿತು.[೨] ಈ ಹಿನ್ನೆಲೆಯಲ್ಲಿಯೇ ಸೃಷ್ಟಿಗೊಂಡ ಪ್ರಗತಿ ಬಂಧು ಗುಂಪುಗಳು ವಾರದ ಉಳಿತಾಯ ಮಾಡಿ, ಹಣವನ್ನು ಬ್ಯಾಂಕಿನಲ್ಲಿಯೇ ಇರಿಸಿ ಇದರ ಭದ್ರತೆಯ ಮೇಲೆ ಸಾಲ ಕೇಳಲು ಹೋದಾಗಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಮತ್ತೊಮ್ಮೆ ಮಧ್ಯ ಪ್ರವೇಶಿಸಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಈ ಬಾರಿ ಸ್ವತಃ ಸಾಲ ಪಡೆದು ಗುಂಪೊಂದಕ್ಕೆ ರೂ. ೨೫,೦೦೦ ದಂತೆ ಸಾಲ ವಿತರಿಸಿ ಭಾರತ ದೇಶದಲ್ಲಿ ಕಿರು ಆರ್ಥಿಕ ವ್ಯವಹಾರ ಪ್ರಾರಂಭಿಸಿದ ಪ್ರಥಮ ಸ್ವಯಂ ಸೇವಾ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಂದಿನ ದಿನಗಳಲ್ಲಿ ೧೧.೫% ಬಡ್ಡಿಗೆ ಪಡೆದ ಸಾಲವನ್ನು

೧೨% ಬಡ್ಡಿಯಲ್ಲಿ ನೀಡಿದ್ದರ ಉದ್ದೇಶ ಕೇವಲ ಬಡ ಕೃಷಿಕರಿಗೆ ಅಗತ್ಯವಿದ್ದ ಬಂಡವಾಳ ಪೂರೈಕೆ ಮಾತ್ರ ಇತ್ತು.

ಇದರಿಂದ ತಿಳಿದುಬರುವ ಮುಖ್ಯ ಅಂಶವೆಂದರೆ, ಬ್ಯಾಂಕುಗಳ ತವರೂರು ದಕ್ಷಿಣ ಕನ್ನಡದಲ್ಲಿಯೂ ಬಡವರಿಗೆ ಹಣಕ್ಕೆ ಬರಗಾಲ. ಇಲ್ಲಿ ಕಷ್ಟಪಟ್ಟರೆ ಎರಡು ಹೊತ್ತಿನ ಕೂಲಿ ಸಿಕ್ಕೀತು. ಆದರೆ ಪ್ರಗತಿ ಸಾಧಿಸಲು ಬೇಕಾದ ಬಂಡವಾಳ ಮಾತ್ರ ಕನ್ನಡಿಯಲ್ಲಿನ ಗಂಟೇ ಸರಿ. ಬ್ಯಾಂಕುಗಳ ನಿಯಮಾವಳಿಗಳು ಬಡವನನ್ನು ದೂರವಿಡಲು ಶ್ರಮಿಸುತ್ತವೆ. ಇನ್ನು ಅವರ ಮನೆ ಬಾಗಿಲಿಗೆ ಹೋಗಿ ಅವರ ಕಷ್ಟವನ್ನರಿತು, ಹಣದ ಮಹತ್ವವನ್ನು ತಿಳಿಸಿ, ಅದರ ಬಳಕೆಗೆ ಯೋಜನೆಯನ್ನು ತಯಾರಿಸಿ, ಬೇಕಾದ ಹಣವನ್ನು ಒದಗಿಸಿ... ಇವನ್ನೆಲ್ಲ ಒದಗಿಸಿಕೊಡುವ ಅವಕಾಶಗಳೇ ಇರಲಿಲ್ಲ.

೧೯೯೦ರ ದಶಕದ ಸ್ವ ಸಹಾಯ ಕ್ರಾಂತಿಯ ಪರಿಣಾಮ ಸ್ವ ಸಹಾಯ ಸಂಘಗಳಿಗೆ ಸಾಲ ನೀಡಲು ಆದ್ಯತೆ ದೊರೆತರೂ ನಿಯಮಗಳು ಬಹಳ ಬಿಗಿಯಾಗಿದ್ದವು. ಒಂದು ವರ್ಷ ಉಳಿತಾಯ ಮಾಡಿದ ಸಂಘಕ್ಕೆ ಒಂದು ಪಟ್ಟು. ಅನಂತರ ವರ್ಷಕ್ಕೊಂದು ಪಟ್ಟು ಜಾಸ್ತಿ. ರೂ. ೫೦೦೦ ಉಳಿತಾಯ ಮಾಡಿದ ಸಂಘಕ್ಕೆ ರೂ. ೫,೦೦೦ ಸಾಲ (ಈಗ ಈ ನಿಯಮದಲ್ಲಿ ನಾಲ್ಕು ಪಟ್ಟು ಏರಿಕೆಯಾಗಿದೆ). ಒಂದು ವರ್ಷವಿಡೀ ವಾರಕ್ಕೆ ರೂ. ೧೦ರಂತೆ ಉಳಿತಾಯ ಮಾಡಿದ ಇಪ್ಪತ್ತು ಜನರಿಗೆ ರೂ. ೫,೦೦೦ ಕೊಟ್ಟರೆ ಏನು ಪ್ರಯೋಜನ? ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ! ಗ್ರಾಮಾಭಿವೃದ್ಧಿ ಯೋಜನೆ ಪ್ರಾಯೋಜಿತ ಪ್ರಗತಿಬಂಧು ಗುಂಪುಗಳಿಗೆ ಪರಿಸ್ಥಿತಿ ಇನ್ನಷ್ಟು ಕಠಿಣ. ಈ ಗುಂಪು ಕೇವಲ ೫ ರಿಂದ ೮ ಜನರದ್ದು. ಇದು ಬ್ಯಾಂಕಿಗೆ ಸಮ್ಮತವಲ್ಲ. ಅವರ ಉಳಿತಾಯ ವರ್ಷಕ್ಕೆ ರೂ. ೨,೦೦೦ ದಿಂದ ೩,೦೦೦. ಇದರ ಆಧಾರದ ಮೇಲೆ ದೊರೆಯುವ ಬ್ಯಾಂಕ್ ಸಾಲದಿಂದ ಏನು ಮಾಡಲೂ ಸಾಧ್ಯವಿಲ್ಲ. ಒಂದು ಬಾವಿ ತೋಡಬೇಕೆಂದರೂ ರೂ. ೨೦,೦೦೦–೩೦,೦೦೦ ಬೇಕು. ಪಂಪಿಗೆ ೧೦,೦೦೦, ಪೈಪಿಗೆ ೫,೦೦೦, ದನಕ್ಕೆ ೧೦,೦೦೦, ಅಂಗಡಿಯಿಡಲು ೨೫,೦೦೦.[೩]

ಕೃಷಿಕ, ದುರ್ಬಲ ವರ್ಗದ ಸಂಘಟನೆ ಕೇವಲ ಸಾಮಾಜಿಕವಾಗಿರದೆ ಆರ್ಥಿಕ ಪರಿಣಾಮ ಬೀರುವಂತೆ ಪ್ರಯತ್ನಿಸಲು ಯೋಜನೆಯು ಹಾಕಿಕೊಂಡ ಮಾರ್ಗಗಳು ಹಲವಾರು. ಕೃಷಿ ಕ್ಷೇತ್ರ ಸಂದರ್ಶನ ಮತ್ತು ಅಧ್ಯಯನ, ಗುಂಪು ಚರ್ಚೆ ಮತ್ತು ಪ್ರತಿ ಕುಟುಂಬದ ಪಂಚವಾರ್ಷಿಕ ಹಿಡುವಳಿ ಯೋಜನೆ ತಯಾರಿ, ಅನುಷ್ಠಾನ, ಮೇಲ್ವಿಚಾರಣೆ, ಬಂಡವಾಳ ಮತ್ತಿತರ ಮೂಲ ಸೌಕರ್ಯ ಒದಗಣೆ, ತರಬೇತಿ, ಮಾನಸಿಕ ತಯಾರಿ ಒೀಗೆ ಕುಟುಂಬವೊಂದರ ಜೊತೆಯಲ್ಲಿ ನಿಕಟವಾಗಿ ಸ್ಪಂದಿಸುತ್ತಾ ಅಭಿವೃದ್ಧಿ ವೇಗೋತ್ಕರ್ಷಕವಾಗಲು ೩೦೦ ರಿಂದ ೫೦೦ ಕುಟುಂಬಗಳಿಗೊಂದರಂತೆ ಯೋಜನೆ ಕಛೇರಿ ಮಾಡಿ,

ಸೇವಾನಿರತರನ್ನು ಒದಗಿಸಿದ್ದರಿಂದ ಒಂದೆಡೆ ಪ್ರಗತಿ ಹೊಂದಬೇಕೆನ್ನುವ ಅಭಿಲಾಷೆ ಮೂಡಿ, ಇನ್ನೊಂದೆಡೆ ಪ್ರಗತಿಗೆ ಬೇಕಾದ ಮುಖ್ಯ ಪರಿಕರ ಬಂಡವಾಳದ ಅಗತ್ಯತೆಯೂ ಹೆಚ್ಚಿತು.

ತನ್ನ ಪಾಲುದಾರರಿಗೆ ಅಗತ್ಯವಿರುವ ಬಂಡವಾಳವನ್ನು ಅವರ ಮನೆ ಬಾಗಿಲಿನಲ್ಲಿಯೇ ಯಾವುದೇ ಕಿರಿಕಿರಿ ಇಲ್ಲದೆ ಸೂಕ್ತ ಸಮಯದಲ್ಲಿ ಒದಗಿಸುವ ವಿನೂತನ ಕಾರ್ಯಕ್ರಮ ಮೂಡಿಬಂದದ್ದು ಈ ಕಾರಣಗಳಿಂದಾಗಿ. ಇದಕ್ಕಾಗಿ ತನಗೆ ಬೇಕಾದ ಬಂಡವಾಳವನ್ನು ದೇಶದ ಪ್ರಮುಖ ಸಾರ್ವಜನಿಕ ಬ್ಯಾಂಕುಗಳಲ್ಲಿ ಚರ್ಚಿಸಿ, ಬಡ್ಡಿ ದರದ ಬಗ್ಗೆ ಚೌಕಾಸಿ ಮಾಡಿ ಬೃಹತ್ ಸಾಲಗಳನ್ನು ಗ್ರಾಮಾಭಿವೃದ್ಧಿ ಯೋಜನೆಯು ಪಡೆದದ್ದು ಯೋಜನೆಯ ಅಧ್ಯಕ್ಷ ಡಾ। ವೀರೇಂದ್ರ ಹೆಗ್ಗಡೆಯವರು ಮತ್ತು ಶ್ರೀಮತಿ ಹೇಮಾವತಿ ಹೆಗ್ಗಡೆಯವರ ವರ್ಚಸ್ಸಿನ ಆಧಾರದಲ್ಲಿ. ರಾಷ್ಟ್ರದಲ್ಲಿ ಅಂದಂದಿಗೆ ಲಭ್ಯವಿರುವ ವ್ಯಾವಹಾರಿಕ ಬಡ್ಡಿ ದರದಲ್ಲಿ ವಿವಿಧ ಬ್ಯಾಂಕುಗಳಿಂದ ಪಡೆದ ಸಾಲವನ್ನು ಪ್ರಗತಿನಿಧಿಯಾಗಿ ಗುಂಪುಗಳ ಸದಸ್ಯರ ವೈಯಕ್ತಿಕ ಹಿಡುವಳಿ ಯೋಜನೆಗೆ ತಕ್ಕಂತೆ ಸಾಲ ನೀಡಲಾಯಿತು. (ಬ್ಯಾಂಕುಗಳ ಪಟ್ಟಿ ನೋಡಿರಿ) ಈ ಸಾಲವನ್ನು ಗುಂಪು ಭದ್ರತೆಯ ಆಧಾರದ ಮೇಲೆ ಗುಂಪುಗಳಿಗೆ ೧೧% (ದಿನ ಕಡಿತದ ದರ) ಬಡ್ಡಿಯಲ್ಲಿ ನೀಡಲಾಗುತ್ತಿದೆ. ಇದಕ್ಕಾಗಿ ೧% ಸೇವಾಶುಲ್ಕ ವಿಧಿಸಲಾಗುತ್ತಿದ್ದು ಸಾಲದ ಅವಧಿಯನ್ನು ಗಮನಿಸಿ ಆಗ (ಸೇವಾ ಶುಲ್ಕ ಸೇರಿದಂತೆ) ಬಡ್ಡಿದರ ೧೧.೩% ಅಂತರವಿರಿಸಿಕೊಂಡು ಸಾಲ ನೀಡುವುದರಿಂದ ಸದಸ್ಯರಿಗೆ ೧೧.೮% ಬಡ್ಡಿಯಲ್ಲಿ ಸಾಲ ಸಿಗುವಂತೆ ಆಗಿದೆ.

ಸಾಮಾನ್ಯವಾಗಿ ದೇಶದಲ್ಲಿರುವ ಇತರ ಸ್ವಸಹಾಯ ಗುಂಪುಗಳಿಗೆ ಬ್ಯಾಂಕುಗಳಿಂದ ೧೦ ರಿಂದ ೧೧% ಬಡ್ಡಿಯಲ್ಲಿ ಸಾಲ ದೊರೆತರೂ ಗುಂಪುಗಳು ತಮ್ಮ ಸದಸ್ಯರಿಗೆ ೧೮-೨೪% ಬಡ್ಡಿಯಲ್ಲಿ ಸಾಲ ನೀಡುತ್ತವೆ. ದೇಶದಲ್ಲಿರುವ ಇತರ ಕಿರು ಆರ್ಥಿಕ ವ್ಯವಹಾರ ಸಂಸ್ಥೆಗಳು ೧೫-೨೪% ರಲ್ಲಿ ಸದಸ್ಯರಿಗೆ ಸಾಲ ನೀಡುತ್ತವೆ. ಹೀಗೆ ನೋಡಿದಾಗ ಶ್ರೀ ಕ್ಷೇತ್ರದ ಧರ್ಮಸ್ಥಳ ಗ್ರಾಮಾಭಿವೃದ್ಧಿಯ ಯೋಜನೆಯಿಂದ ನಡೆಯುತ್ತಿರುವ ಕಿರು ಆರ್ಥಿಕ ವ್ಯವಹಾರದಲ್ಲಿ ಸದಸ್ಯರಿಗೆ ದೊರೆಯುತ್ತಿರುವುದು ಸಾಲದ ಮೇಲಿನ ಬಡ್ಡಿ ದೇಶದಲ್ಲಿಯೇ ಅತ್ಯಂತ ಕಡಿಮೆ ಎನ್ನುವುದು ಸ್ಪಷ್ಟವಾಗುತ್ತದೆ.

ಯೋಜನೆಯು ತನ್ನ ಭದ್ರತೆಯ ಮೇಲೆ ಪಡೆದಿರುವ ಸಾಲದ ಮೇಲಿನ ಸರಾಸರಿ ಬಡ್ಡಿದರವು ಶೇಕಡಾ ೮.೨% ಆಗಿದ್ದು, ಗುಂಪುಗಳಿಗೆ ೧೧.೩%ರಲ್ಲಿ ನೀಡುವುದರಿಂದ ಒದಗುವ ನಿವ್ವಳ ಉಳಿತಾಯ ೩.೧% ಹಣವನ್ನು ಮುಖ್ಯವಾಗಿ ಕಛೇರಿ ಖರ್ಚುಗಳಿಗೆ, ಗುಂಪುಗಳಿಗೆ ದಾಖಲಾತಿಗಳನ್ನು ಒದಗಿಸಲು, ತರಬೇತಿ ನೀಡಲು ಬಳಸಿಕೊಳ್ಳಲಾಗುತ್ತಿದೆ. ೨೦೦೬-೦೭ನೇ ಸಾಲಿನಲ್ಲಿ ಪ್ರಗತಿನಿಧಿ ಬಡ್ಡಿಯಲ್ಲಿನ ನಿವ್ವಳ ಉಳಿತಾಯ ರೂ. ೧.೪೫ ಕೋಟಿ ಆಗಿದ್ದು, ಈ ವ್ಯವಹಾರದಲ್ಲಿ ಆದ ಖರ್ಚು ರೂ. ೨.೮೬ ಕೋಟಿ ಆಗಿರುತ್ತದೆ. ಅತಿ

ಹೆಚ್ಚು ಬ್ಯಾಂಕು ಶಾಖೆಗಳಿರುವ ದ.ಕ. ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ೩೬,೨೧೯ ಗುಂಪುಗಳ ೩,೫೫,೦೦೦ ಕುಟುಂಬಳಿಗೆ, ಕುಟುಂಬ ಒಂದಕ್ಕೆ ಸರಾಸರಿ ರೂ. ೮,೦೦೦ ದಂತೆ ರೂ. ೨೮೮ ಕೋಟಿ ಬೃಹತ್ ಮೊತ್ತದ ಪ್ರಗತಿನಿಧಿ ನೀಡಿರುವ ಯೋಜನೆ ಬಡವರಿಗೆ ಬಂಡವಾಳದ ಅಗತ್ಯತೆಯನ್ನೂ ಮತ್ತು ಸಾಮಾನ್ಯ ಬ್ಯಾಂಕುಗಳಿಂದ ಈ ಅಗತ್ಯತೆಯನ್ನು ಪೂರೈಸಲು ಅಸಾಧ್ಯವಾಗಿರುವುದನ್ನೂ ಎತ್ತಿ ತೋರಿಸುತ್ತದೆ. ಬಡವರ ಮತ್ತು ಹಣಕಾಸು ಪೂರೈಕೆ ಜವಾಬ್ದಾರಿ ಹೊತ್ತಿರುವ ಬ್ಯಾಂಕುಗಳ ನಡುವೆ ಅಗತ್ಯವಿರುವ ಅತಿಮುಖ್ಯ ಕೊಂಡಿಯ ಕೆಲಸವನ್ನು ಅತ್ಯಂತ ಜವಾಬ್ದಾರಿಯುತವಾಗಿ ನಿರ್ವಹಿಸುತ್ತಿರುವ ತೃಪ್ತಿ ಯೋಜನೆಯ ಬಳಗಕ್ಕೆ ಇದೆ.

ಒಂದು ಗುಂಪನ್ನು ರಚಿಸಿ, ಬಂಡವಾಳದ ಬಳಕೆಗೆ ಆ ಗುಂಪನ್ನು ಸಜ್ಜುಗೊಳಿಸಲು ರೂ. ೩,೦೦೦ ಖರ್ಚು ತಗಲುತ್ತದೆ. ಅನಂತರವೂ ಮಾಸಿಕ ನಿರ್ವಹಣೆಗೆ ರೂ. ೨೦೦ ಖರ್ಚು ತಗಲುತ್ತದೆ. ಹೀಗೆ ಗುಂಪುಗಳಿಗೆ ಬಂಡವಾಳ ಒದಗಿಸಿ ಬಳಕೆಗೆ ಉತ್ತೇಜನ ನೀಡಿ ಮರುಪವತಿ ಪಡೆಯುವುದು ಸಾಕಷ್ಟು ವೆಚ್ಚದಾಯಕವೆನಿಸಿದೆ, ಬ್ಯಾಂಕುಗಳು ಸಾಮಾನ್ಯವಾಗಿ ಇವುಗಳ ಗೋಜಿಗೆ ಹೋಗದೆ ತಮ್ಮಲ್ಲಿ ಖಾತೆ ತೆರೆದ ಗುಂಪುಗಳಿಗೆ ಉಳಿತಾಯಕ್ಕೆ ತಕ್ಕಂತೆ ಸಾಲ ನೀಡಿ ಕೈ ತೊಳೆದುಕೊಳ್ಳುತ್ತವೆ. ಗುಂಪುಗಳಿಗೆ ನಿಕಟವಾಗಿ ಕೆಲಸ ಮಾಡುವ ಕಿರು ಆರ್ಥಿಕ ಸಂಸ್ಥೆಗಳು ೧೫% ಬಡ್ಡಿ ವಿಧಿಸಿ ಖರ್ಚು ತುಂಬಿಸಿಕೊಳ್ಳುತ್ತವೆ. ಗುಂಪುಗಳಿಗೆ ಖಾತೆ ತೆರೆಯಲು ಸಹಕರಿಸುವ, ಕಿರು ಆರ್ಥಿಕ ವ್ಯವಹಾರ ಮಾಡದ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಸೇವೆಗೆ ಸರಿಯಾಗಿ ಗುಂಪುಗಳಿಂದ ಶುಲ್ಕ ಪಡೆಯುತ್ತವೆ. ಇದ್ಯಾವುದನ್ನೂ ಮಾಡದೆ ನಾಮಕಾವಸ್ತೆಗೆ ಜನರನ್ನು ಸಂಘಟಿಸುವ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಖರ್ಚುಗಳನ್ನು ನಿಭಾಯಿಸಲು ಗುಂಪುಗಳನ್ನು ತೋರಿಸಿ ವಿವಿಧೆಡೆಗಳಿಂದ ದೇಣಿಗೆಗಳನ್ನು ಪಡೆಯುವ ಕೆಲವು ನಿದರ್ಶನಗಳು ನಮ್ಮ ಮುಂದಿವೆ. ಇವುಗಳಿಗೆ ತೀರಾ ಭಿನ್ನವಾಗಿ ಕೆಲಸ ಮಾಡುವ ಗ್ರಾಮಾಭಿವೃದ್ಧಿ ಯೋಜನೆಯು ತಮ್ಮ ಕಾರ್ಯಕ್ಷಮತೆಯನ್ನು ಬಳಸಿ ಕೇವಲ ೩% ರಷ್ಟು ಕಡಿಮೆ ಅಂತರವಿರಿಸಿಕೊಂಡು ತನ್ನ ಕಾರ್ಯಕ್ರಮವನ್ನು ಸುಸ್ಥಿರಗೊಳಿಸುವ ನಿಟ್ಟಿನಲ್ಲಿ ದೃಢವಾದ ಹೆಜ್ಜೆ ಹಾಕುತ್ತಿದೆ.

ಗ್ರಾಮಾಭಿವೃದ್ಧಿ ಯೋಜನೆಯ ಕಿರು ಆರ್ಥಿಕ ವ್ಯವಹಾರದ ವೈಶಿಷ್ಟ್ಯಗಳು

೧. ಬಡವರ ಅಭಿವೃದ್ಧಿಗೆ ಬೇಕಾದ ಬಂಡವಾಳ ಅವರ ಮನೆ ಬಾಗಿಲಿಗೆ.

೨. ಧರ್ಮಸ್ಥಳದ ವರ್ಚಸ್ಸನ್ನೇ ಬಳಸಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ದೊಡ್ಡ ಮೊತ್ತದ ಸಾಲ.

೩. ಸರಾಸರಿ ಶೇಕಡಾ ೭.೮೨ ರಿಂದ (೨೦೦೬ರಲ್ಲಿ) ೮.೨ (೨೦೦೭ರಲ್ಲಿ) ಬಡ್ಡಿ.

೪. ಈ ಹಣ ಅಗತ್ಯವಿರುವ ಸದಸ್ಯರಿಗೆ ಗುಂಪು ಮುಖೇನ ೧೧.೮% ಬಡ್ಡಿಯಲ್ಲಿ (ಸೇವಾ ಶುಲ್ಕ ಸಮೇತ) ತಲುಪಿಸುವ ವ್ಯವಸ್ಥೆ. ತನ್ಮೂಲಕ ದೇಶದಲ್ಲಿಯೇ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಬಡವರಿಗೆ ಸಾಲ. ಮಿಗತೆಯಾಗುವ ಹಣದಲ್ಲಿ ಶೇಕಡಾ ೩.೧ ಯೋಜನೆಯ ವೆಚ್ಚಗಳಿಗೆ ಮತ್ತು ೦.೫% ಗುಂಪಿನ ಲಾಭ.

೫. ಗುಂಪಿನಲ್ಲಿ ಮಿಗತೆಯಾದ ಲಾಭವನ್ನು ಸದಸ್ಯರೇ ಹಂಚಿಕೊಳ್ಳುವ ವಿನೂತನ ಲಾಭಾಂಶ ವಿತರಣೆ ಪ್ರಯೊಗ.

೬. ದೇಶದ ಅತಿ ದೊಡ್ಡ ಕಿರು ಆರ್ಥಿಕ ಸ್ವಯಂ ಸೇವಾ ಸಂಸ್ಥೆಯಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ.

೨೦೧೧ರ ಮಾರ್ಚ್‌ಗೆ ಕೊನೆಗೊಂಡ ಆರ್ಥಿಕ ವರ್ಷದವರೆಗೆ ಯೋಜನೆಯು ಪ್ರಸ್ತುತ ೧,೧೮,೯೧೮ ಸಂಘಗಳ ರಚನೆ ಮಾಡಿ ೧೩,೧೩,೦೪೨ ಕುಟುಂಬಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಗುಂಪಿನ ಸದಸ್ಯರು ಹಣವನ್ನು ಪಡೆದು ತಮ್ಮೊಳಗೆ ವಿತರಿಸಿಕೊಂಡು, ವಾರದ ಕಂತುಗಳಲ್ಲಿ ಮರುಪಾವತಿಸುತ್ತಾರೆ. ಒಟ್ಟಾರೆಯಾಗಿ ರೂ. ೩೦೪.೦೫ ಕೋಟಿ ಉಳಿತಾಯವನ್ನು ಮಾಡಿರುತ್ತಾರೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ಯೋಜನೆಯು ತನ್ನ ಆರ್ಥಿಕ ಅಗತ್ಯಗಳನ್ನು ಪೂರೈಸಲು ವಿವಿಧ ಬ್ಯಾಂಕುಗಳಿಂದ ರೂ. ೯೦೮.೦೦ ಕೋಟಿ ಮೊತ್ತವನ್ನು ಪ್ರಗತಿ ನಿಧಿ ವಿತರಣೆಗಾಗಿ ಪಡೆದುಕೊಂಡು ಗುಂಪಿನ ಸದಸ್ಯರಿಗೆ ವಿತರಿಸಿದೆ. ೨೦೧೦-೧೧ರ ವರ್ಷದಲ್ಲಿ ಯೋಜನೆಯು ರೂ. ೯೫೧.೦೦ ಕೋಟಿ ಪ್ರಗತಿ ನಿಧಿಯನ್ನು ೧,೧೨,೦೦೦ ಸಂಘಗಳಿಗೆ ವಿತರಿಸಿದ್ದು, ಇದೀಗ ಚಾಲ್ತಿ ಪ್ರಗತಿನಿಧಿ ಒಂದು ವರ್ಷದಲ್ಲಿ ಶೇಕಡಾ ೬೪ ರಷ್ಟು ಏರಿರುತ್ತದೆ. ದಿನಾಂಕ ೩೧-೦೩-೨೦೧೦ ರಲ್ಲಿದ್ದ ಚಾಲ್ತಿ ಪ್ರಗತಿನಿಧಿಯ ಮೊತ್ತವು ರೂ. ೬೬೨.೦೦ ಕೋಟಿಯಿಂದ ೨೦೧೦-೧೧ರ ವರ್ಷದಲ್ಲಿ ರೂ. ೧೦೨೫.೮೫ ಕೋಟಿಗೆ ಏರಿದೆ. ೩೧-೦೩-೨೦೧೧ ರಂತೆ ಸುಸ್ತಿ ಸಾಲವು ರೂ. ೧.೧೦ ಕೋಟಿ ಇದ್ದು, ಒಟ್ಟು ಚಾಲ್ತಿ ಮೊತ್ತದ ಶೇಕಡಾ ೦.೦೧% ರಷ್ಟು ಮಾತ್ರ ಸುಸ್ತಿಯಾಗಿರುವುದು ಸಂತೋಷದ ವಿಷಯವಾಗಿದೆ.[೪]

ಯೋಜನೆಯು ತನ್ನ ಬಡ್ಡಿ ದರದಲ್ಲಿ ಯಾವುದೇ ಹೆಚ್ಚಳವನ್ನು ಮಾಡದೆ ತಿಂಗಳ ಕಡಿತ ಬಡ್ಡಿ ದರ ೧೫% ದಲ್ಲಿ ಅಥವಾ ೯% ಸಮಾನ ಬಡ್ಡಿಯಲ್ಲಿ ೩ ವರ್ಷಗಳ ಅವಧಿಗೆ ಸಾಲವನ್ನು ನೀಡುತ್ತಿದೆ. ನಬಾರ್ಡ್ ಹಾಗೂ ಡಿಬಿಸಿಡಿಸಿ ಸಂಸ್ಥೆಗಳಿಂದ ಮನೆ ರಚನೆ ಹಾಗೂ ಸಣ್ಣ ಉದ್ದಿಮೆಗಳಿಗಾಗಿ ಸಬ್ಸಿಡಿ ಸಾಲಗಳನ್ನು ಪಡೆದುಕೊಂಡಿರುತ್ತದೆ. ಈ ಸಾಲಗಳನ್ನು ಸದಸ್ಯರಿಗೆ ಕಡಿಮೆ ಬಡ್ಡಿಯಲ್ಲಿ ನೀಡಲಾಗಿದೆ.

೪.೩ ಕೃಷಿ ಅಭಿವೃದ್ಧಿಗೆ ಸಹಕಾರ

ಕೃಷಿಕರ ಉದ್ಧಾರವಾಗದೆ ದೇಶದ ಪ್ರಗತಿ ಕನಸಿನ ಮಾತು. ಸಮಾಜಕ್ಕೆ ಅನ್ನ ನೀಡುವ ಉಳುವ ಯೋಗಿಯ ಪಾಲಿಗೆ ಗ್ರಾಮಾಭಿವೃದ್ಧಿ ಯೋಜನೆ ವರದಾನವಾಗಿ ಪರಿಣಮಿಸಿದೆ. ಕೃಷಿ ಅಭಿವ್ಯಾದ್ಧಿಯು ಯೋಜನೆಯ ಮುಖ್ಯ ಧ್ಯೇಯಗಳಲ್ಲಿ ಒಂದು. ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರು ಮತ್ತು ಕೃಷಿ ಕಾರ್ಮಿಕರ ಹಿತಾಸಕ್ತಿಯನ್ನು ಗಮದಲ್ಲಿರಿಸಿಕೊಂಡು ಯೋಜನೆಯು ಕಾಲದಿಂದ ಕಾಲಕ್ಕ ನಿರ್ದಿಷ್ಟ ಪ್ರದೇಶ ಮತ್ತು ಕೃಷಿ ಪದ್ದತಿಗಳಿಗೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿದೆ. ಗ್ರಾಮಾಭಿವೃದ್ಧಿ ಯೋಜನೆಯು ಪ್ರಗತಿ ಬಂಧು ಎಂಬ ಸಣ್ಣ ಕೃಷಿಕರ ಗುಂಪುಗಳ ರಚನೆ ಮಾಡಿ ಅವರೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಕ್ರಮದ ಮುಖೇನ ಗುಂಪಿನ ಸದಸ್ಯರಿಗೆ ಹಿಡುವಳಿ ಯೋಜನೆ ತಯಾರಿ, ವಿವಿಧ ತರಬೇತಿಗಳು, ತಂತ್ರಜ್ಞಾನ ಅಳವಡಿಕೆ ಹಾಗೂ ಆರ್ಥಿಕ ಸಹಾಯ ಪಡೆಯುವಲ್ಲಿ ಸಹಕಾರ ನೀಡುತ್ತಿದೆ. ಹಿಡುವಳಿ ಯೋಜನೆಯಲ್ಲಿ ಮುಖ್ಯವಾಗಿ ಮಿಶ್ರ ಕೃಷಿಗೆ ಆದ್ಯತೆ ನೀಡಿ, ಸದಸ್ಯರಿಗೆ ನಿರಂತರ ಆದಾಯ ಪಡೆಯುವಲ್ಲಿ ಪ್ರಾಮುಖ್ಯತೆ ನೀಡುತ್ತಿದೆ. ಕೃಷಿಕರೊಂದಿಗೆ ಕಾರ್ಯನಿರ್ವಹಿಸಲು ಮತ್ತು ಕೃಷಿ ಚಟುವಟಿಕೆಗಳಲ್ಲಿ ಅವರೊಂದಿಗೆ ನೆರವಾಗಲು ತರಬೇತಿ ಪಡೆದ ಕೃಷಿ ಮೇಲ್ವಿಚಾರಕರು ಮತ್ತು ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ಕೃಷಿ ಚಟುವಟಿಕೆಗಳಿಗೆ ನೆರವಾಗುವಂತೆ ೩,೨೬೦ ಬಾವಿ, ಬೋರ್‌ವೆಲ್‌ಗಳನ್ನು ರಚಿಸಲಾಗಿದ್ದು, ೬,೬೮೮ ಪಂಪ್‌ಸೆಟ್‌ಗಳನ್ನು ಮತ್ತು ಆಧುನಿಕ ನೀರಾವರಿ ವಿಧಾನಗಳನ್ನು ಅಳವಡಿಸಲಾಗಿದೆ. ಇದರ ಜೊತೆಗೆ ೪೧೦ ಟಿಲ್ಲರ್‌ಗಳು, ೬೦೧ ಯಂತ್ರಗಳನ್ನು ಖರೀದಿಸಲಾಗಿದೆ. ಯೋಜನೆಯ ನೆರವಿನಿಂದ ಒಟ್ಟು ೫,೬೮,೧೬೦ ಎಕ್ರೆ ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಮಾಡಲಾಗಿದೆ.[೫]

ಭತ್ತದ ಕೃಷಿಯ ಆಧುನಿಕ ವಿಧಾನಕ್ರಮಗಳಲ್ಲಿ ಶ್ರೀಪದ್ದತಿ ಸಹ ಒಂದು. ಇತ್ತೀಚಿನ ದಿನಗಳಲ್ಲಿ ಇದು ಅತ್ಯಧಿಕ ಇಳುವರಿ ನೀಡುವ ಕೃಷಿಪದ್ದತಿಯಾಗಿದೆ. ಯೋಜನೆಯು ಶ್ರೀ ಪದ್ಧತಿಯನ್ನು ಪ್ರಚಲಿತಪಡಿಸಲು ಹಾಗೂ ರೈತ ವರ್ಗವು ಮತ್ತೆ ಭತ್ತದ ಬೇಸಾಯವನ್ನು ಕೈಗೊಳ್ಳುವಂತೆ ಪ್ರೇರೇಪಿಸಲು 'ಶ್ರೀ ಪದ್ಧತಿ' ಬೇಸಾಯವನ್ನು ನಬಾರ್ಡ್ ಸಂಸ್ಥೆಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸಿದೆ. ಈ ಕಾರ್ಯಕ್ರಮದಡಿಯಲ್ಲಿ ೨೦೧೦-೧೧ರ ಆರ್ಥಿಕ ವರ್ಷದಲ್ಲಿ ೯,೪೫೩ ಕೃಷಿಕರು ೧೨೭೮೩ ಎಕ್ರೆ ಪ್ರದೇಶದಲ್ಲಿ ಶ್ರೀ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ರೂ. ೭.೬೬ ಕೋಟಿ ಸಾಲವನ್ನು ಕೃಷಿ ಉಪಕರಣಗಳನ್ನು ಖರೀದಿಸಲು ಮತ್ತು ಭತ್ತದ ಬೆಳೆ ಬೆಳೆಸಲು ನೀಡಲಾಗಿದೆ.[೬] ಈ ಕಾರ್ಯಕ್ರಮವು ಶ್ರೀ ಪದ್ಧತಿಯ ಮಹತ್ವ ಮತ್ತು ಭತ್ತದ ಕೃಷಿಯ ಬಗ್ಗೆ ಅರಿವು ಮೂಡಿಸಲು ಸಹಕಾರಿಯಾಗಿದೆ.

೪.೪ ಕೃಷಿ ಮಾಹಿತಿ ಮತ್ತು ತರಬೇತಿಗಳ ಸಂಘಟನೆ

ಗ್ರಾಮಾಭಿವೃದ್ಧಿ ಯೋಜನೆಯು ಗ್ರಾಮವಾಸಿ ಕೃಷಿಕರಿಗೆ ಸನಿಹದಲ್ಲೇ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುತ್ತಿದೆ. ಆಯಾ ಕ್ಷೇತ್ರದಲ್ಲಿನ ಪರಿಣತರ ಮೂಲಕ ಆಧುನಿಕ ವಿಧಾನಕ್ರಮಗಳ ಕುರಿತು ಅಗತ್ಯ ಮಾಹಿತಿ, ಮಾರ್ಗದರ್ಶನ ನೀಡಲಾಗುತ್ತದೆ. ಹೊಸ ಕೃಷಿ ವಿಧಾನ, ಕೃಷಿ ಕ್ಷೇತ್ರದ ಸುಧಾರಿತ ತಂತ್ರಜ್ಞಾನ, ನೂತನ ಸಂಶೋಧನೆಗಳ ಬಗೆಗೆ ಸಕಾಲಿಕ ಮಾಹಿತಿ ಯೋಜನೆಯ ಕೃಷಿ ಅಧಿಕಾರಿಗಳ ಮೂಲಕ ಪ್ರಾಪ್ತವಾಗುತ್ತದೆ. ಅಲ್ಲದೆ ರೈತರಿಗಾಗಿ ಅಧ್ಯಯನ ಪ್ರವಾಸಗಳನ್ನು ಏರ್ಪಡಿಸಿ, ಪ್ರಗತಿಪರ ಕೃಷಿ ಕ್ಷೇತ್ರಗಳಿಗೆ ಕರೆದೊಯ್ದು ಅನುಭವದ ಭಂಡಾರವನ್ನು ತುಂಬಿಸುವ ಯಶಸ್ವಿ ಪ್ರಯತ್ನಗಳೂ ನಡೆಯುತ್ತವೆ.

ಅದರೊಂದಿಗೆ ರೈತರ ಜ್ಞಾನವಾಹಿನಿಯ ಹರವನ್ನು ಸಮೃದ್ಧಗೊಳಿಸಲು ಬೇಕಾದ ತರಬೇತಿಗಳು, ಪ್ರಾತ್ಯಕ್ಷಿಕೆಗಳು, ವಿಚಾರ ಗೋಷ್ಠಿಗಳೂ ಅಲ್ಲಲ್ಲಿ ಜರುಗುತ್ತವೆ. ಕೃಷಿ ವಿಸ್ತರಣಾ ಕಾರ್ಯಕ್ರಮಗಳಿಗಾಗಿ ಗ್ರಾಮಾಭಿವೃದ್ಧಿ ಯೋಜನೆಗೆ ಕೇಂದ್ರ ಸರಕಾರದ ಕೃಷಿ ಇಲಾಖೆ ವಾರ್ಷಿಕ ಐದು ಲಕ್ಷ ರೂಪಾಯಿ ಅನುದಾನವನ್ನು ಒದಗಿಸುತ್ತಿದೆ. ವಿವಿಧ ಮಾದರಿಯ ಅಧ್ಯಯನ ಪ್ರವಾಸಗಳ ಪರಿಣಾಮವಾಗಿ ರೈತರು ಜಲಾನಯನ ಅಭಿವೃದ್ಧಿ, ಗೇರು ತೋಟದಲ್ಲಿ ನೀರಿಂಗಿಸುವುದು, ಬರಡು ಕೊಳವೆ ಬಾವಿಗೆ ಜಲ ಮರುಪೂರಣ, ನೀರಿನ ಉಳಿತಾಯಕ್ಕೆ ಹನಿ ನೀರಾವರಿ ಬಳಕೆ ಇತ್ಯಾದಿ ಮಹತ್ವದ ಅಂಶಗಳನ್ನು ತಿಳಿದುಕೊಂಡು ಅಳವಡಿಸಿಕೊಳ್ಳಲು ಅವಕಾಶವಿದೆ.

ಕೃಷಿಯಲ್ಲಿ ಆಧುನಿಕ ವಿಧಾನಕ್ರಮಗಳನ್ನು ಅಳವಡಿಸುವ ಗುರಿಯನ್ನು ಹೊಂದಿರುವ ಗ್ರಾಮಾಭಿವೃದ್ಧಿ ಯೋಜನೆಯು ಸಣ್ಣ ಮತ್ತು ಮಧ್ಯಮ ಪ್ರಮಾಣದ ರೈತರಿಗೆ ವಿಭಿನ್ನ ಮಾದರಿಯ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತ ಬಂದಿವೆ. ರೈತಾಪಿವರ್ಗ ತಮ್ಮ ಕೃಷಿಪರ ಚಟುವಟಿಕೆಗಳಲ್ಲಿ ಹೊಸತನವನ್ನು ಕಾಯ್ದುಕೊಳ್ಳುವ ಹಿನ್ನೆಲೆಯಲ್ಲಿ ಈ ತರಬೇತಿ ಕಾರ್ಯಕ್ರಮಗಳು ನಿರ್ಣಾಯಕವೆನಿಸಿವೆ. ಪ್ರತಿ ವರ್ಷ ಕೃಷಿಕರ ಸಾಮರ್ಥ್ಯಾಭಿವೃದ್ಧಿಗಾಗಿ ತರಬೇತಿಗಳ ಮುಖೇನ ಹಣ ವಿನಿಯೋಗಿಸಲಾಗುತ್ತಿದೆ. ಸರಕಾರ, ಇಲಾಖೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಕೃಷಿ ವಿಜ್ಞಾನ ಕೇಂದ್ರದ ಸಹಕಾರದೊಂದಿಗೆ ಸದಸ್ಯರಿಗೆ ವಿವಿಧ ತರಬೇತಿಗಳನ್ನು, ಕ್ಷೇತ್ರ ಸಂದರ್ಶನವನ್ನೂ ನೀಡಲಾಗುತ್ತಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ೧,೭೮,೦೦೦ ಕೃಷಿಕರಿಗೆ ೩,೯೧೯ ತರಬೇತಿಗಳನ್ನು ಆಯೋಜಿಸಲಾಗಿದೆ. ಇದರೊಂದಿಗೆ ೧೪,೩೩೮ ಸದಸ್ಯರಿಗೆ ೨೭೦ ಕ್ಷೇತ್ರ ಸಂದರ್ಶನವನ್ನು ನಡೆಸಲಾಗಿದೆ.[೭]

ಕನಿಷ್ಠ ವಿದ್ಯಾಭ್ಯಾಸವುಳ್ಳ ರೈತರನ್ನೂ ಕೂಡ ವಿಚಕ್ಷಣನನ್ನಾಗಿ ಪರಿವರ್ತಿಸುವಲ್ಲಿ ಯೋಜನೆಯ ಮಾಹಿತಿ ಕಾರ್ಯಕ್ರಮಗಳು ಸಫಲವಾಗಿದೆ. ಕರಾವಳಿಯ ರೈತರು ವಿಶೇಷ ಅಧ್ಯಯನಕ್ಕಾಗಿ ದೆಹಲಿ – ಹರಿಯಾಣ ಮೊದಲಾದೆಡೆಗಳಿಗೆ ಹೋಗಿ ಸೃಷಿಪರ ಸರಳ ವಿಧನಕ್ರಮಗಳನ್ನು ಅರಿತು ಬಂದಿದ್ದಾರೆ. ಅದನ್ನು ಸ್ಥಳಿಯರಿಗೂ ಧಾರೆಯೆರೆಯುವ ಪ್ರಾಯೋಗಿಕ ಪ್ರಯತ್ನ ನಡೆಸಿದ್ದಾರೆ. ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತರಬೇತಿ ಕಾರ್ಯಕ್ರಮಗಳಿಗೆ ಜನಪ್ರತಿನಿಧಿಗಳು, ಎಲ್ಲ ಇಲಾಖೆಗಳು ಉತ್ತಮ ಸಹಕಾರ ನೀಡಿ ಯೋಜನೆಯ ಯಶಸ್ಸಿನಲ್ಲಿ ತಮ್ಮ ಪಾಲನ್ನು ಪಡೆದಿದ್ದಾರೆ.

೪.೫ ಕೃಷಿ ಮೇಳಗಳ ಸಂಘಟನೆ:

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಫಲಾನುಭವಿಗಳ ಮನಸ್ಸುಗಳನ್ನು ಗ್ರಾಮೀಣ ಅಭಿವೃದ್ಧಿಯತ್ತ ಸರ್ವಾಂಗೀಣವಾಗಿ ತೊಡಗಿಸುವಲ್ಲಿ ಶ್ರೀ ಹೆಗ್ಗಡೆಯವರು ಪರಿಕಲ್ಪಿಸಿಕೊಂಡ ಒಂದು ಯಶಸ್ವಿ ಪ್ರಯೋಗ ಕೃಷಿಮೇಳ. ೬೦ರ ದಶಕದಿಂದೀಚೆಗೆ ಧರ್ಮಸ್ಥಳ ಲಕ್ಷದೀಪದ ಸಂದರ್ಭದಲ್ಲಿ ಕೃಷಿಕರನ್ನು ಉದ್ದೇಶಿಸಿ ಕೃಷಿ, ತಾಂತ್ರಿಕ ಪ್ರದರ್ಶನಗಳನ್ನು ನಡೆಸಿಕೊಂಡು ಬರಲಾಗುತ್ತಿತ್ತು. ಈ ಕೃಷಿಕೇಂದ್ರಿತ ಕಾರ್ಯಕ್ರಮಗಳು ಗ್ರಾಮಸ್ಥರ ಮೇಲೆ ಹೆಚ್ಚು ಪರಿಣಾಮಕಾರಿಯಾದ ಪ್ರಭಾವ ಬೀರುವ ಸಲುವಾಗಿ ಒಂದು ಬಗೆಯ ವಿಕೇಂದ್ರಿಕರಣ ವ್ಯವಸ್ಥೆಯ ರೂಪದಲ್ಲಿ ೧೯೮೦ರಿಂದೀಚೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಮೇಳವನ್ನು ಸಂಘಟಿಸಿಕೊಂಡು ಬರಲಾಗುತ್ತಿದೆ.

ಕೃಷಿ ಮೇಳಗಳನ್ನು ಹಳ್ಳಿಗಳಲ್ಲಿ ನಡೆಸುವುದರಿಂದ ಫಲಾನುಭವಿಗಳು ಹಾಗೂ ಗ್ರಾಮೀಣ ಜನಸಮೂಹ ದೊಡ್ಡ ಸಂಖ್ಯೆಯಲ್ಲಿ ಪಾಲುಗೊಳ್ಳಲು ಅನುಕೂಲವಾಯಿತು. ಈ ಮೇಳಗಳನ್ನು ಆಯಾ ಗ್ರಾಮದ ಜನರೇ ಅತ್ಯಂತ ಉತ್ಸಾಹ ಹಾಗೂ ಸಂಭ್ರಮಗಳಿಂದ ಸಂಯೋಜಿಸುತ್ತಾರೆ. ಈ ಬೃಹತ್ ಸಮಾರಂಭದ ಚಪ್ಪರದ ವೇದಿಕೆಯ ವಿನ್ಯಾಸದಿಂದ ತೊಡಗಿ ಊಟ, ಉಪಚಾರ, ಉಪನ್ಯಾಸ, ವಿಚಾರ ಸಂಕಿರಣ, ಸದಸ್ಯರ ನಡುವಣ ಅನುಭವಗಳ ವಿನಿಮಯ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಚಟುವಟಿಕೆಗಳು, ಗ್ರಾಮೀಣ ಆಟೋಟಗಳ ಪ್ರದರ್ಶನ ಮತ್ತು ಸ್ಪರ್ಧೆ, ವಸ್ತುಪ್ರದರ್ಶನ, ಸ್ಥಳದಲ್ಲೇ ಗ್ರಾಮೀಣ ಅವಶ್ಯಕತೆಗಳಾದ ಗೊರಬು ಹೆಣೆಯುವ, ಅಕ್ಕಿ ಮುಡಿಕಟ್ಟುವ, ಬುಟ್ಟಿ, ಹೆಡಿಗೆಗಳ ನಿರ್ಮಾಣ ಹಾಗೂ ಸ್ಪರ್ಧೆ ಎಲ್ಲವನ್ನೂ ಊರವರೇ ಸಂಘಟಿಸಿ ನಡೆಸುತ್ತಾರೆ. ಇಲ್ಲಿನ ಎಲ್ಲಾ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಯುವಕ, ಯುವತಿಯರ ನಡುವೆ ಒಂದು ಆರೋಗ್ಯಕರ ಸ್ಪರ್ಧೆ ಇದ್ದಂತೆ ಕಾಣುತ್ತದೆ. ಹೀಗಾಗಿ ಒಂದು ಕೃಷಿ ಮೇಳಕ್ಕಿಂತ ಮುಂದಿನ ವರ್ಷ ಜರುಗುವ ಇನ್ನೊಂದು ಮೇಳ ಭಿನ್ನವಾಗಿರುತ್ತದೆ. ಮೇಳದ ಸಂದರ್ಭದಲ್ಲಿ ಊಟ, ಉಪಚಾರಕ್ಕೆ ಬೇಕಾಗುವ ದಿನಸಿ, ಅಕ್ಕಿ, ತೆಂಗಿನಕಾಯಿಗಳನ್ನು ಅಂಗಡಿಯಿಂದ ದುಡ್ಡುಕೊಟ್ಟು

ತರುವುದಕ್ಕಿಂತ ಹೆಚ್ಚಾಗಿ ಹಳ್ಳಿಗರೇ ಮನೆ ಮನೆ ತೆರಳಿ ಸಂಗ್ರಹಿಸುತ್ತಾರೆ. ಆ ಮೂಲಕ ಇಡಿಯ ಗ್ರಾಮವನ್ನೇ ಈ ಮೇಳದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತಾರೆ. ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕರು ಇವರ ಜತೆಗಿದ್ದು ಪ್ರತಿ ಹಂತದಲ್ಲೂ ಮಾರ್ಗದರ್ಶನ ಮಾಡುತ್ತಿರುತ್ತಾರೆ. ಕೃಷಿ ಮತ್ತು ಇತರ ಕರಕೌಶಲ ಉತ್ಪನ್ನಗಳ ಕೃಷಿ ಸಲಕರಣೆಗಳ, ಗೊಬ್ಬರ, ಕ್ರಿಮಿನಾಶಕ, ಬೆಳೆರಕ್ಷಣೆ ತಂತ್ರ ಮುಂತಾದವುಗಳ ಪ್ರದರ್ಶನವನ್ನು ಅಲ್ಲಿ ಏರ್ಪಡಿಸಲಾಗುತ್ತದೆ.

ಕೃಷಿ ಮೇಳದಲ್ಲಿ ಕೃಷಿಕರು ಮಾತ್ರ ಪಾಲ್ಗೊಳ್ಳುತ್ತಿಲ್ಲ. ಗ್ರಾಮೀಣಾಭಿವೃದ್ಧಿ ಯೋಜನೆಯ ಕಾರ್ಯಕರ್ತರು, ಸರಕಾರಿ ಅಧಿಕಾರಿಗಳು, ಪಶುವೈದ್ಯರು, ಕೃಷಿ ಅಭಿವೃದ್ಧಿ ವಿಭಾಗದ ಅಧಿಕಾರಿಗಳು, ಬ್ಯಾಂಕು ಅಧಿಕಾರಿಗಳು, ವಿಮಾ ಅಧಿಕಾರಿಗಳು, ರೆವೆನ್ಯೂ ಅಧಿಕಾರಿಗಳು, ತೋಟಗಾರಿಕೆ, ಹೈನುಗಾರಿಕೆ, ರೇಶ್ಮೆ ಇಲಾಖೆಗಳ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು, ಖಾದಿ ಮತ್ತು ಗ್ರಾಮೋದ್ಯೋಗದ ಅಧಿಕಾರಿಗಳು – ಇವರ ಜತೆ ಗ್ರಾಮೀಣ ಫಲಾನುಭವಿಗಳನ್ನು ಮುಖಾಮುಖಿ ಮಾಡಿ ಚರ್ಚೆ, ವಿಚಾರಸಂಕಿರಣಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲಾಗುವುದು. ಇದರಿಂದ ಇಬ್ಬರಿಗೂ ಅನುಕೂಲವಾಗುತ್ತದೆ.

ಹಳ್ಳಿಯ ಜನರ ಸಾಂಸ್ಕೃತಿಕ ಪ್ರತಿಭೆಯನ್ನು ಪ್ರದರ್ಶಿಸಲು ಅನುಕೂಲ ಮಾಡಿಕೊಡುವ ಮೂಲಕ ಸಂಜೆ – ರಾತ್ರಿಯಲ್ಲಿ ಯಕ್ಷಗಾನ, ನಾಟಕ, ಒಗಟು ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು. ದಿನದ ವಿವಿಧ ಕಾರ್ಯಕ್ರಮಗಳ ನಡುವೆ ಗ್ರಾಮೀಣ ಮಹಿಳೆಯರು, ಜನಪದ ಗೀತೆಗಳು, ಪಾಡ್ದನಗಳನ್ನು ಪ್ರಸ್ತುತ ಪಡಿಸುತ್ತಿರುವುದು ಮರೆಯಾಗುತ್ತಿರುವ ನಮ್ಮ ಸಾಂಸ್ಕೃತಿಕ ಬೇರುಗಳನ್ನು ಪುನರುಜ್ಜೀವಿಸಲು ಅನುವು ಮಾಡಿಕೊಡುತ್ತದೆ. ಗ್ರಾಮೀಣ ಕರಕುಶಲಿಗಳಿಂದ ಕಲಾತ್ಮಕ ಮರದ ವಸ್ತು, ಕೆತ್ತನೆ, ಕುಂಭಕಲೆ, ಬಿದಿರಿನಿಂದ ಮಾಡಿದ ವಿವಿಧ ಕಲಾತ್ಮಕ ವಸ್ತುಗಳು, ತೆಂಗಿನ ನಾರಿನ ಕರಕುಶಲ ವಸ್ತುಗಳ ತಯಾರಿ ಮುಂತಾದವುಗಳ ಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನ ಎಲ್ಲಾ ಕೃಷಿ ಮೇಳಗಳಲ್ಲಿ ಆಯೋಜಿಸಲಾಗುತ್ತದೆ. ಪ್ರಾತ್ಯಕ್ಷಿಕೆಗಳಲ್ಲಿ ನೆಲಜಲ ಸಂರಕ್ಷಣಾ ಕಿರುಮಾದರಿಗಳು, ಮಾದರಿ ಮನೆ, ಅಡುಗೆ ಮನೆ, ಬಚ್ಚಲು, ಶೌಚಾಲಯಗಳ ಮಾದರಿಗಳನ್ನು ಪ್ರದರ್ಶಿಸಲಾಗುತ್ತದೆ. ಕೃಷಿತಂತ್ರಜ್ಞಾನದ ಪ್ರಾತ್ಯಕ್ಷಿಕೆಗಳು ಕೃಷಿಮೇಳದ ಮುಖ್ಯ ಆಕರ್ಷಣೆಯಾಗಿದೆ. ಸಸ್ಯಸಂವರ್ಧನೆಯ ವಿಧಾನಗಳು, ಕಸಿ ಕಟ್ಟುವ ವಿಧಾನ, ಬತ್ತ, ಅಡಿಕೆ, ಸಸಿಗಳ ಮಡಿ ತಯಾರಿಕೆ, ನೀರಾವರಿಯ ಸುಲಭ ವಿಧಾನಗಳು, ಪರ್ಯಾಯಶಕ್ತಿಮೂಲಗಳ ಬಳಕೆಯ ವಿಧಾನಗಳು (ಬಯೋಗ್ಯಾಸ್, ಸೌರಶಕ್ತಿ ಇತ್ಯಾದಿ) ಮುಂತಾದವುಗಳನ್ನು ಗ್ರಾಮೀಣ ಜನರು ತುಂಬ ಆಸಕ್ತಿಯಿಂದ ವೀಕ್ಷಿಸಬಯಸುತ್ತಾರೆ.

೪.೬ ಮಹಿಳಾ ಸಬಲೀಕರಣಕ್ಕಾಗಿ ಜ್ಞಾನವಿಕಾಸ

ಗ್ರಾಮಾಭಿವೃದ್ಧಿ ಯೋಜನೆ ಪುರುಷರ ಸಲುವಾಗಿ ವಿವಿಧ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಸಾಫಲ್ಯ ಪಡೆಯಿತು. ಡಾ. ಹೆಗ್ಗಡೆಯವರು ಕೈಗೊಳ್ಳುವ ಪ್ರತಿಯೊಂದು ಜನೋಪಯೋಗಿ ಕಾರ್ಯಕ್ರಮಗಳ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದ ಶ್ರೀಮತಿ ಹೇಮಾವತಿ ಹೆಗ್ಗಡೆಯವರು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಚಿಂತನೆ ನಡೆಸಿದರು. ಗ್ರಾಮೀಣ ಮಹಿಳೆಯರಿಗೆ ದುರಭ್ಯಾಸ ಇರಲಿಲ್ಲ. ಆದರೆ ಬಹುತೇಕರು ಅಕ್ಷರ ವಂಚಿತರು. ಅಡುಗೆ ಕೆಲಸ, ಕೃಷಿ ಕೆಲಸದ ಜತೆಗೆ ಬೀಡಿ ಕಟ್ಟಿ ಬದುಕುವುದು ಬಿಟ್ಟರೆ ಬಾಹ್ಯ ಪ್ರಪಂಚದ ಆಗುಹೋಗುಗಳ ಪರಿಚಯ ಅವರಿಗಿರಲಿಲ್ಲ.

೧೯೯೩ರಲ್ಲಿ ಗ್ರಾಮೀಣ ಮಹಿಳೆಯರ ಬದುಕಿನ ನೆಮ್ಮದಿಗಾಗಿ ಜ್ಞಾನವಿಕಾಸ ಯೋಜನೆ ರೂಪ ಪಡೆಯಿತು. ಕೆಲವು ಮಹಿಳೆಯರು ಆ ವೇಳೆಗಾಗಲೇ ರಾತ್ರಿ ಶಾಲೆಗಳಲ್ಲಿ ಓದುಬರಹ ಕಲಿತಿದ್ದರು. ಸರಕಾರ ಇಂತಹ ಶಾಲೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಪೂರ್ಣ ಪ್ರಮಾಣದ ಯಶಸ್ಸು ಕಂಡಿರಲಿಲ್ಲ. ಅವರಲ್ಲಿರುವ ಕಲಿಕೆಯ ಉತ್ಸಾಹ ಬತ್ತಬಾರದು. ಅಕ್ಷರಾಭ್ಯಾಸ ಅರ್ಧದಲ್ಲಿಯೇ ನಿಲ್ಲದೆ ಮುಂದುವರೆಯಬೇಕೆಂಬ ಆಕಾಂಕ್ಷೆಯಿಂದ ಜ್ಞಾನವಿಕಾಸ ಯೋಜನೆಯ ಅಡಿಯಲ್ಲಿ ಗ್ರಾಮಗಳ ಎಲ್ಲ ಮನೆಗಳ ಮಹಿಳೆಯರಿಗೂ ಅಕ್ಷರ ಕಲಿಸುವ ಕಾರ್ಯಕ್ರಮ ಆರಂಭವಾಯಿತು. ಈ ಪ್ರಯತ್ನದ ಮುಂದುವರಿದ ಭಾಗವಾಗಿ ಪೌಷ್ಟಿಕ ಆಹಾರಗಳ ಬಗ್ಗೆ ತಿಳವಳಿಕೆ ಮೂಡಿಸುವುದು, ಭಾರತೀಯ ಸಂಸ್ಕೃತಿಯ ಪ್ರತೀಕವಾದ ರಂಗೋಲಿ ಬಿಡಿಸುವ ತರಬೇತಿಯೂ ನಡೆಯಿತು. ಶುಚಿತ್ವದ ಪಾಲನೆಗೆ ಒತ್ತು ನೀಡಲಾಯಿತು. ಕೈತೋಟದಲ್ಲಿ ತರಕಾರಿ, ಹೂ ಬೆಳೆಸಲು ಮಾಹಿತಿ ಮತ್ತು ತರಬೇತಿ ನೀಡಲಾಯಿತು. ಹೀಗೆ ಈ ಕಾರ್ಯಕ್ರಮವು ಮಹಿಳೆಗೆ ಅನೌಪಚಾರಿಕ ಶಿಕ್ಷಣ ನೀಡಿ ಜೀವನ ನಡೆಸಲು, ಸ್ವಂತ ಉದ್ಯೋಗದ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು, ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಸಾಧಿಸಲು ನೆರವಾಗಿದೆ.

ಜ್ಞಾನವಿಕಾಸ ಕಾರ್ಯಕ್ರಮ ಹೆಚ್ಚಾಗಿ ಗ್ರಾಮದ ಅಂಗನವಾಡಿಗಳಲ್ಲಿ ವಾರದಲ್ಲಿ ಒಂದು ದಿನ ನಡೆಯುತ್ತಿತ್ತು. ಒಬ್ಬರೇ ಸಂಯೋಜಕಿ ಐದು ಕೇಂದ್ರಗಳನ್ನು ನಿರ್ವಹಿಸುತ್ತಿದ್ದರು. ಪ್ರತೀ ಕೇಂದ್ರದಲ್ಲೂ ೪೦-೫೦ ಗ್ರಾಮೀಣ ಮಹಿಳೆಯರು ಒಟ್ಟಾಗಿ ಸೇರಿ ಬದುಕಿನಲ್ಲಿ ಹೊಸತನದ ಪರಿಕಲ್ಪನೆಯನ್ನು ಸಾಕಾರಗೊಳಿಸುವಂತಾಯಿತು. ಮಹಿಳೆಯರು ಉತ್ತಮ ರೀತಿಯಲ್ಲಿ ಮನೆ ನಡೆಸುವ ಕ್ರಮದ ತಿಳವಳಿಕೆ ನೀಡುವ ಗೃಹಾಡಳಿತ ಪಾಠವನ್ನು ಜ್ಞಾನವಿಕಾಸ ಕೇಂದ್ರದಿಂದ ಪಡೆದರು. ವಾರಕ್ಕೊಮ್ಮೆ ಎರಡೂವರೆ ತಾಸು ಸೇರುವ ಅವಕಾಶದಲ್ಲೂ ಹಾಡು, ನೃತ್ಯ, ಕಸೂತಿ ಮುಂತಾದ ಪ್ರತಿಭಾ ಪ್ರದರ್ಶನಗಳಿಗೆ ಅದು ವೇದಿಕೆಯಾಯಿತು. ಮಕ್ಕಳ ವಿದ್ಯಾಭ್ಯಾಸದ ಗುರುತರ ಹೊಣೆಯನ್ನು ಪ್ರಚೋದಿಸಿತು. ಅದರೊಂದಿಗೆ

ಮಹಿಳೆಯರು ಸಹ ಉಳಿತಾಯ ಮಾಡಿ ಬ್ಯಾಂಕ್‌ನಲ್ಲಿ ಖಾತೆ ತೆರೆಯುವ ಮಹತ್ವದ ಕಾರ್ಯಕ್ರಮಕ್ಕೂ ನಾಂದಿಯಾಯಿತು. ಮಹಿಳಾ ಸಬಲೀಕರಣದ ಈ ಪ್ರಮುಖ ಯೋಜನೆಗೂ ಮೂಲನಿಧಿ ಒದಗಿಸಿ, ತಮ್ಮ ಅವಶ್ಯಗಳಿಗೆ ಅದರ ಸಾಲ ಪಡೆದು ಅಭಿವೃದ್ಧಿ ಹೊಂದಲು ಮತ್ತು ಸ್ವ ಉದ್ಯೋಗಕ್ಕೆ ಬಂಡವಾಳ ಪಡೆಯಲು ಅದು ಹೆಬ್ಬಾಗಿಲನ್ನೇ ತೆರೆಯಿತು.

ವಾರದಲ್ಲಿ ಒಂದು ದಿನ, ನಿಗದಿತ ಸ್ಥಳದಲ್ಲಿ ಎರಡು ತಾಸು ಸಭೆ ನಡೆಯುತ್ತದೆ. ಸ್ವಚ್ಛತೆ, ರಂಗೋಲಿ, ಅಧ್ಯಕ್ಷರ ಆಯ್ಕೆ, ಭಕ್ತಿಗೀತೆ ಗಾಯನ, ಹಾಜರಾತಿ, ಕಳೆದ ವಾರ ಗೈರು ಹಾಜರಾಗಿದ್ದರೆ ಕಾರಣದ ವಿಶ್ಲೇಷಣೆ, ಹಿಂದಿನ ವಾರದ ಮಾಹಿತಿಯ ಚಿಕ್ಕ ಅವಲೋಕನ ಎಲ್ಲವೂ ಕ್ರಮವತ್ತಾಗಿ ನಡೆಯುತ್ತದೆ. 'ನಿರಂತರ ಪ್ರಗತಿ' ಮಾಸಪತ್ರಿಕೆಯಲ್ಲಿ ಪ್ರಕಟವಾಗುವ ಶ್ರೀಮತಿ ಹೇಮಾವತಿ ಹೆಗ್ಗಡೆಯವರ 'ಗೆಳತಿ' ಅಂಕಣವನ್ನು ಎಲ್ಲರೂ ಓದಿ ಶ್ರದ್ಧೆಯಿಂದ ಸಂದೇಶವನ್ನೂ, ಸ್ಫೂರ್ತಿಯನ್ನು ಪಡೆಯುತ್ತಾರೆ. ಬಳಿಕ ಅಂದಿನ ಹೊಸ ಮಾಹಿತಿ ಕೊಡಲಾಗುತ್ತದೆ. ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮವಿರುತ್ತದೆ. ಕೊನೆಗೆ ಉಳಿತಾಯ ಸಂಗ್ರಹ, ಸಾಲ ಮರುಪಾವತಿ, ಅಧ್ಯಕ್ಷರ ಅನಿಸಿಕೆ, ವಂದನಾರ್ಪಣೆ ಬಳಿಕ ರಾಷ್ಟ್ರಗೀತೆ ಹಾಡಲಾಗುತ್ತದೆ.

ಮಹಿಳೆಯರಿಗೆ ನೀತಿಕತೆ, ಪಥ್ಯ ವಿಷಯಗಳನ್ನು ಬೋಧಿಸಿ ಅವರ ತಿಳಿವನ್ನು ವಿಸ್ತರಿಸಿದ್ದು ಕೂಡ ಜ್ಞಾನವಿಕಾಸ ಯೋಜನೆ ಕೈಗೊಂಡ ಮಹತ್ವದ ಪ್ರಯತ್ನವಾಗಿದೆ. ಬೇರೆ ಬೇರೆ ಇಲಾಖೆಗಳ ಮುಖ್ಯಸ್ಥರಿಂದ ಉಪಯುಕ್ತ ಮಾಹಿತಿ ನೀಡುವುದರ ಜೊತೆಗೆ ಅಧ್ಯಯನ ಪ್ರವಾಸಗಳ ಮೂಲಕ ಆರಕ್ಷಕ ಠಾಣೆ., ನ್ಯಾಯಾಲಯಗಳೇ ಮೊದಲಾದ ಕಚೇರಿಗಳನ್ನು ಹತ್ತಿರದಿಂದ ನೋಡಿ ತಿಳಿಯಲು ಅವಕಾಶ ಕಲ್ಪಿಸಲಾಯಿತು. ಶೇಕಡಾ ೬೦ ಪಾಲು ಹಳ್ಳಿಯ ಮಹಿಳೆಯರಿಗೆ ಸಮುದ್ರ ಎಂಬುದರ ಕಲ್ಪನೆಯೆ ಇರಲಿಲ್ಲ. ಮೊದಲು ಬಾರಿಗೆ ಅಧ್ಯಯನ ಪ್ರವಾಸದ ಮೂಲಕ ಮಂಗಳೂರು, ಅದರೊಂದಿಗೆ ಸಮುದ್ರವನ್ನು ನೋಡಿ ತಿಳಿಯಲು ಅವಕಾಶ ಪಡೆದದ್ದು ಜ್ಞಾನವಿಕಾಸ ಕೇಂದ್ರದ ನೆರವಿನಿಂದಲೇ.

ಈ ಮೂಲಕ ಸ್ವಉದ್ಯೋಗದಿಂದ ಕೈತುಂಬ ಗಳಿಸಿ ಸುಖೀ ಜೀವನ ನಡೆಸುತ್ತಿರುವುದಲ್ಲದೆ ಊರಿನ ಅಭಿವೃದ್ಧಿಯಲ್ಲೂ ಜ್ಞಾನವಿಕಾಸ ಕೇಂದ್ರಗಳ ಸಕ್ರಿಯ ಪಾಲುಗೊಳ್ಳುವಿಕೆಗೆ ಪ್ರಾಧಾನ್ಯ ಲಭಿಸಿದೆ. ಪರಿಸರ ಸಂರಕ್ಷಣೆಗಾಗಿ ಗಿಡ ನೆಡುವುದು, ಅದನ್ನು ಪೋಷಿಸುವುದು, ನೀರಿಂಗಿಸುವಿಕೆ, ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಗ್ರಾಮೀಣ ಮಹಿಳೆಯರು ಪ್ರಧಾನವಾಗಿ ಭಾಗವಹಿಸುವುದು ಮೊದಲಾದುವು ಈ ಮೂಲಕ ಸಾಧ್ಯವಾಗಿದೆ.

ಮಹಿಳೆಯರೇ ಸೇರುವುದರಿಂದ ಅಂಜಿಕೆ, ಅಳುಕಿಲ್ಲದೆ ತಮ್ಮ ಕಷ್ಟ ಸುಖ ಹಂಚಿಕೊಳ್ಳಲು ಇದೊಂದು ವೇದಿಕೆ. ಸಂಘಟನೆಯಿಂದ ಶಕ್ತಿಯ ಅನುಭವ. ರಂಗೋಲಿಯ ಕಲೆ, ಶಿಸ್ತು, ಸಮಯಪಾಲನೆ, ನೀತಿಕಥೆಗಳು, ಶ್ರಮದಾನ, ಮಹಾಭಾರತ ರಾಮಾಯಣ ಕಥೆಗಳು, ಇಲಾಖಾಧಿಕಾರಿಗಳೊಂದಿಗೆ

ಮುಖಾಮುಖಿ, ಕುಣಿತ ಭಜನೆ, ಶಿಕ್ಷಣದ ಪ್ರಾಮುಖ್ಯ, ದುಶ್ಚಟಗಳ ವಿರುದ್ಧ ಜನಜಾಗೃತಿ, ಕುಟುಂಬ ನಿರ್ವಹಣೆ ಕೌಶಲ್ಯ, ಬ್ಯಾಂಕಿಂಗ್ ಜ್ಞಾನ, ಸ್ವಚ್ಛತೆ ಎಲ್ಲವೂ ಈ ಮೂಲಕ ಪ್ರಾಪ್ತವಾಗಿದೆ. ವಿಸ್ತಾರವಾಗಿರುವ ಬೀಡಿ ಉದ್ಯಮ ಇತ್ತೀಚೆಗೆ ಅತಂತ್ರವಾಗಿದೆ. ಇದಕ್ಕಾಗಿ ವಿವಿಧ ಕಸುಬುಗಳಾದ ಪುಷ್ಪೋದ್ಯಮ, ಹೈನುಗಾರಿಕೆ, ತರಕಾರಿ ಕೃಷಿ, ಅಗರಬತ್ತಿ, ತಿಂಡಿ ತಯಾರಿ, ಗೃಹೋದ್ದಿಮೆಗಳ ತಿಳಿವಳಿಕೆ ಮೂಡಿಸಲಾಗುತ್ತಿದೆ. ಈ ವಿಶೇಷ ಸೌಲಭ್ಯವು ಮಹಿಳೆಯರಿಗೆ ಭದ್ರತೆ ಒದಗಿಸಿದೆ.

ಪ್ರಾರಂಭದಲ್ಲಿ ವಾರಕ್ಕೆ ೫-೧೦ ರೂ. ಉಳಿತಾಯ ಕಷ್ಟವೆಂದ ವನಿತೆಯರು ಈಗ ಪ್ರತಿ ವಾರ ೪೦೦-೫೦೦ ರೂ. ಸಾಲ ಮರುಪಾವತಿ ಮಾಡುತ್ತಾರೆ. ಇದು ಸಬಲೀಕರಣದ ದಿಟ್ಟ ಹೆಜ್ಜೆಯಾಗಿದೆ. ಹಳ್ಳಿ ಕಡೆ ಮನೆಗಳಿಗೆ ಹೋದರೆ ಅಲ್ಲಿನ ಸ್ವಚ್ಛತೆ, ಕೈತೋಟ, ರಂಗೋಲಿ, ತುಳಸಿಗಿಡ, ಅತಿಥಿ ಸತ್ಕಾರ, ಸೌಜನ್ಯದ ಮಾತುಗಳನ್ನು ನೋಡಿ ಈಕೆ ಜ್ಞಾನವಿಕಾಸದ ಸದಸ್ಯೆ ಎಂದು ಗುರುತಿಸಬಹುದಾಗಿದೆ. ಸಾಮಾಜಿಕ ಕಾರ್ಯಗಳಲ್ಲಿ ಸಮವಸ್ತ್ರ ಧರಿಸಿ ಪಾಲ್ಗೊಳ್ಳುವುದು ಭಾವೈಕ್ಯತೆಗೆ ಹಿಡಿದ ಕೈಗನ್ನಡಿ. ಈ ಹಿಂದೆ ಜೀವನದಲ್ಲಿ ಎಂದೂ ಹೊರ ಸಂಚಾರ, ಪ್ರವಾಸ ಹೋಗದವರು ಪ್ರತಿ ವರ್ಷ ಪ್ರವಾಸದ ಸವಿ ಅನುಭವಿಸುತ್ತಾರೆ. ಊರಿನ ಕಾರ್ಯಕ್ರಮಗಳಲ್ಲಿ ಪುಷ್ಪಗುಚ್ಛ ತಯಾರಿಸಿ ಕೊಡುವುದು, ಶುಭ ಸಮಾರಂಭಗಳ ಸಂದರ್ಭ ಕಲಶ ಹಿಡಿಯುವುದರಲ್ಲಿ ಜ್ಞಾನ ವಿಕಾಸ ಸದಸ್ಯೆಯರದೇ ಮೇಲುಗೈ.

ಪ್ರಸ್ತುತ ಒಟ್ಟು ೭೦೪ ಜ್ಞಾನ ವಿಕಾಸ ಕೇಂದ್ರಗಳು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಎಂಟು ತಾಲೂಕಿಗೆ ಸೇರಿದ ೪೧೫ ಗ್ರಾಮಗಳಲ್ಲಿ ಕಾರ್ಯಾಚರಿಸುತ್ತಿವೆ. ಇವುಗಳನ್ನು ೬೫ ವಲಯಗಳಲ್ಲಿ ವರ್ಗೀಕರಿಸಲಾಗಿದೆ. ಪ್ರಸ್ತುತ ೨,೮೬೭ ಸ್ವ ಸಹಾಯ ಸಂಘಳಿದ್ದು, ೩೩,೭೫೪ ಮಹಿಳೆಯರು ಸದಸ್ಯರಾಗಿದ್ದಾರೆ.[೮]

೪.೭ ಗ್ರಾಮೀಣ ಮಹಿಳೆಯರ ಭಾಗ್ಯಲಕ್ಷ್ಮಿ: ಸಿರಿ ಗ್ರಾಮೋದ್ಯೋಗ ಯೋಜನೆ

ಕಡು ಬಡತನದ ಸಂಸಾರ, ಮದುವೆಯಾಗದ ಹೆಣ್ಣು ಮಕ್ಕಳಿದ್ದಾರೆ. ಬೀಡಿ ಕಟ್ಟಿ ಬದುಕುವ ದಾರಿ ಕಂಡುಕೊಂಡವರಿಗೆ ಆರೋಗ್ಯವೂ ನೆಟ್ಟಗಿಲ್ಲ. ಕೈತುಂಬಾ ಸಂಬಳವೂ ಇಲ್ಲ. ಆರ್ಥಿಕ ದಾರಿದ್ರ್ಯದಿಂದ ಬಳಲುವ ಸಂಸಾರಗಳಿಗೆ ಬಿಡಿಗಾಸಿನ ಸಾಲ ಬೇಕಾದರೂ ನಂಬಿಕೆಯಿಂದ ಕೊಡುವವರಿಲ್ಲ. ಇದು ೧೯೮೦-೯೦ರ ದಶಕದಲ್ಲಿ ಬೆಳ್ತಂಡಿ ತಾಲೂಕು ಸೇರಿದಂತೆ ಎಲ್ಲ ಹಳ್ಳಿಗಳಲ್ಲಿನ ಬಡವರ ಮನೆಯ ಮಹಿಳೆಯರ ಧಾರುಣ ಸ್ಥಿತಿ. ಈ ಸಂಕಷ್ಟ ಸ್ಥಿತಿಯನ್ನು ಹತ್ತಿರದಿಂದ ನೋಡಿ ಮಾತೃಶ್ರೀ ಹೇಮಾವತಿ ಹೆಗ್ಗಡೆಯವರು ಕಂಡುಕೊಂಡ ಪರಿಹಾರ ಮಾರ್ಗವೇ ಸಿರಿ ಗ್ರಾಮೋದ್ಯೋಗ ಯೋಜನೆಯ ಹುಟ್ಟಿಗೆ ಕಾರಣವಾಗಿದೆ.

ಹಳ್ಳಿಗಳಲ್ಲಿ ಸಾವಿರಾರು ಬಡ ಕುಟುಂಬಗಳ ಮಹಿಳೆಯರು ಒಂದು ಸ್ವಾವಲಂಬಿ ಉದ್ಯೋಗ ಮಾಡಿ ಕೈ ತುಂಬ ಗಳಿಸಬೇಕು, ತಾವು ಉತ್ಪಾದಿಸಿದ ವಸ್ತುವಿನ ಮಾರಾಟದ ಚಿಂತೆ ಅವರಿಗಿರಬಾರದು. ಈ ದೃಷ್ಟಿಯಿಂದ ೨೦೦೨ ರಲ್ಲಿ ಕಾರ್ಯಾರಂಭಗೊಂಡ ಈ ಯೋಜನೆ ಅಸಂಖ್ಯಾತ ಹೆಣ್ಣು ಮಕ್ಕಳ ಬದುಕಿನಲ್ಲಿ ಚೈತನ್ಯದ ಸಂಪತ್ತು ತುಂಬಿದೆ. ನೆಮ್ಮದಿಯ ಬೆಳಕನ್ನು ಮುನ್ನಡೆಯ ಹಾದಿಯಲ್ಲಿ ಬೆಳಗಿ ಭದ್ರತೆಯ ಬದುಕಿನ ಕೊಡುಗೆಯನ್ನಿತ್ತಿದೆ.

ಸ್ವ ಸಹಾಯ ಗುಂಪುಗಳನ್ನು ಕಟ್ಟಿಕೊಂಡ ಮಹಿಳೆಯರಿಗೆ ಸ್ವಂತ ಉದ್ಯೋಗ ಮಾಡಲು ಬೇಕಾದ ಎಲ್ಲ ನೆರವನ್ನೂ ಸಿರಿ ಗ್ರಾಮೋದ್ಯೋಗ ಯೋಜನೆ ಒದಗಿಸುತ್ತದೆ. ಒಂಟಿಯಾಗಿ ಅಥವಾ ಸಮೂಹವಾಗಿಯೂ ಸ್ವ ಉದ್ಯೋಗ ಮಾಡಬಹುದು. ಗ್ರಾಮಾಭಿವೃದ್ಧಿ ಯೋಜನೆಯ ಮೇಲ್ವಿಚಾರಕರು ಅವರಿಗೆ ಬೇಕಾದ ನೆರವನ್ನು ಒದಗಿಸುತ್ತಾರೆ. ವ್ಯವಸ್ಥಿತ ಕಟ್ಟಡಗಳು, ಯಂತ್ರೋಪಕಣರಗಳು, ಪಾತ್ರೆ ಪರಿಕರಗಳು ಏನು ಬೇಕಾದರೂ ಬ್ಯಾಂಕಿನ ಕಡಿಮೆ ಬಡ್ಡಿಯ ಸಾಲ, ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆಯ ಶೇ. ೫೦ರ ಧನ ಸಹಾಯ ಎಲ್ಲವೂ ಲಭಿಸುತ್ತದೆ. ತಿಂಡಿ ತಯಾರಿಸುವವರಿಗೆ ಕಡಿಮೆ ಇಂಧನ ಬಳಸುವ ಟೈಡ್ ಕಂಪೆನಿಯ ಸುಧಾರಿತ ಒಲೆಗಳೂ ಪೂರೈಕೆಯಾಗುತ್ತವೆ.

ಪದಾರ್ಥಗಳ ಗುಣಮಟ್ಟ ಕಂಡುಕೊಂಡು ಉತ್ತಮ ತಾಂತ್ರಿಕತೆ ಅಳವಡಿಸಿಕೊಳ್ಳುವುದು ಈ ಉದ್ಯೋಗ ಯೋಜನೆಯ ನಿಯಮಗಳಲ್ಲೊಂದು. ಬೆಂಗಳೂರಿನ ಸಣ್ಣ ಕೈಗಾರಿಕಾ ಸೇವಾ ಸಂಸ್ಥೆ, ಡೈರಿ ವಿಜ್ಞಾನ ಕಾಲೇಜು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿ, ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆ ಮತ್ತು ರುಡ್‌ಸೆಟ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಿಂದ ಬೇಕಾದ ತರಬೇತಿ, ಮಾಹಿತಿ ಉಚಿತವಾಗಿ ದೊರಕುತ್ತದೆ.

ಫಿನಾಯಿಲ್, ಡಿಟರ್ಜಂಟ್‌ನಂತಹ ವಸ್ತುಗಳನ್ನು ಮನೆಯಲ್ಲಿ ತಯಾರಿಸಬಹುದು. ಅದಕ್ಕೆ ಬೇಕಾದ ಅತ್ಯುತ್ತಮ ಗುಣಮಟ್ಟದ ಕಚ್ಚಾ ಸಾಮಾಗ್ರಿಗಳನ್ನು ಮೂಲ ತಯಾರಿಕಾ ಸಂಸ್ಥೆಗಳಿಂದ ಖರೀದಿಸಿ, ಸಿರಿ ಗ್ರಾಮೋದ್ಯೋಗ ಸಂಸ್ಥೆ ಉದ್ಯೋಗಿಗಳಿಗೆ ಒದಗಿಸುತ್ತದೆ. ತಯಾರಿಸಿದ ವಸ್ತುವನ್ನು ಸಿರಿ ಸಂಸ್ಥೆಯು ಪ್ಯಾಕಿಂಗ್ ಸಾಮಗ್ರಿಗಳಲ್ಲಿ ತುಂಬಿಸಿ ಕೊಟ್ಟರೆ ತೂಕಕ್ಕೆ ಸಮನಾದ ವೇತನ ಸಿಗುತ್ತದೆ. ತಯಾರಿಸಿದ ವಸ್ತುಗಳನ್ನು ಮನೆ ಮನೆಗೆ ಹೊತ್ತು ಮಾರಬೇಕಾಗಿಲ್ಲ. ಸಂಸ್ಥೆಯ ಡೆಲಿವರಿ ವ್ಯಾನು ಮನೆ ಬಾಗಿಲಿಗೆ ಬಂದು ಅವುಗಳನ್ನು ಒಯ್ಯುತ್ತದೆ. ಜಾತ್ರೆ, ಸಂತೆಗಳಲ್ಲಿ ಸಿರಿಯ ಸ್ಟಾಲು ತೆರೆದು ಈ ಉತ್ಪಾದನೆಗಳನ್ನು ಮಾರಲು ಬಯಸುವ ಹಾಗೂ ಮನೆಗಳಿಗೆ ಒಯ್ದು ಮಾರಬಯಸುವ ಮಹಿಳೆಯರಿಗೆ ಆಕರ್ಷಕ ಪ್ರೋತ್ಸಾಹಧನವನ್ನೂ ಕೊಡಲಾಗುತ್ತದೆ.

ಸಿರಿ ಯೋಜನೆಯ ಮೂಲಕ ೨೬೬ ಘಟಕಗಳಲ್ಲಿ ೨,೩೫೧ ಸದಸ್ಯರು ಬೇರೆ ಬೇರೆ ವಸ್ತುಗಳನ್ನು ಉತ್ಪಾದಿಸುತ್ತಾರೆ. ತಿಂಡಿ ತಿನಿಸುಗಳು, ಮಸಾಲಾ ಪುಡಿಗಳು, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಸ್ಕ್ವಾಷ್, ಸೋಪಿನ ಪುಡಿ, ಪಾತ್ರೆ ತೊಳೆಯುವ ಹುಡಿ, ಸೋಪು, ಅಗರಬತ್ತಿ, ಸಿದ್ದ ಉಡುಪುಗಳು, ಹಾಳೆ ತಟ್ಟೆ, ರೆಕ್ಸಿನ್ ಬ್ಯಾಗುಗಳು, ಗೊಂಬೆಗಳು, ಫಿನಾಯಿಲ್, ಲಿಕ್ವಿಡ್ ಸೋಪು, ಪೇಪರ್ ಉತ್ಪನ್ನಗಳು, ಎರೆಗೊಬ್ಬರ – ಹೀಗೆ ಅಗಣಿತ ಉತ್ಪನ್ನಗಳು ನಿರಂತರ ತಯಾರಾಗುತ್ತವೆ. ವಾರ್ಷಿಕ ವ್ಯವಹಾರ ೩.೪೯ ಕೋಟಿ ರೂ. ಗಳಾಗಿದ್ದು, ಈ ಪೈಕಿ ೨.೩೩ ಕೋಟಿ ರೂ. ವ್ಯವಹಾರವಿರುವ ಅಗರಬತ್ತಿಯ ಉತ್ಪನ್ನವೇ ಸಿಂಹಪಾಲು ಪಡೆದಿದೆ. ೧೮೮ ಘಟಕಗಳಲ್ಲಿ ೧೮೭೪ ಮಂದಿ ಅಗರಬತ್ತಿ ತಯಾರಿಸುತ್ತಿದ್ದಾರೆ.

ಸಿರಿ ಯೋಜನೆಯಲ್ಲಿ ತಯಾರಾದ ವಸ್ತುಗಳು ಅಂತಾರಾಷ್ಟ್ರೀಯ ಕಂಪೆನಿಗಳಿಗೆ ಸಡ್ಡು ಹೊಡೆಯುವಷ್ಟು ಉತ್ತಮವಾಗಿವೆ. ಇದನ್ನು ತಯಾರಿಸುವ ಪ್ರತಿಯೊಬ್ಬ ಮಹಿಳೆಗೆ ದಿನಕ್ಕೆ ೫೦ ರಿಂದ ೧೦೦ ರೂಪಾಯಿ ವೇತನದ ಜತೆಗೆ ವರ್ಷದ ಕೊನೆಗೆ ಲಾಭಾಂಶದಲ್ಲಿ ಪಾಲು ಸಿಗುತ್ತದೆ. ಗುಣಮಟ್ಟ ಮತ್ತು ತೂಕದಲ್ಲಿ ರಾಜಿಯಾಗದೆ ಶುಚಿತ್ವಕ್ಕೆ ಸಿರಿ ಯೋಜನೆ ಮೊದಲ ಮಣೆ ಹಾಕಿದೆ. ತಾವು ಮಾಡುವ ಉದ್ಯೋಗಕ್ಕೆ ಪಡೆದ ಬಂಡವಾಳದ ಸಾಲವನ್ನು ಈ ಮಹಿಳೆಯರು ಪೈಸೆ ಪೈಸೆ ಕೂಡ ತೀರಿಸಿ ಸ್ವಂತ ಕಾಲಿನ ಮೇಲೆ ನಿಂತಿದ್ದಾರೆ. ಅನೇಕರು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರಗಳ ಸದಸ್ಯೆಯರಾಗಿ ಉಳಿತಾಯ ಮಾಡಿರುವುದರಿಂದ ಸ್ವಂತ ಉದ್ಯೋಗಕ್ಕೆ ಅದೇ ಉಳಿತಾಯ ಮೂಲಧನವಾಗಿ ಒದಗಿ ಸಾಲದ ಅಗತ್ಯವೇ ಇಲ್ಲದ ಪ್ರಸಂಗಗಳೂ ಇವೆ. ಅಕ್ಷರದ ಅರಿವು ಇಲ್ಲದವರಿಗೂ ಮನೆಯಲ್ಲೇ ಉದ್ಯೋಗ ಮಾಡಲು ಅವಕಾಶ ನೀಡಿ ಹಳ್ಳಿಯ ಹೆಣ್ಣಿನ ಉತ್ಪಾದನೆಯನ್ನು ದಿಲ್ಲಿಯ ಪಟ್ಟಣಿಗರ ಕೈಯವರೆಗೆ ಹಂಚುತ್ತಿರುವ ಸಿರಿ ಗ್ರಾಮೀಣ ಜನರ ಬದುಕಿಗೆ ಭಾಗ್ಯಲಕ್ಷ್ಮಿಯನ್ನು ಕರೆತಂದಿದೆ.

ಸಂಪೂರ್ಣ ಸುರಕ್ಷಾ ವಿಮಾ ಯೋಜನೆ :

ಯೋಜನೆಯ ಪಾಲುದಾರ ಕುಟುಂಬಗಳ ಸದೃಢ ಆರೋಗ್ಯವನ್ನು ಗಮದಲ್ಲಿರಿಸಿಕೊಂಡು ರೂಪಿಸಲಾದ ಕಾರ್ಯಕ್ರಮವೇ ಸಂಪೂರ್ಣ ಸುರಕ್ಷಾ ಯೋಜನೆ. ಯೊಜನೆಯ ಪಾಲುದಾರ ಕುಟುಂಬದ ಪ್ರತಿಯೊಬ್ಬ ಸದಸ್ಯರೂ ಇದರ ಪ್ರಯೀಜನ ಪಡೆಯುವಂತೆ ಅವಕಾಶ ಕಲ್ಪಿಸಲಾಗಿದೆ. ಪಾಲುದಾರ ಕುಟುಂಬದ ಸದಸ್ಯರು ಯಾವುದೇ ರೀತಿಯ ಆರೋಗ್ಯ ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವ ಸಂದರ್ಭದಲ್ಲಿ ಅವರ ವೈದ್ಯಕೀಯ ವೆಚ್ಚವನ್ನು ಯೋಜನೆಯು ಭರಿಸುತ್ತದೆ.

ಯೋಜನೆಯು ವಿಮಾ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ಪಾಲುದಾರ ಕುಟುಂಬಗಳ ಚಿಕಿತ್ಸೆಗಾಗಿ, ಮತ್ತಿತರ ಸಮಸ್ಯೆಗಳಿಗೆ ಸ್ಪಂದನ ನೀಡಲು ಆರಂಭಗೊಂಡ 'ಸಂಪೂರ್ಣ ಸುರಕ್ಷಾ' ಯೋಜನೆ ಮಹತ್ವದ ಯಶಸ್ಸು ಕಂಡಿದೆ. ಈ ಕಾರ್ಯಕ್ರಮದಲ್ಲಿ ಸದಸ್ಯರಿಂದ ನಿಗದಿತ ವಂತಿಗೆ ಪಡೆದು, ಅವರಿಗೆ ಚಿಕಿತ್ಸಾ ವೆಚ್ಚ, ಹೆರಿಗೆ ವೆಚ್ಚ, ಮರಣ ಸಾಂತ್ವನ, ಅಪಘಾತ ವಿಮೆ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ೨೦೧೦–೧೧ರ ಆರ್ಥಿಕ ವರ್ಷದಲ್ಲಿ ೧೫,೮೨,೦೦೦ ಮಂದಿ ಈ ಕಾರ್ಯಕ್ರಮದಡಿಯಲ್ಲಿ ನೋಂದಾಯಿಸಿಕೊಂಡಿದ್ದು, ೭೬,೫೮೮ ಫಲಾನುಭವಿಗಳಿಗೆ ರೂ. ೨೫.೦೬ ಕೋಟಿ ಮೊತ್ತದ ಸುರಕ್ಷಾ ಸೌಲಭ್ಯವನ್ನು ಒದಗಿಸಲಾಗಿದೆ. ಸಂಪೂರ್ಣ ಸುರಕ್ಷಾ ಯೋಜನೆಯು ಪ್ರಾರಂಭಗೊಂಡ ಆರು ವರ್ಷಗಳಲ್ಲಿ ಅಂದರೆ ಇದುವರೆಗೆ ಒಟ್ಟು ರೂ. ೧೨೦.೦೦ ಕೋಟಿ ಸೌಲಭ್ಯವನ್ನು ಒದಗಿಸಲಾಗಿದೆ.[೯]

ಜೀವನ್ ಮಧುರಾ ಕಾರ್ಯಕ್ರಮ :

ಯೋಜನೆಯು ತನ್ನ ಫಲಾನುಭವಿಗಳ ಜೀವನದ ಹಿತದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಜೀವನ್ ಮಧುರ ಎಂಬ ವಿಮಾ ಯೋಜನೆಯನ್ನು ಅಳವಡಿಸಿಕೊಂಡಿದೆ. ಭಾರತೀಯ ಜೀವವಿಮಾ ನಿಗಮದ ಸಹಯೋಗದೊಂದಿಗೆ ಈ ವಿಮಾ ಯೋಜನೆ ಕಾರ್ಯನಿರ್ವಹಿಸುತ್ತಿದ್ದು ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಆರ್ಥಿಕವಾಗಿ ಹಿಂದುಳಿದವರಿಗೆ ಯಾವುದೇ ರೀತಿಯಲ್ಲಿಯೂ ಹೊರೆಯಾಗದಂತೆ ಮತ್ತು ವಿಮಾ ಕಂತುಗಳನ್ನು ಸುಲಭವಾಗಿ ಪಾವತಿಸಲು ಅನುಕೂಲವಾಗುವಂತೆ ಎಚ್ಚರ ವಹಿಸಲಾಗಿದೆ. ೨೦೧೦–೧೧ರ ಆರ್ಥಿಕ ವರ್ಷದಲ್ಲಿ ೧,೧೮,೦೦೦ ಜೀವನ್‌ಮಧುರಾ ಪಾಲಿಸಿಗಳನ್ನು ವಿತರಿಸಲಾಗಿದೆ. ೧೨,೦೦೦ ಜಾನುವಾರುಗಳಿಗೆ ವಿಮೆ ಮಾಡಿಸಲಾಗಿದೆ. ೨೦೧೦–೧೧ರ ವರ್ಷದಲ್ಲಿ ೭೦೧ ಜಾನುವಾರುಗಳ ಮರಣಕ್ಕೆ ವಿಮೆ ನೀಡಲಾಗಿದೆ.[೧೦]

೪.೮ ಯೋಜನೆಯ ವಿಸ್ತರಣಾ ಚಟುವಟಿಕೆಗಳು

ನಿರಂತರ ೧೮ ವರ್ಷಗಳ ಪರ್ಯಂತ ಅಂದರೆ ೨೦೦೦ನೇ ಇಸವಿಯ ತನಕ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ದುರ್ಬಲರನ್ನು ಮೇಲೆತ್ತುವ ಕಾರ್ಯಕ್ರಮ ಸಮರೋಪಾದಿಯಲ್ಲಿ ನಡೆಯಿತು. ಕ್ಷೇತ್ರದ ಅನುದಾನವಲ್ಲದೆ ಬೇರೆ ಬೇರೆ ಮೂಲಗಳಿಂದಲೂ ನೆರವನ್ನು ಪಡೆದು ಫಲಾನುಭವಿಗಳ ಶ್ರೇಯೋಭಿವೃದ್ಧಿಗೆ ಬಳಸುವ ಮಹತ್ಕಾರ್ಯ ನಡೆಯಿತು. ಯೋಜನೆಯ ಆರಂಭದಲ್ಲೇ ಡಾ. ವೀರೇಂದ್ರ ಹೆಗ್ಗಡೆಯವರು ಒಂದು ಚೀನೀ ಗಾದೆಯನ್ನು ಉಲ್ಲೇಖಿಸಿದ್ದರು. 'ಹಸಿದ ಒಬ್ಬನಿಗೆ ನಾವು ಮೀನು ಹಿಡಿದು ಕೊಡುತ್ತಲಿದ್ದರೆ ಅವನ ಬದುಕಿನುದ್ದಕ್ಕೂ ಅದೇ ಕೆಲಸ ಮಾಡಬೇಕು. ಆದರೆ ಮೀನು ಹಿಡಿಯಲು ಕಲಿಸಿದರೆ ಅವನು ಅದನ್ನು ಹಿಡಿದು ಬದುಕಲು ಕಲಿಯುತ್ತಾನೆ'.[೧೧]

ಗ್ರಾಮಾಭಿವೃದ್ಧಿ ಯೋಜನೆ ಸಹಸ್ರಾರು ಕುಟುಂಬಗಳಿಗೆ ಬದುಕುವ ದಾರಿ ಕಲಿಸಿತು. ಅದರ ನೆರಳಿಗೆ ಬಂದವರೆಲ್ಲ ಆರ್ಥಿಕ ಸ್ವಾವಲಂಬನೆ ಸಾಧಿಸಿರುವುದು ಮನದಟ್ಟಾದ ಮೇಲೆ ಡಾ. ಹೆಗ್ಗಡೆಯವರು ಬೇರೆಡೆ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿಸ್ತರಿಸಲು ನಿರ್ಧರಿಸಿದರು. ಉಳ್ಳಾಲ, ಪುತ್ತೂರು, ಮಂಗಳೂರು, ಉಡುಪಿ, ಕುಂದಾಪುರ ಮತ್ತು ಶಿರಸಿ ಪಟ್ಟಣಗಳ ದುರ್ಬಲ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯ ಕಾರ್ಯಕ್ರಮಗಳ ಗುರಿಯಿಸಿಕೊಂಡು ಯೋಜನೆ ಅಲ್ಲಿಗೂ ವಿಸ್ತರಿಸಿತು. ಸ್ವ ಸಹಾಯ ಸಂಘಗಳ ಮೂಲಕ ಅಸಮಾನತೆಯನ್ನು ನಿವಾರಿಸಿ ಸಶಕ್ತ ಸಮಾಜ, ಸಕಲ ಆರ್ಥಿಕ ಶಕ್ತಿಯನ್ನು ಸಾಧಿಸುವ ಛಲದಿಂದ ಅಲ್ಲಿ ಕೊಳಚೆ ಪ್ರದೇಶದ ನಿವಾಸಿಗಳ ಮನೆ ಬಾಗಿಲಲ್ಲಿ ಸುಧಾರಣೆಯ ಘೋಷಣಾ ಯಾತ್ರೆಯನ್ನು ಕೈಗೊಂಡಿದೆ. ಆರೋಗ್ಯ, ಶಿಕ್ಷಣ, ನೈರ್ಮಲ್ಯ ಮತ್ತು ದುಶ್ಚಟ ನಿಗ್ರಹ ಪ್ರವೃತ್ತಿಗಳಿಂದ ಸುಧಾರಿತ ಜೀವನಕ್ರಮದೆಡೆಗೆ ನಡೆಯಲು ಬೆಳಕು ತೋರಿಸಿದೆ. ಸ್ವಸಹಾಯ ಗುಂಪುಗಳನ್ನು ರಚಿಸಿಕೊಂಡು ಉಳಿತಾಯ, ಸಾಲ ಮುಂತಾದ ಆರ್ಥಿಕ ಚಟುವಟಿಕೆಗಳೊಂದಿಗೆ ಸ್ವ ಉದ್ಯೋಗವನ್ನು ಕೈಗೊಂಡಿರುವ ಸಾಮಾನ್ಯ ಜನರು ಹಪ್ಪಳ, ಸಂಡಿಗೆಯಿಂದ ಆರಂಭಿಸಿ ಬೃಹತ್ ಲಾಭ ತರುವ ಸಿಗಡಿ ಕೃಷಿಯ ತನಕ ಸ್ವಂತ ಉದ್ಯೋಗದ ಜಾಲವನ್ನು ವಿಸ್ತರಿಸಿಕೊಂಡಿದ್ದಾರೆ. ಗ್ರಾಮೀಣಾಭಿವೃದ್ಧಿಯ ನೆರಳಿನಲ್ಲಿರುವ ಎಲ್ಲರಿಗೂ ಎಲ್ಲ ವಿಷಯದಲ್ಲೂ ಸೂಕ್ತ ತರಬೇತಿ ನೀಡಿದರೆ ಮಾತ್ರ ಸಾಮರ್ಥ್ಯಾಭಿವೃದ್ಧಿ ಸಾಧ್ಯವೆಂದು ಡಾ. ಹೆಗ್ಗಡೆಯವರು ಭಾವಿಸಿದ್ದಾರೆ. ನೈರ್ಮಲ್ಯ, ಆರೋಗ್ಯ, ಸ್ವಉದ್ಯೋಗ, ನಾಯಕತ್ವ ಈ ಎಲ್ಲ ವಿಚಾರಗಳಿಗಾಗಿ ಆರು ಸಾವಿರಕ್ಕಿಂತ ಅಧಿಕ ತರಬೇತಿಗಳು ನಡೆದು ಜನರ ಕೌಶಲ್ಯವನ್ನು ವರ್ಧಿಸಿವೆ.

ಕರ್ನಾಟಕ ಸರಕಾರವು ತನ್ನ ಅನುದಾನಿತ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಿದೆ. ಈ ಯೋಜನೆಯಡಿ ಮೂಲಭೂತ ಸೌಲಭ್ಯಗಳಿಂದ ವಂಚಿತವಾದ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ನೀರಿಗೆ ಬದು (ಕಟ್ಟು), ಚೆಕ್ ಡ್ಯಾಮ್, ವೆಂಟೆಡ್ ಡ್ಯಾಮ್, ಸಾಮೂಹಿಕ ಅರಣ್ಯೀಕರಣ ಮುಂತಾದವುಗಳನ್ನು ನಿರ್ಮಿಸಲಾಗಿದೆ. ಆಯಾ ಪ್ರದೇಶದಲ್ಲಿ ದೊರೆಯುವ ಸೌಲಭ್ಯ ಹಾಗೂ ಸ್ಥಳೀಯ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಸೆಲೆಗಳಾದ 'ಮದಗ'ಗಳನ್ನು ದುರಸ್ತಿಗೊಳಿಸಿ ಕೃಷಿಕಾರ್ಯಗಳಿಗೆ ನಿರಂತರ ನೀರುಣಿಸುವ ವ್ಯವಸ್ಥೆ ಮಾಡಲಾಗುತ್ತದೆ.[೮]

ಸ್ವರ್ಣಜಯಂತಿ ಸ್ವರೋಜ್‌ಗಾರ್ ಯೋಜನೆಯ ಅನುದಾನವು ನೇರವಾಗಿ ೨೦೦೩ರಿಂದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಹರಿದು ಬರುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ ಮಹಿಳೆಯರ ಸ್ವಉದ್ಯೋಗ, ತರಬೇತಿ, ಮೂಲಭೂತ ಸೌಲಭ್ಯಗಳ ಈಡೇರಿಕೆಗೆ ಬೇಕಾದ ಸಾಲ-ಸಹಾಯಧನಗಳನ್ನು ಗ್ರಾಮಾಭಿವೃದ್ಧಿ ಯೋಜನೆಗೆ ಒದಗಿಸಲು ಸಿಡ್ಬಿಯು ಮುಂದೆ ಬಂದಿದೆ. ಸಹಸ್ರಾರು ಕುಟುಂಬಗಳಿಗೆ ಇವರ

ಫಲ ದೊರಕಿದೆ. ತಮ್ಮ ಆರ್ಥಿಕ ಬಲದ ಸಂವರ್ಧನೆಗಾಗಿ ಹೈನುಗಾರಿಕೆ, ಔಷಧೀಯ ಸಸ್ಯಕೃಷಿ, ಪುಷ್ಪಕೃಷಿ, ಮಡಿಕೆ ತಯಾರಿ, ಗೊಬ್ಬರ ತಯಾರಿಕೆ, ನಿರುಪಯುಕ್ತ ಕಾಗದದಿಂದ ವಸ್ತುಗಳ ತಯಾರಿ, ವಿನ್ಯಾಸ, ಕಲೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿ, ಬಡ ಕುಟುಂಬಗಳು ಸ್ವರ್ಣಜಯಂತಿ ಯೋಜನೆಯಲ್ಲಿ ಯಶಸ್ಸು ಗಳಿಸಿವೆ.

ಪರ್ಯಾಯ ಇಂಧನ ಬಳಕೆಗೆ ಉತ್ತೇಜನ

ಆಧುನಿಕ ಸಂದರ್ಭದಲ್ಲಿ ಪರ್ಯಾಯ ಇಂಧನದ ಬಳಕೆ ಅತ್ಯಂತ ಮಹತ್ವ ಪಡೆದಿದೆ. ಬದಲಿ ಇಂಧನ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಯೋಜನೆಯು ಸಾಕಷ್ಟು ಪ್ರೋತ್ಸಾಹ, ಉತ್ತೇಜನ ನೀಡಿ ಎಲ್ಲರೂ ಅದರ ಲಾಭ ಪಡೆಯುವಂತೆ ಮಾಡಿದೆ. ಬೆಳ್ತಂಗಡಿ ತಾಲೂಕಿನ ಬಹುತೇಕ ಬಡ ಗ್ರಾಮ ನಿವಾಸಿಗಳಿಗೆ ವಿದ್ಯುಚ್ಛಕ್ತಿಯ ಪರಿಚಯವೇ ಇರಲಿಲ್ಲ. ಗ್ರಾಮಾಭಿವೃದ್ಧಿ ಯೋಜನೆಯು ೧೯೯೪ರಲ್ಲಿ ಸೂರ್ಯನಿಗೆ ಪ್ಲಗ್ಗು ಹಾಕುವ ಕಾರ್ಯಕ್ರಮವನ್ನು ಅಳವಡಿಸಲು ಮುಂದಾಯಿತು. ವಿದ್ಯುತ್ತಿನ ಮುಖವನ್ನೇ ಕಾಣದ ಮನೆಗಳನ್ನು ಝಗಮಗಗೊಳಿಸುವ ಕಾರ್ಯಕ್ರಮವನ್ನು ರಾಜ್ಯದ ಅಂದಿನ ಮುಖ್ಯಮಂತ್ರಿಗಳಾದ ಎಸ್.ಎಂ. ಕೃಷ್ಣ ಅವರು ಉದ್ಘಾಟಿಸಿದರು. ಇದರನ್ವಯ ೨,೭೦೦ ಮನೆಗಳಿಗೆ ನಾಲ್ಕು ಬಲ್ಬುಗಳಿರುವ ಸೂರ್ಯಶಕ್ತಿ ವಿದ್ಯುತ್ ಸೌಕರ್ಯವನ್ನು ಒದಗಿಸಲಾಯಿತು. ೫೪೦ ಲಕ್ಷ ರೂಪಾಯಿ ವೆಚ್ಚದ ಸೌಲಭ್ಯಕ್ಕಾಗಿ ಫಾಲನುಭವಿಗಳು ೩೭೮ ಲಕ್ಷ ರೂಪಾಯಿ ತೊಡಗಿಸಿರುವುದು ಅವರ ಆರ್ಥಿಕ ಸಾಮರ್ಥ್ಯ ವೃದ್ಧಿಸಿರುವುದಕ್ಕೆ ಸಣ್ಣ ಉದಾಹರಣೆ. ಉಳಿದ ಹಣವನ್ನು ಕೇಂದ್ರ ಸರಕಾರದ ಬದಲಿ ಇಂಧನ ಇಲಾಖೆ ಮತ್ತು ಸೆಲ್ಕೋ ಸಂಸ್ಥೆಗಳು ಭರಿಸಿವೆ. ಏಕಕಾಲದಲ್ಲಿ ಇಂಧನ ಒಂದು ತಾಲೂಕಿನಲ್ಲಿ ಇಷ್ಟು ಮನೆಗಳಿಗೆ ಸೌರ ವಿದ್ಯುತ್ ಸೌಕರ್ಯ ಏರ್ಪಡಿಸಿದ್ದು ಪ್ರಾಪಂಚಿಕ ದಾಖಲೆ ಎನ್ನುತ್ತದೆ ಸೆಲ್ಕೋ ಕಂಪೆನಿ.

ಗ್ರಾಮಾಭಿವೃದ್ಧಿ ಯೋಜನೆ ನೆರಳು ಹಾಸಿರುವ ಪ್ರದೇಶಗಳಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸಲಾಗುತ್ತದೆ. ಜೊತೆಯಲ್ಲಿ ಜಾನುವಾರು ಸಗಣಿ ಬಳಸಿ ಗೋಬರ್ ಅನಿಲ ಘಟಕ ಸ್ಥಾಪಿಸಲು ನೆರವು ಒದಗಿಸಲಾಗಿದೆ. ಗೋಬರ್ ಬಗ್ಗಡದಿಂದ ಎರೆಗೊಬ್ಬರ ಘಟಕದ ಅಳವಡಿಕೆಗೆ ಪ್ರೇರೇಪಿಸಿ ಸಾವಯುವ ಕೃಷಿಯ ಅಭಿವೃದ್ಧಿಯೂ ಸಾಧ್ಯವಾಯಿತು. ಹೀಗೆ ಸಾವಿರಾರು ರೈತ ಕುಟುಂಬಗಳು ಗೋಬರ್ ಗ್ಯಾಸ್ ಘಟಕ ಹೊಂದಿದ್ದು, ಘಟಕ ಒಂದಕ್ಕೆ ಸರಾಸರಿ ರೂ. ೧೨,೦೦೦ ಖರ್ಚಾಗುತ್ತದೆ. ಈ ಪೈಕಿ ರೂ. ೯,೦೦೦ವನ್ನು ರೈತರೇ ಒದಗಿಸುತ್ತಿರುವುದು ಅವರ ಪರಿಸರ ಕಾಳಜಿಗೆ ಸಾಕ್ಷಿಯಾಗಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ಒಟ್ಟು ೨,೩೦೮ ಗೋಬರ್ ಗ್ಯಾಸ್ ಘಟಕಗಳನ್ನು, ೫೪೧ ಸೋಲಾರ್ ದೀಪಗಳನ್ನು ಅಳವಡಿಸಲಾಗಿದೆ.[೧೩]

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಹಾಗೂ ಜಲವಿದ್ಯುತ್ ಅನುಷ್ಠಾನ ಸಮಿತಿಯು ಮಲೆಕುಡಿಯ ಬುಡಕಟ್ಟು ಸಮುದಾಯದ ಮಾನವಶಕ್ತಿಯ ನೆರವಿನೊಂದಿಗೆ ೮ ಕಿಲೋವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಜಲವಿದ್ಯುತ್ ಯೋಜನೆ ಜಾರಿಗೆ ಬಂದಿದೆ. ಈ ಯೋಜನೆಗೆ ಸುಮಾರು ೧೨ ಲಕ್ಷ ರೂಪಾಯಿ ವೆಚ್ಚ ತಗಲಿದೆ. ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಘಾಟಿಯ ನೆರಿಯ ಗ್ರಾಮದ ಬಾಂಜಾರು ಮಲೆಯ ಗುಡ್ಡಕಾಡು ಪ್ರದೇಶದಲ್ಲಿ ಈ ವಿದ್ಯುತ್ ಯೋಜನೆ ಕಾರ್ಯಗತವಾಗಿದೆ. ಎಲ್ಲ ನಾಗರಿಕ ಸೌಲಭ್ಯಗಳಿಂದ ವಂಚಿತವಾದ ಈ ಪ್ರದೇಶದ ೩೨ ಮಲೆಕುಡಿಯ ಕುಟುಂಬಗಳು ಈ ಯೋಜನೆಯಿಂದ ಪ್ರಯೋಜನವನ್ನು ಪಡೆದಿದೆ. ಈ ಯೋಜನೆಯಿಂದಾಗಿ ಈ ನಾಗರಿಕ ಸೌಲಭ್ಯವಂಚಿತ ಸಮುದಾಯಕ್ಕೆ ವಿದ್ಯುತ್ ದೊರೆತಿರುವುದಲ್ಲದೆ ನೀರಾವರಿ ಸೌಲಭ್ಯವೂ ಪ್ರಾಪ್ತವಾಗಲಿದೆ.

ಚಾರ್ಮಾಡಿ ಘಾಟಿಯಿಂದ ನಿರಂತರವಾಗಿ ವರ್ಷವಿಡೀ ಹರಿದು ಬರುತ್ತಿರುವ ಸುಣಾಲ ತೋಡಿನ ನೀರಿಗೆ ಏಳು ಅಡಿ ಎತ್ತರದ ತಡೆಗೋಡೆ ನಿರ್ಮಿಸಿ ಅಲ್ಲಿಂದ ಸುಮಾರು ಒಂದು ಕಿ.ಮೀ. ದೂರಕ್ಕೆ ಕಾಲುವೆಯನ್ನು ನಿರ್ಮಿಸಿ ನೀರಿನ ಸಂಗ್ರಹಕ್ಕಾಗಿ ಟ್ಯಾಂಕನ್ನು ನಿರ್ಮಿಸಲಾಗಿದೆ. ಈ ಕಾಲುವೆಯೊಳಗೆ ಚೌಕಾಕಾರದ ಹೊಂಡಗಳನ್ನು ನಿರ್ಮಿಸಿದ್ದು, ಇದರಲ್ಲಿ ನೀರಲ್ಲಿರುವ ಬಗ್ಗಡ ಸಂಗ್ರಹವಾಗುತ್ತದೆ. ಈ ಮೂಲಕ ಹಾದು ಬರುವ ನೀರನ್ನು ಕೃಷಿ ಕೆಲಸಗಳಿಗೆ ಬಳಸಲಾಗುವುದು. ಟ್ಯಾಂಕಲ್ಲಿ ಸಂಗ್ರಹವಾದ ನೀರನ್ನು ಕೊಳವೆಗಳ ಮೂಲಕ ನೇರವಾಗಿ ಸುಮಾರು ೨೫೦ ಅಡಿ ಕೆಳಗೆ ನಿರ್ಮಿಸಿರುವ ೧೦ ಥ ೧೦ ಅಡಿಯ ೨ ಕೋಣೆಯಲ್ಲಿ ನಿರ್ಮಿಸಿರುವ ಟರ್ಬೈನ್‌ಗೆ ಹರಿಸಲಾಗುತ್ತದೆ. ನೀರಿನ ವೇಗಕ್ಕೆ ವಿದ್ಯುಜ್ಜನಕದಿಂದ ವಿದ್ಯುತ್ ಉತ್ಪಾದನೆಯಾಗುತ್ತದೆ. ಇದರಿಂದ ಸುಮಾರು ೮ ಕಿ.ವಾಟ್ ವಿದ್ಯುತ್ ಉತ್ಪಾದನೆ ಆಗಿ ೫ ಕಿ.ವಾಟ್ ಬಳಕೆಯಾಗಬಹುದು. ಈ ವಿದ್ಯುತ್ತನ್ನು ನಾಲ್ಕೈದು ಕಿ.ಮೀಟರ್ ದೂರದ ಮಲೆಕುಡಿಯರ ಮನೆಗಳಿಗೆ ಕೇಬಲ್ ಮೂಲಕ ತಲಪಿಸಲಾಗುತ್ತದೆ.

ಈ ವಿದ್ಯುತ್ ಯೋಜನೆಗೆ ಇಂಡೋ-ನಾರ್ವೆಜಿಯನ್ ಸಹಕಾರದ ಟ್ರೈಡ್ ಸಂಸ್ಥೆ ಸುಮಾರು ಮೂರು ಲಕ್ಷ ರೂಪಾಯಿ ಅನುದಾನ ನೀಡಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಅರ್ಥಿಕ ನೆರವು ನೀಡಿರುವುದಲ್ಲದೆ, ಈ ಅಭಿವೃದ್ಧಿ ಯೋಜನೆಯ ಪ್ರಗತಿಬಂಧು ತಂಡದ ಮೂಲಕ ೧.೬೫ ಲಕ್ಷ ರೂಪಾಯಿಗಳನ್ನು ಹೂಡಲಾಗಿದೆ.

ಮನೆ ನಿರ್ಮಾಣಕ್ಕೆ ನೆರವು

ಗ್ರಾಮಾಭಿವೃದ್ಧಿ ಯೋಜನೆ ಬೆಳ್ತಂಗಡಿ ತಾಲೂಕಿನಲ್ಲಿ ಕಾಲಿರಿಸಿದಾಗ ಗ್ರಾಮ ನಿವಾಸಿಗಳ ಮನೆಗಳ ಚಿತ್ರಣ ಅವರ ಆರ್ಥಿಕ ದಾರಿದ್ರ್ಯದ ಕೈಗನ್ನಡಿಯಾಗಿತ್ತು. ಮಳೆಗಾಲವಿಡಿ ಸೋರುವ ಮನೆ, ಕುಸಿಯುವ

ಗೋಡೆ, ಗೆದ್ದಲು ತುಂಬಿ ಅಸಹನೀಯ ಪರಿಸ್ಥಿತಿಯಲ್ಲೇ ಅದರೊಳಗೆ ಜನ ಬದುಕುತ್ತಿದ್ದರು. ಈಗ ಇಂತಹ ಒಂದೇ ಒಂದು ಮನೆ ತಾಲೂಕಿನಲ್ಲಿ ಹುಡುಕಿದರೂ ಸಿಗಲಾರದು. ಬದಲಾದ ಈ ಪರಿಸ್ಥಿತಿಗೆ ಬದಲಾದ ಆರ್ಥಿಕ ಸ್ಥಿತಿಗತಿ, ಯೋಜನೆಯ ಪ್ರೇರಣೆ, ಅನುದಾನ ಮತ್ತು ಸರಕಾರದ ಸಹಾಯಗಳೇ ಕಾರಣ. ಸ್ಥಳೀಯವಾಗಿ ಸಿಗುವ ಕಲ್ಲು, ಮಣ್ಣು, ಮರ, ಬಿದಿರು, ಮುಂತಾದವುಗಳನ್ನೇ ಬಳಸಿ ಗುಣಮಟ್ಟದಲ್ಲಿ ಉತ್ತಮವಾದ ಮನೆಗಳನ್ನು ಕಟ್ಟಿಕೊಳ್ಳುವವರಿಗೆ ಜೀವನಧಾಮ ಯೋಜನೆಯಿಂದ ಹಂಚಿನ ರೂಪದಲ್ಲಿ ಅನುದಾನ ಲಭಿಸಿದೆ. ಇರುವ ಮನೆಗಳ ದುರಸ್ತಿ ಮಾಡಿಕೊಂಡವರಿಗೂ ನೆರವು ದೊರಕಿದೆ.

ಯೋಜನೆಯು ಬೆಳ್ತಂಗಡಿ ತಾಲೂಕಿನ ದುರ್ಬಲ ವರ್ಗದ ಕುಟುಂಬಗಳಿಗೆ ಶೇ. ೧೦೦ ಹೆಂಚಿನ ಮನೆಗಳನ್ನು ಒದಗಿಸಿಕೊಡುವ ಗುರಿ ಹೊಂದಿದ್ದು, ಜೀವನಧಾಮ ಕಾರ್ಯಕ್ರಮ ಇದೀಗ 'ಸ್ವಗೃಹ ಯೋಜನೆ' ಎಂಬ ನಾಮಕರಣದೊಂದಿಗೆ ಇತರ ತಾಲೂಕು ಮತ್ತು ಜಿಲ್ಲೆಗಳಿಗೂ ಹಬ್ಬಿದೆ. ಸಹಸ್ರಾರು ಕುಟುಂಬಗಳ ಮುಳಿಹುಲ್ಲಿನ ಛಾವಣಿ ಹೆಂಚಿನ ಛಾವಣಿಯಾಗಿ ಬದಲಾಗಿದೆ. ಹೆಂಚಿನ ಛಾವಣಿಯು ಕಾಂಕ್ರೀಟ್‌ಗೆ ಪರಿವರ್ತನೆಗೊಂಡಿದೆ. ಹೊಸ ಮನೆಗಳ ನಿರ್ಮಾಣ, ಹಳೆ ಮನೆಗಳ ದುರಸ್ತಿ, ಮತ್ತು ನಿರ್ಗತಿಕರ ವಸತಿ ವ್ಯವಸ್ಥೆಯನ್ನು ಕಲ್ಪಿಸಿ ಕೊಡುವ ಈ ಕಾರ್ಯಕ್ರಮದ ಪ್ರಯತ್ನದಿಂದಾಗಿ ಈವರೆಗೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಲಕ್ಷಾಂತರ ಕುಟುಂಬಗಳು ಆಸರೆ ಮತ್ತು ಆ ಮೂಲಕ ಅಭಿವೃದ್ಧಿ ಕಂಡಿವೆ. ಉಳಿದಂತೆ ಸೌರವಿದ್ಯುತ್, ಶೌಚಾಲಯ, ಗೋಬರ್ ಗ್ಯಾಸ್ ಮುಂತಾದ ಅಳವಡಿಕೆಗಳಿಗೂ ಸ್ವಗೃಹ ಯೋಜನೆ ನೆರವಿನ ಹಸ್ತವನ್ನು ನೀಡಿದೆ.

ಶೌಚಾಲಯ ಕ್ರಾಂತಿ

ಸಮುದಾಯ ಅಭಿವೃದ್ಧಿ ಕಾರ್ಯಕ್ರಮದನ್ವಯ ಗ್ರಾಮಾಭಿವೃದ್ಧಿ ಯೋಜನೆಯು ಆರ್ಥಿಕ ನೆರವು ನೀಡಿ ಗ್ರಾಮೀಣ ಪ್ರದೇಶಗಳ ಮನೆಗಳಲ್ಲಿ ಶೌಚಾಲಯಗಳ ನಿರ್ಮಾಣ ಮಾಡಿಸಿದೆ. ಮಂಗಳೂರಿನ ಬೆಂಗರೆ ಪ್ರದೇಶದಲ್ಲಿ ನೀರಿನೊಸರು ಮೇಲ್ಭಾಗದಲ್ಲಿ ಇರುವುದರಿಂದ ಶೌಚಗುಂಡಿ ನಿರ್ಮಿಸುವುದು ಸಮಸ್ಯೆಯೆನಿಸಿತ್ತು. ಎರಡು ಸಾವಿರ ಮನೆಗಳ ಮಂದಿ ಶೌಚಕ್ಕೆ ಕಡಲಿನ ತೀರಕ್ಕೆ ಧಾವಿಸುತ್ತಿದ್ದರಲ್ಲದೆ ಶೌಚಾಲಯ ನಿರ್ಮಾಣವನ್ನು ವಿರೋಧಿಸುತ್ತಿದ್ದರು. ಗ್ರಾಮಾಭಿವೃದ್ಧಿ ಯೋಜನೆಯ ಸಮುದಾಯ ಅಭಿವೃದ್ಧಿ ಕಾರ್ಯಕ್ರಮದದ ಮೂಲಕ ಈ ಸಮಸ್ಯೆಯನ್ನು ನವೀನ ಮಾದರಿಯ ಶೌಚಗುಂಡಿಗಳ ಮುಖೇನ ಪರಿಹರಿಸಲಾಗಿದೆ. ಪೂರ್ಣ ಕಾಂಕ್ರೀಟಿನಿಂದ ಮೂರು ವಿಭಾಗಗಳ ಶೌಚಗುಂಡಿ ನಿರ್ಮಿಸಿ, ಇದರಲ್ಲಿನ ನೀರು ಶುದ್ಧೀಕರಣಗೊಂಡು ಹೊರಗೆ ಹರಿದು ಕಲ್ಮಷವಾಗದಂತೆ ಮಾಡಲಾಗಿದೆ.ಶತಮಾನಗಳಿಂದ ಜನರನ್ನು ಕಾಡುತ್ತಿದ್ದ ಶೌಚಾಲಯ ನಿರ್ಮಾಣದ ಸಮಸ್ಯೆಗೆ ಉತ್ತರ ಲಭಿಸಿದ್ದು, ಜನರು ಈಗ ಅದನ್ನು ಸ್ವಾಗತಿಸಿದ್ದಾರೆ.

ಶೌಚಾಲಯದ ಫಲಾನುಭವಿಗಳ ಆಯ್ಕೆ, ಉಪಕರಣಗಳನ್ನು ತರಿಸುವುದು, ಲಾರಿಯಿಂದ ಇಳಿಸುವುದು, ಶೌಚಾಲಯ ನಿರ್ಮಾಣ ಎಲ್ಲವೂ ಗುತ್ತಿಗೆದಾರರಿಂದ, ಸರಕಾರಿ ಅಧಿಕಾರಿಗಳಿಂದ ನಡೆದಿಲ್ಲ. ಯೋಜನೆಯ ಸ್ವಸಹಾಯ ಗುಂಪಿನ ಫಲಾನುಭವಿಗಳೇ ಈ ಕಾರ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ಮಣಿಪಾಲ ನಗರ ಪ್ರದೇಶದಲ್ಲಿರುವ ಮಂಚಿಕೇರಿಯಲ್ಲಿ ಪರಿಶಿಷ್ಟ ವರ್ಗದವರ ೧೩೦ ಮನೆಗಳಿವೆ. ಇವರು ಅಲಕ್ಷಿತರು. ಬಹುಕಾಲದಿಂದ ಹರಕು ಮನೆಗಳಲ್ಲಿ ವಾಸವಾಗಿರುವ ಅವರಿಗೆ ಸರಕಾರ ಪಹಣಿ ಪತ್ರ ನೀಡಿಲ್ಲ. ದಾರಿ, ವಿದ್ಯುತ್ ಸೌಕರ್ಯ ಒದಗಿಸಿಲ್ಲ. ಅಲ್ಲಿಗೆ ತಲೆ ಹೊರೆಯಲ್ಲೇ ಸಾಮಗ್ರಿ ಸಾಗಿಸಿ, ೭೦ ಶೌಚಾಲಯಗಳನ್ನು ಕಟ್ಟಿಸಿದ್ದು ಗ್ರಾಮಾಭಿವೃದ್ಧಿ ಯೋಜನೆಯ ದಾಖಲೆ. ಕಡಿಮೆ ವೆಚ್ಚದಲ್ಲಿ ಉತ್ತಮ ಶೌಚಾಲಯ ನಿರ್ಮಿಸುವುದರಲ್ಲಿ ಯೋಜನೆಯು ಪ್ರಶಂಸೆ ಗಳಿಸಿದೆ.[೧೪]

ಯೋಜನೆಯು ಸದಸ್ಯರಿಗೆ ಉತ್ತಮ ಪರಿಸರ ನಿರ್ಮಾಣಕ್ಕಾಗಿ ಮೂಲಭೂತ ಸೌಕರ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡುತ್ತಿದ್ದು, ೨೦೧೦-೧೧ರ ಆರ್ಥಿಕ ವರ್ಷದಲ್ಲಿ ೩೫,೪೮೯ ಶೌಚಾಲಯಗಳನ್ನು, ೫೩,೧೦೧ ಮನೆಗಳನ್ನು ಫಲಾನುಭವಿಗಳು ರಚಿಸಿರುತ್ತಾರೆ.[೧೫] ಶೌಚಾಲಯ ರಚನೆಗಾಗಿ ನೀಡುವ ಸಾಲದ ಜೊತೆಗೆ ಯೋಜನೆಯ ವತಿಯಿಂದ ರೂ. ೪೦೦/- ರಿಂದ ರೂ. ೧,೫೦೦/-ವರೆಗಿನ ಅನುದಾನವನ್ನು ನೀಡಲಾಗುತ್ತಿದೆ. ಕೆರೆ, ಬಾವಿ ರಚನೆಗಾಗಿ ದೀರ್ಘಾವಧಿ ಸಾಲವನ್ನು ನೀಡುತ್ತಿದೆ.

ಜನಜಾಗೃತಿ-ಜನಾಂದೋಲನ ಕಾರ್ಯಕ್ರಮ

ಗ್ರಾಮೀಣ ಪ್ರದೇಶಗಳಲ್ಲಿ ಬದುಕು ಕಟ್ಟಿಕೊಂಡಿರುವ ಅನೇಕ ಮಂದಿ ಮಧ್ಯಮವರ್ಗ ಮತ್ತು ಬಡಜನರು ಮಧ್ಯವ್ಯಸನದ ದಾಸರಾಗಿರುವುದು ಇಂದು ನಿನ್ನೆಯ ವಿಚಾರವಲ್ಲ. ವಿಶೇಷವಾಗಿ ಹಳ್ಳಿಗಳಲ್ಲಿನ ಮಧ್ಯವ್ಯಸನದ ಅವಾಂತರಕ್ಕೆ ಶತಮಾನಗಳ ಚರಿತ್ರೆ ಇದೆ. ಮಧ್ಯಪಾನದ ಚಟಕ್ಕೆ ಮಾರುಹೋಗಿ ತಮ್ಮ ಬದುಕನ್ನೇ ಕಳೆದುಕೊಂಡ ಸಹಸ್ರಾರು ನಿದರ್ಶನಗಳು ನಮ್ಮ ಮುಂದಿವೆ. ಇದರಿಂದಾಗಿ ಗ್ರಾಮೀಣ ಪರಿಸರದ ಬಡಕುಟುಂಬಗಳ ಜೀವನಮಟ್ಟ ಆಘಾತಕಾರಿ ಕುಸಿತವನ್ನು ಕಂಡಿದೆ. ವಿಶೇಷವಾಗಿ ಹಳ್ಳಿಯ ಮಹಿಳೆಯರು ಮತ್ತು ಪುಟ್ಟ ಮಕ್ಕಳು ಅನ್ನಕ್ಕಾಗಿ ಪರಿತಪಿಸುವ ಶೋಚನೀಯ ಸ್ಥಿತಿ ನಿರ್ಮಾಣವಾಗಿದೆ. ಅವರಿಗೆ ಸಾಮಾಜಿಕವಾಗಿ ಗೌರವ ಮತ್ತು ಮರ್ಯಾದೆಯಿಂದ ಬದುಕುವುದು ಸಹ ಕಷ್ಟಸಾಧ್ಯವೆನಿಸಿದೆ. ಈ ನಿಟ್ಟಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಅಸ್ತಿತ್ವಕ್ಕೆ ಬಂದ ಜನಜಾಗೃತಿ ವೇದಿಕೆ ಮತ್ತು ಮಧ್ಯವರ್ಜನಾ ಶಿಬಿರಗಳು ಮಧ್ಯಮುಕ್ತ ಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿವೆ. ಗ್ರಾಮಾಭಿವೃದ್ಧಿ ಯೋಜನೆಯಡಿ ನಡೆಯುವ ಮದ್ಯ ವಿರೋಧಿ ಚಳವಳಿ ಅತ್ಯಂತ ಪರಿಣಾಮಕಾರಿಯಾದ ಉಪಕ್ರಮವಾಗಿದೆ. ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದೊಂದಿಗೆ ವಿವಿಧ ತಾಲೂಕುಗಳಲ್ಲಿರುವ ಜನಜಾಗೃತಿ

ವೇದಿಕೆಗಳ ಸಹಯೋಗದೊಂದಿಗೆ ಕರ್ನಾಟಕ ರಾಜ್ಯದಾದ್ಯಂತ ಜರುಗುತ್ತಿರುವ ಮದ್ಯವರ್ಜನಾ ಶಿಬಿರಗಳು ಬಡಜನರ ಬದುಕಿನ ಗುರಿಯನ್ನೇ ಬದಲಾಯಿಸಿವೆ. ಕತ್ತಲೆ ಮುಸುಕಿದ್ದ ಅನೇಕ ಕುಟುಂಬಗಳಿಗೆ ಹೊಸಬೆಳಕು ನೀಡಿದೆ. ಕುಟುಂಬ ಕಲಹ, ದೌರ್ಜನ್ಯ, ಆರ್ಥಿಕ ದುಃಸ್ಥಿತಿಯಿಂದ ನಡೆಯುತ್ತಿದ್ದ ಅನೇಕ ಕುಟುಂಬಗಳು ಒಂದು ನಿರ್ದಿಷ್ಟ ನೆಲೆಯನ್ನು ತಲಪಿವೆ. ಇದು ದೇಶಕ್ಕೆ ಒಂದು ಮಾದರಿಯಾಗಿರುವ ಯೋಜನೆ. ಕಳೆದ ೧೪ ವರ್ಷಗಳಿಂದ ಮದ್ಯವರ್ಜನಾ ಶಿಬಿರಗಳು ನಿರಂತರವಾಗಿ ನಡೆಯುತ್ತಿದ್ದು ಜನಜಾಗೃತಿ ಅಭಿಯಾನದ ಪರಿಣಾಮವಾಗಿ ಸುಮಾರು ೩೦,೦೦೦ ಕ್ಕೂ ಹೆಚ್ಚು ಮಂದಿ ಮದ್ಯಪಾನವನ್ನು ತ್ಯಜಿಸಿ ತಮ್ಮ ಬಾಳಿನಲ್ಲಿ ನೆಮ್ಮದಿ ಕಂಡುಕೊಂಡಿದ್ದರೆ, ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆಗೊಂಡಿದ್ದಾರೆ. ಮದ್ಯಮುಕ್ತರು ಮತ್ತೆ ಮದ್ಯವ್ಯಸನಿಗಳಾಗದಂತೆ ಯೋಜನೆಯು ಕಾಲದಿಂದ ಕಾಲಕ್ಕೆ ಗಮನಹರಿಸುತ್ತದೆ. ಮದ್ಯ ವಿಸರ್ಜನದ ಶಿಬಿರಗಳಿಗೆ ಬಂದ ಮದ್ಯವ್ಯಸನಿಗಳು ಶಿಬಿರಾಂತ್ಯದಲ್ಲಿ ಆ ಪಿಡುಗಿನಿಂದ ಮುಕ್ತರಾಗಿ ನಲುವತ್ತೆಂಟು ಮಂದಿಗೊಂದರಂತೆ 'ನವಜೀವನ ಸಮಿತಿ'ಯನ್ನು ರಚಿಸಿಕೊಳ್ಳುತ್ತಾರೆ. ಈ ಸಮಿತಿಯು ವಾರಕ್ಕೊಮ್ಮೆ ಸಭೆ ಸೇರಿ ಉಳಿತಾಯ, ಉಪನ್ಯಾಸ, ಭಜನೆ, ಅನುಭವ ವಿನಿಮಯ ಮಾಡಿಕೊಳ್ಳುವ ಮೂಲಕ ಮತ್ತೆ ಸದಸ್ಯರು ಕುಡಿತಕ್ಕೆ ಬಲಿ ಬೀಳದಂತೆ ಎಚ್ಚರವಹಿಸುತ್ತದೆ. ಜೊತೆಗೆ ಹೊಸದಾಗಿ ಮದ್ಯವಿಸರ್ಜನ ಶಿಬಿರಗಳು ಜರಗುವಾಗ ಅಲ್ಲಿನ ಶಿಬಿರಗಳಿಗೆ ವ್ಯಸನಿಗಳನ್ನು ಆರಿಸಿ ಕಳುಹಿಸಿಕೊಡುವ ಕೆಲಸ ಮಾಡುತ್ತದೆ.

ಮೂಲ ಸೌಕರ್ಯಾಭಿವೃದ್ಧಿ :

ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಗ್ರಾಮ ಕಲ್ಯಾಣ ಯೋಜನೆಯಡಿ ವಿವಿಧ ಜಿಲ್ಲೆಗಳಲ್ಲಿರುವ ಗ್ರಾಮಗಳ ಮೂಲಭೂತ ಅವಶ್ಯಕತೆಗಳಾದ ರಸ್ತೆ, ಸಾರ್ವಜನಿಕ ಶೌಚಾಲಯ, ಅಂಗನವಾಡಿ ಕಟ್ಟಡ, ಹಾಲು ಉತ್ಪಾದಕರ ಸಂಘಗಳ ಕಟ್ಟಡ, ಭಜನಾ ಕಟ್ಟಡಗಳನ್ನು ಕಟ್ಟಿಕೊಡಲಾಗಿದೆ. ಇದುವರೆಗೆ ೨೪೩೦ ಘಟಕಗಳಿಗೆ ಈ ಯೋಜನೆ ನೆರವು ನೀಡಿದೆ.

ಬದುಕಿದ್ದಾಗ ಗೌರವಯುತವಾಗಿ ಬಾಳಿದ ಮಾನವನ ಅಂತಿಮ ಪ್ರಯಾಣವು ಗೌರವಯುತವೂ ಸುವ್ಯವಸ್ಥಿತವೂ ಆಗಿ ನಡೆಯಬೇಕೆನ್ನುವ ಉದಾತ್ತ ಧೋರಣೆಗಳಿಂದ ಶ್ರೀ ಕ್ಷೇತ್ರದ ವತಿಯಿಂದ 'ರುದ್ರಭೂಮಿ' ಯೋಜನೆ ರೂಪತಾಳಿತು. ಈ ಯೋಜನೆಯಡಿ ಕಳೆದ ನಾಲ್ಕು ವರ್ಷಗಳಿಂದೀಚೆಗೆ ಸುಮಾರು ೨೨೮ ರುದ್ರಭೂಮಿಗಳ ನಿರ್ಮಾಣ ಹಾಗೂ ನವೀಕರಣ ನಡೆದಿದೆ. ಇಂತಹ ಯೋಜನೆಗಳು ಗ್ರಾಮಸ್ಥರ ಪಾಲ್ಗೊಳ್ಳುವಿಕೆಯ ಕಾರ್ಯಕ್ರಮವಾಗಿದೆ. ಸ್ಥಳೀಯರನ್ನು ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಲು ಪ್ರೇರೇಪಿಸುವುದಲ್ಲದೆ ಕೈಗೊಂಡ ಕಾಮಗಾರಿಗಳ ನಿರ್ವಹಣ ಗುಣಮಟ್ಟವನ್ನು ಪರಿಶೀಲಿಸಲಾಗುತ್ತದೆ.

ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುತ್ತಿರುವ ಮೂಲಭೂತ ಸೌಕರ್ಯಗಳಿಂದ ವಂಚಿತರಾದ ಬಡ ಕುಟುಂಬಗಳಿಗೆ ಯೋಜನೆಯು ಆದ್ಯತೆಯ ಮೇರೆಗೆ ಅಗತ್ಯ ಸೌಕರ್ಯಗಳನ್ನು ಒದಗಿಸುವ ಹಂತದಲ್ಲಿ ಪರಿಣಾಮಕಾರಿ ಹೆಜ್ಜೆಯನ್ನಿರಿಸಿದೆ. ೨೦೧೧-೧೧ರ ಆರ್ಥಿಕ ವರ್ಷದಲ್ಲಿ ೪೨೦ ಕುಡಿಯುವ ನೀರಿನ ಘಟಕಗಳನ್ನು, ೧೧೩ ಗ್ರಾಮೀಣ ರಸ್ತೆಗಳನ್ನು, ೧೭೫ ಭಜನಾ ಮಂದಿರಗಳನ್ನು ರಚಿಸಲು ಯೋಜನೆಯು ಆರ್ಥಿಕ ನೆರವಿನೊಂದಿಗೆ ಇತರ ಸಹಕಾರವನ್ನು ನೀಡಿದೆ. ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸಲು ರಾಜ್ಯದಲ್ಲಿ ಯೋಜನೆಯ ವತಿಯಿಂದ ಹಾಲು ಉತ್ಪಾದಕರ ಸಹಕಾರಿ ಸಂಘದ ಕಟ್ಟಡ ನಿರ್ಮಾಣ ಮತ್ತು ಉಪಕರಣಗಳ ಖರೀದಿಗಾಗಿ ರೂ. ೫೬.೭೪ ಲಕ್ಷ ಅನುದಾನವನ್ನು ನೀಡಲಾಗಿದೆ. ೨೯೫ ಸಂಘಗಳು ಇದರ ಸಂಪೂರ್ಣ ಪ್ರಯೋಜನ ಪಡೆದಿವೆ. ಹಿಂದೂ ರುದ್ರಭೂಮಿ ರಚನೆಯು ಇನ್ನೊಂದು ಪ್ರಮುಖ ಕಾರ್ಯಕ್ರಮವಾಗಿದ್ದು ಕಟ್ಟಿಗೆ ಉಳಿತಾಯಕ್ಕಾಗಿ ದಹನ ಛೇಂಬರನ್ನು ಒದಗಿಸಲಾಗಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ೧೫ ರುದ್ರಭೂಮಿ ಅಭಿವೃದ್ಧಿ ಕಾಮಗಾರಿಗಳಿಗೆ ರೂ. ೧೭.೬೫ ಲಕ್ಷ ಮೊತ್ತವನ್ನು ಒದಗಿಸಲಾಗಿದೆ.[೧೬]

ಪ್ರಾಥಮಿಕ ಶಿಕ್ಷಣಕ್ಕೆ ಉತ್ತೇಜನ :

ಗ್ರಾಮೀಣ ಪ್ರದೇಶಗಳಲ್ಲಿನ ಪ್ರಾಥಮಿಕ ಶಾಲೆಗಳು ಇಂದಿಗೂ ಸರಕಾರದ ಹೆಚ್ಚುವರಿ ಅನುದಾನದ ನಡುವೆಯೂ ಹಲವು ಬಗೆಯ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿವೆ. ಆದರೆ ಹಳ್ಳಿಗಳಲ್ಲಿ ನೆಲೆಗೊಂಡಿರುವ ಪ್ರಾಥಮಿಕ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಮಹತ್ವದ ಜವಾಬ್ದಾರಿ ಸಮಾಜದ ಮತ್ತು ನಾಗರಿಕರ ಮುಂದಿದೆ. ಈ ನಿಟ್ಟಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಕೈಗೊಂಡ ದಿಟ್ಟ ಹೆಜ್ಜೆಯೇ 'ಜ್ಞಾನ ದೀಪ ಕಾರ್ಯಕ್ರಮ'.

ಗ್ರಾಮೀಣ ಪ್ರದೇಶಗಳಲ್ಲಿ ನೆಲೆ ಕಂಡಿರುವ ಅಸಂಖ್ಯಾತ ವಿದ್ಯಾರ್ಥಿಗಳಿಗೆ ಪ್ರಾಥಮಿಕ ಶಿಕ್ಷಣವನ್ನು ವ್ಯವಸ್ಥಿತವಾಗಿ ಒದಗಿಸಬೇಕು ಎಂಬುವುದು ಯೋಜನೆಯ ಮುಂದಿರುವ ಮಹತ್ವದ ಕಾಳಜಿಯಾಗಿದೆ. ಈ ಕಾರ್ಯಕ್ರಮದ ಮುಖಾಂತರ ಗ್ರಾಮೀಣ ಪ್ರದೇಶಗಳ ಪ್ರಾಥಮಿಕ ಶಾಲೆಗಳಿಗೆ ಸ್ವಯಂ ಸೇವಾ ನೆಲೆಯಲ್ಲಿ ಶಿಕ್ಷಕರನ್ನು ನೇಮಿಸಲಾಗುತ್ತದೆ. ಸಂಬಂಧಿಸಿದ ಶಿಕ್ಷಕರಿಗೆ ಕಾಲದಿಂದ ಕಾಲಕ್ಕೆ ಸೂಕ್ತ ತರಬೇತಿ ನೀಡಲಾಗುತ್ತಿದೆ. ಈ ಕಾರ್ಯಕ್ರಮದ ಮೂಲಕ ಹಿಂದುಳಿದ ಪ್ರದೇಶಗಳ ಪ್ರಾಥಮಿಕ ಶಾಲೆಗಳ ಕಟ್ಟಡ ರಚನೆ, ಪೀಠೋಪಕರಣಗಳ ಪೂರೈಕೆ, ಆಟದ ಮೈದಾನದ ನಿರ್ಮಾಣ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯಗಳ ನಿರ್ಮಾಣ, ವಿದ್ಯುತ್ ಸಂಪರ್ಕ ಮೊದಲಾದ ಯೋಜನೆಗಳನ್ನು ಕಾರ್ಯಗತಗೊಳಿಸಲಾಗಿದೆ. ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಜ್ಞಾನದೀಪ ಶಿಕ್ಷಣ ಕಾರ್ಯಕ್ರಮಕ್ಕಾಗಿ ಕಳೆದ ೧೯ ವರ್ಷಗಳಲ್ಲಿ ೪೮.೮೧ ಕೋಟಿ ವಿನಿಯೋಗಿಸಲಾಗಿದೆ.

೨೦೧೦-೧೧ರ ಆರ್ಥಿಕ ವರ್ಷದಲ್ಲಿ ೪೫೦ ಶಾಲೆಗಳಿಗೆ ಶಿಕ್ಷಕರನ್ನು, ೪೦೦ ಶಾಲೆಗಳಿಗೆ ಬೆಂಚು ಡೆಸ್ಕ್‌ಗಳನ್ನು, ೨೬೭ ಶಾಲೆಗಳಿಗೆ ಕಟ್ಟಡ ರಚನೆ, ಬೋಧನಾ ಹಾಗೂ ಕ್ರೀಡಾ ಸಾಮಗ್ರಿಗಳನ್ನು ಯೋಜನೆಯು ಒದಗಿಸಿದೆ. ಪ್ರಸ್ತುತ ವರ್ಷದಲ್ಲಿ ಜ್ಞಾನದೀಪ ಕಾರ್ಯಕ್ರಮಗಳಿಗೆ ರೂ. ೧.೯೪ ಕೋಟಿಯನ್ನು ವಿನಿಯೋಗಿಸಲಾಗಿದೆ. [೧೭]

ನಿರ್ಗತಿಕರ ಮಾಸಾಶನ :

ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ನಿರ್ಗತಿಕರಾದ ವ್ಯಕ್ತಿ ಮತ್ತು ಕುಟುಂಬಗಳನ್ನು ಪುನರುಜ್ಜೀವನಗೊಳಿಸುವುದು ಯೋಜನೆಯ ಮುಂದಿರುವ ಮಹತ್ವದ ಸವಾಲಾಗಿದೆ. ನಿರ್ಗತಿಕರ ವಾಸ್ತವ ಸ್ಥಿತಿಗತಿಗಳನ್ನು ಅರ್ಥೈಸಿಕೊಂಡು ಅವರಿಗೆ ಅಗತ್ಯವಿರುವ ನೆರವಿನ ಸ್ವರೂಪ ಮತ್ತು ಪ್ರಮಾಣವನ್ನು ಸಮರ್ಪಕವಾಗಿ ಪರಿಶೀಲಿಸಿ ಸಾಂದರ್ಭಿಕವಾಗಿ ಯೋಜನೆಯು ಅವರಿಗೆ ಸಹಾಯಹಸ್ತವನ್ನು ಚಾಚುತ್ತದೆ. ಯೋಜನೆಯ ಕಾರ್ಯಕರ್ತರಿಂದ ಅತಿ ದುರ್ಬಲರನ್ನು ಗುರುತಿಸಿ ಅವರಿಗೆ ಮಾಸಿಕ ಸಹಾಯ ಧನವನ್ನು ನೀಡಲಾಗುತ್ತಿದೆ. ೨೦೧೦-೧೧ರ ಆರ್ಥಿಕ ವರ್ಷದಲ್ಲಿ ರೂ. ೪೩.೧೫ ಲಕ್ಷ ಮೊತ್ತವನ್ನು ಮಾಸಿಕ ಸಹಾಯಧನವಾಗಿ ೧,೮೦೧ ಮಂದಿಗೆ ನೀಡಲಾಗಿದೆ. [೧೮]

ಯೋಜನೆಯ ಬಹುಪಾಲು ಸದಸ್ಯರು ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳನ್ನು ಪ್ರತಿನಿಧಿಸುತ್ತಿದ್ದು ಅವರ ಮನೆಯ ಮಕ್ಕಳು ಉನ್ನತ ಮತ್ತು ವೃತ್ತಿಪರ ಶಿಕ್ಷಣದ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಸಕಾಲಿಕ ಮಾಹಿತಿ ಮತ್ತು ಮಾರ್ಗದರ್ಶನದ ಕೊರತೆ ಮತ್ತು ಹಣದ ಅಭಾವದಿಂದಾಗಿ ಈ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಅರ್ಧದಲ್ಲಿಯೇ ಮೊಟಕುಗೊಳಿಸುವಂತಾಗಿದೆ. ಯೋಜನೆಯ ಫಲಾನುಭವಿ ಕುಟುಂಬಗಳ ಮಕ್ಕಳಿಗೆ ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಕೈಗೊಳ್ಳಲು ಸುಜ್ಞಾನ ನಿಧಿ ಶಿಷ್ಯವೇತನ ನೀಡಲಾಗುತ್ತಿದ್ದು, ಮಾಸಿಕ ರೂ. ೪೦೦/- ರಿಂದ ೧,೦೦೦/- ದವರೆಗೆ ನೀಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ೨೦೧೦-೧೧ರ ಆರ್ಥಿಕ ವರ್ಷದಲ್ಲಿ ೩,೯೮೦ ವಿದ್ಯಾರ್ಥಿಗಳಿಗೆ ರೂ. ೧,೬೨ ಕೋಟಿ ಮೊತ್ತವನ್ನು ವ್ಯಯಿಸಲಾಗಿದೆ. [೧೯]

ಗ್ರಾಮಾಭಿವೃದ್ಧಿ ಯೋಜನೆ: ಬಿ.ಸಿ. (ಬಿಸಿನೆಸ್ ಕರೆಸ್ಪಾಂಡೆಂಟ್) ಮಾದರಿಯಾಗಿ :

ಯೋಜನೆಯು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಪ್ರತಿನಿಧಿಯಾಗಿ ಬಿ.ಸಿ ಮಾದರಿಯಲ್ಲಿ ಕೆಲಸ ಮಾಡುತ್ತಿದೆ. ಈ ಮೂಲಕ ಆರ್ಥಿಕ ಅವಕಾಶಗಳಿಂದ ವಂಚಿತವಾದ ಗ್ರಾಮೀಣ ಪ್ರದೇಶದ ಬಡ ಕುಟುಂಬಗಳನ್ನು ಪ್ರತಿಸಿಧಿಸುತ್ತಿರುವ ಬಹುಪಾಲು ಫಲಾನುಭವಿಗಳಿಗೆ ಆರ್ಥಿಕ ನೆರವು

ದೊರೆಯುವುದರೊಂದಿಗೆ ಅವರ ಔದ್ಯೋಗಿಕ ಬೇಡಿಕೆಗಳು ಹಂತ ಹಂತವಾಗಿ ಈಡೇರುತ್ತಿವೆ. ವಿಶೇಷವಾಗಿ ಗ್ರಾಮೀಣ ಪರಿಸರದ ಬಡ ಮಹಿಳೆಯರು ಈ ಮೂಲಕ ತಮ್ಮ ಸ್ವಾವಲಂಬನೆಯ ಕನಸನ್ನು ನಿಧಾನಗತಿಯಲ್ಲಿ ಸಾಕಾರಗೊಳಿಸಿಕೊಳ್ಳುತ್ತಿದ್ದಾರೆ. ಇದರನ್ವಯ ಜನವರಿ ೨೦೦೯ ರಿಂದ ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಸ್ವಸಹಾಯ ಸಂಘಗಳನ್ನು ರಚಿಸಿ, ಖಾತೆಗಳನ್ನು ಭಾರತೀಯ ಸ್ಟೇಟ್ ಬ್ಯಾಂಕ್‌ನ ಶಾಖೆಗಳಲ್ಲಿ ತೆರೆದು, ಆರ್ಥಿಕ ವ್ಯವಹಾರಗಳನ್ನು ಬ್ಯಾಂಕ್‌ನ ಮುಖೇನ ಮಾಡಲಾಗುತ್ತಿದೆ. ಬಿ.ಸಿ. ಮಾದರಿಯಲ್ಲಿ ಬ್ಯಾಂಕಿನ ಸೇವೆಗಳನ್ನು ಸ್ವಸಹಾಯ ಸಂಘದ ಸದಸ್ಯರ ಮನೆ ಬಾಗಿಲಿಗೆ ತಲುಪಿಸುವ ಮುಖೇನ ಅತಿ ದೊಡ್ಡ ಸಂಖ್ಯೆಯಲ್ಲಿ ಗುಂಪುಗಳ ವ್ಯವಹಾರಗಳನ್ನು ಹ್ಯಾಂಡ್ ಹೆಲ್ಡ್ ಡಿವೈಸ್ ಮುಖಾಂತರ ಮಾಡಲಾಗುತ್ತಿದೆ.

೨೦೧೦-೧೧ರ ಆರ್ಥಿಕ ವರ್ಷದಲ್ಲಿ ೩೨,೦೦೫ ಸ್ವಸಹಾಯ ಸಂಘಗಳನ್ನು ಎಸ್.ಬಿ.ಐ ಶಾಖೆಯಲ್ಲಿ ತೆರೆದು, ಇದುವರೆಗೆ ರೂ. ೨೧.೪೯ ಕೋಟಿ ಮೌಲ್ಯದ ಉಳಿತಾಯ ಮತ್ತು ರೂ. ೨೨೭.೫೩ ಕೋಟಿ ಮೌಲ್ಯದ ಸಾಲ ವಿತರಣೆಯಾಗಿದೆ.[೨೦] ಈ ಎಲ್ಲಾ ಸಂಗತಿ ಮತ್ತು ಅಂಕಿ ಅಂಶಗಳನ್ನು ಗಮನಿಸಿದಾಗ ಹಣದ ಬಹುಭಾಗ ಸಣ್ಣ ರೈತರ ಕೃಷಿ ಕಾರ್ಯಕ್ರಮಕ್ಕೆ ಬಳಕೆಯಾಗಿರುತ್ತದೆ. ಜೊತೆಗೆ ಕೃಷಿಕರು ಲೇವಾದೇವಿದಾರರು ನೀಡುವ ಸಾಲದಿಂದ ಹೊರ ಬರಲು ಈ ಕಾರ್ಯಕ್ರಮವು ಸಹಾಯಕಾರಿಯಾಗಿದೆ. ಇದರ ಪರಿಣಾಮವಾಗಿ ಅಧಿಕ ಸಂಖ್ಯೆಯ ರೈತರು ಕೃಷಿ ಚಟುವಟಿಕೆಗಳತ್ತ ಮರಳುತ್ತಿದ್ದಾರೆ.

ಕ್ಷೇತ್ರದಿಂದ ಅನುದಾನ

ಪ್ರತಿ ವರ್ಷ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ದೇವಸ್ಥಾನದ ವತಿಯಿಂದ ಯೋಜನೆಯ ಮೂಲಕ ಸಮುದಾಯ ಅಭಿವೃದ್ಧಿಗಾಗಿ ಅನುದಾನವನ್ನು ಬಿಡುಗಡೆ ಮಾಡುತ್ತಿದ್ದಾರೆ. ಧರ್ಮಸ್ಥಳದ ವತಿಯಿಂದ ನೀಡಲಾಗುವ ಅನುದಾನವನ್ನು ಸದ್ಬಳಕೆ ಮಾಡುವ ನಿಟ್ಟಿನಲ್ಲಿ ಯೋಜನೆಯೂ ಸಹ ತನ್ನ ಲಾಭವನ್ನು ಸಮುದಾಯ ಅಭಿವೃದ್ಧಿಗಾಗಿ ಬಳಕೆ ಮಾಡುತ್ತಿದೆ.

೨೦೧೦-೧೧ರ ಆರ್ಥಿಕ ವರ್ಷದಲ್ಲಿ ಯೋಜನೆಯು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ. ೨೨.೩೨ ಕೋಟಿ ಅನುದಾನವನ್ನು ಕ್ಷೇತ್ರದಿಂದ ಒದಗಿಸಲಾಗಿದೆ. ಈ ಅನುದಾನವನ್ನು ಮುಖ್ಯವಾಗಿ ಸಮುದಾಯ ಅಭಿವೃದ್ಧಿಗಾಗಿ, ಗೋಬರ್ ಗ್ಯಾಸ್ ರಚನೆ, ಶೌಚಾಲಯ ರಚನೆ, ಕೃಷಿ ಮೇಳ, ಜಲಸಂಕ್ಷಣಾ ಕಾರ್ಯಕ್ರಮ, ಸಾವಯವ ಗ್ರಾಮ ಕಾರ್ಯಕ್ರಮಗಳು ಇತ್ಯಾದಿಗಳಿಗೆ ಬಳಕೆ ಮಾಡಲಾಗಿದೆ. ಇದಲ್ಲದೇ ಯೋಜನೆಯು ಪ್ರಸಕ್ತ ವರ್ಷದಲ್ಲಿ ರೂ ೧೩.೦೦ ಕೋಟಿ ಮೊತ್ತವನ್ನು ನೆರೆ ಸಂತ್ರಸ್ತ ಜಿಲ್ಲೆಗಳಾದ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಮನೆ ರಚನೆಗಾಗಿ ಬಳಸಿಕೊಂಡಿದೆ. ಯೋಜನೆಯ ವತಿಯಿಂದ ನಿರ್ಮಿಸಲಾದ ಧಾರವಾಡ ಜಿಲ್ಲೆಯ ಕೊಂಗವಾಡದ ಹೊಸ ಮನೆಗಳನ್ನು ನಿರಾಶ್ರಿತರಿಗೆ

ಹಸ್ತಾಂತರಿಸಲಾಗಿದೆ. ಜನವರಿ ೨೦೧೦ ರಿಂದ ಒಟ್ಟು ೨೮೭೨ ಹೊಸ ಮನೆ ರಚನೆ ಹಾಗೂ ರಿಪೇರಿ ಮಾಡಿಕೊಡಲಾಗಿದೆ.[೨೧]

ರಾಜ್ಯದ ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ೧೬೦ ಗ್ರಾಮಗಳಲ್ಲಿ ಪ್ರವಾಹ ಮತ್ತು ಅತಿವೃಷ್ಟಿಯಿಂದ ಹಾನಿಗೊಳಗಾದ ೧,೨೬೧ ಮನೆಗಳ ದುರಸ್ತಿ ಮತ್ತು ಸಂಪೂರ್ಣವಾಗಿ ಬಿದ್ದು ಹೋದ ೧,೪೪೮೩ ಮನೆಗಳ ಪುನರ್ ನಿರ್ಮಾಣವನ್ನು ಈ ಕಾರ್ಯಕ್ರಮದಲ್ಲಿ ಕೈಗೊಳ್ಳಲಾಗಿದೆ. ಈ ಪೈಕಿ ಫಲಾನುಭವಿಗಳ ಅಸಹಕಾರದಿಂದ ಒಂದಷ್ಟು ಮನೆಗಳನ್ನು ಸರಿಪಡಿಸಲು ಸಾಧ್ಯವಾಗದಿದ್ದರೂ, ಅಂತಿಮವಾಗಿ ೮೩೬ ಮನೆಗಳ ದುರಸ್ತಿ ಮತ್ತು ೨,೦೩೬ ಮನೆಗಳ ಪುನರ್ ನಿರ್ಮಾಣವನ್ನು ಸಂಪೂರ್ಣಗೊಳಿಸಲಾಗಿದೆ. ಇದಕ್ಕಾಗಿ ರೂ. ೧೯.೧೪ ಕೋಟಿಯನ್ನು ವಿನಿಯೋಗಿಸಿದ್ದು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ರೂ. ೧೬.೮೫ ಕೋಟಿ ಮತ್ತು ಫಲಾನುಭವಿಗಳಿಂದ ರೂ. ೨.೨೯ ಕೋಟಿಯನ್ನು ವಿನಿಯೋಗಿಸಲಾಗಿದೆ.[೨೨] ಇದರ ಭಾಗವಾಗಿ ಧಾರವಾಡ ಜಿಲ್ಲೆಯ ಕೊಂಗವಾಡ ಮತ್ತು ಬಸಾಪುರ ಗ್ರಾಮಗಳನ್ನು ಕರ್ನಾಟಕ ಸರಕಾರದ ಕೋರಿಕೆಯಂತೆ 'ಆಸರೆ' ಕಾರ್ಯಕ್ರಮದಲ್ಲಿ ಅಳವಡಿಸಿ ಹೊಸ ಸ್ಥಳದಲ್ಲಿ ನವ ಗ್ರಾಮದ ನಿರ್ಮಾಣಕ್ಕಾಗಿ ೭೯೦ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆ. ಇವುಗಳನ್ನು ಸರಕಾರವು ಫಲಾನುಭವಿಗಳಿಗೆ ಹಸ್ತಾಂತರಿಸಿದೆ.

೪.೯ ಆಡಳಿತ ವ್ಯವಸ್ಥೆ, ಸಿಬ್ಬಂದಿ ನಿರ್ವಹಣೆ, ಆಯವ್ಯಯ ಮತ್ತು ರೇಟಿಂಗ್

ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಆರಂಭದ ದಿನಗಳಿಂದಲೂ ದಕ್ಷ ಮತ್ತು ಸುಸ್ಥಿರ ಆಡಳಿತ ವ್ಯವಸ್ಥೆಯನ್ನು ಹೊಂದಿದೆ. ಆಡಳಿತ ವಿಕೇಂದ್ರೀಕರಣದ ತತ್ವವನ್ನು ನಿರಂತರವಾಗಿ ಒಪ್ಪಿಕೊಂಡು ಬಂದ ಯೋಜನೆಯು ಈ ನಿಟ್ಟಿನಲ್ಲಿ ಪಾರದರ್ಶಕ ಹೆಜ್ಜೆಯನ್ನಿರಿಸಿದೆ. ಯೋಜನೆಯು ತನ್ನ ಚಟುವಟಿಕೆಗಳ ವಿಸ್ತರಣೆಯ ಭಾಗವಾಗಿ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ. ಸರಕಾರದ ವಿಭಿನ್ನ ಯೋಜನೆಗಳು ಮತ್ತು ಕಾರ್ಯಕ್ರಮಗಳು ಜನಸಾಮಾನ್ಯರನ್ನು ಬಲು ಹತ್ತಿರದಿಂದ ತಲುಪುವಲ್ಲಿ ಯೋಜನೆಯ ಆಡಳಿತವರ್ಗ ಎಚ್ಚರವಹಿಸಿ ಶ್ರಮಿಸಿದೆ. ಡಾ. ಹೆಗ್ಗಡೆಯವರು ಗ್ರಾಮಾಭಿಭಿವೃದ್ಧಿ ಯೋಜನೆಯ ಅಧ್ಯಕ್ಷರಾಗಿದ್ದು, ಯೋಜನೆಯ ಕಾರ್ಯಕ್ರಮವನ್ನು ನಿರೂಪಿಸಲು ತಕ್ಕ ಮಾರ್ಗದರ್ಶನವನ್ನು ಒದಗಿಸುವ ಆಡಳಿತ ಮಂಡಳಿಯನ್ನೂ ರಚಿಸಲಾಗಿದೆ. ಹಣಕಾಸು ತಜ್ಞ ಶ್ರೀ ಆರ್.ವಿ. ಶಾಸ್ತ್ರಿ, ಸಮಾಜ ಸುಧಾರಕ, ಆರ್ಥಿಕ ತಜ್ಞ ಶ್ರೀ ಕೆ.ಎಂ. ಉಡುಪ, ಶ್ರೀಮತಿ ಹೇಮಾವತಿ ವಿ ಹೆಗ್ಗಡೆಯವರು ಹಾಗೂ ಶ್ರೀ ಸುರೇಂದ್ರ ಕುಮಾರ್‌ರವರು ಆಡಳಿತ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸುವ ಮೂಲಕ ಕಾಲದಿಂದ ಕಾಲಕ್ಕೆ ಸಕಾಲಿಕ ಮಾರ್ಗದರ್ಶನ ನೀಡುತ್ತಿದ್ದಾರೆ. ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಸಹೋದರ ಶ್ರೀ ಡಿ.

ಹರ್ಷೇಂದ್ರ ಕುಮಾರ್ ಅವರು ಶ್ರೀ ಕ್ಷೇತ್ರದ ವಿವಿಧ ಇಲಾಖೆಗಳಿಂದ ಯೋಜನೆಯ ವಿವಿಧ ಕಾರ್ಯಕ್ರಮ ಮತ್ತು ಸಮಾರಂಭಗಳಿಗೆ ನೆರವನ್ನು ಒದಗಿಸುತ್ತಿದ್ದಾರೆ.

ಗ್ರಾಮಾಭಿವೃದ್ಧಿ ಯೋಜನೆ ಎಂಬ ಕನಸಿನ ಕೂಸನ್ನು ಬೆಳೆಸಿ ಸದೃಢಗೊಳಿಸಲು ಡಾ. ಹೆಗ್ಗಡೆಯವರು ನುರಿತ ನಿರ್ದೇಶಕ ಮಂಡಳಿಯನ್ನು ರಚಿಸಿದ್ದಾರೆ. ಈ ಮಂಡಳಿಯು ಯೋಜನೆಯ ಜನಪರ ಕಾರ್ಯಕ್ರಮಗಳನ್ನು ಸುಸಂಬದ್ಧವಾಗಿ ಅನುಷ್ಠಾನಗೊಳಿಸುತ್ತದೆ. ಸೇವಾ ಮನೋಭಾವನೆಯೇ ಪ್ರಧಾನವಾದ ಸೇವಾನಿರತರನ್ನು, ಯೋಜನಾಧಿಕಾರಿಗಳನ್ನು, ಮೇಲ್ವಿಚಾರಕರನ್ನು ಇದಕ್ಕಾಗಿ ನಿಯುಕ್ತಿಗೊಳಿಸಲಾಗಿದೆ. ಧರ್ಮಾಧಿಕಾರಿಗಳು ಧರ್ಮೋನ್ನತಿಯ ಗುರಿಯಿರಿಸಿಕೊಂಡಿರುವ ಮಾನವ ಬದುಕಿನ ಉತ್ಕರ್ಷದ ಮಹಾಕಾರ್ಯಕ್ಕೆ, ಸಾಮಾನ್ಯರ ಸಹಕಾರವೂ ಸಾಕಷ್ಟು ದೊರೆಯುತ್ತಿದೆ.

ಯೋಜನೆಯು ತನ್ನ ಎಲ್ಲ ಹಂತಗಳಲ್ಲಿ ಮತ್ತು ಎಲ್ಲ ಕ್ಷೇತ್ರಗಳಲ್ಲಿ ಬೇರು ಮಟ್ಟದಿಂದ ಪ್ರಗತಿಯ ಪಥದಲ್ಲಿ ಸಾಗಬೇಕಾಗಿರುವ ಹಿನ್ನೆಲೆಯಲ್ಲಿ ಇಲ್ಲಿನ ಸಿಬ್ಬಂದಿಗಳ ಪಾತ್ರ ಅತ್ಯಂತ ಹಿರಿದು. ಯೋಜನೆಯು ಎಳೆಯ ತಲೆಮಾರಿನ ಸಿಬ್ಬಂದಿಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಮೇಲೆ ತುಂಬು ಭರವಸೆ ಇಟ್ಟಿದೆ. ಇಲ್ಲಿನ ಎಲ್ಲಾ ಸಿಬ್ಬಂದಿಗಳು ಹಳ್ಳಿಯ ಮೂಲೆ ಮೂಲೆಗಳಿಗೆ ತೆರಳಿ ಬಡ ಕುಟುಂಬಗಳಿಗೆ ಅರಿವು ಮೂಡಿಸುವ ಪ್ರಾಮಾಣಿಕ ಪ್ರಯತ್ನಗಳೊಂದಿಗೆ ಕಾರ್ಯನಿರ್ವಹಿಸಿದ್ದಾರೆ. ಮಾತ್ರವಲ್ಲ ಕಾಲದಿಂದ ಕಾಲಕ್ಕೆ ಹತ್ತು ಹಲವು ಬಗೆಯ ಸವಾಲುಗಳನ್ನು ಎದುರಿಸುತ್ತಲೇ ತಮ್ಮ ಕರ್ತವ್ಯನಿಷ್ಠೆಯನ್ನು ಮೆರೆದಿದ್ದಾರೆ. ಗ್ರಾಮ ಮಟ್ಟದಲ್ಲಿ ದುಡಿಯಲು ಯೋಜನೆಯು ತರಬೇತಿಗೊಳಿಸಿದ ೩,೩೫೯ ಪೂರ್ಣಾವಧಿ ಸಿಬ್ಬಂದಿ ವರ್ಗವನ್ನು ನಿಯೋಜಿಸಿದೆ. ಇದರಲ್ಲಿ ೧,೩೪೧ ಮಹಿಳಾ ಸಿಬ್ಬಂದಿ, ೨,೦೧೮ ಪುರುಷರು. ಯೋಜನೆಯು ಗ್ರಾಮ ಮಟ್ಟದ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಇಲ್ಲಿನ ಕೆಲಸಗಳು ಪಾರದರ್ಶಕವಾಗಿ ನಡೆಯಲು ಅನುಕೂಲವಾಗುವಂತೆ ೩,೬೧೦ ಒಕ್ಕೂಟಗಳ ರಚನೆ ಮಾಡಿದೆ. ಈ ಮೂಲಕ ಯೋಜನೆಯ ಕೆಲಸಗಳು ಅತ್ಯಂತ ಪಾರದರ್ಶಕವಾಗಿ ನಡೆಯಲು ಸಾಧ್ಯವಾಗಿದೆ.

ಯೋಜನೆಯು ವ್ಯವಸ್ಥಿತವಾಗಿ ನಡೆಸುತ್ತಿರುವ ಕಿರು ಆರ್ಥಿಕ ವ್ಯವಹಾರ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ವಿವಿಧ ಗ್ರಾಮಗಳಲ್ಲಿ ಅಥವಾ ಕಾರ್ಯಕ್ಷೇತ್ರಗಳಲ್ಲಿ ಒಟ್ಟು ೭೬೭ ಸೇವಾನಿರತರೂ, ವಿವಿಧ ವಲಯಗಳಲ್ಲಿ ೧೧೦ ಮೇಲ್ವಿಚಾರಕರೂ, ೯೧ ಲೆಕ್ಕಪರಿಶೋಧಕರೂ ಕ್ರಮಬದ್ಧವಾಗಿ ಕೆಲಸ ಮಾಡುತ್ತಾರೆ. ೧೯ ಯೊಜನಾ ಕಚೇರಿಗಳಲ್ಲಿ, ವ್ಯವಹಾರದ ಲೆಕ್ಕಾಚಾರಗಳನ್ನು ನೋಡಿಕೊಳ್ಳಲು ಸಂಪೂರ್ಣ ಗಣಕೀಕೃತ ವ್ಯವಸ್ಥೆ ಇದ್ದು, ಇದಕ್ಕೆ ಬೇಕಾದ ಸಾಫ್ಟವೇರನ್ನು ಯೋಜನೆಯಲ್ಲಿಯೇ ತಯಾರಿಸಲಾಗಿದೆ. [೨೨] ಯೋಜನೆ

ಕಛೇರಿಗಳಲ್ಲಿ ಇದಕ್ಕಾಗಿ ವಿಶೇಷ ಪ್ರಬಂಧಕರಿದ್ದಾರೆ. ಕಿರು ಆರ್ಥಿಕ ವ್ಯವಹಾರದ ಜೊತೆಯಲ್ಲಿ ಯೋಜನೆಯ ಸಿಬ್ಬಂದಿ ಇತರ ಕಾರ್ಯಕ್ರಮಗಳನ್ನೂ ನಿರ್ವಹಿಸುತ್ತದೆ.

ಯೋಜನೆಯ ಲೆಕ್ಕಾಚಾರಗಳು ಪಾರದರ್ಶಕವಾಗಿದ್ದು, ಆಯವ್ಯಯವು ಪ್ರತಿ ಆರ್ಥಿಕ ವರ್ಷದ ಅಂತ್ಯದಲ್ಲಿ ವಾರ್ಷಿಕ ವರದಿಯಲ್ಲಿ ಪ್ರಕಟವಾಗುತ್ತದೆ. ದೇಶದ ಪ್ರಮುಖ ಹಣಕಾಸು ವ್ಯವಹಾರದ ರೇಟಿಂಗ್ ಸಂಸ್ಥೆ "ದ ಕ್ರಿಸಿಲ್" (CRISIL) ಯೋಜನೆಯ ಕಿರು ಆರ್ಥಿಕ ವ್ಯವಹಾರದ ರೇಟಿಂಗ್ ಅಡಿ ಎಂ.ಎಫ್.ಆರ್. ೩ ದರ್ಜೆ ನೀಡಿರುತ್ತದೆ. ಅವರ ಪ್ರಕಾರ ಈ ವ್ಯವಹಾರದಲ್ಲಿ ಯೋಜನೆಗೆ ಲಾಭ ಮಾಡುವ ದೃಷ್ಟಿಕೋನ ಇಲ್ಲದಿರುವುದು ಒಂದು ದುರ್ಬಲ ಅಂಶವಾಗಿರುತ್ತದೆ.

ಹೀಗೆ ಗ್ರಾಮಾಭಿವೃದ್ಧಿ ಯೋಜನೆಯು ಬಡಜನರ ಬದುಕಿನ ನೋಟವನ್ನೇ ಬದಲಾಯಿಸಿದೆ. ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಗೆ ಬೇಕಾದ ಎಲ್ಲ ಪರಿಕರಗಳನ್ನು ಒದಗಿಸಿದ ಈ ಪ್ರಯೋಗಶೀಲ ಯೋಜನೆಯ ಆಡಳಿತ ನಿರ್ವಹಣೆ ಜಗತ್ತಿಗೆ ಮಾದರಿಯೆನಿಸಿದೆ. ಮಾನವನ ಬದುಕಿನ ಉನ್ನತಿಗಾಗಿ ಏನು ಮಾಡಬಹುದೆಂಬುದಕ್ಕೆ ಸಾಕ್ಷಿಯನ್ನು ನೀಡಿರುವ ಡಾ. ಹೆಗ್ಗಡೆಯವರು ಬಾಹುಬಲಿಯ ಎತ್ತರಕ್ಕೆ ತಮ್ಮ ಯಶಸ್ಸಿನ ಪತಾಕೆಯನ್ನು ಏರಿಸಿದ್ದಾರೆ.

೪.೧೦ ಪ್ರಶಸ್ತಿಯ ಗರಿ

ಆರ್ಥಿಕ ಶಕ್ತಿಯಿಂದ ಬದುಕಿನ ದಾರಿಯನ್ನೇ ಕಾಣದ ಕುಟುಂಬಗಳಿಗೆ ಉದ್ಧಾರದ ಹಾದಿ ತೋರಿಸಿದ ಡಾ। ಡಿ. ವೀರೇಂದ್ರ ಹೆಗ್ಗಡೆಯವರ ಮಹೋನ್ನತವಾದ ಈ ಕೊಡುಗೆಗೆ ಅನೇಕ ಪ್ರಶಸ್ತಿಗಳು ಬಂದಿವೆ. ಅವುಗಳಲ್ಲಿ ಮುಖ್ಯವಾದವು ಭಾರತೀಯ ವಾಣಿಜ್ಯ ಮತ್ತು ಉದ್ಯಮ ಮಂಡಳಿಯ ಫಿಕ್ಕಿ ಪ್ರಶಸ್ತಿ (೧೯೯೫), ಭಾರತೀಯ ವಾಣಿಜ್ಯ ಮಂಡಳಿಯ ಐಎಂಸಿ ಪ್ರಶಸ್ತಿ (೧೯೯೮), ಸ್ಪಂದನ ಪ್ರಶಸ್ತಿ (೨೦೦೦), ನಬಾರ್ಡ್ ರಾಜ್ಯ ಪ್ರಶಸ್ತಿ (೧೯೯೯ ಮತ್ತು ೨೦೦೦ ರಲ್ಲಿ – ೨ ಸಲ) ಮತ್ತು ಚೌಧುರಿ ಚರಣಸಿಂಗ್ ಪ್ರಶಸ್ತಿ (೨೦೦೩). ಕಿರು ಹಣಕಾಸು ಮತ್ತು ಕಿರು ಆರ್ಥಿಕ ವ್ಯವಹಾರ ನಿರ್ವಹಣೆಗಾಗಿ ಇತ್ತೀಚೆಗೆ ಗ್ರಾಮಾಭಿವೃದ್ಧಿ ಯೋಜನೆಗೆ ಅಂರರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ೨೦೦೫–೨೦೦೬ರ ಕಾಲಾವಧಿಯಲ್ಲಿ ಸಾಧಿಸಿದ ಪ್ರಗತಿ, ಏರಿದ ಎತ್ತರವನ್ನು ಪರಿಶೀಲಿಸಿದಾಗ ಅನೇಕ ಮಹತ್ವದ ಫಲಿತಗಳನ್ನು ಕಾಣಬಹುದು. ರಾಷ್ಟ್ರಮಟ್ಟದ ಯೋಜನಾ ಆಯೋಗ ರಾಷ್ಟ್ರದ ಪ್ರಗತಿಗಾಗಿ ಹಾಕಿಕೊಂಡ ಯೋಜನೆಯಲ್ಲಿ 'ಧರ್ಮಸ್ಥಳ ಮಾದರಿ'ಯನ್ನು ಅಳವಡಿಸಲು ನಡೆಸಿದ ಪ್ರಯತ್ನ ಹಾಗೂ ಈ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ

ರಾಷ್ಟ್ರೀಯ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸಲು ನಡೆಸಿದ ಪ್ರಯತ್ನ ಎರಡೂ ಬಹಳ ಮಹತ್ವದ್ದು. ವರ್ಷ ವರ್ಷವೂ ಡಾ. ವಿರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಹಲವಾರು ಜನ ಕಲ್ಯಾಣ ಯೋಜನೆಗಳು ಹೊಸದಾಗಿ ಅನುಷ್ಠಾನಗೊಳ್ಳುತ್ತಿರುವುದು ಸಂತಸದ ಸಂಗತಿ.

೪.೧೧ ಉಪಸಂಹಾರ

೨೦೧೦-೧೧ನೇ ಸಾಲಿನಲ್ಲಿ ಯೋಜನೆಯು ಗಮನೀಯವಾದ ಸಾಧನೆಯನ್ನು ನಿರ್ವಹಿಸಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಯೋಜನೆಯು ತನ್ನ ಕಾರ್ಯವ್ಯಾಪ್ತಿಯೊಳಗೆ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಪ್ರಗತಿ ಶ್ಲಾಘನೀಯ. ಅಂತೆಯೇ ಯೋಜನೆಯು ದಿನದಿಂದ ದಿನಕ್ಕೆ ನಾಡಿನ ಮೂಲೆಮೂಲೆಗಳಲ್ಲಿ ಹೆಚ್ಚು ಹೆಚ್ಚು ಗ್ರಾಮೀಣ ಜನಸಮುದಾಯವನ್ನು ತಲುಪುತ್ತಿದೆ. ೨೦೧೧-೧೨ನೇ ಸಾಲಿನ ಕ್ರಿಯಾ ಯೋಜನೆಯ ಪ್ರಕಾರ ಯೋಜನೆಯು ಎರಡು ಮಿಲಿಯ ಕುಟುಂಬಗಳನ್ನು ತಲುಪಲಿದ್ದು, ಹೊಸದಾಗಿ ಏಳು ಲಕ್ಷ ಕುಟುಂಬಗಳು ಯೋಜನೆಯ ಪ್ರಯೋಜನ ಪಡೆಯಲಿವೆ.

ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಲ್.ಎಚ್. ಮಂಜುನಾಥ್ ಅವರು ತಮ್ಮ ಕೃತಿಯೊಂದರಲ್ಲಿ ಯೋಜನೆಯ ಸ್ವರೂಪದ ಕುರಿತು ಹೀಗೆ ಬರೆಯುತ್ತಾರೆ. "ಅಂದಿನಿಂದ ಇಂದಿನವರೆಗೆ ಯೋಜನೆಯು ಗ್ರಾಮೀಣ ಜೀವನದ ವಿವಿಧ ಆಯಾಮಗಳಲ್ಲಿ ಬದಲಾವಣೆಯ ಹರಿಕಾರನಾಗಿ, ಹಿಂದುಳಿದ ಗ್ರಾಮಗಳಲ್ಲಿ ಬದುಕನ್ನು ಹಸನುಗೊಳಿಸುವಲ್ಲಿ ಗ್ರಾಮಸ್ಥರಿಗೆ ಪ್ರೇರಣೆ, ಮಾಹಿತಿ, ಮಾದರಿಯನ್ನು ನೀಡುತ್ತ ಬಂದಿದೆ. ತನ್ನ ಸಮುದಾಯ ಕಾರ್ಯಕ್ರಮದ ಮುಖೇನ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪರಿಚಿತವಾಗಿದೆ. ಇತ್ತ ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ – ಈ ಮೂರು ಜಿಲ್ಲೆಗಳಲ್ಲಿ ಬಡತನ, ಅಜ್ಞಾನ, ನಿರಕ್ಷರತೆ, ಮದ್ಯಪಾನಾದಿ ದುಶ್ಚಟಗಳ ವಿರುದ್ಧ ತೀವ್ರ ಸಮರವನ್ನು ಸಾರಿದೆ.

ವಿವಿಧ ಧರ್ಮ, ಜಾತಿ, ಆರ್ಥಿಕತೆಗಳುಳ್ಳವರಾದರೂ ಗ್ರಾಮೀಣರೆಲ್ಲ ಒಂದು ಎಂಬ ಭಾವನೆಯನ್ನು ಮೂಡಿಸುವಲ್ಲಿ ಈ ಯೋಜನೆಯು ಶ್ರಮಿಸುತ್ತಿದೆ. ದುರ್ಬಲರ ಸಬಲೀಕರಣಕ್ಕೆ ಕಾರ್ಯಕ್ರಮಗಳನ್ನು ರೂಪಿಸಿದೆ. ಒಗ್ಗಟ್ಟಿನಿಂದ, ಸಾಮುದಾಯಿಕ ಪಾಲ್ಗೊಳ್ಳುವಿಕೆಯಿಂದ, ಲಭ್ಯಸಂಪನ್ಮೂಲಗಳ ಸಮರ್ಪಕ ಬಳಕೆಯಿಂದ, ದೂರದೃಷ್ಟಿ ಮತ್ತು ಬದ್ಧತೆಯಿಂದ ಗ್ರಾಮೀಣ ಸಮಸ್ಯೆಗಳನ್ನು ಬಗೆಹರಿಸಬಹುದೆಂಬುದನ್ನು ಯೋಜನೆಯು ಕಳೆದ ಮೂರು ದಶಕಗಳಲ್ಲಿ ಯಶಸ್ವಿಯಾಗಿ ತೋರಿಸಿಕೊಟ್ಟಿದೆ". [೨೪]

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ೧೯೮೨ರಲ್ಲಿ ಆರಂಭವಾದಾಗಿನಿಂದಲೂ ಅದು ಜನರ ಬದುಕಿನಲ್ಲಿ ತಂದ ಬದಲಾವಣೆಗಳು ಸರಕಾರ ಮತ್ತು ಸರಕಾರೇತರ ಸಂಸ್ಥೆಗಳು ಮೂಗಿನ

ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿವೆ. ಹಲವು ಬಗೆಯ ಸರಕಾರದ ಯೋಜನೆಗಳ ಹಾಗೆ ಇದೂ ದುರುಪಯೋಗವಾದೀತೆಂಬ ಹಲವರ ಭಾವನೆ ಪ್ರತಿಕ್ಷಣಕ್ಕೂ ಬದಲಾಗುತ್ತ ಹೋಗಿದೆ. ತಮ್ಮ ನೆರೆಹೊರೆಯ ಮಂದಿಯ ಬದುಕಿನಲ್ಲಿ ಕಂಡ ಅದ್ಭುತ ಪರಿವರ್ತನೆಯಿಂದ. ಅಣುವಾಗಿದ್ದ ಬದುಕು ಇಂದು ಅನೇಕರಿಗೆ ಉನ್ನತಿಯ ತುತ್ತತುದಿಗೇರಿದೆ. ಅಸಂಬದ್ಧವಾಗಿದ್ದ ದಾರಿ ಸುಸಂಬದ್ಧಗೊಂಡು ಸಂಸ್ಕೃತಿ, ಸಿರಿವಂತಿಕೆಗಳನ್ನು ಜತೆಗೂಡಿಸಿಕೊಂಡಿದೆ. ಪ್ರಾಮಾಣಿಕತೆ, ಸನ್ನಡತೆಗಳಿಗೆ ನಾಂದಿ ಹಾಡಿದೆ. ಇಂಥ ಯೋಜನೆಗೆ ಸರಿಸಾಟಿಯಾಗಿ ಇನ್ನೊಂದನ್ನು ಹೆಸರಿಸಲು ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ಬಡಜನರ ಬದುಕಿನ ಉದ್ಧಾರಕ್ಕೆ ಡಾ. ಹೆಗ್ಗಡೆಯವರು ಒದಗಿಸಿದ ಒಂದು ನಿಧಿ ಇದು. ಈ ಯೋಜನೆ ಅಮೃತ ಕಳಶವಾಗಿ ಸದಾ ಸರ್ವದಾ ಜನಜೀವನದ ಜೀವನಾಡಿಯಾಗಲಿ ಎಂಬುದು ಸಹೃದಯರ ಹಾರೈಕೆಯಾಗಿದೆ.

ಅಧ್ಯಾಯ ಟಿಪ್ಪಣಿ

೧. ಡಾ. ಖ. ವೀರೇಂದ್ರ ಹೆಗ್ಗಡೆಯವರು ಮಂಗಳೂರು ಆಕಾಶವಾಣಿಗೆ ನೀಡಿದ ಸಂದರ್ಶನದಲ್ಲಿ ಲಭ್ಯವಾದ ಮಾಹಿತಿ.

೨. ಬೆಂಗಳೂರಿನ ಎಂ.ಪಿ.ಡಿ.ಎಸ್ ಸಂಸ್ಥೆಯ ವರದಿಯಲ್ಲಿ ಲಭ್ಯವಾದ ಮಾಹಿತಿ

೩. ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಲ್. ಎಚ್ ಮಂಜುನಾಥ್ ಅವರೊಂದಿಗೆ ನಡೆಸಿದ ಸಂದರ್ಶನದಲ್ಲಿ ಲಭ್ಯವಾದ ಮಾಹಿತಿ.

೪. ೨೦೧೦.೧೧ನೇ ಆರ್ಥಿಕ ವರ್ಷದ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಾರ್ಷಿಕ ವರದಿಯಲ್ಲಿ ಲಭ್ಯವಾದ ಮಾಹಿತಿ.

೫. ಪುನರುಕ್ತಿ ೪

೬. ಪುನರುಕ್ತಿ ೪

೭. ಪುನರುಕ್ತಿ ೪

೮. ಪುನರುಕ್ತಿ ೪

೯. ಪುನರುಕ್ತಿ ೪

೧೦. ಪುನರುಕ್ತಿ ೪

೧೧. ಪುನರುಕ್ತಿ ೧

೧೨. ಪುನರುಕ್ತಿ ೪

೧೩. ಪುನರುಕ್ತಿ ೪

೧೪. ಪುನರುತ್ಕಿ ೩

೧೫. ಪುನರುಕ್ತಿ ೪

೧೬. ಪುನರುಕ್ತಿ ೪

೧೭. ಪುನರುಕ್ತಿ ೪

೧೮. ಪುನರುಕ್ತಿ ೪

೧೯. ಪುನರುಕ್ತಿ ೪

೨೦. ಪುನರುಕ್ತಿ ೪

೨೧. ಪುನರುಕ್ತಿ ೪

೨೨. ಪುನರುಕ್ತಿ ೪

೨೩. ಪುನರುಕ್ತಿ ೪

೨೪. ಪುನರುಕ್ತಿ ೩

ಅಧ್ಯಾಯ ೫

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ

(ಮಾದರಿ ಅಧ್ಯಯನ ಸಮೀಕ್ಷೆಯ ದತ್ತಾಂಶಗಳ ವಿವರಣೆ ಮತ್ತು ವಿಶ್ಲೇಷಣೆ)

ಅಧ್ಯಾಯ ೫

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ

೫.೧ ಕುಂದಾಪುರ ತಾಲೂಕು: ಭೌಗೋಳಿಕ ಆವರಣ

ಕರಾವಳಿ ಕರ್ನಾಟಕದ ಇತಿಹಾಸ ಪ್ರಸಿದ್ದ ತಾಲೂಕು ಕೇಂದ್ರಗಳಲ್ಲಿ ಕುಂದಾಪುರ ತಾಲೂಕಿಗೆ ಮಹತ್ವದ ಸ್ಥಾನವಿದೆ. ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ನಡುವೆಯೂ ತನ್ನದೆ ಆದ ಸಾಂಸ್ಕೃತಿಕ ಬೇರುಗಳನ್ನು ಇಂದಿಗೂ ಸಹ ಬಹುಮಟ್ಟಿಗೆ ಉಳಿಸಿಕೊಂಡ ಭೂಪ್ರದೇಶ ಇದು. ಕುಂದಾಪುರ ನಗರವು ತಾಲೂಕು ಕೇಂದ್ರವಾಗಿದ್ದು ಜಿಲ್ಲಾ ಕೇಂದ್ರ ಉಡುಪಿಯಿಂದ ಸುಮಾರು ೩೪ ಕಿ. ಮಿ ದೂರದಲ್ಲಿದೆ. ಈ ಭೂಪ್ರದೇಶವು ಸಮುದ್ರ ಮಟ್ಟದಿಂದ ೨೬ ಅಡಿ ಎತ್ತರದಲ್ಲಿದೆ. ಹೆಂಚಿನ ಕಾರ್ಖಾನೆ ಮತ್ತು ಹೊಟೆಲ್ ಉದ್ಯಮಕ್ಕೆ ಕುಂದಾಪುರವು ಬಲು ಹಿಂದಿನಿಂದಲೂ ಪ್ರಸಿದ್ಧಿ. ಕುಂದವರ್ಮನೆಂಬ ಅರಸ ಪಂಚಗಂಗಾವಳಿಯ ಹತ್ತಿರ ಕಟ್ಟಿಸಿರುವ ಕುಂದೇಶ್ವರ ದೇವಸ್ಥನ ಇಲ್ಲಿನ ಪ್ರಮುಖ ಶ್ರದ್ಧಾ ಕೇಂದ್ರವಾಗಿದೆ. ಈ ದೇವಸ್ಥಾನದ ಕಾರಣದಿಂದಲೇ ಕುಂದಾಪುರ ಎಂಬ ಹೆಸರು ಬಂತು ಎಂಬ ಪ್ರತೀತಿಯೂ ಇದೆ. ಕುಂದ ಎಂದರೆ ಮಲ್ಲಿಗೆ ಎಂದರ್ಥ. ಮಲ್ಲಿಗೆಯನ್ನು ಈ ಪ್ರದೇಶದಲ್ಲಿ ಬಲು ಹಿಂದಿನಿಂದಲೂ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದ್ದರು.[೧] ಈ ಹಿನ್ನೆಲೆಯಲ್ಲಿ ಕುಂದಾಪುರ ಎಂಬ ಹೆಸರು ಬಂತು ಎಂಬುದು ಇನ್ನೊಂದು ಅಭಿಪ್ರಾಯವಾಗಿದೆ.

ಕುಂದಾಪುರ ತಾಲೂಕಿನ ಉತ್ತರ ಮತ್ತು ಪೂರ್ವದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳೂ, ದಕ್ಷಿಣದಲ್ಲಿ ಕಾರ್ಕಳ ಹಾಗೂ ಉಡುಪಿ ತಾಲೂಕುಗಳೂ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರವೂ ಇದ್ದು, ಇವು ಈ ತಾಲೂಕಿನ ಮೇರೆಗಳಾಗಿವೆ. ಆಡಳಿತದ ಅನುಕೂಲಕ್ಕಾಗಿ ಈ ತಾಲೂಕನ್ನು ಕುಂದಾಪುರ, ಬೈಂದೂರು ಮತ್ತು ವಂಡ್ಸೆ ಎಂಬ ಮೂರು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ಈ ತಾಲೂಕಿನಲ್ಲಿ ಒಟ್ಟು ೧೧೧ ಗ್ರಾಮಗಳಿದ್ದು, ಎಲ್ಲ ಗ್ರಾಮಗಳಲ್ಲಿಯೂ ಜನವಸತಿ ಇದೆ. ಈ ತಾಲೂಕಿನ ವಿಸ್ತೀರ್ಣ ೧೫೬೦ ಚದರ ಕಿ.ಮೀ. ಇದ್ದು, ಭೌಗೋಳಿಕವಾಗಿ ಉಡುಪಿ ಜಿಲ್ಲೆಯಲ್ಲಿಯೇ ಅತ್ಯಂತ ವಿಸ್ತಾರವಾದ ತಾಲೂಕಾಗಿದೆ. ಈ ತಾಲೂಕು ಉತ್ತರ ಅಕ್ಷಾಂಶ ೧೩° ೨೯' ಹಾಗೂ ೧೩° ೫೯' ಮತ್ತು ಪೂರ್ವ ರೇಖಾಂಶ ೭೪° ೪' ಗಳ ನಡುವೆ ವಿಸ್ತರಿಸಿದೆ.[೨]

ಈ ತಾಲೂಕಿನಲ್ಲಿ ವಿಶಿಷ್ಟ ಮಾನವ ಸಮುದಾಯವಿದೆ. ವ್ಯವಸಾಯವನ್ನು ಕೈಗೊಂಡಿರುವ ಜನರು ಅಧಿಕ ಸಂಖ್ಯೆಯಲ್ಲಿದ್ದಾರೆ ಭತ್ತದ ಕೃಷಿಯನ್ನೂ ಒಳಗೊಂಡಂತೆ ತೆಂಗು, ಅಡಿಕೆ ಮೊದಲಾದ ತೋಟದ ಬೆಳೆಗಳೊಂದಿಗೆ ತರಕಾರಿ ಮತ್ತು ವಿವಿಧ ಮಾದರಿಯ ಪುಷ್ಪಕೃಷಿಯನ್ನು ನಿರ್ವಹಿಸುತ್ತಾರೆ. ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಮೊದಲಾದ ಎಲ್ಲ ಪಂಗಡಗಳ ಜನರು ಇಲ್ಲಿ ವಾಸಿಸುತ್ತಾರೆ. ವಿವಿಧ ವೃತ್ತಿಗಳನ್ನು ಕೈಗೊಳ್ಳಬಲ್ಲ ಹಲವು ಜನಾಂಗದ ಜನರು ಇಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಕುಂದಾಪುರ ತಾಲೂಕು ಹೆಚ್ಚು ಮಳೆ ಬೀಳುವ ಭೂಪ್ರದೇಶವಾಗಿದೆ. ಇಲ್ಲಿನ ವಾಯುಗುಣದ ಮುಖ್ಯ ಲಕ್ಷಣವೆಂದರೆ ಹೆಚ್ಚು ತೇವಾಂಶ. ಆದರೆ ಬೇಸಿಗೆಯಲ್ಲಿ ಅಷ್ಟೇ ಬಿಸಿಲು, ಸೆಕೆ ಇರುತ್ತದೆ. ಜೂನ್‌ನಿಂದ ಸೆಪ್ಟಂಬರ್‌ವರೆಗೆ ಇಲ್ಲಿ ಭಾರಿ ಮಳೆಯಾಗುತ್ತದೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಉಷ್ಣತೆಯ ಪ್ರಮಣ ಹೆಚ್ಚಾಗಿರುತ್ತದೆ. ಮಧ್ಯಾಹ್ನದ ವೇಳೆ ಸಮುದ್ರದ ಕಡೆಯಿಂದ ತಂಪಾದ ಗಾಳಿ ಬೀಸುತ್ತದೆ. ಈ ಮಾದರಿಯ ಹವಾಮಾನ ಮತ್ತು ವಾಯುಗುಣ ಕೃಷಿ ಸಂಸ್ಕೃತಿ ಬೆಳೆಯಲು ಪೂರಕವಾಗಿದೆ. ಈ ತಾಲೂಕಿನ ವಾಡಿಕೆ ಮಳೆ ಪ್ರಮಾಣ ೩೭೯೨.೯ ಮಿ.ಮೀ.ಗಳು. ವಾಸ್ತವಿಕ ಸರಾಸರಿ ಮಳೆ ಪ್ರಮಾಣ ೨೯೬೮.೫ ಮಿ.ಮೀ.ಗಳು. [೨] ಒಂಭತ್ತು ವೃಷ್ಟಿಮಾಪಕ ಕೇಂದ್ರಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಮುಂಗಾರು ಮಾರುತದ ಪ್ರಭಾವದಿಂದ ಇಲ್ಲಿ ವಿಶೇಷ ಮಳೆಯಾಗುತ್ತದೆ.

ಕುಂದಾಪುರ ನಗರವು ಈ ತಾಲೂಕಿನ ಆಡಳಿತ ಕೇಂದ್ರವಾಗಿದೆ. ಕುಂದಾಪುರವು ಬಲು ಹಿಂದಿನಿಂದಲೂ ಒಂದು ಬಂದರು ಮತ್ತು ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ಹಾಲಾಡಿ, ಚಕ್ರ, ಕೊಲ್ಲೂರು, ಜಂಬೂ ಮತ್ತು ಸೂಕ್ತಿಮತಿಗಳೆಂಬ ಐದು ನದಿಗಳು ಸಂಗಮವಾಗಿ ನಿರ್ಮಾಣವಾದ ವಿಶಾಲವಾದ ಪಂಚಗಂಗಾವಳಿ ನದಿಯ ಅಳಿವೆಯ ದಕ್ಷಿಣಕ್ಕೆ ಸಮತಟ್ಟಾದ ಪ್ರದೇಶದಲ್ಲಿ ಕುಂದಾಪುರ ನೆಲೆಗೊಂಡಿದೆ. ವಿಜಯನಗರ ಅರಸರ ಕಾಲದಲ್ಲಿ ಕುಂದಾಪುರ ಒಂದು ಬಂದರು ಆಗಿತ್ತು. ಬಂದರು ನಗರ ಮಂಗಳೂರಿನಿಂದ ಕುಂದಾಪುರ ಸುಮಾರು ೯೫ ಕಿ.ಮೀ. ದೂರದಲ್ಲಿದೆ. ಹೈದರಾಲಿ ಇಲ್ಲಿ ರಚಿಸಿದ ಕೊತ್ತಳದಲ್ಲಿ ಈಗ ಸರ್ಕಾರಿ ಆಡಳಿತ ಕಛೇರಿಗಳಿವೆ. ಕುಂದಾಪುರ ಕೆಲವು ಚಿಕ್ಕ ಕೈಗಾರಿಕೆಗಳ ಮತ್ತು ಗುಡಿ ಕೈಗಾರಿಕೆಗಳ ಕೇಂದ್ರವಾಗಿದೆ. ಕುಂದಾಪುರದಲ್ಲಿ ಪ್ರತಿ ಶನಿವಾರ ಸಂತೆ ನಡೆಯುತ್ತದೆ. ಈ ಸಂತೆ ಜಿಲ್ಲೆಯಲ್ಲಿಯೇ ಪ್ರಸಿದ್ಧವಾಗಿದೆ. ಕೃಷಿ ಉತ್ಪನ್ನ ಮಾರಾಟಗಾರರ ಸಂಘವು ರಾಷ್ಟ್ರೀಯ ಹೆದ್ದಾರಿಯ ಪಕ್ಕದ ಪ್ರದೇಶದಲ್ಲಿ ವಿಶಾಲವಾದ ಕಟ್ಟಡಗಳನ್ನು ನಿರ್ಮಿಸಿ ಸರಕುಗಳ ಮಾರಾಟಕ್ಕೆ ಅನುಕೂಲ ಮಾಡಿಕೊಟ್ಟಿದೆ. ಕುಂದಾಪುರ ಪುರಸಭೆಯು ೧೯೩೫ರಲ್ಲಿ ಆರಂಭಗೊಂಡಿದ್ದು, ಈಗಾಗಲೆ ತನ್ನ ಅಮೃತಮಹೋತ್ಸವವನ್ನು ಪೂರೈಸಿದೆ. ನಗರಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಪುರಸಭೆಯು ಕಾಲದಿಂದ ಕಾಲಕ್ಕೆ ಒದಗಿಸುತ್ತ ಆ ಮೂಲಕ ತಾಲೂಕನ್ನು ಅಭಿವೃದ್ಧಿಪಡಿಸುತ್ತ ಬಂದಿದೆ.

ಕುಂದಾಪುರ ನಗರದಲ್ಲಿ ತಾಲೂಕಿನ ಎಲ್ಲ ಪ್ರಧಾನ ಕಛೇರಿಗಳಿರುವುದಲ್ಲದೆ ಉಡುಪಿ ಜಿಲ್ಲೆಯ ಉಪವಿಭಾಗಾಧಿಕಾರಿಗಳ ಕಛೇರಿ ಇದೆ. ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಗೆ ಸಂಬಂಧಿಸಿದ ಸಹಾಯಕ ಆಯುಕ್ತರ ಕಛೇರಿ, ಅರಣ್ಯ ಇಲಾಖೆಯ ವಿಭಾಗೀಯ ಕಛೇರಿ, ತಾಲೂಕು ಪಂಚಾಯತ್ ಮತ್ತು ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಛೇರಿಗಳು ಇವೆ. ಇಲ್ಲಿನ ಆಡಳಿತ ವ್ಯವಸ್ಥೆ ಕುಡಿಯುವ ನೀರಿಗಾಗಿ ಪ್ರತ್ಯೇಕ ಗಮನ ನೀಡಿದೆ. ವಿವಿಧ ಪಂಚವಾರ್ಷಿಕ ಯೋಜನೆಗಳೂ ಸೇರಿದಂತೆ ಕೇಂದ್ರ, ರಾಜ್ಯ ಸರಕಾರದ ಕಾರ್ಯಕ್ರಮಗಳ ನೆರವಿನಿಂದ ತಾಲೂಕಿನ ಜನರಿಗೆ ಗೃಹಬಳಕೆಯ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ನೀರಾವರಿ ವ್ಯವಸ್ಥೆಯನ್ನು ಒದಗಿಸಿಕೊಡಲಾಗಿದೆ. ಕುಂದಾಪುರ ಪಟ್ಟಣದ ಮಧ್ಯಭಾಗದಲ್ಲಿ ಕುಂದೇಶ್ವರ ದೇವಸ್ಥಾನವಿದ್ದು, ಇದು ನಗರದ ಪ್ರಧಾನ ದೇವಸ್ಥಾನವಾಗಿದೆ. ಇತ್ತೀಚೆಗೆ ಜೀರ್ಣೋದ್ಧಾರವಾಗಿದ್ದು, ದೇವಸ್ಥಾನ ಹೊಸ ರೂಪ ತಾಳಿದೆ. ಈ ದೇವಸ್ಥಾನದಲ್ಲಿ ಆಳುಪರಾಜರ ಶಾಸನಗಳಿವೆ. ಸಾರಸ್ವತರ ದತ್ತಾತ್ರೇಯ ದೇವಸ್ಥಾನ. ಗೌಡಸಾರಸ್ವತರ ವೆಂಕಟರಮಣ ದೇವಸ್ಥಾನ, ದೈವಜ್ಞ ಬ್ರಾಹ್ಮಣರ ಲಕ್ಷ್ಮೀನಾರಾಯಣ ದೇವಸ್ಥಾನ ಇವು ಈ ನಗರದ ಇತರ ದೇವಾಲಯಗಳು.[೨] ಈ ಹಿಂದೂ ದೇವಾಲಯಗಳಲ್ಲದೆ ಮಸೀದಿಗಳು, ಚರ್ಚುಗಳು ನಗರದಲ್ಲಿದ್ದು, ಸರ್ವ ಧರ್ಮ ಸಮನ್ವಯದ ಕೇಂದ್ರ ಇದಾಗಿದೆ. ಇಲ್ಲಿನ ಕ್ಯಾಥೋಲಿಕ್ ಚರ್ಚು ಕ್ರಿ.ಶ. ೧೭೫೭ ರಲ್ಲಿ ಕಟ್ಟಲ್ಪಟ್ಟಿತು. ಈ ನಗರದಲ್ಲಿ ಆಕರ್ಷಣೀಯ ಜಾತ್ರೆ, ರಥೋತ್ಸವ, ದೀಪೋತ್ಸವಗಳು ವಿಜೃಂಭಣೆಯಿಂದ ನಡೆಯುತ್ತವೆ. ಶ್ರೀ ಮುಕಾಂಬಿಕೆಯ ಕ್ಷೇತ್ರ ಕೊಲ್ಲೂರು ಸೇರಿದಂತೆ ಬೈಂದೂರು, ಮರವಂತೆ, ಮಾರಣಕಟ್ಟೆ, ಕುಂಬಾಶಿ, ಹೂವಿನಕೆರೆ, ಬಸ್ರೂರು, ಕಮಲಶಿಲೆ, ಕೋಡಿ ಸಮುದ್ರ ತೀರ, ಸೌಕೂರು, ಹಟ್ಟಿಯಂಗಡಿ, ಒತ್ತಿನಣೆ, ಬೆಣ್ಣೆಕುದ್ರು, ಕಿರಿಮಂಜೇಶ್ವರ, ಉಪ್ಪಿನಕುದ್ರು, ಶಂಕರನಾರಾಯಣ, ವಾರಾಹಿ ಮೊದಲಾದ ಇಲ್ಲಿನ ಪ್ರೇಕ್ಷಣೀಯ ಸ್ಥಳಗಳು ಪ್ರವಾಸೋದ್ಯಮಕ್ಕೆ ಹೆಚ್ಚಿನ ಹೊಡುಗೆ ನೀಡಿವೆ. ಈ ಎಲ್ಲಾ ಕ್ಷೇತ್ರಗಳ ಪ್ರತಿನಿಧೀಕರಣದ ಮೂಲಕ ಸಾಮಾಜಿಕ ಸಾಮಾರಸ್ಯವನ್ನು ಬಲಗೊಳಿಸುವ ಪ್ರಯತ್ನ ಜಾಗೃತವಾಗಿ ನೆಲೆಗೊಳ್ಳುತ್ತ ಬಂದಿದೆ.

ಕುಂದಾಪುರ ಕೃಷಿ ಆಧಾರಿತ ತಾಲೂಕು, ಕುಂದಾಪುರ ಪಟ್ಟಣ ಹೊರತುಪಡಿಸಿದರೆ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ನೆಲೆ ಕಂಡಿರುವ ಜನಸಮುದಾಯ ಕೃಷಿಯನ್ನೇ ಪ್ರಧಾನ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ಭತ್ತ ಇಲ್ಲಿನ ಮುಖ್ಯ ಅಹಾರ ಬೆಳೆಯಾದರೆ, ತೆಂಗು, ಅಡಿಕೆ, ಜೇನು, ಗೇರು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ವಿವಿಧ ಮಾದರಿಯ ತರಕಾರಿ ಬೆಳೆಗಳನ್ನೂ ಒಳಗೊಂಡಂತೆ ಪುಷ್ಪಕೃಷಿ ಮತ್ತು ಹಣ್ಣಿನ ಬೆಳೆಗಳಲ್ಲಿ ಇಲ್ಲಿನ ಕೃಷಿಕರು ನಿರತರಾಗಿದ್ದಾರೆ. ಇದರೊಂದಿಗೆ ತಮ್ಮ ಕೃಷಿಬದುಕಿಗೆ ಪೂರಕವಾಗಿ ಹೈನುಗಾರಿಕೆಯನ್ನು ಸಹ ನಿರಂತರವಾಗಿ ಅವಲಂಬಿಸಿಕೊಂಡು ಬಂದಿದ್ದಾರೆ. ಭೂಮಾಲಿಕರು ಮತ್ತು ಕೃಷಿಕರೊಂದಿಗೆ ಅಪಾರ ಸಂಖ್ಯೆಯ ಕೃಷಿ ಕೂಲಿ ಕಾರ್ಮಿಕರು ಇಲ್ಲಿ ಜೀವನೋಪಾಯವನ್ನು

ಕಂಡುಕೊಂಡಿದ್ದಾರೆ. ೧೯೭೦ರ ದಶಕದಲ್ಲಿ ಜಾರಿಗೆ ಬಂದ ಭೂಸುಧಾರಣಾ ಕಾರ್ಯಕ್ರಮವು ಇಲ್ಲಿನ ಅನೇಕ ಮಂದಿ ಕೃಷಿ ಕಾರ್ಮಿಕರಿಗೆ ಕೃಷಿಭೂಮಿಯನ್ನು ಒದಗಿಸಿ ಹೊಲದೊಡೆಯರನ್ನಾಗಿ ಪರಿವರ್ತಿಸಿತು. ಒಂದಿಷ್ಟು ಮಂದಿ ಇದರ ಸಂಪೂರ್ಣ ಪ್ರಯೋಜನೆ ಪಡೆದರೆ ಇನ್ನೊಂದಿಷ್ಟು ಮಂದಿ ಭಾಗಶ: ಪ್ರಯೋಜನ ಪಡೆದರು. ಆಧುನಿಕ ಯಾಂತ್ರಿಕ ವ್ಯವಸ್ಥೆ ಲಭ್ಯವಾಗಿರುವ ನಡುವೆಯೂ ಇತ್ತೀಚಿನ ದಿನಗಳಲ್ಲಿ ಕೃಷಿಯ ಬಗೆಗಿನ ಆಸಕ್ತಿ ಇಲ್ಲಿನ ಜನರಲ್ಲಿ ನಿಧಾನಗತಿಯಲ್ಲಿ ಕುಂಠಿತಗೊಳ್ಳುತ್ತಿದೆ. ಅದರಲ್ಲೂ ವಿಶೇಷವಾಗಿ ಭತ್ತದ ಬೆಳೆಯ ಮೇಲಿನ ಒಲವು ಇಳಿಮುಖವಾಗುತ್ತಿದೆ. ಭತ್ತದ ಗದ್ದೆಗಳು ತೋಟಗಳಾಗಿ ರೂಪಾಂತರಗೊಳ್ಳುತ್ತಿವೆ. ಸಮರ್ಪಕ ಬೆಂಬಲ ಬೆಲೆಯ ಕೊರತೆ, ಕೃಷಿ ಕಾರ್ಮಿಕರ ಅಭಾವ, ಮಾರುಕಟ್ಟೆಯ ಸ್ಥಿತ್ಯಂತರ, ಹವಾಮಾನ ವೈಪರಿತ್ಯ, ಪ್ರಾಕೃತಿಕ ವಿಕೋಪಗಳು ಮೊದಲಾದ ಸಂಗತಿಗಳು ಕೃಷಿಕರಲ್ಲಿ ಆಸಕ್ತಿಯನ್ನು ಕುಗ್ಗಿಸಿವೆ. ಈ ನಡುವೆ ಅನೇಕ ಮಂದಿ ಕೃಷಿಕರು ಪರ್ಯಾಯ ಉದ್ಯೋಗಗಳನ್ನು ಕಂಡುಕೊಂಡಿದ್ದಾರೆ. ಇಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡಿದ್ದ ಅನೇಕ ಮಂದಿ ಕೃಷಿ ಕಾರ್ಮಿಕರು ಇಂದು ವ್ಯಾಪಾರ, ಉದ್ದಿಮೆ ಮತ್ತು ಇತರ ಸೌಕರಿಯನ್ನು ಬಯಸಿ ನಗರಗಳಿಗೆ ವಲಸೆ ಹೋಗಿದ್ದಾರೆ.

೫.೨ ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಮಾಭಿವೃದ್ಧಿ ಯೋಜನೆ ಕುಂದಾಪುರ ತಾಲೂಕಿನಾದ್ಯಂತ ವಾಸವಾಗಿರುವ ಬಡಜನರ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಬದುಕಿನ ಪಥವನ್ನೇ ಪರಿವರ್ತಿಸಿದೆ. ಕೃಷಿ ಮತ್ತು ಕೃಷಿಪೂರಕ ಚಟುವಟಿಕೆಗಳ ಕುರಿತು ಇಲ್ಲಿನ ಸಾಮಾನ್ಯ ಜನರು ಆಸಕ್ತಿ ಕಳೆದುಕೊಳ್ಳುತ್ತಿದ್ದ ದಿನಗಳಲ್ಲಿ ಕುಂದಾಪುರವನ್ನು ಪ್ರವೇಶಿಸಿದ ಈ ಯೋಜನೆ ದುರ್ಬಲ ವರ್ಗದವರಲ್ಲಿ ಜೀವನೋತ್ಸಾಹವನ್ನು ತುಂಬಿತು. ಯೋಜನೆಯು ಈ ಪರಿಸರದಲ್ಲಿ ಕಳೆದ ಆರೇಳು ವರ್ಷಗಳಿಂದ ಕೃಷಿ ಚಟುವಟಿಕೆಗಳನ್ನು ಪುನಶ್ಚೇತನಗೊಳಿಸುವ ಹಂತದಲ್ಲಿ ನಿರ್ಣಾಯಕ ಪಾತ್ರವಹಿಸಿವೆ. ಸುಮಾರು ಶೇ. ೭೦ರಷ್ಟು ಕೂಲಿ ಕಾರ್ಮಿಕರು ಇರುವ ಈ ತಾಲೂಕಿನಲ್ಲಿ ಕೃಷಿಗೆ ಪ್ರಧಾನ್ಯ ನೀಡಬೇಕೆಂಬುದೇ ಯೋಜನೆಯ ರೂವಾರಿ ಡಾ. ವೀರೇಂದ್ರ ಹೆಗ್ಗಡೆಯವರ ಕನಸು. ಅಂತೆಯೇ ೨೦೦೪ರಿಂದ ಕುಂದಾಪುರದ ನೆಲದಲ್ಲಿ ಕಾರ್ಯಗತಗೊಂಡ ಈ ಯೋಜನೆ ಹಂತ ಹಂತವಾಗಿ ಇದೀಗ ಇಡೀ ತಾಲೂಕಿಗೆ ವಿಸ್ತರಣೆಗೊಂಡಿದೆ. ಈಗ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕಿನ ಮೂಲೆ ಮೂಲೆಗಳಲ್ಲಿ ಬೃಹತ್ ಹೆಮ್ಮರವಾಗಿ ಬೆಳೆದಿದೆ. ಪ್ರಗತಿ ಬಂಧು ಕಾರ್ಯಕ್ರಮದಿಂದ ತೊಡಗಿ ಮದ್ಯವರ್ಜನ ಶಿಬಿರದ ತನಕ ತಾಲೂಕು ಮಂಚೂಣಿಯಲ್ಲಿದೆ.

ಗ್ರಾಮಾಭಿವೃದ್ಧಿ ಯೋಜನೆಯು ಕುಂದಾಪುರ ತಾಲೂಕನ್ನು ಪ್ರವೇಶಿಸುವ ವೇಳೆಗೆ ಇಲ್ಲಿನ ಹಲವು ಗ್ರಾಮಗಳ ಸ್ಥಿತಿಗತಿ ಬೆಳ್ತಂಗಡಿಯ ಗ್ರಾಮಗಳ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳಿಗಿಂತ ತೀರಾ

ಭಿನ್ನವಾಗಿರಲಿಲ್ಲ. ಇಲ್ಲಿನ ಗ್ರಾಮೀಣ ಪ್ರದೇಶಗಳ ಬಡಕುಟುಂಬಗಳು ಅನೇಕ ಬಗೆಯ ಮೂಲಭೂತ ಸೌಲಭ್ಯಗಳ ಕೊರತೆಯನ್ನು ಅನುಭವಿಸುತ್ತಿದ್ದವು. ಮಕ್ಕಳ ಉನ್ನತ ವಿದ್ಯಾಭ್ಯಾಸ ಬಹುತೇಕ ಕನಸಿನ ಮಾತಾಗಿತ್ತು. ಅನೇಕ ಹಳ್ಳಿಗಳಲ್ಲಿನ ಬಡವರ ಮನೆಗಳಲ್ಲಿ ವಿದ್ಯುತ್ ಸೌಲಭ್ಯವೂ ಇರಲಿಲ್ಲ. ಇನ್ನೂ ದುರಂತದ ಸಂಗತಿ ಎಂದರೆ ಹಲವರ ಮನೆಗಳಲ್ಲಿ ಶೌಚಾಲಯದ ವ್ಯವಸ್ಥೆ ಸಹ ಇರಲಿಲ್ಲ. ಇದು ವಿಶೇಷವಾಗಿ ಮನೆಯ ಮಹಿಳೆಯರಿಗೆ ನುಂಗಲಾರದ ತುತ್ತಾಗಿತ್ತು. ಮಳೆಗಾಲದ ಅವಧಿಯಲ್ಲಿ ಬಡವರ ಮನೆಗಳಲ್ಲಿ ಬದುಕು ನಿರ್ವಹಿಸುವುದು ಜ್ವಲಂತ ಸಮಸ್ಯೆಯಾಗಿತ್ತು. ಮಿತಿಮೀರಿದ ಅನಾರೋಗ್ಯ ಸಮಸ್ಯೆ ಎದುರಾದಾಗ ಅದನ್ನು ಪರಿಹರಿಸಲು ಸಾಧ್ಯವಾಗದೆ ಕೊನೆಗೂ ನರಳಿ ಪ್ರಾಣ ಕಳೆದುಕೊಂಡವರ ಸಂಖ್ಯೆ ಗಣನೆಗೆ ನಿಲುಕದ್ದು. ಕೂಲಿ ಕಾರ್ಮಿಕರಾಗಿ ಮನೆಯ ಸದಸ್ಯರುಗಳೆಲ್ಲರೂ ದುಡಿದರೂ ಸಹ ಜೀವನ ನಿರ್ವಹಣೆ ಕಷ್ಟಸಾಧ್ಯವಾಗಿತ್ತು. ಹಗಲಿರುಳು ಎಡಬಿಡದೆ ದುಡಿದರೂ ಮಾಡಿದ ಸಾಲ ತೀರುತ್ತಿರಲಿಲ್ಲ. ಈ ದುಸ್ಥಿತಿ ಮನೆಯ ಸದಸ್ಯರುಗಳ ಮಾನಸಿಕ ಸ್ಥಿತಿಯನ್ನು ಹದಗೆಡಿಸುವುದರೊಂದಿಗೆ ಅವರೊಳಗೆ ಪರಸ್ಪರ ಕಲಹ ಏರ್ಪಡಲು ಕಾರಣವಾಗುತ್ತಿತ್ತು. ಕೆಲವು ಕುಟುಂಬಗಳಲ್ಲಿ ಮನೆಯ ಪುರುಷರು ಮದ್ಯಸೇವನೆಗೆ ತೊಡಗಿದ್ದು ಈ ಕಾರಣದಿಂದಲೆ. ಒಟ್ಟಿನಲ್ಲಿ ಸ್ವಾವಲಂಬನೆ, ಸ್ವಾಭಿಮಾನ ಮತ್ತು ನೆಮ್ಮದಿಯ ಬದುಕು ಇಲ್ಲಿನ ಜನರಲ್ಲಿ ಬಹುತೇಕ ಕನಸಿನ ಮಾತಾಗಿತ್ತು. ಈ ಕರುಣಾಜನಕ ಮತ್ತು ವಿಷಮಸ್ಥಿತಿಯನ್ನು ಮನಗಂಡ ಗ್ರಾಮಾಭಿವೃದ್ಧಿ ಯೋಜನೆ ಬಡ ಕುಟುಂಬಗಳ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಪಾಲಿನ ಆಸರೆಯಾಯಿತು. ೨೦೦೫ರಿಂದೀಚೆಗೆ ಇಲ್ಲಿನ ಬಹುತೇಕ ಸಮಸ್ಯೆಗಳಿಗೆ ಪರಿಹಾರದ ದಾರಿಗಳನ್ನು ಕಂಡುಕೊಳ್ಳುವ ಪ್ರಯತ್ನ ಯೋಜನೆಯ ವಿಸ್ತರಣಾ ಚಟುವಟಿಕೆಗಳ ಮೂಲಕ ಸಾಕಾರಗೊಳ್ಳುತ್ತ ಬಂದಿದೆ. ಅಂತೆಯ ಒಂದು ಹಂತದವರೆಗಿನ ಯಶಸ್ಸು ಕಂಡಿದೆ ಎಂಬುದು ತೃಪ್ತಿದಾಯಕ ಸಂಗತಿ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾರಂಭದ ಹಂತದಿಂದಲೂ ಪ್ರತಿ ಒಂದು ಅಥವಾ ಎರಡು ಗ್ರಾಮಗಳ ವ್ಯಾಪ್ತಿಯಲ್ಲಿ ಸೇವಾನಿರತ/ತೆಯರ ನೇತೃತ್ವದಲ್ಲಿ ಜನೋಪಯೋಗಿ ಕೆಲಸಗಳು ನಿರ್ವಹಣೆಗೊಳ್ಳುತ್ತ ಬಂದಿವೆ. ಈ ತಾಲೂಕಿನ ಮೂಲೆ ಮೂಲೆಗಳಲ್ಲಿ ಯೋಜನೆಯ ಕಾರ್ಯವ್ಯಾಪ್ತಿಯು ವಿಸ್ತರಿಸುವ ಹಂತದಲ್ಲಿ ಸೇವಾನಿರತರು, ಮೇಲ್ವಿಚಾರಕರು ಮತ್ತು ಇತರ ಸಿಬ್ಬಂದಿಗಳ ಪಾತ್ರ ಅತ್ಯಂತ ನಿರ್ಣಾಯಕವಾದುದು. ಸ್ವತ: ಹೆಗ್ಗಡೆಯವರೇ ಹೇಳುವಂತೆ 'ಜನ ಸೇವಕರು, ಗ್ರಾಮೀಣರ ಸ್ನೇಹಿತರು'. ಇಲ್ಲಿನ ಅನೇಕ ಸೇವಾನಿರತರುಗಳು ಈ ಮಾತನ್ನು ಪ್ರಾಯೋಗಿಕವಾಗಿ ಸಿದ್ಧಗೊಳಿಸಿದ್ದಾರೆ. ಯೋಜನೆಯು ಕುಂದಾಪುರಕ್ಕೆ ಆಗಮಿಸಿದ ಆರಂಭದ ದಿನಗಳಿಂದ ತೊಡಗಿ ಇಂದಿನವರೆಗೂ ಬಹುಸಂಖ್ಯಾತ ಸೇವಾನಿರತರು ಕಾಲ್ನಡಿಗೆಯಲ್ಲಿ ಬಲುದೂರ ಕ್ರಮಿಸಿ ಯೋಜನೆಯನ್ನು ಕ್ರಿಯಾತ್ಮಕವಾಗಿ ಕಟ್ಟಿದ್ದಾರೆ. ಕುಂದಾಪುರ ತಾಲೂಕಿನ ದಕ್ಷಿಣ ಭಾಗದಲ್ಲಿರುವ ವಂಡ್ಸೆ, ಬೈಂದೂರು ವಲಯಗಳಲ್ಲಿನ ಅನೇಕ

ಕುಗ್ರಾಮಗಳಲ್ಲಿ ಯೋಜನೆಯ ಚಟುವಟಿಕೆಗಳು ಪಸರಿಸುವಂತೆ ಮಾಡಿದ್ದು ಸೇವಾನಿರತರ ಆಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಬುಡಕಟ್ಟು ಜನಾಂಗಗಳು ಹೆಚ್ಚಾಗಿ ನೆಲೆಸಿರುವ ಹಳ್ಳಿಗಳಿಗೆ ತೆರಳಿ ಆ ಜನಸಮುದಾಯದವರಲ್ಲಿ ಅರಿವು ಮೂಡಿಸಿ, ಮನವೊಲಿಸಿ ಯೋಜನೆಯ ಫಲಾನುಭವಿಗಳನ್ನಾಗಿ ಪರಿವರ್ತಿಸಿದ್ದು ನಿಜಕ್ಕೂ ಒಂದು ತಪಸ್ಸು. ಹೀಗೆ ಪ್ರತಿಯೊಬ್ಬ ಸೇವಾನಿರತ/ತೆ, ಮೇಲ್ವಿಚಾರಕ ಮತ್ತು ಇತರ ಎಲ್ಲ ಅಧಿಕಾರಿಗಳೂ ಆಪ್ತರಾಗಿ, ಪ್ರೇರಣೆಯ ಹರಿಕಾರರಾಗಿ ಇಲ್ಲಿನ ಜನಸಮುದಾಯಕ್ಕೆ ಸ್ಫೂರ್ತಿಯ ಚಿಲುಮೆ ಎನಿಸಿದ್ದಾರೆ. ಗುಂಪಿಗೆ ಸೇರಿದವರನ್ನು ಅಕ್ಕ-ತಂಗಿ, ಅಣ್ಣ-ತಮ್ಮ ಎಂದು ಭಾವಿಸುವ ಇವರು ಎಲ್ಲರ ಕಷ್ಟ-ಸುಖದಲ್ಲಿ ಭಾಗಿಗಳಾಗಿ ಆತ್ಮೀಯ ನಡೆ-ನುಡಿಗಳಿಂದ ಪ್ರತಿಯೊಂದು ಕಾರ್ಯಕ್ರಮವನ್ನೂ ಜನಮನಕ್ಕೆ ಮುಟ್ಟಿಸುವುದರಿಂದ ಗ್ರಾಮಾಭಿವೃದ್ಧಿ ಯೋಜನೆ ಇಂದು ವಿಶಾಲವಾಗಿ ಬೆಳೆದಿದೆ.

ಕುಂದಾಪುರ ತಾಲೂಕಿನ ಎಲ್ಲಾ ೧೧೧ ಗ್ರಾಮಗಳಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಪ್ರಗತಿಬಂಧು ಮತ್ತು ಸ್ವಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿದೆ. ಒಟ್ಟು ೧೬೩ ಪ್ರಗತಿಬಂಧು ಒಕ್ಕೂಟಗಳು ಈ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಕಳೆದ ಆರೇಳು ವರ್ಷಗಳಲ್ಲಿ ಯೋಜನೆಯು ತಾಲೂಕಿನ ಮೂಲೆ ಮೂಲೆಗಳನ್ನು ತೀವ್ರಗತಿಯಲ್ಲಿ ತಲುಪಿದ್ದು ಯೋಜನೆಯ ಮಹತ್ವದ ಹೆಗ್ಗಳಿಕೆ ಎನ್ನಬಹುದು. ಅದರಲ್ಲೂ ಸಾಕಷ್ಟು ಮೂಲಭೂತ ಸೌಲಭ್ಯಗಳಿಂದ ವಂಚಿತವಾದ, ಪಟ್ಟಣದಿಂದ ದೂರ ಉಳಿದ, ಅರಣ್ಯಗಳಿಂದ ಆವೃತವಾದ ಪ್ರದೇಶಗಳಲ್ಲಿಯೂ ಯೋಜನೆ ತನ್ನ ಖಾತೆಯನ್ನು ತೆರೆದು ತೀವ್ರಗತಿಯಲ್ಲಿ ಚಟುವಟಿಕೆಗಳನ್ನು ಬಲಗೊಳಿಸಿರುವುದು ಸೋಜಿಗ ಹುಟ್ಟಿಸುತ್ತದೆ.

೫.೩ ಪ್ರಗತಿಬಂಧು ಕಾರ್ಯಕ್ರಮ

ಕುಂದಾಪುರ ತಾಲೂಕಿನಲ್ಲಿ ಮುಖ್ಯವಾಗಿ ಪ್ರಗತಿಬಂಧು ಕಾರ್ಯಕ್ರಮಗಳು ಕೃಷಿ ಭೂಮಿಯ ಸಮತೋಲನ ಕಾಯ್ದುಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿವೆ. ಸಾಮಾನ್ಯ ಜನರು ಕೃಷಿಯಲ್ಲಿ ಈಗಾಗಲೇ ಕಳೆದುಕೊಂಡಿದ್ದ ಆಸಕ್ತಿ ಮತ್ತು ಹತಾಶೆಯನ್ನು ಯೋಜನೆಯ ಕಾರ್ಯಕ್ರಮಗಳು, ಅದರಲ್ಲು ಮುಖ್ಯವಾಗಿ ಪ್ರಗತಿಬಂಧು ಕಾರ್ಯಕ್ರಮ ಬಲಗೊಳಿಸುವ ಹಂತದಲ್ಲಿ ಶಕ್ತಿಮೀರಿ ಶ್ರಮಿಸಿವೆ. ಪರಿಣಾಮವಾಗಿ ಇಂದು ಕುಂದಾಪುರದ ಬರಿದಾಗಿದ್ದ ಭೂಮಿಯಲ್ಲಿ ಹಸಿರೆಲೆ ಚಿಗುರಿದೆ. ಯೋಜನೆಯ ಆರ್ಥಿಕ ನೆರವು ಮತ್ತು ತರಬೇತಿ ಕಾರ್ಯಕ್ರಮಗಳ ಪರಿಣಾಮವಾಗಿ ಕೈಗೊಂಡ ಕೃಷಿ ಚಟುವಟಿಕೆಗಳಲ್ಲಿ ಸಣ್ಣ ರೈತರು ಉತ್ತಮ ಇಳುವರಿ ಪಡೆದಿದ್ದಾರೆ. ಯೋಜನೆಯೊಂದಿಗಿನ ಸಹಬಾಳ್ವೆಯ ಫಲಿತವೆಂಬಂತೆ ಗ್ರಾಮೀಣ ಪ್ರದೇಶದ ಸಣ್ಣ ರೈತರು ಮತ್ತು ರೈತಮಹಿಳೆಯರು ನಿತ್ಯದ ಬದುಕಿನಲ್ಲಿ ಹಂತ ಹಂತವಾಗಿ ನೆಮ್ಮದಿಯ ದಿನಗಳನ್ನು ಕಾಣಬಯಸುತ್ತಿದ್ದಾರೆ. ಈ ಪರಿಸರದಲ್ಲಿ ಪ್ರಗತಿಬಂಧು ಪರಿಕಲ್ಪನೆ ಆಕೃತಿಗೊಂಡ ನಂತರದ ದಿನಗಳಲ್ಲಿ ಕೃಷಿ ಇಲ್ಲಿನ ಬಡ ರೈತರ ಆಸಕ್ತಿಯ ವಿಷಯವಾಗಿದೆ. ಪ್ರಗತಿಬಂಧು ಗುಂಪುಗಳ ನಡುವಿನ ಶ್ರಮ ವಿನಿಮಯ

ಮುಖ್ಯವಾಗಿ ಸಹಕಾರಿ ತತ್ವವನ್ನು ಜಾಗೃತಗೊಳಿಸಿದೆ. ಯೋಜನೆಯ ಧ್ಯೇಯೋದ್ದೇಶದಂತೆ ಸೌಲಭ್ಯವಂಚಿತರ ಸಬಲೀಕರಣ, ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸಮರ್ಪಕ ಬಳಕೆ, ಶಾಶ್ವತ ಅಭಿವೃದ್ಧಿಗಾಗಿ ಹಿಡುವಳಿ ಯೋಜನೆ, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಮೂಲಕ ಗ್ರಾಮೀಣ ಅವಕಾಶಗಳಿಗೆ ಉತ್ತೇಜನ, ಗ್ರಾಮಗಳ ಅಭಿವೃದ್ಧಿಯಲ್ಲಿ ಸಮೂಹ ಪಾಲುದಾರಿಕೆಗೆ ಉತ್ತೇಜನ, ಶಿಸ್ತು ಬದ್ಧತೆ, ನೈತಿಕ ಮೌಲ್ಯಗಳ ಅಭಿವೃದ್ಧಿ, ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗಾಗಿ ಗ್ರಾಮೀಣರನ್ನು ಒಗ್ಗೂಡಿಸಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವಂತೆ ಪ್ರೇರೇಪಿಸುವ ಕಾರ್ಯ ತಾಲೂಕಿನಲ್ಲಿ ನಡೆದುಕೊಂಡು ಬರುತ್ತಿದೆ. ಹೀಗೆ ಕುಂದಾಪುರ ತಾಲೂಕಿನಲ್ಲಿ ಗ್ರಾಮೀಣ ಮಹಿಳೆಯರ ಸರ್ವಾಂಗೀಣ ಶ್ರೇಯೋಭಿವೃದ್ಧಿ ಯೋಜನೆಯ ಅಪ್ಪಟ ಕಳಕಳಿಯಾಗಿದೆ.

ಎರೆಹುಳು ಗೊಬ್ಬರ, ಜಪಾನ್ ಕಾಂಪೋಸ್ಟ್ ಗೊಬ್ಬರ, ಅರೆಭೋಲಾ ಗೊಬ್ಬರ ತಯಾರಿ ಕುರಿತು ಆಧುನಿಕ ವಿಧಾನಗಳ ಮೂಲಕ ತರಬೇತಿ ನೀಡುವುದರೊಂದಿಗೆ ಇಂದು ತಾಲೂಕಿನಾದ್ಯಂತ ವೈಜ್ಞಾನಿಕ ವಿಧಾನ ಅನುಸರಿಸಿಕೊಂಡಿರುವುದನ್ನು ಕಾಣಬಹುದು. ಇಂದು ಭತ್ತದಲ್ಲಿ ಶ್ರೀ ಪದ್ಧತಿ ಪ್ರಗತಿಬಂಧು ತಂಡಗಳ ಮೂಲಕ ವ್ಯಾಪಕ ಪ್ರಚಾರಕ್ಕೆ ಬಂದಿದೆ. ತರಕಾರಿ ಕೃಷಿ ಮತ್ತು ಪುಷ್ಪ ಕೃಷಿಯಲ್ಲಿ ಪ್ರಗತಿ ಬಂಧುಗಳೇ ಮುಂದಿದ್ದಾರೆ. ನೂಜಾಡಿಯ ಶ್ರೀ ದುರ್ಗಾ ಪ್ರಗತಿ ಬಂಧು ತಂಡದ ರಾಮ ಗಾಣಿಗ ಯೋಜನೆಯ ಅಭಿವೃದ್ಧಿಯಿಂದ ಇಂದು ತಾಲೂಕಿನಲ್ಲಿಯೇ ದೊಡ್ಡ ಮಟ್ಟದ ಎರೆಗೊಬ್ಬರ ಉತ್ಪಾದಕರಾಗಿದ್ದಾರೆ. ಹೊಸೂರಿನ ಸ್ವಾಮಿ ಕಂಟುಗದ್ದೆ ಪ್ರಗತಿ ಬಂಧು ತಂಡದ ಸತೀಶ್ ಆಚಾರ್ಯರು ವ್ಯಾವಹಾರಿಕರಾಗಿ ಎರೆ ಘಟಕ ಆರಂಭಿಸಿದ್ದಾರೆ. ಎರಡು ವರ್ಷದ ಅವಧಿಯಲ್ಲಿ ೬೨ ಕುಟುಂಬಗಳಲ್ಲಿ ೩೨ ಎಕ್ರೆ ಗದ್ದೆಯಲ್ಲಿ ಶ್ರೀ ಪದ್ಧತಿ ಭತ್ತ ಬೇಸಾಯವನ್ನು ಪ್ರಾತ್ಯಕ್ಷಿಕೆಯಾಗಿ ಮಾಡಲಾಗಿದೆ. ತಾಲೂಕಿನ ಅರು ಕಡೆ ಒಂಭತ್ತು ಎಕ್ರೆ ಗದ್ದೆಯಲ್ಲಿ ಡ್ರಂ ಸೀಡರ್ ಪ್ರಾತ್ಯಕ್ಷಿಕೆಯನ್ನು ಕಳೆದ ಮುಂಗಾರು ಅವಧಿಯಲ್ಲಿ ಮಾಡಲಾಗಿದೆ.

ಪ್ರಗತಿ ಬಂಧುಗಳಿಗೆ ಯೋಜನೆಯ ನೇತೃತ್ವದಲ್ಲಿ ಕೃಷಿ ಉಪಕರಣಗಳು ಮತ್ತು ಕೃಷಿ ಉದ್ದೇಶಕ್ಕಾಗಿ ಅನುದಾನ ನೀಡಲಾಗಿದೆ. ಉದಾ : ಎರೆ ಘಟಕ ರಚನೆ, ಜಾಜಿ ಕೃಷಿ, ಮಲ್ಲಿಗೆ ಕೃಷಿ, ತರಕಾರಿ ಕೃಷಿಗೆ ಬೀಜ ಪೂರೈಕೆ, ಗೇರು ಸಸಿ ವಿತರಣೆ, ಡ್ರಮ್ ಸೀಡರ್, ಗೇಟರ್‌ಸ್ಪ್ರೈಯರ್ ಮೊದಲಾದವುಗಳಿಗೆ ಅನುದಾನವನ್ನು ವಿತರಿಸಲಾಗಿದೆ. ಅಲ್ಲದೆ ತೋಟಗಾರಿಕೆ ಇಲಾಖೆ, ರೈತ ಸಂಪರ್ಕ ಕೇಂದ್ರದ ಸಹಕಾರದೊಂದಿಗೆ ರೈತರಿಗೆ ಕೃಷಿ ಉಪಕರಣ ಮತ್ತು ಬಿತ್ತನೆ ಬೀಜ ಒದಗಿಸಲು ಯೋಜನೆಯ ಸಹಯೋಗದೊಂದಿಗೆ ಕ್ರಮ ಕೈಗೊಳ್ಳಲಾಗಿದೆ.

ಕುಂದಾಪುರ ತಾಲೂಕಿನಾದ್ಯಂತ ಪ್ರಗತಿಬಂಧು ಗುಂಪುಗಳ ಶ್ರಮ ವಿನಿಮಯ ಕೆಲಸಗಳು ನಿರಂತರವಾಗಿ ತೀವ್ರಗತಿಯಲ್ಲಿ ನಡೆದುಕೊಂಡು ಬರುತ್ತಿದೆ. ಮುಖ್ಯವಾಗಿ ಈ ಶ್ರಮ ವಿನಿಮಯ ಕಾರ್ಯ ಕೃಷಿ ಕೆಲಸಗಳಿಗೆ ಸಂಬಂಧಿಸಿದಂತೆ ಹೆಚ್ಚು ಪ್ರಚಲಿತದಲ್ಲಿದೆ. ಇಲ್ಲಿ ಮಹಿಳಾ ಪ್ರಗತಿಬಂಧು ತಂಡಗಳು ಸಹ ಅತ್ಯಂತ ಪ್ರಬುದ್ಧವಾಗಿ ಕಾರ್ಯನಿರ್ವಹಿಸುತ್ತವೆ. ಶ್ರಮವಿನಿಮಯ ಕಾರ್ಯದಲ್ಲಿ ಇವರು ಪುರುಷರಿಗೆ ಸರಿಸಾಟಿ ಎಂಬಂತೆ ಕಾರ್ಯನಿರ್ವಹಿಸಲು ಉತ್ಸಾಹ ತೋರುತ್ತಿದ್ದಾರೆ. ಭತ್ತದ ಗದ್ದೆಯ ನಾಟಿ ಮತ್ತು ಕೊಯ್ಲಿನ ಕೆಲಸಗಳು, ತೆಂಗು, ಅಡಿಕೆ, ಬಾಳೆ, ವೆನಿಲ್ಲಾ ಮೊದಲಾದ ತೋಟಗಳನ್ನು ಹದಮಾಡುವ ಕೆಲಸಗಳು, ತರಕರಿ ಕೃಷಿ ನಿರ್ವಹಣೆಯ ಕೆಲಸಗಳು ಶ್ರಮ ವಿನಿಮಯದ ಹಂತದಲ್ಲಿ ಮುಖ್ಯ ಪಾತ್ರವಹಿಸುತ್ತವೆ. ಕೂಲಿ ಕಾರ್ಮಿಕರ ಮತ್ತು ಅಗತ್ಯ ಸಂಪನ್ಮೂಲಗಳ ಸಮಸ್ಯೆಯನ್ನು ಎದುರಿಸುತ್ತಿದ್ದ ಇಲ್ಲಿನ ಸಣ್ಣ ರೈತರು ಪ್ರಗತಿಬಂಧು ಪರಿಕಲ್ಪನೆಯ ಮೂಲಕ ಈ ಸಮಸ್ಯೆಗೆ ತಕ್ಕ ಮಟ್ಟಿನ ಪರಿಹಾರವನ್ನು ಕಂಡುಕೊಂಡಿದ್ದಾರೆ. ಇಲ್ಲಿನ ಪ್ರಗತಿಬಂಧು ಗುಂಪಿನ ಸದಸ್ಯರುಗಳು ವಾರಕ್ಕೊಮ್ಮೆ ಉಚಿತವಾಗಿ ಶ್ರಮ ವಿನಿಮಯ, ಉಳಿತಾಯ ಹಾಗೂ ಸಾಲ ವಿತರಣೆಯಲ್ಲಿ ತೊಡಗಿಕೊಳ್ಳುತ್ತಾರೆ. ವಾರಕ್ಕೊಬ್ಬ ಸದಸ್ಯರ ಮನೆಯಲ್ಲಿ ದುಡಿದು, ನಂತರ ಬರುವಾಗ ಕೆಲಸವಾದ ಮನೆಯ ಪ್ರಗತಿಬಂಧುವಿನಲ್ಲಿ ಪ್ರತಿ ಸದಸ್ಯರೂ ಉಳಿತಾಯದ ಹಣ ನೀಡುತ್ತಾರೆ. ಆತ ಅವುಗಳನ್ನು ಜೋಪಾನವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡುತ್ತಾನೆ. ಪ್ರತಿಯೊಂದು ಪ್ರಗತಿಬಂಧು ತಂಡದಲ್ಲಿ ಒಬ್ಬ ಪ್ರಬಂಧಕರು ಮತ್ತು ಒಬ್ಬ ಸಂಯೋಜಕರು ಗುಂಪಿನ ಎಲ್ಲಾ ಚಟುವಟಿಕೆಗಳನ್ನು ಸಂಯೋಜಿಸಿಕೊಂಡು ಹೋಗುತ್ತಾರೆ. ಅವರು ಗುಂಪಿಗೆ ಸಂಬಂಧಪಟ್ಟ ದಾಖಲಾತಿ, ನಿರ್ಣಯ ಪುಸ್ತಕ, ಹಾಜರಾತಿ, ಸಾಮಾನ್ಯ ಖಾತೆ ಪುಸ್ತಕ ಮೊದಲಾದವುಗಳನ್ನು ಯಥಾ ಪ್ರಕಾರ ನಿರ್ವಹಿಸುತ್ತಾರೆ. ಪ್ರತಿ ವಾರದ ಕೆಲಸ, ಸೇರಿದ ಸದಸ್ಯರು, ಮಾಡಿದ ಶ್ರಮ ವಿನಿಮಯದ ಬಗ್ಗೆ ವಾರದ ವರದಿಯಲ್ಲಿ ಬರೆದು ತಮ್ಮ ಸೇವಾನಿರತರ ಕಛೇರಿಗೆ ಒದಗಿಸಲಾಗುತ್ತದೆ. ಹೀಗೆ ಪ್ರಗತಿಬಂಧು ತಂಡದ ಎಲ್ಲಾ ಕಾರ್ಯಕಲಾಪಗಳು ಕುಂದಾಪುರ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿಯೂ ಅತ್ಯಂತ ಕ್ರಮಬದ್ಧವಾಗಿ ನಡೆದುಕೊಂಡು ಬರುತ್ತಿದೆ.

ಕುಂದಾಪುರ ತಾಲೂಕಿನಲ್ಲಿ ಪ್ರಗತಿಬಂಧು ಗುಂಪುಗಳ ಬೆಳವಣಿಗೆಯ ಹರಿವು ತೀವ್ರಗತಿಯ ವೇಗವನ್ನು ಕಂಡುಕೊಂಡಿದೆ. ತಾಲೂಕಿನಲಿ ಈವರೆಗೆ ಒಟ್ಟು ೧೦೪೦ ಪ್ರಗತಿಬಂಧು ಗುಂಪುಗಳನ್ನು ಪ್ರಾರಂಭಿಸಲಾಗಿದ್ದು ಅವುಗಳಲ್ಲಿ ೭೯೫ ಗುಂಪುಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ. ಉಳಿದಂತೆ ೨೪೫ ಗುಂಪುಗಳನ್ನು ಸಮರ್ಪಕ ಕಾರ್ಯನಿರ್ವಹಣೆಯ ಕೊರತೆಯ ಕಾರಣದಿಂದಾಗಿ ಸ್ಥಗಿತಗೊಳಿಸಲಾಗಿದೆ. "ಯೋಜನೆಯು ಸಂಖ್ಯೆಗಿಂತ ಹೆಚ್ಚಾಗಿ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆ ನೀಡುವ ಹಿನ್ನೆಲೆಯಲ್ಲಿ ಶಿಸ್ತು, ಬದ್ಧತೆ ಮತ್ತು ನಿರಂತರ ಕ್ಷಮತೆಯನ್ನು ಕಾಯ್ದುಕೊಳ್ಳದ ಗುಂಪುಗಳನ್ನು ನಿರ್ದಾಕ್ಷಿಣ್ಯವಾಗಿ ಮುಚ್ಚಲಾಗಿದೆ. ಈ ಪ್ರಕ್ರಿಯೆ ಹೊಸದಾಗಿ ಪ್ರಗತಿಬಂಧು ಗುಂಪುಗಳನ್ನು ಆರಂಭಿಸುವ ವ್ಯಕ್ತಿ ಮತು ಸಮುದಾಯಗಳಿಗೆ ಉತ್ತಮ

ಪಾತವೆನಿಸಿದೆ. ಈ ನಡುವೆ ಯ ಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ೭೯೫ ಪ್ರಗತಿಬಂಧು ಗುಂಪುಗಳ ಸಮಗ್ರ ಕಾರ್ಯಚಟುವಟಿಕೆಗಳ ಮೇಲೆ ತೀವ್ರ ನಿಗಾ ವಹಿಸಲಾಗಿದೆ. ಜೊತೆಗೆ ತಾಲೂಕಿನಲ್ಲಿ ಹೊಸದಾಗಿ ಗುಂಪು ಆರಂಭಿಸುವವರಿಗೆ ಯೋಜನೆಯು ನಿಯಮಗಳನ್ನು ಬಿಗಿಗೊಳಿಸಿದೆ. ತಾಲೂಕಿನಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪ್ರಗತಿಬಂಧು ಗುಂಪುಗಳಲ್ಲಿ ಒಟ್ಟು ೪೪೨೮ ಕುಟುಂಬಗಳು ಪಾಲುದಾರರಾಗಿದ್ದು ಈವರೆಗಿನ ಒಟ್ಟು ಉಳಿತಾಯ ರೂ. ೨೦೪೬೧ ಉಳಿತಾಯ ಆಗಿದೆ. ಈ ಕುಟುಂಬಗಳಿಗೆ ಒಟ್ಟು ರೂ. ೧.೬೨೩೪೪ ಪ್ರಗತಿನಿಧಿಯನ್ನು ಒದಗಿಸಲಾಗಿದ್ದು ಅದರಲ್ಲಿ ರೂ. ೧.೦೧೩೦೧ ಗಳನ್ನು ಮರುಪಾವತಿ ಮಾಡಲಾಗಿದ್ದು ರೂ. ೬೧೦೪೩ ಗಳ ಮರುಪಾವತಿ ಬಾಕಿ ಇದೆ.[೬] ಈ ನಡುವೆ ಗುರುತಿಸಬಹುದಾದ ಮಹತ್ವದ ಸಂಗತಿ ಎಂದರೆ ಪ್ರಗತಿನಿಧಿ ಮರುಪಾವತಿಯ ಶೇಕಡಾವಾರು ಪ್ರಮಾಣ ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿದೆ. ಅನೇಕ ಮಂದಿ ಪ್ರಗತಿಬಂಧುಗಳು ಅಕ್ಷರ ಪ್ರಪಂಚದಿಂದ ಹೊರಗುಳಿದ ಹಿನ್ನೆಲೆಯಲ್ಲಿ ಅವರಲ್ಲಿ ಜಾಗೃತಿ ಮೂಡಿಸುವ ಪ್ರಾಮಾಣಿಕ ಪ್ರಯತ್ನ ಯೋಜನೆ ಮತ್ತು ನಾಗರಿಕ ಸಮಾಜದಿಂದ ನಡೆಯುತ್ತಲೇ ಬಂದಿದೆ.

ಕುಂದಾಪುರ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಗತಿಬಂದು ಗುಂಪುಗಳು ಈವರೆಗೆ ಒಟ್ಟು ೩೦೦೧೩ ಕುಟುಂಬಗಳಿಗೆ ಆಂತರಿಕ ಸಾಲ ಒದಗಿಸಿವೆ. ಈ ಸಾಲದ ಮೊತ್ತ ರೂ. ೨.೧೩೮೧೮ ಆಗಿರುತ್ತದೆ. ಇವುಗಳಲ್ಲಿ ರೂ. ೧೨೨೭೯೧ ಮರುಪಾವತಿ ಆಗಿರುತ್ತದೆ. ಉಳಿದಂತೆ ಆಂತರಿಕ ಸಾಲದ ಬಾಕಿ ಮೊತ್ತ ರೂ. ೯೧೪೨೭ ಆಗಿರುತ್ತದೆ.[೭] ಪ್ರಗತಿಬಂಧು ಗುಂಪಿನಲ್ಲಿರುವ ಸದಸ್ಯರುಗಳ ನಡುವಿನ ಸಂವಹನದ ಕೊರತೆ, ಪರಸ್ಪರ ಭಿನ್ನಾಭಿಪ್ರಾಯಗಳು, ವಾರದ ಸಭೆಗೆ ಕೆಲವು ಸದಸ್ಯರುಗಳ ಗೈರು ಹಾಜರಿ ಮೊದಲಾದ ಸಂಗತಿಗಳು ಮರುಪಾವತಿ ಬಾಕಿ ಆಗಲು ಕಾರಣವಾಗಿವೆ. ಈವಗೆ ತಾಲೂಕಿನಾದ್ಯಂತ ವಿವಿಧ ಪ್ರಗತಿಬಂಧು ಗುಂಪುಗಳಲ್ಲಿ ಒಟ್ಟು ೧೦.೨೦೦೦೮ ದಿನಗಳ ಮಾನವ ಶ್ರಮ ವಿನಿಮಯವಾಗಿದ್ದು ದಿನವೊಂದಕ್ಕೆ ತಲಾ ರೂ. ೭೫ರಂತೆ ಇದರ ಒಟ್ಟು ಮೌಲ್ಯ ರೂ. ೭೬.೫೦೦೬೦೦ ಆಗಿರುತ್ತದೆ.[೮]

೫.೪ ಸ್ವಸಹಾಯ ಗುಂಪುಗಳು

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆ ಯಶಸ್ಸಿನ ಉತ್ತುಂಗಕ್ಕೆ ಏರುವ ಹಂತದಲ್ಲಿ ಸ್ವಸಹಾಯ ಗುಂಪುಗಳ ಪಾತ್ರ ಸರ್ವಶ್ರೇಷ್ಠವಾದುದು. ಇಲ್ಲಿನ ಪ್ರತಿಯೊಂದು ಗ್ರಾಮದಲ್ಲಿನ ಬಹುತೇಕ ಎಲ್ಲಾ ಮಧ್ಯಮ ಮತ್ತು ಬಡವರ ಮನೆಗಳಲ್ಲಿ ಕನಿಷ್ಠ ಒಬ್ಬ ಮಹಿಳೆಯಾದರೂ ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯಳಾಗಿರುತ್ತಾಳೆ. ಗ್ರಾಮಾಭಿವೃದ್ಧಿ ಯೋಜನೆ ಎಂದರೆ ಸ್ವಸಹಾಯ ಗುಂಪು ಎಂಬ ಅಭಿಪ್ರಾಯ ಇಲ್ಲಿನ ಜನಮಾನಸದಲ್ಲಿ ನೆಲೆಯೂರಿದೆ. ಇಲ್ಲಿನ ಯಾವುದೇ ಊರಿಗೆ ಭೇಟಿ ನೀಡಿದರೂ ಅಲ್ಲಿ ಸಮವಸ್ತ್ರ ರೂಪದ

ಸೀರೆ ಧರಿಸಿದ ಯೋಜನೆಯ ಸ್ವಸಹಾಯ ಗುಂಪುಗಳ ಸದಸ್ಯರುಗಳ ದಂಡೇ ಎದುರಾಗುತ್ತದೆ. ಅಡುಗೆ ಮನೆಯ ನಾಲ್ಕು ಗೋಡೆಗಳ ನಡುವೆ ಬದುಕು ಕಟ್ಟಿಕೊಂಡಿದ್ದ ಇಲ್ಲಿನ ಗ್ರಾಮೀಣ ಮಹಿಳೆಯರು ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯರುಗಳಾದ ಬಳಿಕ ಅಡುಗೆ ಮನೆಯ ಪರೀಧಿಯಿಂದ ಹೊರಬಂದು ಸಾಮಾಜಿಕವಾಗಿ, ಆರ್ಥಿಕವಾಗಿ ತಮ್ಮನ್ನು ತೆರೆದುಕೊಂಡಿದ್ದಾರೆ. ಉಳ್ಳವರ ಮನೆಯಲ್ಲಿ ಕೂಲಿ ಮಾಡಿಕೊಂಡು ದುರಂತದ ಬದುಕು ಸಾಗಿಸುತ್ತಿದ್ದ ಮಹಿಳೆ ಇಂದು ಸ್ವಉದ್ಯೋಗ, ಉಳಿತಾಯ ಮೊದಲಾದ ಪರಿಕಲ್ಪನೆಗಳ ಮೂಲಕ ಸ್ವಾವಲಂಬಿಯ ಪಥದಲ್ಲಿ ಮೆಲ್ಲನೆ ಹೆಜ್ಜೆ ಇಡುತ್ತಿದ್ದಾಳೆ. ಕುಂದಾಪುರ ತಾಲೂಕಿನ ತೀರಾ ಹಿಂದುಳಿದ ಮತ್ತು ಅನಕ್ಷರಸ್ಥ ಮಹಿಳೆಯರೇ ಹೆಚ್ಚಾಗಿರುವ ಪ್ರದೇಶಗಳಲ್ಲಿಯೂ ಯೋಜನೆಯ ಅಭಿವೃದ್ಧಿಪರ ಚಟುವಟಿಕೆಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆ ತೀವ್ರಗತಿಯ ಬೆಳವಣಿಗೆ ಕಂಡಿವೆ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಸಂರಚನೆ ಅತ್ಯಂತ ವ್ಯವಸ್ಥಿತವಾಗಿ ಮತ್ತು ಶಿಸ್ತುಬದ್ಧವಾಗಿ ಆಕೃತಿಗೊಂಡಿದೆ. ಆರಂಭದ ಹಂತದಿಂದಲೂ ಇಲ್ಲಿ ನೇಮಕಗೊಂಡ ಸೇವಾನಿರತರುಗಳ ಅವಿರತ ಪ್ರಯತ್ನ ಮತ್ತು ಮಹಿಳಾ ಸದಸ್ಯರುಗಳಿಗೆ ನೀಡಿದ ಶಿಕ್ಷಣದ ಪರಿಣಾಮವಾಗಿ ಈ ಮಾದರಿಯ ಶಿಸ್ತು ಮತ್ತು ಬದ್ಧತೆ ಸಾಧ್ಯವಾಗಿದೆ. ಇದು ಯೋಜನೆಯ ಇತರ ತಾಲೂಕಿನ ಸ್ವಸಹಾಯ ಗುಂಪಿನ ಚಟುವಟಿಕೆಗಳಿಗೆ ಮಾದರಿ ಎನಿಸಿವೆ. ಸರಿಸುಮರು ಹತ್ತು ಸದಸ್ಯರುಗಳಿರುವ ಸ್ವಸಹಾಯ ಗುಂಪುಗಳು ರಾಜಕೀಯ ಮತ್ತು ಜಾತಿ ಕೇಂದ್ರಿತ ವ್ಯವಶ್ತೆಯಿಂದ ಸಾಕಷ್ಟು ದೂರ ಉಳಿದಿವೆ. ಇಲ್ಲಿನ ಸ್ವಸಹಾಯ ಗುಂಪುಗಳಲ್ಲಿ ತೊಡಗಿಕೊಂಡ ಸದಸ್ಯರುಗಳು ೧೮ ರಿಂದ ೬೦ರ ವಯಸ್ಸಿನ ನಡುವೆ ಇದ್ದಾರೆ. ಕುಂದಾಪುರ ತಾಲೂಕಿನಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ದೊಡ್ಡ ಸಂಖ್ಯೆಯಲ್ಲಿದ್ದು ಕಳೆದ ನಾಲ್ಕು ವರ್ಷಗಳಿಂದ ಪುರುಷರ ಸ್ವಸಹಾಯ ಗುಂಪುಗಳು ಸಹ ಕಾರ್ಯನಿರ್ವಹಿಸುತ್ತಿವೆ. ಆದರೆ ಮಹಿಳಾ ಸ್ವಸಹಾಯ ಗುಂಪುಗಳು ಯೋಜನೆಗೆ ನೀಡಿದ ಕೊಡುಗೆ ಅತ್ಯಂತ ಎತ್ತರದ್ದು.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮುಖ್ಯ ವೈಶಿಷ್ಟ್ಯಗಳೆಂದರೆ ಉಳಿತಾಯ ಮತ್ತು ಸಾಲ ಸೌಲಭ್ಯ. ಇಲ್ಲಿನ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರುಗಳು ತಮ್ಮ ದುಡಿಮೆಯಲ್ಲಿ ಸ್ವಲ್ಪ ಭಾಗವನ್ನು ಉಳಿತಾಯ ರೂಪದಲ್ಲಿ ಪ್ರತಿ ವಾರ ಸಂಗ್ರಹಿಸುತ್ತಾರೆ. ವಾರದ ಉಳಿತಾಯ ಹತ್ತು ರೂಪಾಯಿಯಿಂದ ಐವತ್ತು ರೂಪಾಯಿಗಳ ನಡುವೆ ಇರುತ್ತದೆ. ವಾರದ ಸಭೆಯಲ್ಲಿ ಉಳಿತಾಯದ ಹಣವನ್ನು ಸಂಗ್ರಹಿಸಲಾಗುತ್ತದೆ. ಸದಸ್ಯರುಗಳ ನಡುವಿನ ಚಿಕ್ಕ ಪುಟ್ಟ ಭಿನ್ನಾಭಿಪ್ರಾಯಗಳನ್ನು ವಾರದ ಸಭೆಗಳಲ್ಲಿ ಸಂಧಾನದ ಮೂಲಕ ಪರಿಹರಿಸಿಕೊಳ್ಳಲಾಗುತ್ತದೆ. ಸದಸ್ಯರುಗಳ ಉಳಿತಾಯವನ್ನು ಅವಲಂಬಿಸಿ ಅವರಿಗೆ ಆಂತರಿಕ ಮತ್ತು ಪ್ರಗತಿನಿಧಿ ಸಾಲವನ್ನು ಒದಗಿಸಲಾಗುತ್ತದೆ. ಗ್ರಾಮಾಭಿವೃದ್ಧಿ ಯೋಜನೆಯ ಪ್ರವೇಶಕ್ಕೂ ಮೊದಲು ಕುಂದಾಪುರ ತಾಲೂಕಿನ ಗ್ರಾಮೀಣ ಪ್ರದೇಶಗಳ ಬಡ ಮಹಿಳೆಯರಿಗೆ

ಸಾಲದ ಅವಶ್ಯಕತೆ, ಪೂರೈಕೆ ಮತ್ತು ಸೌಲಭ್ಯ ಅತ್ಯಂತ ಕಷ್ಟದಾಯಕವಾಗಿತ್ತು. ಇಲ್ಲಿನ ಅನೇಕ ಮಂದಿ ಮಹಿಳೆಯರು ಸಾಲ ಪಡೆದ ಕಾರಣದಿಂದಾಗಿ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ನೆಲೆಯ ಶೋಷಣೆಗೆ ಒಳಗಾಗುತ್ತಿದ್ದರು. ಸಾಲ ಪಡೆಯುವ ಮತ್ತು ತೀರಿಸುವ ಎರಡೂ ಪ್ರಕ್ರಿಯೆಗಳು ಅತ್ಯಂತ ಭೀಕರವಾಗಿತ್ತು. ಆದರೆ ಯೋಜನೆ ಇಲ್ಲಿನ ಹಳ್ಳಿಗಳಿಗೆ ಕಾಲಿರಿಸಿದ ಬಳಿಕ ಮಹಿಳೆಯರಿಗೆ ಸಾಲ ಪಡೆಯುವುದು ಸ್ವಾಭಿಮಾನದ ಸಂಕೇತವಾಯಿತು. ಸಾಲ ಪಡೆಯುವ ಮತ್ತು ಮರುಪಾವತಿ ಮಾಡುವ ವಿಧಾನಕ್ರಮ ಅತ್ಯಂತ ಸರಳ ಮತ್ತು ಸುಲಭವಾಗಿದೆ. ಸಾಲ ಒದಗಿಸುವ ಸಂದರ್ಭದಲ್ಲಿ ಯೋಜನೆಯು ಕೆಲವು ನಿಯಮಗಳನ್ನು ರೂಪಿಸಿದೆ. ಸಾಲ ನೀಡುವಲ್ಲಿ ಎಲ್ಲಾ ಸದಸ್ಯರ ಒಪ್ಪಿಗೆ ಬೇಕು. ಸಾಲ ಪಡೆದುಕೊಳ್ಳಲು ಸೂಕ್ತ ಉದ್ದೇಶವಿರಬೇಕು. ಸಾಲ ಪಡೆದ ಉದ್ದೇಶ ಈಡೇರಬೇಕು. ಸ್ವ-ಸಹಾಯ ಸಂಘಗಳು ಶಿಸ್ತು, ಸಂಯಮ, ಜಾಗೃತಿ, ಮಾಹಿತಿಗಳನ್ನು ನೀಡುವುದರ ಮೂಲಕ ಆರ್ಥಿಕ ಪ್ರವರ್ಧನೆ, ಸ್ವ-ಉದ್ಯೋಗ ಮತ್ತು ಗುಂಪು ಚಟುವಟಿಕೆ ನಡೆಸಲಾಗುತ್ತದೆ. ಸಂಘಗಳು ತಾಲೂಕಿನ ಹಲವೆಡೆ ಸಣ್ಣ-ಸಣ್ಣ ಉದ್ಯಮಗಳನ್ನು ಸ್ಥಾಪಿಸಿಕೊಂಡಿವೆ. ಹಪ್ಪಳ ತಯಾರಿಕೆ, ನರ್ಸರಿ, ಉಪ್ಪಿನಕಾಯಿ, ಅಗರಬತ್ತಿ, ಇತ್ಯಾದಿ ತಯಾರಿಕೆಯಲ್ಲಿ ತೊಡಗಿದ್ದಾರೆ. ಟೈಲರಿಂಗ್, ಕಸೂತಿ, ಬುಕ್‌ಬೈಂಡ್, ಸ್ಕ್ರೀನ್ ಪ್ರಿಂಟಿಂಗ್, ಮೀನು ವ್ಯಾಪಾರ, ಸಿಗಡಿ ಕೃಷಿ, ಪುಷ್ಪ ಕೃಷಿ, ಸಣ್ಣ ವ್ಯಾಪಾರ ಮುಂತಾದ ಉದ್ಯಮ ನಡೆಸುತ್ತಿದ್ದರೆ. ಹೀಗೆ ತಾಲೂಕಿನ ದೊಡ್ಡ ಸಂಖ್ಯೆಯ ಗ್ರಾಮೀಣ ಮಹಿಳೆಯರು ಸ್ವಸಹಾಯ ಗುಂಪಿನ ಸದಸ್ಯರುಗಳಾದ ನಂತರದ ದಿನಗಳಲ್ಲಿ ತೃಪ್ತಿಯ ಕ್ಷಣಗಳನ್ನು ಕಂಡು ಅನುಭವಿಸಿದ್ದಾರೆ.

ಕುಂದಾಪುರ ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಸಹಾಯ ಗುಂಪುಗಳು ಒಟ್ಟು ೩೯೦೭೭ ಕುಟುಂಬಗಳನ್ನು ಒಳಗೊಂಡಿದೆ. ಆ ಗುಂಪುಗಳ ಒಟ್ಟು ಉಳಿತಾಯದ ಮೊತ್ತ ೧,೫೩,೬೮೩ ಆಗಿರುತ್ತದೆ. ಈ ಗುಂಪುಗಳು ಒಟ್ಟು ೧೦,೯೬,೨೯೦ ಪ್ರಗತಿನಿಧಿಯನ್ನ ಪಡೆದುಕೊಂಡಿದ್ದು ಇದರಲ್ಲಿ ೭,೮೦,೨೯೭ ಮರುಪಾವತಿ ಆಗಿರುತ್ತದೆ. ೩,೫೯,೯೯೩ ಮೊತ್ತದ ಪ್ರಗತಿನಿಧಿ ಬಾಕಿ ಇದೆ. ಸ್ವಸಹಾಯ ಗುಂಪುಗಳು ಒಟ್ಟು ೧,೫೮,೧೦೬ ಸಂಖ್ಯೆಯ ಆಂತರಿಕ ಸಾಲವನ್ನು ವಿತರಿಸಿದ್ದು ಇವುಗಳ ಮೊತ್ತ ೧೩,೪೯,೫೬೮ ಆಗಿರುತ್ತದೆ. ಇವುಗಳಲ್ಲಿ ೭,೬೨,೭೦೯ ಮರುಪಾವತಿ ಮಾಡಲಾಗಿದೆ. ೫,೮೬,೮೫೯ ಮೊತ್ತ ಬಾಕಿ ಇದೆ. ಬ್ಯಾಂಕ್ ಖಾತೆಯಲ್ಲಿ ಜಮೆ ಆಗಿರುವ ಉಳಿತಾಯದ ಮೊತ್ತ ೫೩,೬೦೧ ಆಗಿರುತ್ತದೆ.

ಕುಂದಾಪುರ ತಾಲೂಕಿನ ಒಟ್ಟು ೧೦೧ ಗ್ರಾಮಗಳಲ್ಲಿ ಒಟ್ಟು ೫೦೨೮ ಗುಂಪುಗಳನ್ನು ತೆರೆಯಲಾಗಿದ್ದು ಇವುಗಳಲ್ಲಿ ೪೪೪೯ ಗುಂಪುಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿವೆ. ಈ ಗುಂಪುಗಳು ಒಟ್ಟು ೪೭೪೫೦ ಕುಟುಂಬಗಳನ್ನು ಒಳಗೊಂಡಿವೆ. ಇವುಗಳಲ್ಲಿ ಸರಿಸುಮಾರು ೯೦% ಕುಟುಂಬಗಳು ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುತ್ತಿವೆ. ಈ ಕುಟುಂಬಗಳ ಉಳಿತಾಯದ ಮೊತ್ತ ರೂ. ೧.೯೬೮೫೯ ಆಗಿರುತ್ತದೆ. ಈ ಗುಂಪುಗಳು ಒಟ್ಟು ರೂ. ೧೨.೫೮೬೩೪ ಪ್ರಗತಿನಿಧಿಯನ್ನು ಪಡೆದುಕೊಂಡಿದ್ದು ಅವುಗಳಲ್ಲಿ ರೂ.

೬.೮೧೫೯೮ ಮರುಪಾವತಿ ಆಗಿರುತ್ತದೆ. ಬಾಕಿ ಇರುವ ಪ್ರಗತಿನಿಧಿ ರೂ. ೫೭೨೦೩೬ ಆಗಿರುತ್ತದೆ. ಈ ಗುಂಪುಗಳು ಈವರೆಗೆ ಒಟ್ಟು ರೂ. ೨.೦೮೪೮೦ ಆಂತರಿಕ ಸಾಲಗಳನ್ನು ವಿತರಿಸಿದ್ದು ಈ ಸಾಲದ ಮೊತ್ತ ರೂ. ೧೭೧೦೦೦೦ ಆಗಿರುತ್ತದೆ. ಇವುಗಳಲ್ಲಿ ರೂ.೯೦೬೮೫ ಮರುಪಾವತಿ ಆಗಿದ್ದು ಬಾಕಿ ಇರುವ ಸದಸ್ಯರ ಸಾಲದ ಮೊತ್ತ ರೂ. ೭೧೯೩೧೫ ಆಗಿರುತ್ತದೆ. [೧೦]

೫.೫ ಜ್ಞಾನ ವಿಕಾಸ ಕಾರ್ಯಕ್ರಮ

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕೇಂದ್ರಗಳು ಗ್ರಾಮೀಣ ಮಹಿಳೆಯರ ಸಾಂಸ್ಕೃತಿಕ ಬದುಕನ್ನು ಪುನಶ್ಚೇತನಗೊಳಿಸಿವೆ. ಇಲ್ಲಿನ ಹಳ್ಳಿಗರ ಮನೆಗಳ ಬಾಗಿಲಿನಲ್ಲಿ ರಂಗೋಲಿ, ಸ್ತ್ರೀಯರಲ್ಲಿ ಅತಿಥಿ ಸತ್ಕಾರ ಪ್ರಜ್ಞೆ, ಸಾಂಸ್ಕೃತಿಕ ಆಚರಣೆಗಳು ಪುನರುಜ್ಜಿವನಗೊಳ್ಳುವ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿದ್ದು ಮಾತೃಶ್ರೀ ಹೇಮಾವತಿ ಹೆಗ್ಗಡೆಯರ ಕನಸಿನ ಕೂಸಾದ ಜ್ಞಾನ ವಿಕಾಸ ಕೇಂದ್ರಗಳ ಮೂಲಕ. ಇವು ಗ್ರಾಮೀಣ ಮಹಿಳೆಯರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಮೂಡಿಸುವ ವಿಶಿಷ್ಟ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿವೆ.. ಇಲ್ಲಿನಗ್ರಾಮೀಣ ಪ್ರದೇಶಗಳಲ್ಲಿ ಬೀಡಿ ಕಟ್ಟುವುದು ಮತ್ತು ಇತರ ಕೂಲಿ ಕೆಲಸಗಳಲ್ಲಿ ತೊಡಗಿಕೊಳ್ಳುವ ಮಹಿಳೆಯರು ಜ್ಞಾನವಿಕಾಸ ಕೇಂದ್ರಗಳ ಮೂಲಕ ಆರೋಗ್ಯ, ಕುಟುಂಬ ಕಲ್ಯಾಣ, ನೈರ್ಮಲ್ಯ, ಮಕ್ಕಳ ವಿದ್ಯಾಭ್ಯಾಸ, ಶುಚಿತ್ವ ಮತ್ತು ಉತ್ತಮ ಜೀವನ ಕುರಿತು ಪ್ರತಿ ತಿಂಗಳು ಎರಡು ಗಂಟೆ ಅವಧಿಯ ಮಾಹಿತಿ ಪಡೆಯುತ್ತಾರೆ.

ಸ್ವ-ಸಹಾಯ ಸಂಘಗಳ ಸದಸ್ಯರೇ 'ಜ್ಞಾನ ವಿಕಾಸ' ಕಾರ್ಯಕ್ರಮವನ್ನು ರೂಪಿಸಿಕೊಳ್ಳುತ್ತಾರೆ. ಸುತ್ತಮುತ್ತ ಪರಿಸರದ ೩-೪ ಸಮಾನ ಮನಸ್ಕರ ಸಂಘಗಳ ಸಂಯೋಜನೆಯಿಂದ ಜ್ಞಾನ ವಿಕಾಸ ಕೇಂದ್ರ ರೂಪಿತವಾಗುತ್ತದೆ. ಎಲ್ಲ ಸದಸ್ಯರಿಗೂ ಸುಲಭವಾಗುವ ಒಂದು ನಿರ್ದಿಷ್ಟ ಪ್ರದೇಶ, ಶಾಲೆ, ಸಮುದಾಯ ಭವನ, ಕಲಾ ಭವನ, ದೇವಸ್ಥಾನ ಇತ್ಯಾದಿ ಸ್ಥಳಗಳಲ್ಲಿ ತಿಂಗಳ ಸಭೆ ನಡೆಸುತ್ತಾರೆ. ಇದನ್ನು 'ಜ್ಞಾನ ವಿಕಾಸ ಮಾಸಿಕ ಸಭೆ' ಎಂದು ಕರೆಯುತ್ತಾರೆ. ಆ ದಿನ ಒಬ್ಬ ಸ್ಥಳೀಯ ಸಂಪನ್ಮೂಲ ವ್ಯಕ್ತಿಯನ್ನು ಕರೆಸಿ ಮಾಹಿತಿ ಕೊಡಲಾಗುತ್ತದೆ. ಇಂದು ತಾಲೂಕಿನ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಸಾಮಾನ್ಯ ಮಹಿಳೆಯರು ಸಹ ಅಂಜಿಕೆ-ಕೀಳರಿಮೆಗಳನ್ನು ಬದಿಗೊತ್ತಿ ರೂಪುಗೊಳ್ಳುತ್ತಿದ್ದಾರೆ. ಶಿಕ್ಷಣ, ಉದ್ಯೋಗ, ಸಂಘಟನೆ ಇವೆಲ್ಲಾ ಕಾರಣಗಳಿಂದ ಮಹಿಳೆಯರ ವ್ಯಕ್ತಿತ್ವದಲ್ಲಿ ಬದಲಾವಣೆ ಕಂಡು ಬರುತ್ತದೆ. ಪ್ರತಿ ಕೇಂದ್ರದಲ್ಲಿ ಅರ್ಧ ಗಂಟೆ ಅವಧಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಂದಾಗಿ ಮಹಿಳೆಯರಿಗೆ ತಮ್ಮಲ್ಲಿರುವ ಪ್ರತಿಭೆಯನ್ನು ವ್ಯಕ್ತಪಡಿಸಲು ಸಾಧ್ಯವಾಗಿದೆ. ಜ್ಞಾನ ವಿಕಾಸವು ಕೇವಲ ಮಹಿಳೆಯರಿಗೆ ಮಾತ್ರ ಸಿಮೀತವಾಗಿರುತ್ತದೆ.

ತಾಲೂಕಿನಲ್ಲಿ ಜ್ಞಾನ ವಿಕಾಸ ಕೇಂದ್ರಗಳ ಸ್ಥಾಪನೆಯಾಗಿ ಆರು ವರ್ಷ ಕಳೆದಿದೆ. ಆಗಸ್ಟ್ ಮಂಟಪದಲ್ಲಿ ಮಾತೃಶ್ರೀ ಹೇಮಾವತಿ ಹೆಗ್ಗಡೆಯವರು ತಾಲೂಕು ಜ್ಞಾನ ವಿಕಾಸ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಉದ್ಘಾಟಿಸಿದರು. ಇಂದು ತಾಲೂಕಿನಲ್ಲಿ ೧೧೧ ಕ್ಕೂ ಮಿಕ್ಕಿ ಜ್ಞಾನ ವಿಕಾಸ ಕೇಂದ್ರಗಳಿವೆ. ಸಂಘಗಳ ನಿರ್ಣಯದಂತೆ ಅ ಕೇಂದ್ರಕ್ಕೊಂದು ಹೆಸರನ್ನು ಇಡಲಾಗುವುದು. ಉದಾ :- ನಂದಾದೀಪ, ದಿವ್ಯದೀಪ, ಪ್ರಗತಿ ಸಂಘಮ, ಬಾಂಧವ್ಯ, ಹೀಗೆ. ೪೦ ರಿಂದ ೫೦ ಮಂದಿ ಸದಸ್ಯರಲ್ಲಿ ಹತ್ತನೇ ತರಗತಿ ಮೇಲ್ಪಟ್ಟು ಹೆಚ್ಚು ವಿದ್ಯಾಭ್ಯಾಸವುಳ್ಳ ಸದಸ್ಯರಿಗೆ ಮಾಹಿತಿ ನೀಡಲು ಅರ್ಹಳಾಗಿರುವ ಓರ್ವ ಸದಸ್ಯೆಯನ್ನು ನಾಯಕಿಯಾಗಿ ಆರಿಸುತ್ತಾರೆ. ಅವರನ್ನು ಸಂಯೋಜಕಿ ಎಂದು ಕರೆಯುತ್ತಾರೆ. ಜ್ಞಾನ ವಿಕಾಸದಲ್ಲಿ ಸ್ತ್ರೀಯರ ಕರ್ತವ್ಯ, ಅಡುಗೆ ಇತ್ಯಾದಿಗಳನ್ನು ಕಲಿಸಲಾಗುವುದು. ಹೊಸ ರುಚಿ ಬಗ್ಗೆ ಪ್ರಾತ್ಯಕ್ಷಿತೆ ಇರುತ್ತದೆ. ಇತ್ತೀಚೆಗೆ ಉಡುಪಿಯಲ್ಲಿ ಆಹಾರೋತ್ಸವ ಆಯೋಜಿಸಿದ್ದು ಸ್ಮರಣೀಯ. ಮುದೂರು. 'ಪ್ರೇರಣಾ ಜ್ಞಾನ ವಿಕಾಸ ಕೇಂದ್ರ'ದಲ್ಲಿ ಇತ್ತೀಚೆಗೆ ಗ್ರಾಮೀಣ ಆಹಾರೋತ್ಸವ ಆಯೋಜಿಸಿದ್ದು ೬೨ ಕ್ಕೂ ಹೆಚ್ಚು ಬಗೆಯ ಖಾದ್ಯಗಳನ್ನು ತಯಾರಿಸಲಾಗಿದೆ. ಸಭೆ-ಸಮಾರಂಭ ಆಯೋಜಿಸುವುದು, ಅತಿಥಿಗಳಿಗೆ ತಾವೇ ಸ್ಥಳೀಯವಾಗಿ ತಯಾರಿಸಿದ ಪುಷ್ಪಗುಚ್ಛ ಕೊಡುವುದು ಇದರ ವಿಶೇಷ. ತಾಲೂಕಿನಲ್ಲಿ ಜ್ಞಾನ ವಿಕಾಸ ಕೇಂದ್ರ ಹಮ್ಮಿಕೊಂಡ ಕಾರ್ಯಕ್ರಮಗಳು ಬಹಳ ವಿಶೇಷವಾಗಿವೆ. ಜ್ಞಾನ ವಿಕಾಸ ಕೇಂದ್ರಕ್ಕೆ ತಾಲೂಕು ಮಟ್ಟದಲ್ಲಿ ಇಬ್ಬರು ಸಮನ್ವಯಾಧಿಕಾರಿಗಳಿದ್ದಾರೆ. ಶ್ರೀಮತಿ ಶಶಿರೇಖಾ, ಕು. ಪಾರ್ವತಿಯವರು ಪ್ರಸ್ತುತ ಸಮನ್ವಯಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮತ್ತೆಲ್ಲಾ ಉಸ್ತುವಾರಿಯನ್ನು ಸೇವಾನಿರತರು ವಹಿಸಿಕೊಳ್ಳುತ್ತಾರೆ.

ಪುಷ್ಪಗುಚ್ಛ ತಯಾರಿ, ರಂಗೋಲಿ, ಸಭೆ ನಿಯಮ, ನಾಯಕತ್ವ, ದಾಖಲಾತಿ ನಿರ್ವಹಣೆ, ಪರಿಸರ ಶುಚಿತ್ವ, ವಿಮರ್ಶೆ ಮತ್ತು ಸಂಘಟನೆ, ಕೌಟುಂಬಿಕ ಸಾಮರಸ್ಯದಲ್ಲಿ ಮಹಿಳೆಯ ಪಾತ್ರ, ಮಹಿಳೆ ಮತ್ತು ಕಾನೂನು, ವ್ಯಕ್ತಿತ್ವ ವಿಕಸನ, ಮೂಢನಂಬಿಕೆ, ಶಿಕಷಣದ ಮಹತ್ವ, ಶಿಶುಪಾಲನೆ, ಉದ್ಯೋಗಾವಕಾಶಗಳು, ಮಕ್ಕಳ ಆರೋಗ್ಯ, ಸಾಂಕ್ರಾಮಿಕ ರೋಗಗಳು, ಗಿಡಿಮೂಲಿಕೆ, ಪಡಿತರ ಚೀಟಿ, ಮನೆಗೊಂದು ಕೈತೋಟ, ಪೌಷ್ಟಿಕ ಆಹಾರದ ಮಹತ್ವ ಮತ್ತು ಪ್ರಾತ್ಯಕ್ಷಿಕೆ, ಸ್ವ-ಉದ್ಯೋಗ ಇತ್ಯಾದಿ ವಿಷಯಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ನೀಡಲಾಗುವುದು.

ಕುಂದಾಪುರ ತಾಲೂಕಿನ ೧೧೧ ಗ್ರಾಮಗಳಲ್ಲಿ ಒಟ್ಟು ೧೧೩ ಜಾನವಿಕಾಸ ಕೇಂದ್ರಗಳು ಯ ಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ಈ ಕೇಂದ್ರಗಳು ಒಟ್ಟು ೩೪೩ ಸ್ವಸಹಾಯ ಗುಂಪುಗಳನ್ನು ಹೊಂದಿವೆ. ಈ ಗುಂಪುಗಳು ಒಟ್ಟು ೩೯೪೫ ಕುಟುಂಬಗಳನ್ನು ಒಳಗೊಂಡಿದ್ದು ಅವುಗಳ ಒಟ್ಟು ಉಳಿತಾಯ ರೂ. ೨೨೭೧೫ ಆಗಿರುತ್ತದೆ. ಈ ಗುಂಪುಗಳು ಈತನಕ ವಿತರಿಸಿದ ಸಾಲಗಳ ಸಂಖ್ಯೆ ೨೦೩೬೧ ಆಗಿದ್ದು ಈ ಸಾಲದ ಒಟ್ಟು

ಮೊತ್ತ ರೂ. ೧.೪೬೬೧೪ ಆಗಿರುತ್ತದೆ. ಇದರಲ್ಲಿ ಮರುಪಾವತಿ ಮಾಡಿದ ಸಾಲದ ಮೊತ್ತ ರೂ. ೧.೦೫೫೪೬ ಆಗಿದ್ದು ರೂ. ೪೧೦೨೮ ಮೊತ್ತದ ಮರುಪಾವತಿ ಬಾಕಿ ಇದೆ. [೧೧]

೫.೬ ಕುಂದಾಪುರ ತಾಲೂಕಿನಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣ

ಕುಂದಾಪುರ ತಾಲೂಕಿನಾದ್ಯಂತ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಗ್ರಾಮೀಣ ಮಹಿಳೆಯರಿಗೆ ಗ್ರಾಮಾಭಿವೃದ್ಧಿ ಯೋಜನೆಯು ವರದಾನವಾಗಿ ಪರಿಣಮಿಸಿದೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದ ಮಹಿಳೆಯರಿಗೆ ಔದ್ಯೋಗಿಕ ಭದ್ರತೆ ಇಲ್ಲದ ಮತ್ತು ಸಮರ್ಪಕ ವೇತನ ದೊರೆಯದ ಹಿನ್ನೆಲೆಯಲ್ಲಿ ಅವರುಗಳ ನಿತ್ಯಜೀವನದ ನಿರ್ವಹಣೆಯೇ ಕಷ್ಟಸಾಧ್ಯವಾಗಿತ್ತು. ಒಂದೆಡೆಯಲ್ಲಿ ದುಡಿಮೆಗೆ ತಕ್ಕ ಪ್ರತಿಫಲವೂ ಸಿಗುತ್ತಿರಲಿಲ್ಲ. ಇನ್ನೊಂದೆಡೆಯಲ್ಲಿ ಮಾಡಿದ ಕೆಲಸದಲ್ಲಿ ಮಾನಸಿಕ ನೆಮ್ಮದಿ ಇರಲಿಲ್ಲ. ವರ್ಷವಿಡೀ ಹಗಲಿರುಳು ದುಡಿದರೂ ಬಂದ ಆದಾಯದಲ್ಲಿ ಉಳಿಕೆ ಸಾಧ್ಯವಿರಲಿಲ್ಲ. ಅದರಲ್ಲೂ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದ ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ ಮಾನ್ಯತೆಯೂ ಇರಲಿಲ್ಲ. ಯೋಜನೆಯ ವಿಸ್ತರಣಾ ಚಟುವಟಿಕೆಗಳು ಈ ಕೊರತೆಯನ್ನು ಒಂದು ಹಂತದವರೆಗೆ ನೀಗಿಸುತ್ತ ಬಂದಿವೆ. ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಸ್ವಸಹಾಯ ಗುಂಪಿನ ಪರಿಕಲ್ಪನೆಯ ಮೂಲಕ ಒಂದುಗೂಡಿಸುವ ಮತ್ತು ಅವರಲ್ಲಿ ಸಂಘಟನಾ ಶಕ್ತಿಯನ್ನು ಪೋಷಿಸುವ ನಿಟ್ಟಿನಲ್ಲಿ ಯೋಜನೆಯು ನಿರೀಕ್ಷೆಗೂ ಮೀರಿ ಶ್ರಮಿಸಿದೆ. ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರುಗಳಲ್ಲಿ ಉಳಿತಾಯದ ಕಲ್ಪನೆಯನ್ನು ಮೂಡಿಸುವುದರೊಂದಿಗೆ ಅವರಲ್ಲಿ ಆರ್ಥಿಕ ಸ್ವಾತಂತ್ರ್ಯ ಪಡೆಯುವಂತೆ ಪ್ರೇರೇಪಿಸಿ, ಪರಸ್ಪರ ಒಗ್ಗಟ್ಟು, ಹೊಂದಾಣಿಕೆ ಮತ್ತು ಸಹಕಾರಿ ತತ್ವದ ಆಧಾರದ ಮೇಲೆ ಸಂಘ ಶಕ್ತಿಯನ್ನು ಸ್ವಯಂ ಪ್ರೇರಣೆಯೊಂದಿಗೆ ಬಲಗೊಳಿಸುವ ಕೆಲಸಗಳು ಯೋಜನೆಯ ಮೂಲಕ ನಡೆದಿವೆ. ಯೋಜನೆಯ ವತಿಯಿಂದ ಪ್ರವರ್ತಿಸಲ್ಪಟ್ಟ ಸಂಪೂರ್ಣ ಸುರಕ್ಷಾ, ಜೀವನ್ ಮಧುರಾ, ಜ್ಞಾನವಿಕಾಸ ಮೊದಲಾದ ಕಾರ್ಯಕ್ರಮಗಳು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರ ಆತ್ಮಬಲವನ್ನು ವೃದ್ಧಿಸಿವೆ. ಅಂತೆಯೇ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಅನೇಕ ಮಂದಿ ಮಹಿಳೆಯರು ಇಂದು ಯೋಜನೆಯ ಆರ್ಥಿಕ ಮತ್ತು ತರಬೇತಿಯ ನೆರವಿನಿಂದ ವಿವಿಧ ಮಾದರಿಯ ಸಣ್ಣ ಪ್ರಮಾಣದ ಸ್ವ ಉದ್ಯೋಗ ಚಟುವಟಿಕೆಗಳನ್ನು ಕೈಗೊಂಡು ನಿರ್ವಹಿಸುತ್ತಿದ್ದಾರೆ. ಇನ್ನು ಹಲವರು ಸಿರಿ ಗ್ರಾಮೋದ್ಯೋಗ ಸಂಸ್ಥೆಯೊಂದಿಗೆ ಸಹಭಾಗಿಗಳಾಗಿದ್ದಾರೆ. ಈ ಎಲ್ಲಾ ಪರಿಣಾಮಕಾರಿ ಪ್ರಯತ್ನಗಳ ನಡುವೆಯೂ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಬಹುಸಂಖ್ಯಾತ ಮಹಿಳೆಯರ ದುಸ್ಥಿತಿ ಹಾಗೆಯೇ ಮುಂದುವರಿದಿದೆ. ಇಂತಹ

ಮಹಿಳೆಯರನ್ನು ಸದೃಢರನ್ನಾಗಿಸುವ ಕೆಲಸಾಗಳು ಸರಕಾರದ ಕಾರ್ಯಕ್ರಮಗಳ ನೆರವಿನೊಂದಿಗೆ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ದೊಡ್ಡ ಮಟ್ಟದಲ್ಲಿ ಕಾರ್ಯಗತಗೊಳ್ಳಬೇಕಾಗಿದೆ.

ಪ್ರಸ್ತುತ ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯು ಕೃಷಿ ಮತ್ತು ಕೃಷಿಪೂರಕ ಚಟುವಟಿಕೆಗಳಿಗೆ ಆದ್ಯತೆಯ ಮೇರೆಗೆ ಗಮನಹರಿಸಿದೆ. ಅದೇ ವೇಳೆಗೆ ಕೃಷಿ ಸಂಬಂಧಿ ಕುಲಕಸುಬು ಮತ್ತು ಉಪಕಸುಬುಗಳನ್ನು ಕೈಗೊಳ್ಳಬಯಸುವ ಫಲಾನುಭವಿಗಳಿಗೆ ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ನೆರವಾಗಿದೆ. ಶ್ರೀಪದ್ದತಿಯೂ ಸೇರಿದಂತೆ ಕೃಷಿಯಲ್ಲಿ ಆಧುನಿಕ ವಿಧಾನಕ್ರಮಗಳನ್ನು ಅನುಸರಿಸಲು ಅನುಕೂಲವಾಗುವಂತೆ ಯೋಜನೆಯು ತನ್ನ ಎಲ್ಲಾ ಎಂಟು ವಲಯಗಳಲ್ಲಿ ಸಕಾಲಿಕ ತರಬೇತಿ ಕಾರ್ಯಕ್ರಮಗಳನ್ನು ನಿರ್ವಹಿಸಿಕೊಂಡು ಬರುತ್ತಿದೆ. ಆಯಾ ಪ್ರದೇಶಗಳ ಹವಾಗುಣ, ಮಣ್ಣು, ಬೆಳೆ ಪದ್ದತಿ ಮೊಅದಲಾದವುಗಳಿಗೆ ಹೊಂದಿಕೊಂಡಂತೆ ತರಬೇತಿ ಕಾರ್ಯಕ್ರಮಗಳನ್ನು ಸಕಾಲಿಕವಾಗಿ ಆಯೋಜಿಸಲಾಗುತ್ತಿದ್ದು ಆಸಕ್ತ ಮಹಿಳೆಯರಿಗೆ ಸಂಬಂಧಿಸಿದ ತರಬೇತಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇಲ್ಲಿನ ಬಹುತೇಕ ಮಂದಿ ಗ್ರಾಮೀಣ ಮಹಿಳೆಯರು ಯೋಜನೆಯ ಫಲಾನುಭವಿಗಳಾದ ನಂತರದ ದಿನಗಳಲ್ಲಿ ಕೃಷಿಪೂರಕ ಚಟುವಟಿಕೆಗಳನ್ನು ಸ್ವಉದ್ಯೋಗದ ಮಾದರಿಯಲ್ಲಿ ಕೈಗೊಂಡಿದ್ದಾರೆ. ಇದರೊಂದಿಗೆ ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವ ಮೂಲಕ ಸ್ವಾವಲಂಬನೆಯ ಹೊಸ ಮಾರ್ಗವನ್ನು ಕಂಡುಕೊಂಡಿದ್ದಾರೆ. ಹೈನುಗಾರಿಕೆಯನ್ನು ಕೈಗೊಳ್ಳುವವರಿಗೆ ಯೋಜನೆಯು ನಿರಂತರವಾಗಿ ಆರ್ಥಿಕ ನೆರವು ನೀಡುತ್ತ ಬಂದಿದೆ. ಕುಂದಾಪುರ ತಾಲೂಕಿನ ಸಹಸ್ರಾರು ಕುಟುಂಬಗಳ ಮಹಿಳೆಯರು ಯೋಜನೆಯ ವತಿಯಿಂದ ಸಾಲ ಸೌಲಭ್ಯ ಪಡೆಯುವುದರೊಂದಿಗೆ ಸಹಾಯಧನವನ್ನು ಸಹ ಪಡೆದಿದ್ದಾರೆ. ಇದರೊಂದಿಗೆ ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸಕಾಲಿಕ ತರಬೇತಿ, ವೈದ್ಯಕೀಯ ಸೌಲಭ್ಯಗಳನ್ನು ಸಹ ಪಡೆದಿದ್ದಾರೆ. ಇದರಿಂದಾಗಿ ಇಂದು ಕುಂದಾಪುರ ತಾಲೂಕಿನ ಗ್ರಾಮೀಣ ಪ್ರದೇಶಗಳ ಬಡ ಮಹಿಳೆಯರು ಆರ್ಥಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಲು ಸಾಧ್ಯವಾಗಿದೆ.

ತಾಲೂಕಿನಲ್ಲಿ ಹೈನುಗಾರಿಕೆ ಸತ್ವ ಕಳೆದುಕೊಂಡು ಜಡತ್ವದಿಂದಿರುವಾಗ ಅದಕ್ಕೆ ಪುನಶ್ಚೇತನ ನೀಡಿದ್ದು ಗ್ರಾಮಾಭಿವೃದ್ಧಿ ಯೋಜನೆ. ಯೋಜನೆಯ ಸದಸ್ಯರಿಗೆ ಹೈನುಗಾರಿಕೆ ಬಗ್ಗೆ ಮಾಹಿತಿ ನೀಡಿ ವೈಜ್ಞಾನಿಕ ದೃಷ್ಟಿಕೋನದಿಂದ ಹೈನುಗಾರಿಕೆ ಆರಂಭಿಸುವ ಬಗ್ಗೆ ತಿಳಿವಳಿಕೆ ನೀಡುವ ಕಾರ್ಯಕ್ರಮಗಳು ನಡೆದುಕೊಂಡು ಬರುತ್ತಿದೆ. ಈ ಮೂಲಕ ಗ್ರಾಮ–ಗ್ರಾಮಗಳಲ್ಲಿ ಮಾದರಿ ಹೈನುಗಾರಿಕಾ ಕುಟುಂಬಗಳು ತಲೆ ಎತ್ತಿವೆ. ಹಸಿರು ಹುಲ್ಲುನಾಟಿ, ಅಝೋಲಾ, ಕೃತಕ ಗರ್ಭಧಾರಣೆ, ಕರುಗಳ ಆರೈಕೆ ಬಗ್ಗೆ ಸಮಗ್ರವಾಗಿ ಮನೆ ಬಾಗಿಲಿಗೆ ಮಾಹಿತಿಯ ಭಂಡಾರವನ್ನೇ ಹರಿಸಲಾಗುತ್ತದೆ. ಹೈನುಗಾರಿಕೆಗೆ ಪೂರಕವಾಗಿ ಬದಲಿ ಇಂಧನ ಅಭಿವೃದ್ಧಿಗೆ ವ್ಯವಸ್ಥೆಗಳಿವೆ. ಗೋಬರ್ ಅನಿಲ ಸ್ಥಾವರ ಸ್ಥಾಪನೆಗೆ ಪ್ರಾಧಾನ್ಯ ನೀಡಲಾಗುತ್ತದೆ. ಈ ತನಕ

ತಾಲೂಕಿನಲ್ಲಿ ೧೭೭ ಗೋಬರ್ ಅನಿಲ ಸ್ಥಾವರಗಳನ್ನು ಅಳವಡಿಸಲಾಗಿದೆ. ಯೋಜನೆಯ ಮಾರ್ಗದರ್ಶನದಲ್ಲಿ ಹೊಸತಾಗಿ ಅನೇಕ ಮಂದಿ ಹೈನುಗಾರಿಕೆ ಕೈಗೊಂಡಿದ್ದಾರೆ. ಈ ಕ್ಷೇತ್ರದಲ್ಲಿ ಉತ್ತಮ ಸಾಧನೆಯಾಗಿದ್ದು ಕೆ.ಎಂ.ಎಫ್. ತಾಲೂಕಿನ ಗ್ರಾಮಾಭಿವೃದ್ಧಿ ಯೋಜನೆಯ ಪರಿಣಾಮಕಾರಿ ಸಾಧನೆಗೆ ಶ್ಲಾಘನೆ ವ್ಯಕ್ತಪಡಿಸಿದೆ.

ಕುಂದಾಪುರ ತಾಲೂಕಿನಲ್ಲಿ ಕೃಷಿ ಅಭಿವೃದ್ಧಿಯ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆ ಇತ್ತೀಚಿನ ವರ್ಷಗಳಲ್ಲಿ ಮೌಲ್ಯಪೂರ್ಣ ಯಶಸ್ಸು ಕಂಡಿದೆ. ಉಳ್ಳವರ ಮನೆಯಲ್ಲಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದ ಸಹಸ್ರಾರು ಮಂದಿ ಗ್ರಾಮೀಣ ಮಹಿಳೆಯರು ಇಂದು ಯೋಜನೆಯ ನೆರವಿನೊಂದಿಗೆ ತಮ್ಮದೇ ಭೂಮಿಯಲ್ಲಿ ಕೃಷಿ ಮತ್ತು ಕೃಷಿಪೂರಕ ಚಟುವಟಿಕೆಗಳನ್ನು ಕೈಗೊಳ್ಳಲು ಸಾಧ್ಯವಾಗಿದೆ. 'ಕೃಷಿ ಅಭಿವೃದ್ಧಿ ಹೊಂದಬೇಕು' ಎಂಬ ಹೆಗ್ಗಡೆಯವರ ಮನದಾಳದ ಆಕಾಂಕ್ಷೆ ಗ್ರಾಮೀಣ ರೈತ ಮಹಿಳೆಯರ ಸಮಗ್ರ ಅಭಿವೃದ್ಧಿಯನ್ನು ಸಮಾನವಾಗಿ ಒಳಗೊಂಡಿದೆ. ಹೊಸ ಕೃಷಿ ಪದ್ಧತಿ, ನವೀನ ತಂತ್ರಜ್ಞಾನ, ಸುಧಾರಿತ ತಳಿ ವಿಶೇಷ ಇತ್ಯಾದಿಗಳನ್ನು ಗ್ರಾಮೀಣ ಮಹಿಳೆಯರಿಗೆ ತಲುಪಿಸಲು ಯೋಜನೆಯು ಪ್ರಾಧಾನ್ಯ ನೀಡಿದ್ದು, ಇದಕ್ಕಾಗಿ ವಿವಿಧ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ತಾಲೂಕಿನಾದ್ಯಂತ ನಡೆಸಲಾಗಿದೆ. ಸಮಗ್ರ ಕೃಷಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಂಶೋಧನಾ ಕೇಂದ್ರಗಳ ಭೇಟಿ, ಪರಿಣತರಿಂದ ಮಾಹಿತಿ, ಗೋಷ್ಠಿ, ಪ್ರಾತ್ಯಕ್ಷಿಕೆಗಳು ಮಹತ್ವಪುರ್ಣ ಪಾತ್ರವಹಿಸಿವೆ. ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ಯೋಜನೆಯ ಸಹಯೋಗದೊಂದಿಗೆ ಸೃಷಿ ಚಟುವಟಿಕೆಗಳನ್ನು ಕೈಗೊಂಡ ಪುರುಷರಿಗೆ ಹೋಲಿಸಿದರೆ ರೈತಮಹಿಳೆಯರ ಪಾಲ್ಗೊಳ್ಳುವಿಕೆಯ ಪ್ರಮಾಣ ಕಡಿಮೆ ಎನ್ನಬಹುದು. ಅಂದರೆ ರೈತ ಮಹಿಳೆಯರ ಪಾಲ್ಗೊಳ್ಳುವಿಕೆಯ ಗತಿ ಕಡಿಮೆ ಎನ್ನಬಹುದು. ಈ ನಿಟ್ಟಿನಲ್ಲಿ ಯೋಜನೆಯು ಹಂತಹಂತವಾಗಿ ಇನ್ನಷ್ಟು ಕಾರ್ಯತತ್ಪರವಾಗಬೇಕಾಗಿದೆ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯು ಕೃಷಿ ಆಭಿವೃದ್ಧಿಗೆ ನೀಡಿದ ಇನ್ನೊಂದು ಗಮನಾರ್ಹ ಕೊಡುಗೆ ಎಂದರೆ್ಕೃಷಿಮೇಳದ ಸಂಘಟನೆ. ೨೦೦೬ರಲ್ಲಿ ಕುಂದಾಪುರ ತಾಲೂಕು ಕೋಟೇಶ್ವರದಲ್ಲಿ ಮೂರು ದಿನಗಳ ಪರ್ಯಂತ ಕೃಷಿ ಮೇಳ ಯಶಸ್ವಿಯಾಗಿ ನಡೆಯಿತು. ಇದು ಹಿಂದಿನ ಎಲ್ಲಾ ಕೃಷಿಮೇಳಗಳಿಗೂ ಮಾದರಿ ಎನಿಸಿತು. ಈ ಮೇಳದಲ್ಲಿ ಕೃಷಿ ಸಾಧನಗಳ ಬಗ್ಗೆ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ನೀಡಲಾಯಿತು. ಸರಕಾರಿ ಅಧಿಕಾರಿಗಳು, ಕೃಷಿ ಅಧಿಕಾರಿಗಳು, ರೈತರು ಮೊದಲಾದವರು ಸಹಭಾಗಿಗಳಾಗಿ ಪಾಲ್ಗೊಂಡ ಈ ಮೇಳದಲ್ಲಿ ಕೃಷಿ ಉಪಕರಣಗಳು, ಬೀಜ, ಗೊಬ್ಬರ, ಕೀಟನಾಶಕಗಳ ಪ್ರದರ್ಶನ, ಉತ್ಪಾದಕ ಹಾಗೂ ಕೃಷಿಕರ ನಡುವೆ ಸಂವಾದ, ಗ್ರಾಮೀಣರ ಕರಕುಶಲ ಪ್ರದರ್ಶನ, ಆಟೋಟ ಸ್ಪರ್ಧೆಗಳು ಇತ್ಯಾದಿಗಳನ್ನು ಆತ್ಯಾಕರ್ಷಕವಾಗಿ ಆಯೋಜಿಸಿದ್ದು ಎಲ್ಲರ ಗಮನ ಸೆಳೆಯಿತು. ರಬ್ಬರ್ ಕೃಷಿ,

ಗೇರು ಕೃಷಿ, ಭತ್ತ, ಅಡಿಕೆ, ತೆಂಗು, ತರಕಾರಿ ಕೃಷಿ, ಪುಷ್ಪ ಕೃಷಿ. ಅಲ್ಲದೇ ಇತರೆ ವಾಣಿಜ್ಯ ಬೆಳೆಗಳು,ಇಂಧನ ಸಸ್ಯಗಳು ಮೊದಲಾದವುಗಳ ಬಗ್ಗೆ ಪ್ರಾಯೋಗಿಕ ಮಾಹಿತಿ ನೀಡಿ, ಸಣ್ಣ ರೈತರ ಸಾಮಾನ್ಯ ಗೊಂದಲಗಳನ್ನು ಪರಿಹರಿಸಲಾಯಿತು. ಸರಕಾರದ ವಿವಿಧ ಇಲಾಖೆಗಳ ಜೊತೆ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿ, ರೈತರಿಗೆ ಸೌಲಭ್ಯಗಳನ್ನು ಒದಗಿಸಿಕೊಡುವ ಪ್ರಯತ್ನವೂ ಈ ಮೇಳದಲ್ಲಿ ಸಂಪನ್ನಗೊಂಡಿತು. ಕುಂದಾಪುರದ ಮಣ್ಣಿನ ಜಾನಪದ ಕಲೆಗಳ ಪ್ರದರ್ಶನ ಮೇಳದ ವೈಶಿಷ್ಟ್ಯವಾಗಿತ್ತು. ಈ ಕೃಷಿಮೇಳದ ಪರಿಣಾಮವೆಂಬಂತೆ ೩೫೦೦ ಎಕರೆ ಭೂಮಿ ನೀರಾವರಿ ವ್ಯವಸ್ಥೆ ಕಂಡುಕೊಂಡಿದೆ. ೬೫೨ ಕುಟುಂಬಗಳು ನೀರಾವರಿ ಅಳವಡಿಕೆ ಮಾಡಿಕೊಂಡು ಫಲಾನುಭವಿಗಳಾಗಿವೆ. ಹೀಗೆ ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಬಹುಮುಖಿ ಸಾಧ್ಯತೆಗಳನ್ನು ಪರಿಚಯಿಸುವ ಹಂತದಲ್ಲಿ ಕೃಷಿಮೇಳ ವಹಿಸಿದ ಪಾತ್ರ ಮತ್ತು ಜವಾಬ್ದಾರಿ ನಿರ್ಣಾಯಕವಾದುದು.

ಕಳೆದ ಆರೇಳು ವರ್ಷಗಳಿಂದೀಚೆಗೆ ಕುಂದಾಪುರ ತಾಲೂಕಿನಾದ್ಯಂತ ಗ್ರಾಮಾಭಿವೃದ್ಧಿ ಯೋಜನೆಯ ಆರ್ಥಿಕ ಮತ್ತು ತಾಂತ್ರಿಕ ನೆರವಿನಿಂದ ಕೃಷಿ ಬದುಕಿನಲ್ಲಿ ಪ್ರಗತಿ ಕಂಡ ಹಲವು ರೈತರ ಯಶೋಗಾಥೆಗಳನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗುರುತಿಸಲಾಗಿದೆ. ನೂಜಾಡಿಯ ಯಕ್ಷಬ್ರಹ್ಮ ಪ್ರಗತಿಬಂಧು ತಂಡದ ಸದಸ್ಯ ಮಂಜುನಾಥ ನಾಯ್ಕರು ಶ್ರೀ ಪದ್ಧತಿಯನ್ನು ನೂಜಾಡಿಗೆ ಪರಿಚಯಿಸುವ ಮೂಲಕ ಸುತ್ತಲಿನ ಪರಿಸರದ ಸಣ್ಣ ಕೃಷಿಕರಿಗೆ ಮಾದರಿ ಎನಿಸಿದ್ದಾರೆ. ಇವರನ್ನು ಅನುಸರಿಸಿ ಆ ಗ್ರಾಮದ ಅನೇಕ ಮಂದಿ ಯುವಕರು ಮತ್ತು ರೈತಮಹಿಳೀಯರು ಯೋಜನೆಯ ಅನುದಾನವನ್ನು ಸದುಪಯೋಗಪಡಿಸಿಕೊಂಡು ಈ ಪ್ರಯೋಗದಲ್ಲಿ ತಕ್ಕಮಟ್ಟಿನ ಯಶಸ್ಸು ಕಂಡಿದ್ದಾರೆ. ಇನ್ನೊಂದೆಡೆಯಲ್ಲಿ ಸಳ್ಕೋಡು ಗ್ರಾಮದ ಅಂಜಲಿ ಸ್ವಸಹಾಯ ಗುಂಪಿನ ಶ್ರೀಕಲಾ ಅವರು ಬೃಹತ್ ಪ್ರಮಾಣದಲ್ಲಿ ಮೊಲ ಸಾಕಣೆ ಮಾಡಿ ತಾಲೂಕಿನ ಪ್ರಥಮ ದೊಡ್ಡ ಪ್ರಮಾಣದ ಮೊಲ ಸಾಕಣೆದಾರರು ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. ಆ ಮೂಲಕ ಕಡಿಮೆ ವೆಚ್ಚದಲ್ಲಿ ಮೊಲ ಸಾಕಣೆಯಂತಹ ಬೃಹತ್ ಉದ್ಯಮವನ್ನು ಕೈಗೊಳ್ಳಬಹುದು ಎಂಬುದನ್ನು ಸಾಧಿಸಿತೋರಿಸಿದ್ದಾರೆ. ಇಂತಹ ಅದೆಷ್ಟೋ ಜ್ವಲಂತ ಉದಾಹರಣೆಗಳು ಗ್ರಾಮಾಭಿವೃದ್ಧಿ ಯೋಜನೆ ತಾಲೂಕಿಗೆ ನೀಡಿದ ಮಹತ್ವದ ಕೊಡುಗೆಗಳನ್ನು ಮತ್ತೆ ಮತ್ತೆ ಸಾರಿ ಹೇಳುತ್ತಿವೆ. ಇವುಗಳೊಂದಿಗೆ ಇನ್ನೂ ಅನೇಕ ಯಶೋಗಾಥೆಗಳು ಕುಂದಾಪುರ ತಾಲೂಕಿನಲ್ಲಿ ಪ್ರಗತಿಯ ಹೆಜ್ಜೆಗಳನ್ನು ಎಳೆ ಎಳೆಯಾಗಿ ಪರಿಚಯಿಸುತ್ತವೆ.

೫.೭ ಮಾದರಿ ಅಧ್ಯಯನ ಸಮೀಕ್ಷೆಯ ಸ್ವರೂಪ ಮತ್ತು ವಿಧಾನಕ್ರಮ

ಕುಂದಾಪುರ ತಾಲೂಕಿನ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಈ ಅಧ್ಯಯನ ಕೇಂದ್ರಿತ ಕ್ಷೇತ್ರಕಾರ್ಯದ ಮುಖ್ಯ ಆಕರವಾಗಿವೆ. ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಮಹಿಳಾ ಸದಸ್ಯರುಗಳು ಕ್ಷೇತ್ರಕಾರ್ಯದ ಮಾಹಿತಿದಾರರಾಗಿದ್ದಾರೆ. ಕುಂದಾಪುರ ತಾಲೂಕಿನ ವಿವಿಧ ಭೌಗೋಳಿಕ ವಲಯಗಳಲ್ಲಿನ ಒಟ್ಟು ಹತ್ತು ಗ್ರಾಮಗಳನ್ನು ಮಾದರಿ ಸಮೀಕ್ಷೆಯ ವ್ಯಾಪ್ತಿಯೊಳಗೆ ತರಲಾಗಿದೆ. ಹೀಗೆ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಳ್ಳುವಾಗ ವೈವಿಧ್ಯಮಯ ಭೌಗೋಳಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳ ಗ್ರಾಮೀಣ ಪ್ರದೇಶಗಳನ್ನು ಕೇಂದ್ರೀಯ ದೃಷ್ಟಿಯಲ್ಲಿರಿಸಿಕೊಂಡು ಗಮನಹರಿಸಲಾಗಿದೆ. ಸ್ವಸಹಾಯ ಗುಂಪುಗಳ ಮೂಲಕ ಸಾಮುದಾಯಿಕ ಪಾಲ್ಗೊಳ್ಳುವಿಕೆ ಮತ್ತು ಸಾಮಾಜಿಕ ಅವಕಾಶಗಳನ್ನು ಪಡೆದ ಮಹಿಳಾ ಸದಸ್ಯರುಗಳನ್ನು ಮಾಹಿತಿಯ ಆಗರವಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಮಹಿಳಾ ಸದಸ್ಯರುಗಳು ಸ್ವಸಹಾಯ ಗುಂಪಿಗೆ ಸೇರುವ ಮೊದಲು ಮತ್ತು ನಂತರದ ದಿನಗಳಲ್ಲಿ ಉಂಟಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಸ್ವರೂಪವನ್ನು ಈ ಸಮೀಕ್ಷೆಯ ಮೂಲಕ ಗುರುತಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರಕಾರ್ಯ ಕೇಂದ್ರಿತ ಸಮೀಕ್ಷಾ ಅಧ್ಯಯನಕ್ಕೆ ಅನುಗುಣವಾಗಿ ಪ್ರಶ್ನಾವಳಿಯೊಂದನ್ನು ರೂಪಿಸಲಾಗಿದೆ. (ಪ್ರಶ್ನಾವಳಿ ಮಾದರಿಯನ್ನು ಈ ನಿಬಂಧದ ಅನುಬಂಧ ೧ರಲ್ಲಿ ನೀಡಲಾಗಿದೆ) ಅಧ್ಯಯನದ ಪ್ರಾಥಮಿಕ ಆಕರವನ್ನಾಗಿ ಈ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸ್ವ ಸಹಾಯ ಗುಂಪುಗಳ ಕ್ರಿಯಾಚರಣೆ, ಅವುಗಳ ಸ್ವರೂಪ, ಗ್ರಾಮೀಣ ಪ್ರದೇಶದಲ್ಲಿ ಅವುಗಳ ಅಸ್ತಿತ್ವ, ಸದಸ್ಯರುಗಳ ಪಾಲ್ಗೊಳ್ಳುವಿಕೆ, ಈ ಗುಂಪುಗಳ ಮೂಲಕ ಸ್ವಾವಲಂಬನೆಯನ್ನು ಕಂಡುಕೊಳ್ಳುವ ಬಗೆ, ಗ್ರಾಮೀಣ ಮಹಿಳೆಯರ ಸಹಭಾಗಿತ್ವ, ಮಹಿಳೆಯರ ಶ್ರೇಯೋಭಿವೃದ್ಧಿ ಮೊದಲಾದ ಸಂಗತಿಗಳನ್ನು ಮುಖ್ಯವಾಗಿ ಗಮನದಲ್ಲಿರಿಸಿಕೊಳ್ಳಲಾಗಿದೆ. ಪ್ರಶ್ನಾವಳಿಯನ್ನು ರೂಪಿಸುವ ಹಂತದಲ್ಲಿ ಸ್ವ ಸಹಾಯ ಗುಂಪುಗಳಲ್ಲಿ ಕಾರ್ಯನಿರ್ವಹಿಸುವ ಮಹಿಳೆಯರ ಕೌಟುಂಬಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಗಮನದಲ್ಲಿಸಿಕೊಂಡು ಸಿದ್ಧಪಡಿಸಲಾಗಿದೆ. ಮಾಹಿತಿದಾರರ ವೈಯಕ್ತಿಕ ಮತ್ತು ಕೌಟುಂಬಿಕ ವಿವರಗಳನ್ನು ಒಳಗೊಂಡಂತೆ ಪ್ರಶ್ನಾವಳಿ ಬೆಳೆಯುತ್ತದೆ. ಅಧ್ಯಯನದ ತಾತ್ವಿಕ ತಳಹದಿಗೆ ದೃಢತೆಯನ್ನು ಒದಗಿಸುವ ನಿಟ್ಟಿನಲ್ಲಿ ಈ ವೈಯಕ್ತಿಕ ವಿವರಗಳು ಸಾಂದರ್ಭಿಕ ಮಹತ್ವ ಪಡೆಯುತ್ತದೆ. ಪ್ರಶ್ನಾವಳಿ ಒಳಗೊಳ್ಳುವ ಬಹುತೇಕ ಪ್ರಶ್ನೆಗಳು ವಸ್ತುನಿಷ್ಠ ಮಾದರಿಯಲ್ಲಿರುತ್ತವೆ. ಮುಂದೆ ರೂಪಿಸಲಾಗುವ ಅಂಕಿ ಅಂಶಗಳಿಗೆ ನೆರವಾಗುವಂತೆ ಪ್ರಶ್ನಾವಳಿಯನ್ನು ವ್ಯವಸ್ಥಿತವಾಗಿ ನಿರ್ಮಿಸಲಾಗಿದೆ. ಕುಂದಾಪುರ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಗುಂಪಿಗೆ ಸೇರಲು ಪ್ರೇರಕವಾದ ಅಂಶಗಳು,

ಗುಂಪಿನ ಮೂಲಕ ಆಂತರಿಕ ಮತ್ತು ಪ್ರಗತಿನಿಧಿ ಸಾಲ ಸೌಲಭ್ಯ ಪಡೆದ ಮಾದರಿ, ಸದಸ್ಯರುಗಳ ಔದ್ಯೋಗಿಕ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಲ್ಲಿ ಉಂಟಾದ ಬದಲಾವಣೆಯ ಸ್ವರೂಪದ ಕುರಿತ ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಪಡೆಯಲಾಗುತ್ತದೆ. ಒಟ್ಟಿನಲ್ಲಿ ಮಾದರಿ ಸಮೀಕ್ಷೆಗಾಗಿ ಸಿದ್ಧಪಡಿಸಿದ ಪ್ರಶ್ನಾವಳಿಯ ಮೂಲಕ ಲಭ್ಯವಾದ ಅಂಕಿ ಆಂಶಗಳನ್ನು ಆದರಿಸಿ ಅಧ್ಯಯನ ಬೆಳೆಯುತ್ತದೆ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳು ಬೃಹತ್ ಪ್ರಮಾಣದಲ್ಲಿದ್ದು, ಕಳೆದ ಹಲವು ವರ್ಷಗಳಿಂದೀಚೆಗೆ ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನು ಉಂಟು ಮಾಡಿರುವುದು ಈ ಅಧ್ಯಯನದ ಹಿಂದಿನ ಕಾಳಜಿಯಾಗಿದೆ. ಇಲ್ಲಿನ ಎಲ್ಲಾ ನೂರ ಒಂದು ಗ್ರಾಮಗಳಲ್ಲಿಯೂ ಸಹಸ್ರಾರು ಸಂಖ್ಯೆಯಲ್ಲಿ ಸ್ವಸಹಾಯ ಗುಂಪುಗಳು ಕಾರ್ಯನಿರ್ವಹಿಸುತ್ತಿದ್ದು ಅಧ್ಯಯನದ ಆವಕಾಶ ಮತ್ತು ವ್ಯಾಪ್ತಿಯನ್ನು ಗಮನದಲ್ಲಿರಿಸಿಕೊಂಡು ಪ್ರಾತಿನಿಧಿಕವಾಗಿ ವಿವಿಧ ಗ್ರಾಮೀಣ ಪ್ರದೇಶಗಳಿಂದ ಆಯ್ದ ನೂರು ಗುಂಪುಗಳನ್ನು ಮಾದರಿ ಸಮೀಕ್ಷೆಗಾಗಿ ಬಳಸಿಕೊಳ್ಳಲಾಗಿದೆ. ಪ್ರತಿ ಗುಂಪಿನ ಅಧ್ಯಕ್ಷರು, ಕಾರ್ಯದರ್ಶಿ ಅಥವಾ ಓರ್ವ ಸದಸ್ಯರನ್ನು ನಿರ್ದಿಷ್ಟ ಗುಂಪಿನ ಮತ್ತು ಆ ಪರಿಸರದ ಪ್ರತಿನಿಧಿಯನ್ನಾಗಿರಿಸಿಕೊಂಡು ಮಾದರಿ ಸಮೀಕ್ಷೆಯ ಮಾಹಿತಿದಾರರನ್ನಾಗಿ ಬಳಸಿಕೊಳ್ಳಲಾಗಿದೆ. ಹೀಗೆ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ವಿಭಿನ್ನ ಭೌಗೋಳಿಕ ಪರಿಸರದ, ವಿಭಿನ್ನ ಸಮುದಾಯಗಳ ಮತ್ತು ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿರುವ ಗ್ರಾಮೀಣ ಮಹಿಳೆಯರನ್ನು ಗುರುತಿಸಿಕೊಳ್ಳಲಾಗಿದೆ. ಇದರೊಂದಿಗೆ ಮಾದರಿ ಸಮೀಕ್ಷೆಯನ್ನು ಕೈಗೊಳ್ಳುವ ಹಂತದಲ್ಲಿ ವಿಭಿನ್ನ ವಯೋಮಾನವನ್ನು ಪ್ರತಿನಿಧಿಸುವ ವ್ಯಕ್ತಿಗಳು ನಿರ್ಣಯಕವೆನಿಸುತ್ತಾರೆ. ಈ ಎಲ್ಲಾ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡೆ ಮಾದರಿ ಸಮೀಕ್ಷೆ ರೂಪುಗೊಳ್ಳುತ್ತದೆ.

ಈ ಅಧ್ಯಯನದ ಸಂದರ್ಭದಲ್ಲಿ ಪ್ರಶ್ನಾವಳಿಯನ್ನು ಪ್ರಾಥಮಿಕ ಆಕರವಾಗಿ ಬಳಸಿಕೊಂಡರೆ ಸಂದರ್ಶನ ಮಾದರಿಯನ್ನು ದ್ವಿತೀಯ ಆಕರವನ್ನಾಗಿ ಬಳಸಿಕೊಳ್ಳಲಾಗಿದೆ. ಪ್ರ.ಶ್ನಾವಳಿಯ ಮೂಲಕ ಲಭ್ಯವಾದ ಮಹಿತಿಗಳಿಗೆ ಪೂರಕವಾಗಿ ಸಂದರ್ಶನದ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ. ಪ್ರಶ್ನಾವಳಿಯ ಮೂಲಕ ಪ್ರಾಪ್ತವಾಗದ ಹಲವು ವಿಶಿಷ್ಟ ಮತ್ತು ವಿಮರ್ಶಾತ್ಮಕ ವಿಚಾರಗಳು ಸಂದರ್ಶನದ ಮೂಲಕ ದೊರೆಯುತ್ತದೆ. ಸಂದರ್ಶನ ಮಾದರಿಯ ಮೂಲಕ ಸ್ಪಷ್ಟ, ನಿಖರ ಮತ್ತು ವಿಶ್ಲೇಷಣಾತ್ಮಕ ವಿವರಗಳನ್ನು ಪಡೆಯಲು ಸಾಧ್ಯವಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಪ್ರಮುಖರ ಜೊತೆ ಸಂವಾದ ನಡೆಸುವ ಮೂಲಕ ಈ ಅಧ್ಯಯನ ಇನ್ನಷ್ಟು ದೃಢವಾಗುತ್ತದೆ. ಅಂದರೆ ಈ ಯೋಜನೆಯ ಅಧ್ಯಕ್ಷರು, ಕಾರ್ಯನಿರ್ವಾಹಕ ನಿರ್ದೇಶಕರಿಂದ ತೊಡಗಿ ನಿರ್ದೇಶಕರುಗಳು, ಯೋಜನಾಧಿಕಾರಿಗಳು, ವಲಯ ಮೇಲ್ವಿಚಾರಕರು ಸೇವಾ ನಿರತರು, ಒಕ್ಕೂಟದ ಅಧ್ಯಕ್ಷರು, ಸಲಹೆಗಾರರು ಮೊದಲಾದವರನ್ನು ಸಂದರ್ಶಿಸಿ ಆ

ಮೂಲಕ ದೊರೆಯುವ ವಿವರಗಳನ್ನು ಅಧ್ಯಯನಕ್ಕೆ ಪೂರಕವಾಗಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ. ಸಂದರ್ಶನದ ಮೂಲಕ ಪ್ರಕಟಗೊಂಡ ಮಾಹಿತಿಗಳನ್ನು ವಿಶ್ಲೇಷಣೆಗೆ ಒಳಪಡಿಸಿ ಪಾರದರ್ಶಕ ಮಾಹಿತಿಗಳನ್ನು ಅಧ್ಯಯನ ಸಂಬಂಧಿ ವಿವರಣೆಗಳಿಗೆ ಪೂರಕವಾಗಿ ಬಳಸಿಕೊಳ್ಳಲಾಗುತ್ತದೆ. ಇನ್ನೊಂದೆಡೆಯಲ್ಲಿ ಗ್ರಾಮಾಭಿವೃದ್ಧಿ ಯೋಜನೆಯಿಂದ ಹೊರಗುಳಿದ ಸಮಾಜದ ಇತರ ವ್ಯಕ್ತಿಗಳನ್ನು ಸಂದರ್ಶಿಸುವ ಮೂಲಕ ಭಿನ್ನ ಮಾದರಿಯ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ದೃಶ್ಯ ಮತ್ತು ಶ್ರವಣ ಸಾಧನಗಳನ್ನು ಬಳಸಿಕೊಂಡು ಸಂದರ್ಶನದ ಕೆಲಸಗಳನ್ನು ನಿರ್ವಹಿಸಲಾಗಿದೆ.

೫.೮ ದತ್ತಾಂಶಗಳ ವಿವರಣೆ ಮತ್ತು ವಿಶ್ಲೇಷಣೆ

ಕೋಷ್ಟಕ ೧
ಸ್ವಸಹಾಯ ಗುಂಪಿಗೆ ಸೇರಲು ಸಲಹೆ ನೀಡಿದವರು

ವಯಸ್ಸು	ಸೇವಾ ನಿರತರು	ಸಂಘದ ಸದಸ್ಯರು	ಸ್ನೇಹಿತರು	ಇತರೆ.	ಒಟ್ಟು
೧೬-೩೦	೨೨	೪	೨	೨	೩೦
೩೧-೪೫	೧೫	೧೫	೧೦	೩	೪೩
೪೬-೬೦	೮	೧೦	-	-	೧೮
೬೧-೭೫	೫	೪	-	-	೯
ಒಟ್ಟು	೫೦	೩೩	೧೨	೫	೧೦೦

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೧ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಪ್ರೇರಣೆ ಒದಗಿಸಿದ ವ್ಯಕ್ತಿ ಅಥವಾ ಗುಂಪುಗಳ ಕುರಿತು ವಿವರಿಸಲಾಗಿದೆ. ಮುಖ್ಯವಾಗಿ ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆಯುವ ಹಿನ್ನೆಲೆಯಲ್ಲಿ ಯೋಜನೆ ನೇಮಿಸಿದ ಸೇವಾನಿರತರು, ವಿವಿಧ ಸ್ವಸಹಾಯ ಗುಂಪುಗಳ ಸದಸ್ಯರು, ಆತ್ಮೀಯ ಸ್ನೇಹಿತರು ಮತ್ತು ಇನ್ನಿತರರು ಸಕಾಲಿಕ ಮಾಹಿತಿ, ಸೂಕ್ತ ಸಲಹೆ ಮತ್ತು ಅಗತ್ಯ ಮಾರ್ಗದರ್ಶನ ನೀಡಿರುವ ಸಂಗತಿಯನ್ನು ಸಮೀಕ್ಷೆಯು ಗುರುತಿಸಿದೆ. ಈ ಮೂಲಕ ಅಸಂಖ್ಯಾತ ಸದಸ್ಯರುಗಳು ಸ್ವಸಹಾಯ ಗುಂಪಿಗೆ ಪಾದಾರ್ಪಣೆಗೊಂಡಿದ್ದಾರೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೫೦%ರಷ್ಟು ಮಂದಿ ಆಯಾ ಕಾರ್ಯಕ್ಷೇತ್ರದ ಸೇವಾನಿರತರು ನೀಡಿದ ಮಾಹಿತಿ, ಮಾರ್ಗದರ್ಶನದ ಮೂಲಕ ಯೋಜನೆಯ ಚಟುವಟಿಕೆಗಳಲ್ಲಿ ಸಹಭಾಗಿಗಳಾಗಿದ್ದಾರೆ. ೩೩%ರಷ್ಟು ಮಂದಿ ತಮ್ಮ ಪರಿಸರದ ವಿವಿಧ ಸ್ವಸಹಾಯ ಗುಂಪುಗಳ ಪದಾದಿಕಾರಿಗಳಿಂದ, ೧೨%ಮಂದಿ ತಮ್ಮ ಸ್ನೇಹಿತರುಗಳಿಂದ ಮತ್ತು ೫%ಮಂದಿ ಇತರರಿಂದ ಯೋಜನೆಗೆ ಸಂಬಂಧಿಸಿದ ಅಗತ್ಯ ಮಾಹಿತಿ, ಮಾರ್ಗದರ್ಶನ ಪಡೆದಿದ್ದಾರೆ.

ವಿಭಿನ್ನ ವ್ಯಕ್ತಿಗಳ ನೆರವು, ಮಾರ್ಗದರ್ಶನದೊಂದಿಗೆ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೩%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ

ಸಂಖ್ಯೆಯಲ್ಲಿದ್ದು ೯%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೮ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೩೦%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಗ್ರಾಮಾಭಿವೃದ್ಧಿ ಯೋಜನೆಯು ಕುಂದಾಪುರ ತಾಲೂಕನ್ನು ಪ್ರವೇಶಿಸಿದ ಕಾಲಕ್ಕೆ ಅನೇಕ ವಿಧದ ಸಮಸ್ಯೆ, ಸವಾಲುಗಳಿಗೆ ಮುಖಾಮುಖಿಯಾಗಿತ್ತು. ಯೋಜನೆಯ ಸ್ವರೂಪ, ಕಾರ್ಯನಿರ್ವಹಣೆ ಮತ್ತು ಅದರ ಉಪಯುಕ್ತತೆಯ ಕುರಿತು ಸಾಮಾನ್ಯ ಜನರಿಗೆ ಅನೇಕ ತರಹದ ಗೊಂದಲಗಳಿದ್ದವು. ಯೋಜನೆಯ ಜನಪರ ಕಾಳಜಿಯ ಕುರಿತ ಸಮರ್ಪಕ ಅರಿವು ಇಲ್ಲಿನ ಹಳ್ಳಿಗರಿಗಿರಲಿಲ್ಲ. ಈ ಕುರಿತ ಅವರ ಅಪೂರ್ಣ ತಿಳಿವಳಿಕೆ ಅನೇಕ ರೀತಿಯ ತಪ್ಪು ಅಭಿಪ್ರಾಯಗಳನ್ನು ಸೃಷ್ಟಿಸಿತ್ತು. ಆದರೆ ನೂರಾರು ರೀತಿಯ ಜ್ವಲಂತ ಸಮಸ್ಯೆಗಳನ್ನು, ಮೂಲಭೂತ ಸೌಲಭ್ಯಗಳ ಕೊರತೆಯನ್ನು, ಔದ್ಯೋಗಿಕ ಮತ್ತು ಆರ್ಥಿಕ ತೊಂದರೆಗಳನ್ನು ಅನುದಿನವೂ ಅನುಭವಿಸಿಕೊಂಡು ಬರುತ್ತಿದ್ದ ಇಲ್ಲಿನ ಬಹುತೇಕ ಕುಗ್ರಾಮಗಳ ಜನಸಮುದಾಯ ಇಂಥದ್ದೊಂದು ಯೋಜನೆಯ ನಿರೀಕ್ಷೆಯಲ್ಲಿದ್ದರು. ಗ್ರಾಮಾಭಿವೃದ್ಧಿ ಯೋಜನೆಯು ಕುಂದಾಪುರ ತಾಲೂಕಿನ ವಿವಿಧ ಹಳ್ಳಿಗಳನ್ನು ಪ್ರವೇಶಿಸಿದ ಬಳಿಕ ತನ್ನ ವಿವಿಧ ಹಂತಗಳಲ್ಲಿ ನೇಮಿಸಿದ ಸೇವಾನಿರತರು, ಸಂಯೋಜಕರು, ನಿರ್ದೇಶಕರು ಯೋಜನಾಧಿಕಾರಿಗಳು ವಿಶೇಷವಾಗಿ ಗ್ರಾಮೀಣ ಮಹಿಳೆಯರನ್ನು ಯೋಜನೆಗೆ ತೊಡಗಿಸಿಕೊಳ್ಳುವ ಹಂತದಲ್ಲಿ ಮನವೊಲಿಸುವ ಪ್ರಯತ್ನ ನಡೆಸಿದ್ದಾರೆ. ಕ್ರಮೇಣ ಯೋಜನೆಯ ಫಲಾನುಭವಿಗಳು ತಮ್ಮ ಪರಿಸರದ ಇತರ ವ್ಯಕ್ತಿಗಳಿಗೆ ಸಕಾಲಿಕ ಮಾರ್ಗದರ್ಶನ ನೀಡುವ ಮೂಲಕ ಯೋಜನೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ನೆರವಾಗಿದ್ದಾರೆ. ಕುಂದಾಪುರ ತಾಲೂಕಿನ ಬಹುತೇಕ ಎಲ್ಲಾ ಹಳ್ಳಿಗಳಲ್ಲಿಯೂ ಯೋಜನೆ ದೊಡ್ಡ ಮಟ್ಟದ ಯಶಸ್ಸು ಕಾಣುವ ನಿಟ್ಟಿನಲ್ಲಿ ಇವರೆಲ್ಲರ ಪಾತ್ರ ಮತ್ತು ಜವಾಬ್ದಾರಿ ಅತ್ಯಂತ ಹಿರಿದು. ಕುಂದಾಪುರ ಪರಿಸರದಲ್ಲಿ ನೆಲೆಕಂಡಿರುವ ಯುವತಿಯರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಯೋಜನೆಯೊಂದಿಗೆ ಕೂಡಿಕೊಳ್ಳಬೇಕಾಗಿದೆ.

ಕೊಷ್ಟಕ ೨

ಸ್ವಸಹಾಯ ಗುಂಪಿನ ಸದಸ್ಯರುಗಳ ಸಹಭಾಗಿತ್ವದ ಅವಧಿ

ವಯಸ್ಸು	೧-೩ ವರ್ಷ	೩-೬ವರ್ಷ	೬ಕ್ಕಿಂತ ಹೆಚ್ಚು	ಒಟ್ಟು
೧೬-೩೦	೮	೧೭	೪	೨೯
೩೧-೪೫	೪	೨೫	೧೫	೪೪
೪೬-೬೦	೨	೧೦	೬	೧೮
೬೧-೭೫	-	೪	೫	೯
ಒಟ್ಟು	೧೪	೫೬	೩೦	೧೦೦

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೨ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಗ್ರಾಮಾಭಿವೃದ್ಧಿ ಯೋಜನೆಯೊಂದಿಗೆ ಹೊಂದಿರುವ ಸಂಬಂಧದ ಸ್ವರೂಪದ ಕುರಿತು ವಿವರಿಸಲಾಗಿದೆ. ಯೋಜನೆಯು ಕುಂದಾಪುರ ತಾಲೂಕಿನ ವಿವಿಧ ಹಳ್ಳಿಗಳಿಗೆ ಪ್ರವೇಶಿಸಿದ ಕಾಲಘಟ್ಟದಿಂದ ತೊಡಗಿ ಯಾವ ಅವಧಿಯಲ್ಲಿ ಎಷ್ಟು ಪ್ರಮಾಣದ ಜನಸಮುದಾಯ ಯೋಜನೆಯ ಸಹಭಾಗಿಗಳಾಗಿದ್ದಾರೆ ಎಂಬುದನ್ನು ಗುರುತಿಸುವುದು ಇಲ್ಲಿನ ಉದ್ದೇಶವಾಗಿದೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೪೨%ರಷ್ಟು ಮಂದಿ ಕಳೆದ ಮೂರರಿಂದ ಆರು ವರ್ಷಗಳ ನಡುವಿನ ಅವಧಿಯಲ್ಲಿ ಯೋಜನೆಯ ಸ್ವಸಹಾಯ ಗುಂಪುಗಳ ಚಟುವಟಿಕೆಗಳಲ್ಲಿ ಸೇರಿಕೊಂಡಿದ್ದಾರೆ. ಕನಿಷ್ಠ ೧೪%ರಷ್ಟು ಮಂದಿ ಕಳೆದ ಮೂರು ವರ್ಷಗಳಿಂದೀಚೆಗೆ ಯೋಜನೆಯ ಸ್ವಸಾಯ ಗುಂಪುಗಳಲ್ಲಿ ಪಾಲುದಾರರಾಗಿದ್ದಾರೆ. ಅಂತೆಯೇ ೩೦%ರಷ್ಟು ಮಂದಿ ಆರು ವರ್ಷಗಳಿಗೂ ಹಿಂದೆಯೇ ಯೋಜನೆಯೊಂದಿಗೆ ಕೂಡಿಕೊಂಡಿರುವ ಗಮನಾರ್ಹ ಸಂಗತಿ ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ.

ಕಾಲದಿಂದ ಕಾಲಕ್ಕೆ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಕೊಂಡು ಅದರ ಸೌಲಭ್ಯಗಳನ್ನು ಪಡೆದ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲಿದ್ದು ೪೪%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೯%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೬ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೨೯%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಗ್ರಾಮಾಭಿವೃದ್ಧಿ ಯೋಜನೆ ಕುಂದಾಪುರ ತಾಲೂಕನ್ನು ಪ್ರವೇಶಿಸಿ ಸರಿಸುಮಾರು ಎಂಟು ವರ್ಷಗಳು ಕಳೆದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಅತ್ಯಂತ ಹಿಂದುಳಿದ ಬೆಳ್ತಂಗಂಡಿ ತಾಲೂಕಿನ ನೂರಾರು ಹಳ್ಳಿಗಳನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುವ ಮಹತ್ವದ ಗುರಿಯನ್ನಿರಿಸಿಕೊಂಡ ಈ ಯೊಜನೆಯು ಕ್ರಮೇಣ ಕುಂದಾಪುರ ತಾಲೂಕನ್ನು ತನ್ನ ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡದ್ದು ಒಂದು ವಿಶಿಷ್ಟ ಬೆಳವಣಿಗೆ ಎನ್ನಬಹುದು. ಯೊಜನೆಯು ತನ್ನ ಆರಂಭದ ಹಂತದಲ್ಲಿ ಬೆಳ್ತಂಗಡಿಯ ಹಳ್ಳಿಗಳಲ್ಲಿ ಎದುರುಗೊಂಡ ಹತ್ತು ಹಲವು ಸವಾಲುಗಳು ಕುಂದಾಪುರವನ್ನು ಪ್ರವೇಶಿಸುವಾಗ ಉತ್ತಮ ಪಾಠಗಳಾಗಿ ಪರಿಣಮಿಸಿದವು. ಅದರೆ ಬೆಳ್ತಂಗಡಿಯ ಹಳ್ಳಿಗಳ ಸಮಸ್ಯೆಯ ಸ್ವರೂಪಕ್ಕೂ ಮತ್ತು ಕುಂದಾಪುರದ ಹಳ್ಳಿಗಳ ಸಮಸ್ಯೆಯ ಸ್ವರೂಪಕ್ಕೂ ಸಾಕಷ್ಟು ಅಂತರವಿರುವ ಮತ್ತು ವಿಭಿನ್ನವಾಗಿರುವ ಮಹತ್ವದ ಸಂಗತಿಯನ್ನು ಯೋಜನೆಯ ಸೇವಾನಿರತರು ಮತ್ತು ಅಧಿಕಾರಿವರ್ಗ ಗುರುತಿಸಿಕೊಂಡರು. ಧರ್ಮಸ್ಥಳ ಕ್ಷೇತ್ರದ ಮೇಲಿನ ಭಕ್ತಿ ಮತ್ತು ಯೋಜನೆಯ ಕಾರ್ಯಕರ್ತರ ಅಪರಿಮಿತ ಶ್ರಮದ ಫಲವಗಿ ಆರಂಭದ ದಿನಗಳಲ್ಲಿ ಕುಂದಾಪುಪ ತಾಲೂಕಿನ ಗ್ರಾಮೀಣ ಬಡಜನರು, ವಿಶೇಷವಾಗಿ ಮಹಿಳೆಯರು ಪ್ರವಾಹದೋಪಾದಿಯಲ್ಲಿ ಹರಿದು ಬಂದರು. ಕಳೆದ ಐದಾರು ವರ್ಷಗಳಿಂದೀಚೆಗೆ ದೊಡ್ಡ ಸಂಖ್ಯೆಯಲ್ಲಿ ಗ್ರಾಮೀಣ ಮಹಿಳೆಯರು ಯೋಜನೆಯ ಚಟುವಟಿಕೆಗಳೊಂದಿಗೆ ಕೈಜೋಡಿಸುವ ಮೂಲಕ ಯೋಜನೆಯಿಂದ ದೊರೆಯುವ ಹಲವು ಬಗೆಯ ಸೌಲಭ್ಯಗಳನ್ನು ಪಡೆದಿದ್ದಾರೆ. ಈ ಮೂಲಕ ಗ್ರಾಮಾಭಿವೃದ್ಧಿ ಯೋಜನೆ ಹಂತ ಹಂತವಾಗಿ ತನ್ನ ಅಸ್ತಿತ್ವದ ಬೇರುಗಳನ್ನು ಗಟ್ಟಿಗೊಳಿಸಿಕೊಂಡ ನೆಲೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಈ ನಡುವಿನ ಅವಧಿಯಲ್ಲಿ ಬೇರೆ ಬೇರೆ ಕಾರಣಗಳಿಂದಾಗಿ ಯೋಜನೆಯೊಂದಿಗಿನ ಜನರ ಸಹಭಾಗಿತ್ವ ಮತ್ತು ಯೋಜನೆಗೆ ಹೊಸ ಸದಸ್ಯರ ಸೇರ್ಪಡೆಯ ಹಂತದಲ್ಲಿ ಸಾಕಷ್ಟು ಏರಿಳಿತಗಳಾಗಿರುವುದನ್ನು ಕಾಣಬಹುದಾಗಿದೆ.

ಕೋಷ್ಟಕ ೩

ಸ್ವಸಹಾಯ ಗುಂಪಿನಲ್ಲಿರುವ ಸದಸ್ಯರ ವಿದ್ಯಾರ್ಹತೆ

ವಯಸ್ಸು	ಪ್ರಾಥಮಿಕ ಶಿಕ್ಷಣ	ಪ್ರೌಢ ಶಿಕ್ಷಣ	ಪದವಿಪೂರ್ವ ಶಿಕ್ಷಣ	ಪದವಿ ಶಿಕ್ಷಣ	ನವಸಾಕ್ಷರ	ಅನಕ್ಷರಸ್ಥರು	ಒಟ್ಟು
೧೬-೩೦	೧೫	೧೧	೬	೪	–	–	೩೬
೩೧-೪೫	೨೫	೧೫	೪	೨	–	೨	೪೮
೪೬-೬೦	೯	೨	–	೧	–	೨	೧೪
೬೧-೭೫	೧	೦	–	–	–	೧	೨
ಒಟ್ಟು	**೫೦**	**೨೮**	**೧೦**	**೭**	**೦**	**೫**	**೧೦೦**

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೩ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳ ವಿದ್ಯಾರ್ಹತೆಯ ಕುರಿತು ವಿವರಿಸಲಾಗಿದೆ. ಅದೇ ವೇಳೆಗೆ ಸ್ವಸಹಾಯ ಗುಂಪುಗಳ ಸದಸ್ಯತ್ವ ಪಡೆದು ಅದರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಹಭಾಗಿಗಳಾದ ನಂತರದ ದಿನಗಳಲ್ಲಿ ಅವರ ವಿದ್ಯಾಭ್ಯಾಸದ ಸ್ವರೂಪದಲ್ಲಿ ಉಂಟಾದ ಬದಲಾವಣೆ ಮತ್ತು ಬೆಳವಣಿಗೆಯ ಆಯಾಮಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ. ಇದು ಯೋಜನೆಯ ಮುಖ್ಯ ಧ್ಯೇಯಗಳಲ್ಲಿ ಒಂದು. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೫೦%ರಷ್ಟು ಮಂದಿ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ್ದಾರೆ.. ಉಳಿದಂತೆ ೨೮%ರಷ್ಟು ಮಂದಿ ಪ್ರೌಢ ಶಿಕ್ಷಣವನ್ನು, ೮%ರಷ್ಟು ಮಂದಿ ಪದವಿಪೂರ್ವ ಶಿಕ್ಷಣವನ್ನು ಮತ್ತು ೭%ರಷ್ಟು ಮಂದಿ ಪದವಿ ಶಿಕ್ಷಣವನ್ನು ಪಡೆದಿದ್ದಾರೆ. ಕನಿಷ್ಠ ೫%ರಷ್ಟು ಮಂದಿ ಇನ್ನೂ ಸಹ ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ.

ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂಬ ಮಾತಿದೆ. ಮನೆಯೆ ಮೊದಲ ಪಾಠಶಾಲೆ. ಜನನಿ ತಾನೆ ಮೊದಲ ಗುರು. ಜನನಿಯಿಂದ ಪಾಠ ಕಲಿತ ಜನರು ಧನ್ಯರು ಎಂಬ ಕವಿವಾಣಿ ಈ ಮಾತಿಗೆ ಪೂರಕವೆಂಬಂತೆ ಒದಗಿಬಂದಿದೆ. ಅಕ್ಷರಾಭ್ಯಾಸ ಇಂದಿನ ಮುಖ್ಯ ಅಗತ್ಯಗಳಲ್ಲಿ ಒಂದು. ಓದು ಮತ್ತು ಬರಹ ಅರಿವಿಗೆ ಬಂದಾಗ ಮಾತ್ರ ಜಗತ್ತನ್ನು, ಸಾಮಾಜಿಕ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಿದೆ. ಸರಕಾರದ ಜನಪರ ಯೋಜನೆಗಳ ಪ್ರಯೋಜನವನ್ನು ಗರಿಷ್ಟ ಪ್ರಮಾಣದಲ್ಲಿ ಪಡೆಯಲು ಸಾಧ್ಯವಿದೆ. ಚರಿತ್ರೆಯುದ್ದಕ್ಕೂ ಅನ್ನದ ಸಮಸ್ಯೆಯೊಂದಿಗೆ ಹೆಣಗಾಡುತ್ತ ಬಂದ ದೊಡ್ಡ ಸಂಖ್ಯೆಯ ಗ್ರಾಮೀಣ ಬಡ

ಮಹಿಳೆಯರಿಗೆ ಅಕ್ಷರದ ಅರಿವು ಮಹತ್ವದ ಸಂಗತಿ ಎನಿಸಿಲ್ಲ. ಅನ್ನ, ಬಟ್ಟೆ ಮತ್ತು ವಸತಿಯನ್ನು ಕನಿಷ್ಟ ಪ್ರಮಾಣದಲ್ಲಿ ಪಡೆಯಲು ನಿರಂತರ ದುಡಿಯುವುದೇ ಅವರ ಮುಂದಿರುವ ಗುರಿಯಾಗಿದೆ. ಪರಸ್ಪರ ಒಂದಕ್ಕೊಂದು ಪೂರಕವಾಗಿರುವ ಈ ಎರಡೂ ಬಗೆಯ ಸಮಸ್ಯೆಗಳನ್ನು ಪರಿಹರಿಸುವ ಹಂತದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ನಿರಂತರವಾಗಿ ಶ್ರಮಿಸುತ್ತ ಬಂದಿದೆ.

ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಸಾಮಾಜಿಕ ಉಪಯುಕ್ತ ಚಟುವಟಿಕೆಗಳ ವಿಸ್ತರಣೆಯ ಭಾಗವಾಗಿ ಅಕ್ಷರ ವಂಚಿತ ಮಹಿಳಾ ಸದಸ್ಯರುಗಳನ್ನು ನವಸಾಕ್ಷರರನ್ನಾಗಿ ರೂಪಿಸುವ ಮಹತ್ವದ ಜವಾಬ್ದಾರಿಯನ್ನು ಹೊಂದಿದೆ. ಗ್ರಾಮೀಣ ಮಹಿಳೆಯರಿಗೆ ಅಕ್ಷರದ ಅರಿವು ಮೂಡಿಸುವ ಮೂಲಕ ಅವರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜಾಗೃತಿಯನ್ನು ಉಂಟುಮಾಡುವುದು ಇಲ್ಲಿನ ಕೇಂದ್ರ ಕಾಳಜಿಯಾಗಿದೆ. ಕುಂದಾಪುರ ತಾಲೂಕಿನಲ್ಲಿ ಈ ಮಾದರಿಯ ಪ್ರಯತ್ನ ಯೋಜನೆಯ ಮೂಲಕ ಕಳೆದ ನಾಲ್ಕಾರು ವರ್ಷಗಳಿಂದ ಅತ್ಯಂತ ಪ್ರಾಮಾಣಿಕವಾಗಿ ಮತ್ತು ಪ್ರಾಯೋಗಿಕವಾಗಿ ನಡೆದುಕೊಂಡು ಬರುತ್ತಿದೆ. ಎಳೆಯ ತಲೆಮಾರನ್ನು ಪ್ರತಿನಿಧಿಸುವ ಮಹಿಳಾ ಸದಸ್ಯರುಗಳು ತಮ್ಮದೇ ಸ್ವಸಹಾಯ ಗುಂಪಿನ ಹಿರಿಯ ಸದಸ್ಯರುಗಳಿಗೆ ಅಕ್ಷರದ ಬೆಳಕು ನೀಡುತ್ತಿದ್ದಾರೆ. ಅದೇ ವೇಳೆಗೆ ಹಿರಿಯರ ಬದುಕಿನ ಅಘಾದ ಅನುಭವಗಳು ಯುವತಿಯರಿಗೆ ವರ್ಗಾವಣೆಗೊಳ್ಳುತ್ತದೆ. ಈ ಬಗೆಯ ಸಂವಹನ ಪ್ರಕ್ರಿಯೆ ಕುಂದಾಪುರ ತಾಲೂಕಿನ ಮೂಲೆ ಮೂಲೆಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ನಡೆಯುತ್ತ ಬಂದಿರುವುದು ಪ್ರಶಂಸನೀಯ ಸಂಗತಿಯಾಗಿದೆ. ಅಂತೆಯೇ ಸರಕಾರದ ಶಿಕ್ಷಣಪರ ಯೋಜನೆಗಳ ಸಹಭಾಗಿತ್ವದೊಂದಿಗೆ ಯೋಜನೆಯಲ್ಲಿ ಇನ್ನೂ ಉಳಿದಿರುವ ಅನಕ್ಷರಸ್ಥ ಮಹಿಳೆಯರನ್ನು ನವಸಾಕ್ಷರರನ್ನಾಗಿಸುವ ಪ್ರಯತ್ನ ತೀವ್ರಗತಿಯಲ್ಲಿ ಸಾಗಬೇಕಾಗಿದೆ. ಅಕ್ಷರದ ಬೆಳಕು ಪ್ರಾಪ್ತವಾಗುವ ಮೂಲಕ ಅನ್ನದ ಸಮಸ್ಯೆ ನೀಗುವ ಸಾಧ್ಯತೆಗಳು ದಟ್ಟವಾಗಿವೆ.

ಕೋಷ್ಟಕ ೪

ಸ್ವಸಹಾಯ ಗುಂಪಿನಲ್ಲಿರುವ ಸದಸ್ಯರು ಸಾಲ ಪಡೆದ ಉದ್ದೇಶ

ವಯಸ್ಸು	ಮನೆ ರಿಪೇರಿ	ಮದುವೆ (ಆಭರಣ ಖರೀದಿ)	ವಿದ್ಯಾಭ್ಯಾಸ	ಈ ಎಲ್ಲಾ ಉದ್ದೇಶಕ್ಕಾಗಿ	ಒಟ್ಟು
೧೬–೩೦	೭	೧೨	೩	೧೧	೩೩
೩೧–೪೫	೧೫	೧೭	೪	೮	೪೪
೪೬–೬೦	೧೦	೪	೨	೩	೧೯
೬೧–೭೫	೩	–	–	೧	೪
ಒಟ್ಟು	**೩೫**	**೩೩**	**೯**	**೨೩**	**೧೦೦**

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೪ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಸಾಲ ಪಡೆದ ಉದ್ದೇಶ ಮತ್ತು ಸ್ವರೂಪದ ಕುರಿತು ವಿವರಿಸಲಾಗಿದೆ. ಈ ಪರಿಸರದ ಸ್ವಸಹಾಯ ಗುಂಪಿನ ಸದಸ್ಯರುಗಳು ಮುಖ್ಯವಾಗಿ ಮನೆ ರಿಪೇರಿ, ಮದುವೆ ಕಾರ್ಯ, ಆಭರಣ ಖರೀದಿ ಮತ್ತು ಇನ್ನಿತರ ಉದ್ದೇಶಗಳಿಗಾಗಿ ಯೋಜನೆಯಿಂದ ಸಾಲ ಪಡೆದಿರುತ್ತಾರೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೩೫%ರಷ್ಟು ಮಂದಿ ಮನೆ ರಿಪೇರಿಗಾಗಿ ಸಾಲ ಪಡೆದಿದ್ದಾರೆ. ಕನಿಷ್ಠ ೯%ರಷ್ಟು ಮಂದಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಲ ಪಡೆದಿರುತ್ತಾರೆ. ಅಂತೆಯೇ ೨೩%ರಷ್ಟು ಮಂದಿ ಬಹುಮುಖಿ ಉದ್ದೇಶಗಳಿಗಾಗಿ ಸಾಲ ಪಡೆದಿರುತ್ತಾರೆ;

ವಿವಿಧ ಉದ್ದೇಶಗಳಿಗಾಗಿ ಸಾಲ ಪಡೆದ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೪%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೪%ರಷ್ಟಿದ್ದಾರೆ. ಅದೇ ವೇಳೆಗೆ ಹಲವು ಮಹತ್ವದ ಉದ್ದೇಶಗಳಿಗಾಗಿ ಯೋಜನೆಯ ವತಿಯಿಂದ ಸಾಲ ಪಡೆದ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೬ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೩೩%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಆರ್ಥಿಕವಾಗಿ ಹಿಂದುಳಿದ ಅಥವಾ ದುರ್ಬಲರಾಗಿರುವ, ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಜನಸಮುದಾಯಕ್ಕೆ ಅದರಲ್ಲೂ ವಿಶೇಷವಾಗಿ ಮಹಿಳೆರಿಗೆ ಸಹಾಯಹಸ್ತ ಚಾಚುವ ಸಮುದ್ದೇಶದ ಹಿನ್ನೆಲೆಯಲ್ಲಿ ಸ್ವಸಹಾಯ ಗುಂಪುಗಳು ಆಕೃತಿ ಪಡೆದಿವೆ. ಈ ಸ್ವಸಹಾಯ ಗುಂಪುಗಳು ಬಡವರ ಸಂಕಷ್ಟದ ಪರಿಸ್ಥಿತಿಗೆ

ಒಂದಿಷ್ಟು ಸಾಂತ್ವನ ಹೇಳಿವೆ. ಈ ಗುಂಪುಗಳು ಹಳ್ಳಿಯ ಮನೆ ಮನಗಳನ್ನು ಪ್ರವೇಶಿಸಿದ ನಂತರದ ದಿನಗಳಲ್ಲಿ ಮಧ್ಯವರ್ತಿಗಳಿಂದ, ಶ್ರೀಮಂತರ ಮನೆಯಿಂದ ಹೆಚ್ಚು ಬಡ್ಡಿಗೆ ಸಾಲ ತರುವ ಮತ್ತು ಅವರ ಮನೆಗೆ ಅನುದಿನವೂ ಆಳಾಗಿ ಹೋಗುವ ಪ್ರವೃತ್ತಿ ಹಡಿಮೆಯಾಗಿದೆ. ಹಳ್ಳಿಯ ಹೆಣ್ಣು ತುಂಬು ಸ್ವಾಭಿಮಾನದಿಂದ ಬದುಕುವ ನಿಟ್ಟಿನಲ್ಲಿ ಇಲ್ಲಿನ ಚಟುವಟಿಕೆಗಳ ಪಾತ್ರ ಹಿರಿದು.

ಗ್ರಾಮಾಭಿವೃದ್ಧಿ ಯೋಜನೆಯು ಹಳ್ಳಿಯ ಬಡ ಮತ್ತು ದುರ್ಬಲ ಕುಟುಂಬಗಳನ್ನು ಪ್ರತಿನಿಧಿಸುವ ವ್ಯಕ್ತಿಗಳಿಗೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಆರ್ಥಿಕವಾಗಿ ಆಸರೆಯಾಗುವ ಪಣ ತೊಟ್ಟಿದೆ. ಕುಂದಾಪುರ ತಾಲೂಕಿಗೆ ಗ್ರಾಮಾಭಿವೃದ್ಧಿ ಯೋಜನೆ ಪಾದಾರ್ಪಣೆಗೈದ ದಿನದಿಂದ ಹಂತ ಹಂತವಾಗಿ ಇಲ್ಲಿನ ಗ್ರಾಮೀಣ ಪರಿಸರದಲ್ಲಿ ನೆಲೆ ಕಂಡಿರುವ ಅಸಂಖ್ಯಾತ ಮಹಿಳೆಯರು ವಿವಿಧ ಉದ್ದೇಶಗಳಿಗಾಗಿ ಯೋಜನೆಯ ಮೂಲಕ ಸಾಲ ಪಡೆದಿದ್ದಾರೆ. ಹಳ್ಳಿಯ ತಮ್ಮ ಗುಡಿಸಲುಗಳ, ಹಳೆಯ ಮನೆಗಳ ಪುನರ್ ನಿರ್ಮಾಣದ ಕಾರ್ಯಕ್ಕೆ ಮಹಿಳೆಯರು ಹೆಚ್ಚಿನ ಆದ್ಯತೆ ನೀಡಿರುವುದು ಉಲ್ಲೇಖನೀಯ ಸಂಗತಿಯಾಗಿದೆ. ಮದುವೆಗೆ ಸಂಬಂಧಿಸಿದ ಕಾರ್ಯಚಟುವಟಿಕೆಗಳ ನಿರ್ವಹಣೆ ಕಷ್ಟಸಾಧ್ಯ ಎನಿಸಿರುವ ಇಂದಿನ ದಿನಗಳಲ್ಲಿ ಗ್ರಾಮಾಭಿವೃದ್ಧಿ ಯೋಜನೆ ವಿಶೇಷವಾಗಿ ಮಹಿಳೆಯರಿಗೆ ವರದಾನವಾಗಿರುವುದು ನಿಗದಿತ ಅಂಕಿ ಅಂಶಗಳ ಮೂಲಕ ತಿಳಿದುಬರುತ್ತದೆ. ಅಂತೆಯೇ ಹಳ್ಳಿಯ ಹೆಣ್ಣು ಮಕ್ಕಳು ಇಂದು ಉನ್ನತ ಶಿಕ್ಷಣದ ಅವಕಾಶಗಳನ್ನು ಬಯಸುತ್ತಿದ್ದು ಈ ನಿಟ್ಟಿನಲ್ಲಿ ಯೊಜನೆಯು ನೀಡುತ್ತಿರುವ ಆರ್ಥಿಕ ನೆರವು ನಿರ್ಣಾಯಕವೆನಿಸಿದೆ.

ಕೋಷ್ಟಕ ೩

ಸ್ವಸಹಾಯ ಗುಂಪಿನಲ್ಲಿರುವ ಸದಸ್ಯರು ಪಡೆದ ಸಾಲದ ಮಾದರಿ

ವಯಸ್ಸು	ಆಂತರಿಕ ಸಾಲ	ಪ್ರಗತಿ ನಿಧಿ ಸಾಲ	ಆಂತರಿಕ ಮತ್ತು ಪ್ರಗತಿನಿಧಿ ಸಾಲ	ಒಟ್ಟು
೧೬–೨೦	೪	೧೨	೧೦	೨೬
೩೧–೪೫	೧೫	೧೮	೧೮	೫೧
೪೬–೬೦	೫	೪	೧೦	೧೯
೬೧–೭೫	೨	೦	೨	೪
ಒಟ್ಟು	**೨೬**	**೩೪**	**೪೦**	**೧೦೦**

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೩ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ವಿಭಿನ್ನ ಉದ್ದೇಶಗಳಿಗಾಗಿ ಪಡೆದ ಸಾಲದ ಮಾದರಿಗಳ ಕುರಿತು ವಿವರಿಸಲಾಗಿದೆ. ಸ್ವಸಹಾಯ ಗುಂಪಿನ ಸದಸ್ಯರು ತಮ್ಮ ವಾರದ ಉಳಿತಾಯದ ಮೂಲಕ ಸಂಗ್ರಹವಾದ ಹಣವನ್ನು ತಮ್ಮದೆ ಗುಂಪಿನ ಸದಸ್ಯರುಗಳಿಗೆ ನೀಡುವ ಸಾಲದ ಮಾದರಿಯನ್ನು ಆಂತರಿಕ ಸಾಲ ಎಂಬುದಾಗಿ ಕರೆಯಲಾಗುತ್ತದೆ. ಈ ಸಾಲದ ಪ್ರಮಾಣ ಅಲ್ಪವಾಗಿದ್ದು ಆಯಾ ಗುಂಪಿನ ಸರ್ವ ಸದಸ್ಯರ ಅನುಮೋದನೆಯೊಂದಿಗೆ ಅತಿ ಶೀಘ್ರದಲ್ಲಿ ದೊರಕುತ್ತದೆ. ಸ್ವಸಹಾಯ ಗುಂಪಿನ ಸದಸ್ಯರುಗಳಿಗೆ ಮಹತ್ವದ ಉದ್ದೇಶಗಳಿಗಾಗಿ ಯೋಜನೆಯ ವತಿಯಿಂದ ಬ್ಯಾಂಕುಗಳ ಮೂಲಕ ನೀಡಲಾಗುವ ಸಾಲದ ಮಾದರಿಯನ್ನು ಪ್ರಗತಿನಿಧಿ ಎಂಬುದಾಗಿ ಕರೆಯಲಾಗುತ್ತದೆ. ಸಾಲ ಪಡೆಯುವ ವ್ಯಕ್ತಿಯ ಒಟ್ಟು ಉಳಿತಾಯ, ಆತ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬಗೆ ಮತ್ತು ಸಾಲ ಪಡೆಯುವ ಉದ್ದೇಶವನ್ನು ಅರಿತು ಪ್ರಗತಿನಿಧಿ ಒದಗಿಸಲಾಗುತ್ತದೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ೩೪%ರಷ್ಟು ಮಂದಿ ಪ್ರಗತಿನಿಧಿ ಸಾಲವನ್ನು, ೨೬%ರಷ್ಟು ಮಂದಿ ಆಂತರಿಕ ಸಾಲವನ್ನು ಮತ್ತು ೪೦%ರಷ್ಟು ಮಂದಿ ಆಂತರಿಕ ಮತ್ತು ಪ್ರಗತಿನಿಧಿ ಈ ಎರಡು ಬಗೆಯ ಸಾಲಗಳನ್ನೂ ಪಡೆದಿದ್ದಾರೆ.

ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೀಡಲಾಗುವ ಆಂತರಿಕ ಸಾಲ ಮತ್ತು ಪ್ರಗತಿನಿಧಿ ಸಾಲವನ್ನು ಸದುಪಯೋಗಪಡಿಸಿಕೊಂಡ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೫೧%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೪%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೬ರಿಂದ ೨೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೨೬%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಕಿರು ಹಣಕಾಸು ಸ್ವಸಹಾಯ ಗುಂಪುಗಳ ಆಧಾರ ಸ್ತಂಭ ಎನ್ನಬಹುದು. ಇದು ತುರ್ತು ಸಂದರ್ಭಗಳಲ್ಲಿ ಹಳ್ಳಿಯ ಬಡ ಮಹಿಳೆಯರನ್ನು ಹಲವು ಬಗೆಯ ಆಪತ್ತುಗಳಿಂದ ಪಾರುಮಾಡಿದೆ. ಮಾತ್ರವಲ್ಲ ಅವರನ್ನು ಎಂತಹ ಸಂದಿಗ್ಧ ಸಂದರ್ಭಗಳಲ್ಲಿಯೂ ಧೃತಿಗೆಡದಂತೆ ಮಾಡಿದೆ. ಸ್ವಸಹಾಯ ಗುಂಪಿನ ಮೂಲಕ ಪ್ರಾಪ್ತವಾಗುವ ಕಿರುಹಣಕಾಸಿನ ಸ್ವರೂಪವನ್ನು ಗಮನಿಸಿದಾಗ ಇಲ್ಲಿ ಸಾಲ ಪಡೆಯುವ ಮತ್ತು ಮರುಪಾವತಿ ಮಾಡುವ ಪ್ರಕ್ರಿಯೆ ಅತ್ಯಂತ ಸರಳ ಮತ್ತು ಸಹಜವೆನಿಸಿದೆ. ಯಾವುದೇ ಬಗೆಯ ಆಸ್ತಿ ದಾಖಲೆಗಳ ಆಧಾರವಿಲ್ಲದೆ ಕಿರುಸಾಲ ದೊರತುತ್ತಿರುವುದು ಭೂರಹಿತ ಕಾರ್ಮಿಕರಿಗೆ, ದುರ್ಬಲ ವರ್ಗದವರಿಗೆ ಆಶಾಕಿರಣವೆನಿಸಿದೆ.

ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಕಿರು ಹಣಕಾಸಿನ ಪರಿಕಲ್ಪನೆಯ ಮೂಲಕ ವಿಶೇಷವಾಗಿ ಕುಂದಾಪುರ ತಾಲೂಕಿನಲ್ಲಿ ಬೃಹತ್ ಪ್ರಮಾಣದ ಯಶಸ್ಸು ಕಂಡಿದೆ. ಇಲ್ಲಿನ ಗ್ರಾಮೀಣ ಪರಿಸರದ ಬಡ ಮಹಿಳೆಯರು ವಿಭಿನ್ನ ಮಾದರಿಯ ಮತ್ತು ಮೊತ್ತದ ಸಾಲ ಸೌಲಭ್ಯವನ್ನು ಪಡೆಯುವ ಮೂಲಕ ಆರ್ಥಿಕವಾಗಿ ಅತ್ಯಂತ ಸಬಲರಾಗಿದ್ದಾರೆ. ಈ ಬಗೆಯ ಆರ್ಥಿಕ ಸ್ಥಿರತೆಯು ಇಲ್ಲಿನ ಗ್ರಾಮೀಣ ಮಹಿಳೆಯರಿಗೆ ಕೌಟುಂಬಿಕ, ಸಾಮಾಜಿಕ ಮತ್ತು ಔದ್ಯೋಗಿಕ ದೃಢತೆಯನ್ನು ಒದಗಿಸಿದೆ. ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕುಂದಾಪುರ ತಾಲೂಕಿನಲ್ಲಿ ಯೋಜನೆಯು ಸಾಧಿಸಿದ ಪ್ರಗತಿ ಶ್ಲಾಘನೀಯವಾದುದು. ಯೋಜನೆಯಿಂದ ಪಡೆದ ಸಾಲ ಬಹುತೇಕ ೧೦೦% ಮರುಪಾವತಿಯಾಗುತ್ತಿರುವ ಕ್ರಾಂತಿಕಾರಿ ಪ್ರಯತ್ನ ಕುಂದಾಪುರ ತಾಲೂಕಿಗೂ ಹೊರತಾಗಿಲ್ಲ.

ಕೋಷ್ಟಕ ೬

ಸ್ವಸಹಾಯ ಗುಂಪಿನಲ್ಲಿರುವ ಸದಸ್ಯರುಗಳು ಅವಲಂಬಿಸಿರುವ ವೃತ್ತಿ

ವಯಸ್ಸು	ಕುಲಕಸಬು	ಕೂಲಿ ಕಾರ್ಮಿಕ	ಕೃಷಿ ಚಟುವಟಿಕೆ	ಖಾಸಗಿ ಉದ್ಯೋಗ	ಸರಕಾರಿ ಉದ್ಯೋಗ	ಒಟ್ಟು
೧೬-೩೦	೪	೧೩	೮	೩	೩	೩೧
೩೧-೪೫	೮	೯	೨೨	೭	೨	೪೮
೪೬-೬೦	೫	೪	೭	–	–	೧೬
೬೧-೭೫	–	–	೫	–	–	೫
ಒಟ್ಟು	೧೭	೨೬	೪೨	೧೦	೫	೧೦೦

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೬ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿರುವ ವಿಭಿನ್ನ ಮಾದರಿಯ ವೃತ್ತಿಗಳ ಕುರಿತು ವಿವರಿಸಲಾಗಿದೆ. ಈ ಪರಿಸರದ ಸ್ವಸಾಯ ಗುಂಪಿನ ಸದಸ್ಯರುಗಳಲ್ಲಿ ಕೆಲವರು ತಮ್ಮ ಕುಲಕಸುಬನ್ನು ನೆಚ್ಚಿಕೊಂಡರೆ ಇನ್ನು ಹಲವರು ತಮಗೆ ಲಭ್ಯವಿರುವ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಮತ್ತೊಂದಿಷ್ಟು ಮಂದಿ ಸರಕಾರಿ ನೌಕರರಾಗಿ, ಖಾಸಗಿ ವ್ಯವಸ್ಥೆಯಲ್ಲಿ ಉದ್ಯೋಗಿಗಳಾಗಿ ಮತ್ತು ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೪೨%ರಷ್ಟು ಮಂದಿ ಕೃಷಿ ಚಟುವಟಿಕೆಗಳನ್ನು ತಮ್ಮ ಬದುಕಿನ ವೃತ್ತಿಯನ್ನಾಗಿ ಸ್ವೀಕರಿಸಿದರೆ ಕನಿಷ್ಠ ೫%ರಷ್ಟು ಮಂದಿ ವಿವಿಧ ಇಲಾಖೆಗಳಲ್ಲಿ ಸರಕಾರಿ ಉದ್ಯೋಗಿಗಳಾಗಿದ್ದಾರೆ. ಅಂತೆಯೇ ೨೬%ರಷ್ಟು ಮಂದಿ ಕೂಲಿ ಕಾರ್ಮಿಕರಾಗಿ ದುಡಿದು ಅದರೊಂದಿಗೆ ಸ್ವಸಹಾಯ ಗುಂಪಿನ ಚಟುವಟಿಕೆಗಳು ಮತ್ತು ಸೌಲಭ್ಯಗಳ ಜೊತೆ ಬದುಕನ್ನು ನಿರ್ವಹಿಸುತ್ತಿದ್ದಾರೆ.

ತಮ್ಮ ಜೀವನೋಪಾಯಕ್ಕಾಗಿ ವಿವಿಧ ವೃತ್ತಿಗಳನ್ನು ಅವಲಂಬಿಸಿರುವ ಸ್ವಸಹಾಯ ಗುಂಪಿನ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೮%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೫%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೬ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೩೧%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ದೃಢಪಡಿಸಿದೆ.

ಸ್ವಸಹಾಯ ಗುಂಪುಗಳು ತಮ್ಮ ಸದಸ್ಯರುಗಳಲ್ಲಿ ವೃತ್ತಿಬದ್ದತೆಯನ್ನು ವೃದ್ಧಿಸಿವೆ. ಪ್ರತಿಯೊಬ್ಬ ಸದಸ್ಯನೂ ತಾನು ನಿರ್ವಹಿಸಿಕೊಂಡು ಬರುತ್ತಿರುವ ವೃತ್ತಿಯ ಕೌಶಲ್ಯ ಮತ್ತು ನೈಪುಣ್ಯಗಳನ್ನು ಇನ್ನಷ್ಟು ಬಲಗೊಳಿಸಿಕೊಳ್ಳುವ ಹಂತದಲ್ಲಿ ಗುಂಪಿನ ಬಹುಮಿಖಿ ಚಟುವಟಿಕೆಗಳು ನೆರವಾಗುತ್ತವೆ. ಅಂತೆಯೇ ಸ್ವಸಹಾಯ ಗುಂಪಿನ ಸದಸ್ಯರು ಕೈಗೊಂಡ ವೃತ್ತಿಯು ಜೀವಪರವಾಗಿರಬೇಕೆಂಬ ಹಂಬಲದೊಂದಿಗೆ ಇಲ್ಲಿನ ಚಟುವಟಿಕೆಗಳು ರೂಪ ಪಡೆದಿವೆ. ಸ್ವಸಹಾಯ ಗುಂಪಿನ ವಿವಿಧ ಕಾರ್ಯಕ್ರಮಗಳು, ಯೋಜನೆಗಳು ಮರೆಯಾಗುತ್ತಿರುವ ಕುಲಕಸುಬುಗಳಿಗೆ, ಕೃಷಿಪ್ರಧಾನ ಚಟುವಟಿಕೆಗಳಿಗೆ ಜೀವದಾನ ನೀಡಿವೆ.

ಕುಂದಾಪುರ ತಾಲೂಕು ಬಲು ಹಿಂದಿನಿಂದಲೂ ಕೃಷಿಕರ ಆವಾಸಸ್ಥಾನ. ಭತ್ತ ಇಲ್ಲಿನ ಪ್ರಧಾನ ಬೆಳೆಯಾಗಿದ್ದು ಅದರೊಂದಿಗೆ ತೋಟದ ಬೆಳೆಗಳು ಮತ್ತು ದ್ವಿದಳ ದಾನ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಗ್ರಾಮಾಭಿವೃದ್ಧಿ ಯೋಜನೆ ಕುಂದಾಪುರ ತಾಲೂಕಿನ ವಿವಿಧ ಹಳ್ಳಿಗಳನ್ನು ಆವರಿಸಿಕೊಂಡ ನಂತರದ ದಿನಗಳಲ್ಲಿ ಅನೇಕ ಮಂದಿ ಕೃಷಿ ಕಾರ್ಮಿಕರು ಯೋಜನೆಯ ಆರ್ಥಿಕ ನೆರವಿನಿಂದ ತಮ್ಮ ಸ್ವಂತ ಜಮೀನಿನಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಯಶಸ್ಸು ಕಂಡಿದ್ದಾರೆ. ಯೋಜನೆಯ ಮಹಿಳಾ ಸದಸ್ಯರುಗಳು ಕೃಷಿ ಚಟುವಟಿಕೆಗಳ ಜೊತೆಗೆ ಕೃಷಿಗೆ ಪೂರಕವಾಗಿ ಹೈನುಗಾರಿಕೆ ಮೊದಲಾದ ಚಟುವಟಿಕೆಗಳನ್ನು ನಿರ್ವಹಿಸುವ ಮೂಲಕ ಪ್ರಗತಿಯ ಪಥದಲ್ಲಿ ಸಾಗುತ್ತಿದ್ದಾರೆ. ವಿಶೇಷವಾಗಿ ಭತ್ತದ ಕೃಷಿ, ಪುಷ್ಪೋದ್ಯಮ ಮತ್ತು ತೋಟದ ಬೆಳೆಗಳಿಗೆ ಸಂಬಂಧಿಸಿದಂತೆ ಸಣ್ಣ ರೈತರು ಮತ್ತು ಗ್ರಾಮೀಣ ಮಹಿಳೆಯರು ಆಧುನಿಕ ವಿಧಾನಕ್ರಮಗಳನ್ನು ಅನುಸರಿಸಿ ಅಧಿಕ ಇಳುವರಿ ಪಡೆಯಲು ಅನುಕೂಲವಾಗುವಂತೆ ಕುಂದಾಪುರ ತಾಲೂಕಿನ ವಿವಿಧ ಪ್ರದೇಶಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕೋಷ್ಟಕ ೭
ಸ್ವಸಹಾಯ ಗುಂಪಿಗೆ ಸೇರಿದ ಬಳಿಕ ಔದ್ಯೋಗಿಕ ಬದುಕಿನಲ್ಲುಂಟಾದ ಬದಲಾವಣೆಯ ಸ್ವರೂಪ

ವಯಸ್ಸು	ಅತ್ಯುತ್ತಮ	ಉತ್ತಮ	ಸಾಧಾರಣ	ಯಥಾಸ್ಥಿತಿ.	ಒಟ್ಟು
೧೬–೩೦	೧೫	೧೫	೨	–	೩೨
೩೧–೪೫	೧೨	೨೬	೨	–	೪೦
೪೬–೬೦	೨	೧೬	೧	–	೧೯
೬೧–೭೫	೨	೪	೩	–	೯
ಒಟ್ಟು	೩೧	೬೧	೮	–	೧೦೦

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೭ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಯೋಜನೆಯಲ್ಲಿ ಸಹಭಾಗಿಗಳಾದ ನಂತರದ ದಿನಗಳಲ್ಲಿ ಅವರ ಔದ್ಯೋಗಿಕ ಬದುಕಿನಲ್ಲಿ ಉಂಟಾದ ಬದಲಾವಣೆಯ ಸ್ವರೂಪದ ಕುರಿತು ವಿವರಿಸಲಾಗಿದೆ. ಮುಖ್ಯವಾಗಿ ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದ ಬಳಿಕ ಅವರ ವ್ಯಕ್ತಿಗತ ಮತ್ತು ಕೌಟುಂಬಿಕ ನೆಲೆಯಲ್ಲಿ ಉಂಟಾದ ಔದ್ಯೋಗಿಕ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ಗುರುತಿಸುವುದು ಇಲ್ಲಿನ ಮಹತ್ವದ ಉದ್ದೇಶವಾಗಿದೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೬೧%ರಷ್ಟು ಮಂದಿ ತಮ್ಮ ಔದ್ಯೋಗಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡಿದ್ದಾರೆ. ಕನಿಷ್ಠ ೮%ರಷ್ಟು ಮಂದಿ ಔದ್ಯೋಗಿಕ ನೆಲೆಯಲ್ಲಿ ತಮ್ಮ ಯಥಾಸ್ಥಿತಿಯಿಂದ ಹಂತ ಹಂತವಾಗಿ ಸುಧಾರಣೆ ಕಂಡಿದ್ದಾರೆ. ಈ ನಡುವೆ ಅತ್ಯಂತ ಅಭಿಮಾನಪಡುವ ಉಲ್ಲೇಖನೀಯ ಸಂಗತಿ ಎಂದರೆ ೩೧%ರಷ್ಟು ಮಂದಿ ತಮ್ಮ ಔದ್ಯೋಗಿಕ ಸ್ಥಿತಿಗತಿಗಳನ್ನು ಅತ್ಯುತ್ತಮಗೊಳಿಸಿಕೊಳ್ಳುವ ಮೂಲಕ ಅತ್ಯಂತ ಮೇಲ್ಮಟ್ಟಕ್ಕೆ ಏರಿದ್ದಾರೆ. ಯೋಜನೆಯ ಸ್ವಸಹಾಯ ಗುಂಪುಗಳಲ್ಲಿ ಸದಸ್ಯತ್ವ ಪಡೆದ ಬಳಿಕ ತಮ್ಮಾ ಔದ್ಯೋಗಿಕ ಸ್ಥಿತಿಗತಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡ ಅಥವಾ ಆರ್ಥಿಕವಾಗಿ ಮುಗ್ಗರಿಸಿದ ಯಾವುದೇ ಒಂದು ನಿದರ್ಶನವೂ ಸಮೀಕ್ಷೆಯಲ್ಲಿ ಕಂಡುಬಂದಿಲ್ಲ.

ಕಾಲದಿಂದ ಕಾಲಕ್ಕೆ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಔದ್ಯೋಗಿಕ ಸ್ಥಿತಿಗತಿಗಳಲ್ಲಿ ಮಹತ್ವದ ಸುಧಾರಣೆಗಳನ್ನು ಕಂಡು ಅನುಭವಿಸಿದ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೦%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ

ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೯%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು ಪ್ರತಿನಿಧಿಸುವ ೧೬ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೩೨%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಗ್ರಾಮೀಣ ಮಹಿಳೆಯರಿಗೆ ಔದ್ಯೋಗಿಕ ಬದ್ರತೆಯನ್ನು ಒದಗಿಸುವುದು ಯೋಜನೆಯ ಮುಂದಿರುವ ಮಹತ್ವದ ಸವಾಲುಗಳಲ್ಲಿ ಒಂದು. ಔದ್ಯೋಗಿಕ ಭದ್ರತೆ ಪ್ರಾಪ್ತವಾದಾಗ ಹೆಣ್ಣು ಹಲವು ವಿಧದ ದೌರ್ಜನ್ಯಗಳಿಂದ ಪಾರಾಗಬಹುದು ಎಂಬುದು ಯೋಜನೆಯ ಕಳಕಳಿಯಾಗಿದೆ. ಔದ್ಯೋಗಿಕ ಭದ್ರತೆಯ ಮೂಲಕ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಸಾಧ್ಯವಿದೆ ಎಂಬ ವಾಸ್ತವ ಸಂಗತಿಯನ್ನು ಯೋಜನೆಯ ಫಲಾನುಭವಿಗಳು ಕಂಡುಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಯೋಜನೆಯು ಪ್ರವರ್ತಿಸಿದ ಸಿರಿ ಗ್ರಾಮಾಭಿವೃದ್ಧಿ ಸಂಸ್ಥೆ ಒಂದು ಮಹತ್ವದ ಪ್ರಯೋಗ ಎನ್ನಬಹುದು. ಕುಂದಾಪುರ ತಾಲೂಕಿನ ವಿವಿಧ ಹಳ್ಳಿಗಳನ್ನು ಪ್ರತಿನಿಧಿಸುವ ನೂರಾರು ಕುಟುಂಬಗಳಿಗೆ ಈ ಸಂಸ್ಥೆಯು ಬಹುಮಾದರಿಯ ಔದ್ಯೋಗಿಕ ಅವಕಾಶಗಳನ್ನು ಒದಗಿಸಿಇದೆ. ಇಲ್ಲಿನ ವಿವಿಧ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮೀಣ ಮಹಿಳೆಯರು ಯೋಜನೆಯಲ್ಲಿ ಪಾಲುದಾರರಾದ ಬಳಿಕ ತಮ್ಮ ಔದ್ಯೋಗಿಕ ಬದುಕಿನಲ್ಲಿ ಮಹತ್ವದ ಸುಧಾರಣೆಗಳನ್ನು ಕಂಡುಕೊಳ್ಳುವ ಮೂಲಕ ಸದೃಢ ಕೌಟುಂಬಿಕ ಮತ್ತು ಸಾಮಾಜಿಕ ಬದುಕನ್ನು ಕಾಯ್ದುಕೊಂಡಿರುವುದು ಗಮನಾರ್ಹ ಸಂಗತಿಯಾಗಿದೆ. ಮುಂದಿನ ದಿನಗಳಲ್ಲಿ ಕುಂದಾಪುರ ತಾಲೂಕಿನ ಗ್ರಾಮೀಣ ಮಹಿಳೆಯರು ಯೋಜನೆಯ ಮೂಲಕ ದೊರೆಯುವ ಸಾಲ ಸೌಲಭ್ಯ, ಸಕಾಲಿಕ ತರಬೇತಿ ಪಡೆದು ಸ್ವಾಉದ್ಯೋಗ ಚಟುವಟಿಕೆಗಳನ್ನು ಕೈಗೊಳ್ಳಲು ವಿಪುಲ ಅವಕಾಶಗಳಿವೆ.

ಕೋಷ್ಟಕ ೮
ಸ್ವಸಹಾಯ ಗುಂಪಿನ ಸದಸ್ಯರುಗಳ ಆರ್ಥಿಕ ಸ್ಥಿತಿಯಲ್ಲಿ ಉಂಟಾಗಿರುವ ಬದಲಾವಣೆಯ ಸ್ವರೂಪ

ವಯಸ್ಸು	ಅತ್ಯುತ್ತಮ	ಉತ್ತಮ	ಸಾಧಾರಣ	ಯಥಾಸ್ಥಿತಿ	ಒಟ್ಟು
೧೬–೩೦	೯	೧೬	೧	–	೨೬
೩೧–೪೫	೧೬	೨೭	೨	–	೪೫
೪೬–೬೦	೩	೧೨	೨	–	೧೭
೬೧–೭೫	೪	೫	೩	–	೧೨
ಒಟ್ಟು	**೩೨**	**೬೦**	**೮**	**೦**	**೧೦೦**

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೮ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಯೋಜನೆಯಲ್ಲಿ ಸಹಭಾಗಿಗಳಾದ ನಂತರದ ದಿನಗಳಲ್ಲಿ ಅವರ ಆರ್ಥಿಕ ಸ್ಥಿತಿಗತಿಗಳಲ್ಲಿ ಉಂಟಾದ ಬದಲಾವಣೆಯ ಸ್ವರೂಪದ ಕುರಿತು ವಿವರಿಸಲಾಗಿದೆ. ಮುಖ್ಯವಾಗಿ ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದ ಬಳಿಕ ಅವರ ವ್ಯಕ್ತಿಗತ ಮತ್ತು ಕೌಟುಂಬಿಕ ನೆಲೆಯಲ್ಲಿ ಉಂಟಾದ ಆರ್ಥಿಕ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ಗುರುತಿಸುವುದು ಇಲ್ಲಿನ ಮಹತ್ವದ ಉದ್ದೇಶವಾಗಿದೆ. ಮಾದರಿ ಸಮೀಕ್ಷೆಗಾಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೬೦%ರಷ್ಟು ಮಂದಿ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡಿದ್ದಾರೆ. ಕನಿಷ್ಠ ೮%ರಷ್ಟು ಮಂದಿ ಆರ್ಥಿಕವಾಗಿ ತಮ್ಮ ಯಥಾಸ್ಥಿತಿಯಿಂದ ಹಂತ ಹಂತವಾಗಿ ಸುಧಾರಣೆ ಕಂಡಿದ್ದಾರೆ. ಈ ನಡುವೆ ಅತ್ಯಂತ ಅಭಿಮಾನಪಡುವ ಉಲ್ಲೇಖನೀಯ ಸಂಗತಿ ಎಂದರೆ ೩೨%ರಷ್ಟು ಮಂದಿ ತಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಅತ್ಯುತ್ತಮಗೊಳಿಸಿಕೊಳ್ಳುವ ಮೂಲಕ ಅತ್ಯಂತ ಮೇಲ್ಮಟ್ಟಕ್ಕೆ ಏರಿದ್ದಾರೆ. ಯೋಜನೆಯ ಸ್ವಸಹಾಯ ಗುಂಪುಗಳಲ್ಲಿ ಸದಸ್ಯತ್ವ ಪಡೆದ ಬಳಿಕ ತಮ್ಮಾ ಆರ್ಥಿಕ ಸ್ಥಿತಿಗತಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡ ಅಥವಾ ಆರ್ಥಿಕವಾಗಿ ಮುಗ್ಗರಿಸಿದ ಯಾವುದೇ ಒಂದು ನಿದರ್ಶನವೂ ಸಮೀಕ್ಷೆಯಲ್ಲಿ ಕಂಡುಬಂದಿಲ್ಲ.

ಕಾಲದಿಂದ ಕಾಲಕ್ಕೆ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಆರ್ಥಿಕ ಸ್ಥಿತಿಗತಿಗಳಲ್ಲಿ ಮಹತ್ವದ ಸುಧಾರಣೆಗಳನ್ನು ಕಂಡು ಅನುಭವಿಸಿದ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೫%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೧೫%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೧೫%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ

ತಲೆಮಾರನ್ನು ಪ್ರತಿನಿಧಿಸುವ ೧೮ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೨೮%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಯನ್ನು ಕೇಂದ್ರ ಕಾಳಜಿಯಾಗಿರಿಸಿಕೊಂಡು ಸ್ವಸಹಾಯ ಗುಂಪುಗಳು ಆಕೃತಿಗೊಂಡಿವೆ. ಸ್ವಸಹಾಯ ಗುಂಪುಗಳು ತಮ್ಮ ಆರ್ಥಿಕ ಚಟುವಟಿಕೆಗಳ ವಿಸ್ತರಣೆಯ ಭಾಗವಾಗಿ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆಯ ಮೇರೆಗೆ ಪ್ರಾಶಸ್ತ್ಯ ನೀಡುತ್ತ ಬಂದಿವೆ. ಸ್ವಸಹಾಯ ಗುಂಪಿನ ಯಶಸ್ಸಿನ ದೊಡ್ಡ ಭಾಗ ಅದು ಕೈಗೊಳ್ಳುವ ಮತ್ತು ನಿರ್ವಹಿಸುವ ಆರ್ಥಿಕ ಚಟುವಟಿಕೆಗಳ ಮೇಲೆ ಅವಲಂಬಿತವಾಗಿದೆ. ಈ ಬಗೆಯ ಆರ್ಥಿಕ ಚಟುವಟಿಕೆಗಳ ಪರಿಣಾಮವಾಗಿ ಇಂದು ಹಳ್ಳಿಗಳ ಮನೆ ಮನಗಳು ತುಂಬು ಶೃಂಗಾರಗೊಂಡಿದೆ.

ಗ್ರಾಮೀಣ ಮಹಿಳೆಗೆ ಆರ್ಥಿಕ ಸ್ಥಿರತೆ ಮತ್ತು ಅವಕಾಶಗಳು ದೊರೆತಾಗ ಬದುಕು ಸಂಪನ್ನಗೊಳ್ಳುತ್ತದೆ ಎಂಬ ಕಟುಸತ್ಯವನ್ನು ತನ್ನ ಆರಂಭದ ದಿನಗಳಿಂದ ಅರಿತುಕೊಂಡು ಬಂದ ಸ್ವಸಹಾಯ ಗುಂಪುಗಳು ಈ ನಿಟ್ಟಿನಲ್ಲಿ ಕುಂದಾಪುರ ತಾಲೂಕಿನ ವಿವಿಧ ಹಳ್ಳಿಗಳಲ್ಲಿ ನಿಗದಿತ ಯಶಸ್ಸು ಕಂಡಿದೆ. ಇಲ್ಲಿನ ಹಳ್ಳಿ ಹಳ್ಳಿಗಳಿಗೆ ಗ್ರಾಮಾಭಿವೃದ್ಧಿ ಯೋಜನೆ ಪ್ರವೇಶಿಸಿದ ಬಳಿಕ ಇಲ್ಲಿನ ಗ್ರಾಮೀಣ ಮಹಿಳೆಯರು ತಮ್ಮ ಹಲವು ಬಗೆಯ ಆರ್ಥಿಕ ಅಡೆತಡೆಗಳಿಂದ ಹೊರಬಂದಿದ್ದಾರೆ. ತಾವು ಆಗಾಗ ಎದುರಿಸುತ್ತಿದ್ದ ಅನ್ನ, ಅರಿವೆ, ಆಸರೆ ಮತ್ತು ಆರೋಗ್ಯದ ಸಮಸ್ಯೆಗಳಿಂದ ಬಹುತೇಕ ಬಿಡುಗಡೆ ಹೊಂದಿದ್ದಾರೆ. ಯೋಜನೆಯಿಂದ ದೊರೆಯುವ ಆರ್ಥಿಕ ನೆರವನ್ನು ಇಲ್ಲಿನ ಮಹಿಳೆಯರು ಇನ್ನೂ ಹೆಚ್ಚಿನ ರೀತಿಯಲ್ಲಿ ಸದುಪಯೋಗಪಡಿಸಿಕೊಳ್ಳಬೇಕಾಗಿದೆ.

ಕೋಷ್ಟಕ ೯
ಸ್ವಸಹಾಯ ಗುಂಪಿಗೆ ಸೇರಿದ ಬಳಿಕ ಸಾಮಾಜಿಕ ಬದುಕಿನಲ್ಲುಂಟಾದ ಬದಲಾವಣೆ.

ವಯಸ್ಸು	ಅತ್ಯುತ್ತಮ	ಉತ್ತಮ	ಸಾಧಾರಣ	ಯಥಾಸ್ಥಿತಿ.	ಒಟ್ಟು
೧೬-೩೦	೧೨	೧೫	೩	-	೩೦
೩೧-೪೫	೨೦	೨೦	-	-	೪೦
೪೬-೬೦	೪	೧೪	-	-	೧೮
೬೧-೭೫	೪	೪	೪	-	೧೨
ಒಟ್ಟು	**೪೦**	**೫೩**	**೦೭**	**೦**	**೧೦೦**

ಮೂಲ: ಸಮೀಕ್ಷಾ ದತ್ತಾಂಶ

ಕೋಷ್ಟಕ ೯ರಲ್ಲಿ ಮಾದರಿ ಸಮೀಕ್ಷೆಗೆ ಆಯ್ಕೆಮಾಡಿಕೊಂಡ ಕುಂದಾಪುರ ತಾಲೂಕಿನ ವಿವಿಧ ಗ್ರಾಮೀಣ ಪ್ರದೇಶಗಳನ್ನು ಪ್ರತಿನಿಧಿಸುವ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ಯೋಜನೆಯಲ್ಲಿ ಸಹಭಾಗಿಗಳಾದ ನಂತರದ ದಿನಗಳಲ್ಲಿ ಅವರ ಸಾಮಾಜಿಕ ಸ್ಥಿತಿಗತಿಗಳಲ್ಲಿ ಉಂಟಾದ ಬದಲಾವಣೆಯ ಸ್ವರೂಪದ ಕುರಿತು ವಿವರಿಸಲಾಗಿದೆ. ಮುಖ್ಯವಾಗಿ ಯೋಜನೆಯ ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದ ಬಳಿಕ ಅವರ ವ್ಯಕ್ತಿಗತ ಮತ್ತು ಕೌಟುಂಬಿಕ ನೆಲೆಯಲ್ಲಿ ಉಂಟಾದ ಸಾಮಾಜಿಕ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ಗುರುತಿಸುವುದು ಇಲ್ಲಿನ ಮಹತ್ವದ ಉದ್ದೇಶವಾಗಿದೆ. ಮಾದರಿ ಸಮೀಕ್ಷೆಗಾಗ್ಗಿ ಆಯ್ಕೆಮಾಡಿಕೊಂಡ ಸದಸ್ಯರುಗಳಲ್ಲಿ ಗರಿಷ್ಠ ೫೩%ರಷ್ಟು ಮಂದಿ ತಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡಿದ್ದಾರೆ. ಕನಿಷ್ಠ ೭%ರಷ್ಟು ಮಂದಿ ಸಾಮಾಜಿಕ ನೆಲೆಯಲ್ಲಿ ಯಥಾಸ್ಥಿತಿಯಿಂದ ಹಂತ ಹಂತವಾಗಿ ಸುಧಾರಣೆ ಕಂಡಿದ್ದಾರೆ. ಈ ನಡುವೆ ಅತ್ಯಂತ ಅಭಿಮಾನಪಡುವ ಉಲ್ಲೇಖನೀಯ ಸಂಗತಿ ಎಂದರೆ ೪೦%ರಷ್ಟು ಮಂದಿ ತಮ್ಮ ಸಾಮಾಜಿಕ ಸ್ಥಿತಿಗತಿಗಳನ್ನು ಅತ್ಯುತ್ತಮಗೊಳಿಸಿಕೊಳ್ಳುವ ಮೂಲಕ ಅತ್ಯಂತ ಮೇಲ್ಮಟ್ಟಕ್ಕೆ ಏರಿದ್ದಾರೆ. ಯೋಜನೆಯ ಸ್ವಸಹಾಯ ಗುಂಪುಗಳಲ್ಲಿ ಸದಸ್ಯತ್ವ ಪಡೆದ ಬಳಿಕ ತಮ್ಮಾ ಸಾಮಾಜಿಕ ಸ್ಥಿತಿಗತಿಯಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಂಡ ಅಥವಾ ಸಾಮಾಜಿಕವಾಗಿ ಮುಗ್ಗರಿಸಿದ ಯಾವುದೇ ಒಂದು ನಿದರ್ಶನವೂ ಸಮೀಕ್ಷೆಯಲ್ಲಿ ಕಂಡುಬಂದಿಲ್ಲ.

ಕಾಲದಿಂದ ಕಾಲಕ್ಕೆ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿನ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಸಾಮಾಜಿಕ ಸ್ಥಿತಿಗತಿಗಳಲ್ಲಿ ಮಹತ್ವದ ಸುಧಾರಣೆಗಳನ್ನು ಕಂಡು ಅನುಭವಿಸಿದ ಸದಸ್ಯರುಗಳ ವಯೋಮಾನದ ಸ್ವರೂಪವನ್ನು ಗಮನಿಸಿಕೊಂಡರೆ ಸರಿಸುಮಾರು ೩೧ರಿಂದ ೪೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಅಧಿಕ ಸಂಖ್ಯೆಯಲ್ಲಿದ್ದು ೪೦%ರಷ್ಟಿದ್ದಾರೆ. ೬೧ರಿಂದ ೭೫ ವರ್ಷ ಪ್ರಾಯದ ಮಹಿಳಾ ಸದಸ್ಯರುಗಳು ಕಡಿಮೆ ಸಂಖ್ಯೆಯಲ್ಲಿದ್ದು ೧೨%ರಷ್ಟಿದ್ದಾರೆ. ಅದೇ ವೇಳೆಗೆ ಎಳೆಯ ತಲೆಮಾರನ್ನು

ಪ್ರತಿನಿಧಿಸುವ ೧೬ರಿಂದ ೩೦ ವರ್ಷ ಪ್ರಾಯದೊಳಗಿನ ಸದಸ್ಯರುಗಳು ೩೦%ರಷ್ಟಿರುವ ಗಮನಾರ್ಹ ಸಂಗತಿಯನ್ನು ಸಮೀಕ್ಷೆ ಗುರುತಿಸಿದೆ.

ಆಧುನಿಕತೆ ಮತ್ತು ಅದರ ಉತ್ಪನ್ನವಾದ ಜಾಗತೀಕರಣ ಪ್ರಕ್ರಿಯೆಯು ಇಂದು ಭಾರತದ ಹಳ್ಳಿಗಳನ್ನು ಶರವೇಗದಲ್ಲಿ ತಲುಪಿರುವ ನಡುವೆಯೂ ದೊಡ್ಡ ಸಂಖ್ಯೆಯ ಗ್ರಾಮೀಣ ಮಹಿಳೆಯರು ಸಾಮಾಜಿಕ ಮತ್ತು ಸಾಮುದಾಯಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ. ಸಮಾಜದ ಪ್ರಧಾನ ವಾಹಿನಿಯಿಂದ ಹೊರಗುಳಿಯುವ ಮೂಲಕ ಪಿತೃಸತ್ತೆಯ ಮೌಲ್ಯಗಳನ್ನು ಒಪ್ಪಿಕೊಂಡು ಸಾಮಾಜಿಕವಾಗಿ ಅಂಚಿಗೆ ಸರಿದಿದ್ದಾರೆ. ಅಡುಗೆ ಮನೆಯ ನಾಲ್ಕು ಗೋಡೆಗಳ ನಡುವೆ ಬದುಕು ಕಟ್ಟಿಕೊಂಡ ಹಳ್ಳಿಯ ಮಹಿಳೆಯರನ್ನು ಹೊರಜಗತ್ತಿಗೆ ಪರಿಚಯಿಸುವಲ್ಲಿ ಸರಕಾರದ ಕಾರ್ಯಕ್ರಮಗಳೊಂದಿಗೆ ಸ್ವಸಹಾಯ ಗುಂಪುಗಳ ಕಾರ್ಯಚಟುವಟಿಕೆಗಳು ಅತ್ಯಂತ ಮಹತ್ವದ ಪಾತ್ರವಹಿಸಿವೆ. ಹಳ್ಳಿಯ ಹೆಣ್ಣುಮಕ್ಕಳನ್ನು ಸಾಮಾಜಿಕ ಮತ್ತು ಧಾರ್ಮಿಕ ಮೌಢ್ಯಗಳಿಂದ ಹೊರತರುವಲ್ಲಿ ತೀವ್ರ ಸ್ವರೂಪದ ಜಾಗೃತಿ ಮೂಡಿಸಿವೆ.

ಗ್ರಾಮೀಣ ಮಹಿಳೆಯರನ್ನು ಸಾಮಾಜಿಕವಾಗಿ ಸಶಕ್ತರನ್ನಗಿಸುವುದು ಯೋಜನೆಯ ಮಹತ್ವದ ಕಾಳಜಿಯಾಗಿದೆ. ಹಲವು ಬಗೆಯ ಸಾಮಾಜಿಕ ಅವಕಾಶಗಳಿಂದ ವಂಚಿತರಾಗಿದ್ದ ಕುಂದಾಪುರ ತಾಲೂಕಿನ ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ ಸ್ಥಾನಮಾನಗಳನ್ನು ಪ್ರಾಯೋಗಿಕವಾಗಿ ಒದಗಿಸುವ ನಿಟ್ಟಿನಲ್ಲಿ ಯೋಜನೆಯು ಕ್ರಿಯಾತ್ಮಕ ತರಬೇತಿ ಕಾರ್ಯಕ್ರಮಗಳನ್ನು ಅಲ್ಲಲ್ಲಿ ಹಮ್ಮಿಕೊಂಡು ಬರುತ್ತಿದೆ. ಈ ಮೂಲಕ ಸಾಮಾಜಿಕ ಅಸಮಾನ ಸಂಬಂಧದ ನೆಲೆಗಳು ಕುಂದಾಪುರ ಪರಿಸರದಲ್ಲಿ ಯೋಜನೆಯ ಪ್ರಭಾವದಿಂದಾಗಿ ಕ್ಷೀಣವಾಗುತ್ತ ಬಂದಿದೆ. ಗ್ರಾಮೀಣ ಮಹಿಳೆಯರ ಸಾಮಾಜಿಕ ಅಸ್ತಿತ್ವವನ್ನು ಮಗದಷ್ಟು ಗಟ್ಟಿಗೊಳಿಸುವ ಕಾರ್ಯಕ್ರಮಗಳು ಇನ್ನೂ ಪ್ರಬಲವಾಗಿ ರೂಪುತಳೆಯಬೇಕಾಗಿದೆ.

ಅಧ್ಯಾಯ ಟಿಪ್ಪಣಿ

೧. ಕನರಾಡಿ ವಾದಿರಾಜ ಭಟ್ಟ, ಕುಂದಾಪುರ ತಾಲೂಕು ದರ್ಶನ, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೬.

೨. ಪುನರುಕ್ತಿ ೧

೩. ಪುನರುಕ್ತಿ ೧

೪. ನಾವಡ ಎ. ವಿ, ಕುಂದದರ್ಶನ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ, ೧೯೭೭.

೫. ದಿನಾಂಕ: ೩೧.೦೩.೨೦೧೧ಕ್ಕೆ ಕೊನೆಗೊಂಡ ಆರ್ಥಿಕ ವರ್ಷಕ್ಕೆ ಅನ್ವಯವಾಗುವಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕುಂದಾಪುರ ತಾಲೂಕಿನ ಅಂಕಿ ಅಂಶಗಳ ಮೂಲಕ ಲಭ್ಯವಾದ ಮಾಹಿತಿ.

೬. ಪುನರುಕ್ತಿ ೫

೭. ಪುನರುಕ್ತಿ ೫

೮. ಪುನರುಕ್ತಿ ೫

೯. ಪುನರುಕ್ತಿ ೫

೧೦. ಪುನರುಕ್ತಿ ೫

೧೧. ಪುನರುಕ್ತಿ ೫

ಅಧ್ಯಾಯ ೬

ಅಧ್ಯಯನದ ಫಲಿತಗಳು ಮತ್ತು ಸಮಾರೋಪ

ಅಧ್ಯಾಯ ೬

ಅಧ್ಯಯನದ ಫಲಿತಗಳು ಮತ್ತು ಸಮಾರೋಪ

ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಕುಂದಾಪುರ ತಾಲೂಕನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯಡಿಯಲ್ಲಿ ಅನಾವರಣಗೊಂಡ ಈ ಅಧ್ಯಯನ ಮುಖ್ಯವಾಗಿ ಕುಂದಾಪುರ ತಾಲೂಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಇಲ್ಲಿನ ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಬಲೀಕರಣ ಪ್ರಕ್ರಿಯೆಯಲ್ಲಿ ನಿರ್ವಹಿಸಿದ ಪಾತ್ರದ ಆಯಾಮಗಳ ಕುರಿತು ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿನ್ಯಾಸಗಳೊಂದಿಗೆ ವಿಶ್ಲೇಷಿಸುತ್ತದೆ. ಕಿರು ಹಣಕಾಸು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಪರಿಕಲ್ಪನೆಗಳ ಕುರಿತು ಸೈದ್ಧಾಂತಿಕ ನೆಲೆಯಲ್ಲಿ ಚರ್ಚಿಸುವುದರೊಂದಿಗೆ ಕುಂದಾಪುರ ತಾಲೂಕಿನಲ್ಲಿ ನಡೆಸಿದ ಕ್ಷೇತ್ರಕಾರ್ಯದ ಮೂಲಕ ಲಭ್ಯವಾದ ದತ್ತಾಂಶಗಳನ್ನು ಆದರಿಸಿ ಈ ಮೇಲಿನ ಪರಿಕಲ್ಪನೆಗಳನ್ನು ಅನ್ವಯಿಕವಾಗಿ ನೋಡುವ ಸಾಮಾನ್ಯ ಪ್ರಯತ್ನವೊಂದು ಅಧ್ಯಯನದ ಮೂಲಕ ನಡೆದಿದೆ. ಸ್ವಸಹಾಯ ಗುಂಪಿನ ಪರಿಕಲ್ಪನೆ ಮತ್ತು ಅದರ ವಿಸ್ತರಣಾ ಚಟುವಟಿಕೆಗಳ ಮೂಲಕ ಸಾಧ್ಯವಾಗಬಹುದಾದ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯ ಸಾಧ್ಯತೆ ಮತ್ತು ಮಿತಿಗಳ ಕುರಿತು ಈ ಅಧ್ಯಯನ ವಸ್ತುನಿಷ್ಠವಾಗಿ ಬೆಳಕು ಚಲ್ಲಿದೆ. ಈ ಪರಿಕಲ್ಪನೆಗಳ ಕುರಿತು ಈಗಾಗಲೇ ನಡೆದ ಕೆಲವು ಲಭ್ಯ ಅಧ್ಯಯನಗಳ ಮಾದರಿಗಳನ್ನು ಅಭ್ಯಸಿಸಿ, ಆ ಮೂಲಕ ಊಹಾಕಲ್ಪನೆಯನ್ನು ರೂಪಿಸಿ, ಆ ಊಹಾಕಲ್ಪನೆಯ ಭಾಗವಾಗಿ ನಡೆಸಿದ ಮಾದರಿ ಸಮೀಕ್ಷೆಯು ಒದಗಿಸಿದ ಅಂಕಿ ಅಂಶಗಳ ಆಧಾರದ ಮೇಲೆ ಈ ಅಧ್ಯಯನವು ಕೆಲವು ಫಲಿತಗಳನ್ನು ಪ್ರಕಟಪಡಿಸಿದೆ. ಕುಂದಾಪುರ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಕಾರಾತ್ಮಕ ಬೆಳವಣಿಗೆಯ ದೃಷ್ಟಿಯಿಂದ ಈ ಫಲಿತಗಳು ಕೆಲವು ಹೊಳಹುಗಳನ್ನು ಪರಿಚಯಿಸಿವೆ.

ಸ್ವಾತಂತ್ರ್ಯದ ಹಾದಿಯಲ್ಲಿ ಸರಿಸುಮಾರು ಐದಾಯ ದಶಕಗಳು ಗತಿಸಿದರೂ ಇಲ್ಲಿನ ಬಹುತೇಕ ಹಳ್ಳಿಗಳು ಬಹು ನೆಲೆಗಳಲ್ಲಿ ಹಿಂದುಳಿದಿದ್ದು ಅಂತಹ ಹಲವು ಹಳ್ಳಿಗಳ ಸಮಗ್ರ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಸ್ವಸಹಾಯ ಗುಂಪುಗಳು, ಅದರಲ್ಲೂ ಮುಖ್ಯವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಉಂಟುಮಾಡಿದ ಪ್ರಗತಿಪರ ಪರಿಣಾಮಗಳ ಕುರಿತು ಅಧ್ಯಯನ ಆಸಕ್ತಿ ವಹಿಸಿದೆ. ಯೊಜನೆಯು ಇಲ್ಲಿನ ಹಳ್ಳಿಗಳನ್ನು ಪ್ರವೇಶಿಸಿದ ಪರಿಣಾಮವಾಗಿ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರಕಾರದ ಅನೇಕ ಜನಪರ ಯೋಜನೆಗಳು ಸಕಾಲದಲ್ಲಿ ಗ್ರಾಮೀಣ ಬಡ ಜನಸಮುದಾಯವನ್ನು, ವಿಶೇಷವಾಗಿ ಮಹಿಳೆಯರನ್ನು ತೀವ್ರಗತಿಯಲ್ಲಿ ತಲುಪುತ್ತಿರುವ ನೆಲೆಗಳ ಕುರಿತು ಅಧ್ಯಯನ ಗಮನಸಹರಿಸಿದೆ.

ಆರೋಗ್ಯ ಸಂಬಂಧಿ ಸಮಸ್ಯೆಗಳು ಎದುರಾದಾಗ, ಆರ್ಥಿಕ ಮುಗ್ಗಟ್ಟು ಆವರಿಸಿಕೊಂಡಾಗ, ವೃತ್ತಿಪರ ಬದುಕನ್ನು ವಿಸ್ತರಿಸಹೊರಟಾಗ, ಶುಭ ಸಮಾರಂಭವನ್ನು ಆಯೋಜಿಸುವ ವೇಳೆಯಲ್ಲಿ ಯೋಜನೆ ನೀಡಿದ ಆರ್ಥಿಕ ಬಲ ಮತ್ತು ತರಬೇತಿ ಕಾರ್ಯಕ್ರಮಗಳು ಮೌಲ್ಯಪೂರ್ಣ ಪಾತ್ರವಹಿಸಿರುವುದನ್ನು ಅಧ್ಯಯನ ಗುರುತಿಸಿಕೊಂಡಿದೆ. ಹೀಗೆ ಕುಂದಾಪುರ ತಾಲೂಕನ್ನು ಕೇಂದ್ರವಾಗಿರಿಸಿಕೊಂಡು ಯೋಚಿಸುವುದಾದರೆ ಗ್ರಾಮೀಣ ಮಹಿಳೆಯರ ಸಬಲೀಕರಣದ ವಿಚಾರದಲ್ಲಿ ಇತರ ಸಂಘಟನೆಗಳ ಕ್ರಿಯಾಚರಣೆಗೆ ಹೋಲಿಸಿದರೆ ಗ್ರಾಮಾಭಿವೃದ್ಧಿ ಯೋಜನೆಯ ಚಟುವಟಿಕೆಗಳು ಅದ್ವಿತೀಯ ಸಾಧನೆಗೈದಿವೆ ಮಾತ್ರವಲ್ಲ ಕೆಲವು ಹಂತಗಳಲ್ಲಿ ಸರಕಾರದ ಯೋಜನೆಗಳನ್ನು ಮೀರಿ ನಿಂತಿವೆ. ಈ ಯೋಜನೆಯ ಮೂಲಕ ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿಯ ಕ್ರಾಂತಿಯೇ ನಡೆದಿದೆ ಎನ್ನಬಹುದು. ಈ ಎಲ್ಲಾ ಸಂಗತಿಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನದ ಮುಖ್ಯ ಫಲಿತಗಳನ್ನು ಈ ಕೆಳಗಿನಂತೆ ಗುರುತಿಸಿಕೊಳ್ಳಬಹುದಾಗಿದೆ.

ಭಾರತೀಯ ಸಂದರ್ಭದಲ್ಲಿ ಕಳೆದ ಎರಡು ದಶಕಗಳಿಂದೀಚೆಗೆ ಸ್ವಸಹಾಯ ಗುಂಪುಗಳು ಮತ್ತು ಕಿರು ಸಾಲಗಳ ನಡುವೆ ಅತ್ಯಂತ ನಿಕಟ ಸಂಬಂಧ ವ್ಯಾಪಿಸಿರುವುದನ್ನು ಕಾಣಬಹುದಾಗಿದೆ. ಕುಂದಾಪುರ ತಾಲೂಕಿನಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣದ ವಿಚಾರಕ್ಕೆ ಸಂಬಂಧಿಸಿ ಯೋಚಿಸುವುದಾದರೆ ಗ್ರಾಮಾಭಿವೃದ್ಧಿ ಯೋಜನೆಯು ತನ್ನ ಸ್ವಸಹಾಯ ಗುಂಪುಗಳ ಮೂಲಕ ಒದಗಿಸಿದ ಕಿರು ಸಾಲ ಆರ್ಥಿಕವಾಗಿ ದುರ್ಬಲರಾದ ಮಹಿಳೆಯರ ಬದುಕನ್ನು ಬೆಳಗಿದೆ. ಯೋಜನೆಯು ನೀಡುವ ಕಿರುಸಾಲವು ಇಲ್ಲಿನ ಮಹಿಳೆಯರಿಗೆ ಆದಾಯವನ್ನು ತರುವ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶಗಳನ್ನು ವಿಸ್ತರಿಸಿವೆ. ಯೋಜನೆಯ ಮೂಲಕ ಕಿರುಸಾಲದ ಪ್ರಯೋಜನ ಪಡೆದ ಇಲ್ಲಿನ ಮಹಿಳೆಯರು ಮಲ್ಲಿಗೆ ಕೃಷಿ, ಬಾಳೆ ಕೃಷಿ, ತರಕಾರಿ ಕೃಷಿ ಮೊದಲಾದ ಕೃಷಿಪೂರಕ ಚಟುವಟಿಕೆಗಳು ಸೇರಿದಂತೆ ಹೈನುಗಾರಿಕೆ, ತಟ್ಟೆ ತಯಾರಿ, ತಂಪು ಪಾನೀಯಗಳ ತಯಾರಿ, ವಿವಿಧ ಮಾದರಿಯ ತಿಂಡಿ ತಿನಿಸುಗಳ ತಯಾರಿ ಮೊದಲಾದ ಸ್ವ ಉದ್ಯೋಗ ಚಟುವಟಿಕೆಗಳನ್ನು ಕೈಗೊಂಡು ಹಂತ ಹಂತವಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಇಲ್ಲಿನ ಗ್ರಾಮೀಣ ಮಹಿಳೆಯರು ಯಾವುದೇ ರೀತಿಯ ಆಸ್ತಿಯ ದಾಖಲೆಗಳನ್ನು ಒದಗಿಸದೆ ಅತ್ಯಂತ ಸರಳ ಮಾರ್ಗಗಳನ್ವಯ ಈ ಕಿರುಸಾಲವನ್ನು ಪಡೆದಿದ್ದಾರೆ. ಮಾತ್ರವಲ್ಲ ಎಲ್ಲಾ ರೀತಿಯಿಂದಲೂ ಒತ್ತಡರಹಿತವಾಗಿ ಈ ಕಿರುಸಾಲವನ್ನು ಪಡೆದಿದ್ದಾರೆ. ಹೀಗೆ ಸಾಲಪಡೆದು ಕೈಗೊಂಡ ಕೃಷಿಪರ ಮತ್ತು ಸ್ವ ಉದ್ಯೋಗ ಚಟುವಟಿಕೆಗಳಲ್ಲಿ ನಿರೀಕ್ಷಿತ ಯಶಸ್ಸು ಕಂಡಿದ್ದಾರೆ. ಇದರಿಂದಾಗಿ ಈ ಮಹಿಳೆಯರಿಗೆ ಯಾರ ಹಂಗೂ ಇಲ್ಲದೆ ತಮ್ಮ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ. ತಾವು ಕೈಗೊಂಡ ಔದ್ಯೋಗಿಕ ಚಟುವಟಿಕೆಗಳ ಮೂಲಕ ಬರುವ ಆದಾಯದಿಂದ ಕಿರುಸಾಲವನ್ನು ಮರುಪಾವತಿ ಮಾಡಲು ಸುಲಭ ಸಾಧ್ಯವಾಗಿದೆ. ಬಹುತೇಕ ೧೦೦% ಮರುಪಾವತಿಯನ್ನು ಯೋಜನೆ ಕಂಡು ಅನುಭವಿಸಿದೆ. ಕಿರು ಸಾಲ ಪಡೆದು ಸ್ವಉದ್ಯೋಗ ಕೈಗೊಂಡ

ಪರಿಣಾಮವಾಗಿ ನಿವ್ವಳ ಆದಾಯಗಳಿಕೆಯಲ್ಲಿ ಹಂತ ಹಂತವಾಗಿ ವೃದ್ಧಿಯಾಗುವುದರೊಂದಿಗೆ ಮಕ್ಕಳ ವಿದ್ಯಾಭ್ಯಾಸದ ವೆಚ್ಚ ಮತ್ತು ಮನೆಯ ನಿತ್ಯದ ನಿರ್ವಹಣೆ ಕುಂದಾಪುರದ ಗ್ರಾಮೀಣ ಮಹಿಳೆಗೆ ಹಗುರವೆನಿಸಿದೆ. ಆರ್ಥಿಕ ಸಂಕಷ್ಟದಿಂದ ಬದುಕಿನುದ್ದಕ್ಕೂ ಪರಾವಲಂಬಿಯಾಗಿದ್ದ ಈ ತಾಲೂಕಿನ ಗ್ರಾಮೀಣ ಮಹಿಳೆ ಇಂದು ಸ್ವಾವಲಂಬನೆಯ ಪಥದಲ್ಲಿ ಸಾಗುತ್ತಿದ್ದಾಳೆ. ಇದು ಸಬಲೀಕರಣದ ಪ್ರಥಮ ಮತ್ತು ದಿಟ್ಟ ಹೆಜ್ಜೆ ಎನಿಸಿದೆ. ಹೀಗೆ ಯೋಜನೆಯು ಕುಂದಾಪುರ ತಾಲೂಕಿನಲ್ಲಿ ಒದಗಿಸಿದ ಕಿರುಸಾಲದ ಸ್ವರೂಪ ಮತ್ತು ಪರಿಣಾಮಗಳ ಕುರಿತಂತೆ ಅಧ್ಯಯನದ ಸಂದರ್ಭದಲ್ಲಿ ನಡೆದ ಕ್ಷೇತ್ರಕಾರ್ಯದ ಫಲಿತಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಕಿರು ಸಾಲವೇ ಇಲ್ಲಿನ ಬಡವರಿಗೆ, ವಿಶೇಷವಾಗಿ ಮಹಿಳೆಯರಿಗೆ ಬೇಕಾಗುವ ಹಣಕಾಸಿನ ಆದ್ಯ ಸಹಾಯವಾಗಿದೆ.
- ಕಿರು ಸಾಲ ಸ್ವಾಭಾವಿಕವಾಗಿಯೇ ಕಿರು ಉದ್ಯೋಗವನ್ನು ಇಲ್ಲಿನ ಪರಿಸರದಲ್ಲಿ ಹುಟ್ಟುಹಾಕಿದೆ.
- ಬಹುತೇಕ ಮಂದಿ ಗ್ರಾಮೀಣ ಪ್ರದೇಶದ ಬಡ ಮಹಿಳೆಯರು ಸ್ವ ಉದ್ಯೋಗಿಗಳಾಗಲು ಯತ್ನಿಸಿದ್ದಾರೆ ಮತ್ತು ಸಣ್ಣ ಸಾಲದಿಂದ ಇದು ಸಾಧ್ಯ.
- ಬಡತನ ರೇಖೆಗಿಂತ ಸ್ವಲ್ಪ ಮೇಲಿರುವವರಿಗೆ ಈ ಕಿರು ಸಾಲ ಬೇಡ ಮತ್ತು ಅದನ್ನು ಅವರಿಗೆ ಕೊಟ್ಟರೆ ಅದು ಮೂಲ ಗುರಿ ಹಾಗೂ ಉದ್ದೇಶದಿಂದ ವಿಮುಖವಾದ ಕಾರ್ಯಕ್ರಮವಾಗುತ್ತದೆ.

ಉಳಿತಾಯ ಮಾಡುವಿಕೆಯು ಸ್ವ ಸಹಾಯದ ಒಂದು ಮುಖ್ಯ ಘಟ್ಟ. ಕುಂದಾಪುರ ತಾಲೂಕಿನ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳಲ್ಲಿ ಈ ಪ್ರಯತ್ನ ಅತ್ಯಂತ ಅಚ್ಚುಕಟ್ಟಾಗಿ ನಡೆದಿದೆ. ಇಲ್ಲಿ ಗುಂಪಿನ ಸದಸ್ಯರು ತಮ್ಮ ಉಳಿತಾಯದ ಹಣವನ್ನು ಕೂಡಿಸುವ ಮೂಲಕ ಮುಂದಿನ ಅನುಕೂಲತೆಗಳನ್ನು ಪಡೆಯುವುದಕ್ಕಾಗಿಯೇ ಸ್ವ ಸಹಾಯ ಗುಂಪುಗಳನ್ನು ರಚಿಸಿಕೊಂಡಿದ್ದಾರೆ. ಉಳಿತಾಯ ಮಾಡಬೇಕೆಂಬ ಕಾರಣದಿಂದಲೇ ಮಿತವ್ಯಯದ ಭಾವನೆಯು ಇಲ್ಲಿನ ಮಹಿಳೆಯರಲ್ಲಿ ಸಹಜವಾಗಿ ಬೆಳೆದಿದೆ. ಪ್ರತಿಯೊಂದು ಗುಂಪಿನಲ್ಲಿ ಯೋಜನೆಯ ವತಿಯಿಂದ ನಿಗದಿಪಡಿಸಲಾದ ಉಳಿತಾಯದ ಮೊಬಲಗನ್ನು ಪ್ರತಿಯೊಬ್ಬರೂ ನಿರಂತರವಾಗಿ ಮತ್ತು ಕಾಲಬದ್ಧವಾಗಿ ಪಾವತಿಸುತ್ತಾರೆ. ಆದ್ದರಿಂದ ವಾರದ ಉಳಿತಾಯಗಳು ಸ್ವ ಸಹಾಯ ಗುಂಪಿನ ಯಶಸ್ಸಿಗೆ ಅತಿ ಮುಖ್ಯ. ಇದಕ್ಕಾಗಿ ಉಳಿತಾಯ ಖಾತೆಯನ್ನು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನಲ್ಲಿ, ವಾಣಿಜ್ಯ ಬ್ಯಾಂಕಿನಲ್ಲಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕಿನಲ್ಲಿ ಮತ್ತು ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಶಾಖೆಯಲ್ಲಿ ತೆರೆಯಲು ಸಾಮಾನ್ಯವಾಗಿ ಅವಕಾಶ ಕಲ್ಪಿಸಿಕೊಡಲಾಗಿದೆ. ಸ್ವ ಸಹಾಯ

ಗುಂಪು ಪ್ರಾರಂಭಗೊಂಡ ಗ್ರಾಮವು ಯಾವ ಬ್ಯಾಂಕಿನ ಸೇವಾ ಪ್ರದೇಶ ವ್ಯಾಪ್ತಿಯಲ್ಲಿರುತ್ತದೋ ಆ ಬ್ಯಾಂಕಿನಲ್ಲಿ ಗುಂಪಿನ ಉಳಿತಾಯ ಖಾತೆಯನ್ನು ತೆರೆಯಲು ಅನುವು ಮಾಡಿಕೊಡಲಾಗಿದೆ.

ಸ್ವಸಹಾಯ ಗುಂಪಿನ ಪರಿಕಲ್ಪನೆ ಮತ್ತು ಅದರ ಚಟುವಟಿಕೆಗಳು ಗ್ರಾಮೀಣ ಮಹಿಳೆಯರಲ್ಲಿ ಉಳಿತಾಯದ ಅರಿವನ್ನು ಮೂಡಿಸಿವೆ. ಕುಂದಾಪುರ ತಾಲೂಕಿನಲ್ಲಿ ಈ ಪ್ರಯತ್ನ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಬಹುವಿಧಗಳಲ್ಲಿ ಸಾಕಾರಗೊಂಡಿದೆ. ಈ ಬಗೆಯ ಕಿರು ಉಳಿತಾಯ ಪ್ರವೃತ್ತಿ ಇಲ್ಲಿನ ಮಹಿಳೆಯರನ್ನು ಹಲವು ಬಗೆಯ ಅವಘಡಗಳಿಂದ ರಕ್ಷಿಸಿವೆ. ಇಲ್ಲಿನ ದೊಡ್ಡ ಸಂಖ್ಯೆಯ ಮಹಿಳೆಯರು ದಿನಗೂಲಿ ಕಾರ್ಮಿಕರಾಗಿ ಹೆಂಚಿನ ಕಾರ್ಖಾನೆಗಳಲ್ಲಿ, ಗೋಡಂಬಿ ಸಂಸ್ಕರಣಾ ಘಟಕಗಳಲ್ಲಿ ದುಡಿಯುತ್ತಿದ್ದಾರೆ. ಬೀಡಿ ಕಟ್ಟುವ ಕೆಲಸದಲ್ಲಿ ಒಂದಿಷ್ಟು ಮಂದಿ ತೊಡಗಿಕೊಂಡರೆ ಮತ್ತೆ ಹಲವರು ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಗ್ರಾಮಾಭಿವೃದ್ಧಿ ಯೋಜನೆ ಕುಂದಾಪುರ ತಾಲೂಕನ್ನು ಪ್ರವೇಶಿಸಿದ ಬಳಿಕ ಇಲ್ಲಿನ ಹಲವು ಗ್ರಾಮೀಣ ಮಹಿಳೆಯರು ಸ್ವ ಉದ್ಯೋಗ ಚಟುವಟಿಕೆಗಳಿಗೆ ಪರಿವರ್ತನೆಗೊಂಡಿದ್ದಾರೆ. ಯೋಜನೆಯ ಸ್ವಸಹಾಯ ಗುಂಪುಗಳು ಇಲ್ಲಿನ ಹಳ್ಳಿಗಳಲ್ಲಿ ತಳವೂರಿದ ಬಳಿಕ ತಮ್ಮ ದುಡಿಮೆಯ ಒಂದು ಭಾಗವನ್ನು ಉಳಿತಾಯ ಮಾಡುವ ಮನೋಧರ್ಮವನ್ನು ಕರಗತಗೊಳಿಸಿಕೊಂಡಿದ್ದಾರೆ. ಕುಂದಾಪುರ ತಾಲೂಕಿನಲ್ಲಿ ಯೋಜನೆಯ ಸ್ವಸಹಾಯ ಗುಂಪುಗಳ ಪ್ರತಿಯೊಬ್ಬ ಮಹಿಳಾ ಸದಸ್ಯರು ವಾರಕ್ಕೆ ತಲಾ ಹತ್ತು ರೂಪಾಯಿ ಉಳಿತಾಯ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಉಳಿತಾಯದ ಪ್ರಮಾಣ ಕೆಲವು ಸ್ವಸಹಾಯ ಗುಂಪುಗಳಲ್ಲಿ ಪ್ರತಿ ವಾರಕ್ಕೆ ಮುವತ್ತರಿಂದ ಐವತ್ತು ರೂಪಾಯಿಗಳಿಗೆ ವೃದ್ಧಿಯಾಗಿರುವುದು ಉಲ್ಲೇಖನೀಯ ಸಂಗತಿಯಾಗಿದೆ. ಈ ಸಂಗತಿಯು ಗ್ರಾಮೀಣ ಮಹಿಳೆಯರ ಜೀವನ ಮಟ್ಟದಲ್ಲಿ ಆಗಿರುವ ಪ್ರಗತಿ ಮತ್ತು ಯೋಜನೆಯ ಕಾರ್ಯತತ್ಪರತೆಗೆ ಹಿಡಿದ ಕೈಗನ್ನಡಿಯಾಗಿದೆ. ಸರಿಸುವಾರು ಆರು ತಿಂಗಳು ಉಳಿತಾಯ ಮಾಡಿದ ನಂತರದ ದಿನಗಳಲ್ಲಿ ಯೋಜನೆಯ ವತಿಯಿಂದ ಆಂತರಿಕ ಮತ್ತು ಪ್ರಗತಿನಿಧಿ ಸಾಲ ಪ್ರಾಪ್ತವಾಗುತ್ತದೆ. ಈ ಅವಧಿಯಲ್ಲಿ ಒಟ್ಟು ಉಳಿತಾಯದ ಮೊತ್ತಕ್ಕೆ ಹೋಲಿಸಿದರೆ ಆಯಾ ಸದಸ್ಯರುಗಳಿಗೆ ಯೋಜನೆಯ ವತಿಯಿಂದ ದೊರೆಯುವ ಸಾಲದ ಮೊತ್ತ ಸಾಕಷ್ಟು ಹೆಚ್ಚಾಗಿರುತ್ತದೆ. ಇದರಿಂದಾಗಿ ಫಲಾನುಭವಿಗಳು ತಾವು ಕೈಗೊಂಡ ವೃತ್ತಿಯಲ್ಲಿ ಮತ್ತು ಕೌಟುಂಬಿಕ ಕ್ರಿಯಾಚರಣೆಯಲ್ಲಿ ಧ್ಯರ್ಯದಿಂದ ಮುನ್ನುಗ್ಗಲು ಸಾಧ್ಯವೆನಿಸಿದೆ. ಇದು ಯೋಜನೆಯ ಮಹತ್ವದ ಹೆಗ್ಗಳಿಕೆಯಾಗಿದೆ. ಇದರಿಂದಾಗಿ ಹಳ್ಳಿಯ ಬಡಮಹಿಳೆಯರಿಗೆ ಸಂಕಷ್ಟದ ದಿನಗಳನ್ನು ಎದುರುಗೊಳ್ಳುವ ಮಾನಸಿಕ ಮತ್ತು ಸಾಮಾಜಿಕ ಸಾಮರ್ಥ್ಯ ಸಹಜವಾಗಿ ಒದಗಿಬಂದಿದೆ. ಯೋಜನೆ ಹುಟ್ಟುಹಾಕಿದ ಕಿರು ಉಳಿತಾಯದ ಪರಿಕಲ್ಪನೆ ಇಲ್ಲಿನ ಅನೇಕ ಕುಟೂಂಬಗಳಲ್ಲಿ ಬೃಹತ್ ಉಳಿತಾಯವಾಗಿ ರೂಪಾಂತರಗೊಂಡಿದೆ. ಇದರ ಪರಿಣಾಮವಾಗಿ ಕುಂದಾಪುರ ತಾಲೂಕಿನಲ್ಲಿ ಮಹಿಳೆಯರ ಬಲವರ್ಧನೆ ಪ್ರಕ್ರಿಯೆ ಯಶಸ್ಸಿನ ದಾಪುಗಾಲಿರಿಸಿದೆ. ಯೋಜನೆ ಪರಿಸಿದ

ಉಳಿತಾಯದ ಮಂತ್ರ ಹಳ್ಳಿಯ ಹೆಣ್ಣುಮಕ್ಕಳಲ್ಲಿ ಆತ್ಮಸ್ಥೈರ್ಯವನ್ನು ಬಲಗೊಳಿಸುವುದರೊಂದಿಗೆ ಸಮಾಜದ ಪ್ರಧಾನವಾಹಿನಿಯಲ್ಲಿ ತೆರೆದುಕೊಳ್ಳುವಂತೆ ಮಾಡಿವೆ.

ನೊಬೆಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನ್ ಹೇಳುವ ಪ್ರಕಾರ ಬಡತನವು ಕೇವಲ ಕಡಿಮೆ ಆದಾಯಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ; ಬದಲಾಗಿ ಅದು ವ್ಯಕ್ತಿಯ ಮೂಲಭೂತ ಆರ್ಥಿಕ ಹಾಗೂ ಸಾಮಾಜಿಕ ದೌರ್ಬಲ್ಯವನ್ನು ಸೂಚಿಸುವ ಕನ್ನಡಿಯಾಗಿದೆ. ಅನಾರೋಗ್ಯ, ಅಸ್ಪೃಶ್ಯತೆ, ಒಂಟಿತನ, ಜ್ಞಾನದ ಕೊರತೆ, ಆಸ್ತಿ ಅಥವಾ ಉದ್ಯೋಗ ಇಲ್ಲದೆ ಇರುವುದು ಇತ್ಯಾದಿಗಳು ಬಡತನವನ್ನು ಪ್ರತಿಬಿಂಬಿಸುತ್ತವೆ.

ಮೇಲ್ನೋಟಕ್ಕೆ ಪುರುಷ ಹಾಗೂ ಮಹಿಳೆಯ ಬಡತನ ಸಮಸ್ಯೆ ಒಂದೇ ರೀತಿಯಲ್ಲಿ ಇದೆ ಎಂದೆನಿಸಿದರೂ, ಸಾಮಾಜಿಕ, ಧಾರ್ಮಿಕ ಹಾಗೂ ಇತರ ಕಾರಣಗಳಿಂದ ಮಹಿಳೆಯ ಸಮಸ್ಯೆಯು ಪುರುಷನಿಗಿಂತ ಭಿನ್ನವೂ, ತೀವ್ರ ಸ್ವರೂಪದಿಂದ ಕೂಡಿದ್ದೂ ಆಗಿದೆ. ಅನಾದಿ ಕಾಲದಿಂದಲೂ ಮಹಿಳೆಯು ವಿದ್ಯೆ, ಆಸ್ತಿ, ಉದ್ಯೋಗ ಇತ್ಯಾದಿಗಳಿಂದ ಸತತವಾಗಿ ವಂಚಿತಳಾಗಿದ್ದಾಳೆ. ಇದು ಎಲ್ಲ ಮುಂದುವರಿದ ಹಾಗೂ ಅಭಿವೃದ್ಧಿಶೀಲ ದೇಶಗಳಿಗೆ ಅನ್ವಯವಾಗುವ ಸ್ಥಿತಿಗತಿ. ೧೯೯೫ರ ಯು.ಎನ್.ಡಿ.ಪಿ. ವರದಿ ಪ್ರಕಾರ ವಿಶ್ವವ್ಯಾಪಿ ಒಟ್ಟಾರೆ ಬಡತನದಲ್ಲಿ ಮಹಿಳೆಯರ ಪಾಲು ಶೇ. ೭೦ರಷ್ಟು, ಇನ್ನೊಂದೆಡೆ ವಿಶ್ವದ ಒಟ್ಟು ಸಂಪತ್ತಿನಲ್ಲಿ ಶೇ. ೧ ರಷ್ಟು ಮಾತ್ರ ಮಹಿಳೆಯ ಒಡೆತನದಲ್ಲಿದೆ. ಆರ್ಥಿಕ ದೃಷ್ಟಿಕೋನದಿಂದ ಮಹಿಳೆಯು ಪುರುಷನ ಹಾಗೆ ಪ್ರಮುಖ ಮಾನವ ಸಂಪನ್ಮೂಲ. ಆಕೆಯ ಅರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಉನ್ನತಿಯು ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯ ಮೇಲೆ ಪರಣಾಮ ಬೀರುವುದರಿಂದ ಭಾವೀ ಮಾನವ ಸಂಪನ್ಮೂಲದ ಗುಣಮಟ್ಟವನ್ನು ಅದು ನಿರ್ಧರಿಸುತ್ತದೆ. ಆಕೆಯ ಆರ್ಥಿಕ ಸ್ವಾವಲಂಬನೆಯು ಕುಟುಂಬದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.

ಗ್ರಾಮಾಭಿವೃದ್ಧಿ ಯೋಜನೆಯು ಕುಂದಾಪುರ ತಾಲೂಕಿನಲ್ಲಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಪ್ರತಿನಿಧಿಸುತ್ತಿರುವ ಗ್ರಾಮೀಣ ಮಹಿಳೆಯರ ಸಮಗ್ರ ಶ್ರೇಯೋಭಿವೃದ್ಧಿಗೆ ಮಹತ್ವದ ಕಾರ್ಯಯೋಜನೆಗಳನ್ನು ರೂಪಿಸಿ, ಕಾರ್ಯಗತಗೊಳಿಸಿಕೊಂಡು ಬಂದಿದೆ. ಹೀಗೆ ಮಹಿಳಾಪರ ಕಾರ್ಯಕ್ರಮಗಳನ್ನು ರೂಪಿಸುವ ಹಂತದಲ್ಲಿ ಇಲ್ಲಿನ ಭೌಗೋಳಿಕ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಯೋಜಿಸಲಾಗಿದೆ. ಇಲ್ಲಿನ ದೊಡ್ಡ ಸಂಖ್ಯೆಯ ಮಹಿಳೆಯರು ವೃತ್ತಿಯಿಂದ ಕೂಲಿ ಕಾರ್ಮಿಕರಾಗಿದ್ದು ಅವರ ದೈನಂದಿನ ಅಗತ್ಯಗಳಿಗೆ ಅನುಕೂಲವಾಗುವಂತೆ ಮತ್ತು ಅಲ್ಲಿ ಎದುರಾಗುವ ಸಾಂದರ್ಭಿಕ ಸಮಸ್ಯೆಗಳನ್ನು ಮನಗಂಡು ಮಹತ್ವದ ಕಾರ್ಯಕ್ರಮಗಳನ್ನು ಮತ್ತು ಸಾಲಯೋಜನೆಯನ್ನು ರೂಪಿಸಲಾಗಿದೆ. ಇಲ್ಲಿನ ಗ್ರಾಮೀಣ ಮಹಿಳೆಯರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬಲವರ್ಧನೆಗಾಗಿ

ಯೋಜನೆಯು ವಿಶಿಷ್ಟ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದೆ. ಯೋಜನೆಯ ಪಾಲುದಾರರಾದ ಅನೇಕ ಮಂದಿ ಗ್ರಾಮೀಣ ಮಹಿಳೆಯರು ಸ್ವಸಹಾಯ ಗುಂಪಿಗೆ ಸೇರಿದ ಬಳಿಕ ತಮ್ಮದೇ ಗುಂಪಿನ ಯುವತಿಯರಿಂದ ಅಕ್ಷರದ ಬೆಳಕು ಕಂಡಿದ್ದಾರೆ. ಅದೇ ವೇಳೆಗೆ ಸಂಘದ ವಯೋವೃದ್ಧ ಮಹಿಳೆಯರ ಜೀವನಾನುಭವವನ್ನು ಯುವತಿಯರು ಪಡೆದುಕೊಂಡಿದ್ದಾರೆ. ಯೋಜನೆಯಿಂದ ಪ್ರವರ್ತಿಸಲ್ಪಟ್ಟ ಜೀವನ್ ಮಧುರ, ಸಂಪೂರ್ಣ ಸುರಕ್ಷಾ ಮೊದಲಾದ ಕಾರ್ಯಕ್ರಮಗಳು ಮುಖ್ಯವಾಗಿ ಇಲ್ಲಿನ ಗ್ರಾಮೀಣ ಮಹಿಳೆಯರ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಆರೋಗ್ಯವನ್ನು ಸದೃಢಗೊಳಿಸುವಲ್ಲಿ ಕ್ರಿಯಾತ್ಮಕವಾಗಿ ನೆರವಾಗಿವೆ. ಇಂತಹ ಹಲವು ನಿದರ್ಶನಗಳು ಅಧ್ಯಯನದ ಸಂದರ್ಭದಲ್ಲಿ ನಡೆದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಒದಗಿಬಂದಿವೆ. ಜ್ಞಾನವಿಕಾಸ ಕಾರ್ಯಕ್ರಮಗಳು ಇಲ್ಲಿನ ಹಳ್ಳಿಗಳಲ್ಲಿ ಕ್ರಾಂತಿಕಾರಾಕ ಪರಿವರ್ತನೆಗಳನ್ನು ಉಂಟುಮಾಡಿವೆ. ಯೋಜನೆಯ ಈ ಎಲ್ಲಾ ಪ್ರಯೋಗಗಳು ಕುಂದಾಪುರ ತಾಲೂಕಿನ ಗ್ರಾಮೀಣ ಮಹಿಳೆಯರನ್ನು ಅಡುಗೆ ಮನೆಯ ನಾಲ್ಕು ಗೋಡೆಗಳಿಂದ ಹೊರಬರುವಂತೆ ಮತ್ತು ಅಡುಗೆ ಮನೆಯ ಚಟುವಟಿಕೆಗಳಲ್ಲಿ ಕ್ರಿಯಾಶೀಲರಾಗಿರುವಂತೆ ಮಾಡಿವೆ.

ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳು ಯಾವುದೇ ಜಾತಿ, ಕುಲ, ವರ್ಣದ ತಾರತಮ್ಯವಿಲ್ಲದೆ ಸಮಾನ ಸಾಮಾಜಿಕ ಹಾಗೂ ಆರ್ಥಿಕ ಮಟ್ಟವನ್ನು ಹೊಂದಿವೆ. ಜಾತಿ, ವರ್ಗ, ಲಿಂಗ ಮತ್ತು ವರ್ಣ ತಾರತಮ್ಯವಿಲ್ಲದೆ ಎಲ್ಲರೂ ಸಾಮರಸ್ಯದಿಂದ ಬದುಕಲು ಅನುಕೂಲವಾಗುವಂತೆ ಯೋಜನೆ ತನ್ನ ಕಾರ್ಯಕ್ರಮಗಳನ್ನು ರೂಪಿಸಿದೆ. ಕುಂದಾಪುರ ತಾಲೂಕಿನಲ್ಲಿ ಈ ಪ್ರಯೋಗ ಬಹುಮಟ್ಟಿನ ಯಶಸ್ಸು ಕಂಡಿದೆ. ಇದರೊಂದಿಗೆ ಯೋಜನೆಯ ಕಾರ್ಯಕ್ರಮಗಳು ಸಾಮುದಾಯಿಕ ಪಾಲ್ಗೊಳ್ಳುವಿಕೆಗೆ ಬಾಧಕವೆನಿಸುವ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಅಂಶಗಳನ್ನು ಪ್ರಶ್ನಿಸುತ್ತ ಬಂದಿವೆ. ಸಾಮೂಹಿಕ ಭಜನೆ, ಸಾರ್ವಜನಿಕ ಸತ್ಯನಾರಾಯಣ ಪೂಜೆ ಮೊದಲಾದ ಒಗ್ಗೂಡುವಿಕೆಯ ಕಾರ್ಯಕ್ರಮಗಳು ಕುಂದಾಪುರ ತಾಲೂಕಿನಲ್ಲಿ ಅಭೂತಪೂರ್ವ ಯಶಸ್ಸು ಕಂಡಿವೆ. ವಿಷಮಗೊಳ್ಳುತ್ತಿರುವ ಇಂದಿನ ರಾಜಕೀಯ, ಸಾಮಾಜಿಕ ಸನ್ನಿವೇಶದಲ್ಲಿ ಈ ಪ್ರಯೋಗಗಳು ಸಾಂದರ್ಭಿಕ ಔಚಿತ್ಯವನ್ನು ಪಡೆದುಕೊಂಡಿವೆ. ಮನುಷ್ಯ ಸಂಬಂಧಗಳು ವಿಭಿನ್ನ ನೆಲೆಗಳಲ್ಲಿ ಹಂತ ಹಂತವಾಗಿ ವಿಘಟಿತಗೊಳ್ಳುತ್ತಿರುವ ಆಧುನಿಕ ಸಂದರ್ಭದಲ್ಲಿ ಸ್ವಸಹಾಯ ಗುಂಪುಗಳು ಹುಟ್ಟುಹಾಕಿದ ಸಹಬಾಳ್ವೆಯ ಪರಿಕಲ್ಪನೆ ಇಲ್ಲಿನ ಮಹಿಳೆಯರಲ್ಲಿ ಅರಿವಿನ ಜ್ಯೋತಿ ಬೆಳಗಿಸಿವೆ. ಯೋಜನೆಯ ಅಧ್ಯಕ್ಷರು, ಆಡಳಿತ ಮತ್ತು ನಿರ್ದೇಶಕ ಮಂಡಳಿಯ ಸದಸ್ಯರುಗಳ ಸಲಹೆ, ಮಾಹಿತಿ, ತರಬೇತಿ ಪಡೆದು ಈ ಮಾದರಿಯ ಕೆಲಸಗಳು ಕುಂದಾಪುರ ಪರಿಸರದಲ್ಲಿ ನಿರ್ವಹಣೆಗೊಳ್ಳುತ್ತದೆ. ಮೂಲಭೂತ ಸೌಕರ್ಯಗಳಾದ ಸಾರಿಗೆ, ಸಂಪರ್ಕ, ಬ್ಯಾಂಕಿಂಗ್ ಇತ್ಯಾದಿಗಳು ಸ್ವ ಸಹಾಯ ಸಂಘಗಳ ಮೂಲಕ ನಡೆಸಲಾಗುವ ಸಣ್ಣ ಪ್ರಮಾಣದ ಆರ್ಥಿಕ

ಚಟುವಟಿಕೆಗಳಿಗೆ ಪೂರಕ ಅಂಶಗಳೆಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಯಾವುದೇ ಒಂದು ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳು ಉನ್ನತ ಮಟ್ಟದಲ್ಲಿದ್ದರೆ, ಅದು ಮಾಹಿತಿ ರವಾನೆ ಮತ್ತು ಉತ್ಪನ್ನ ಮಾರುಕಟ್ಟೆಗೆ ಪೂರಕವಾಗಿದ್ದು, ಆ ಮೂಲಕ ಸ್ವ ಸಹಾಯ ಸಂಘಗಳು ದೇಶದ ಆರ್ಥಿಕ ಕ್ರಿಯೆಗೆ ಧನಾತ್ಮಕವಾಗಿ ಸ್ಪಂದಿಸಬಲ್ಲವು. ಸ್ವ ಸಹಾಯ ಸಂಘವು ದೀರ್ಘಾವಧಿಯಲ್ಲಿ ಒಂದು ಸ್ವ ಸಹಾಯ ಆಡಳಿತ ವ್ಯವಸ್ಥೆಯಾಗಿರುವುದರಿಂದ, ಸದಸ್ಯರು ಉನ್ನತ ಶಿಕ್ಷಣವನ್ನು ಹೊಂದಿದ್ದರೆ, ಸಂಘದ ನಿಯಮಾವಳಿಗಳನ್ನು ಶೀಘ್ರವಾಗಿ ಗ್ರಹಿಸಿ, ಮುನ್ನಡೆಯಲು ಸಾಧ್ಯವಾಗುತ್ತದೆ. ಕುಂದಾಪುರ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಈ ಮಾದರಿಯ ಪ್ರಗತಿ ಮತ್ತು ಸಾಧನೆಗೆ ಮುನ್ಸೂಚನೆ ನೀಡಿವೆ ಎಂಬುದು ಅಧ್ಯಯನ ಕೇಂದ್ರಿತ ಕ್ಷೇತ್ರಕಾರ್ಯದ ಮೂಲಕ ದೃಢಪಟ್ಟಿದೆ.

ಕುಂದಾಪುರ ತಾಲೂಕಿನ ಗ್ರಾಮಾಭಿವೃದ್ಧಿ ಯೋಜನೆಯ ಸ್ವ ಸಹಾಯ ಗುಂಪುಗಳಲ್ಲಿ ಅತೀ ಹೆಚ್ಚು ಅಂದರೆ ಶೇ. ೭೦ರಷ್ಟು ಮಹಿಳೆಯರೇ ಸದಸ್ಯರಾಗಿರುವ ಹಿನ್ನೆಲೆಯಲ್ಲಿ ಸಂಘದ ಭವಿಷ್ಯ ಭದ್ರವಾಗಿದೆ ಮಾತ್ರವಲ್ಲ ಸ್ವಸಹಾಯದ ಪರಿಕಲ್ಪನೆಯೂ ಸಹ ಪ್ರಾಯೋಗಿಕ ನೆಲೆಯಲ್ಲಿ ಸಾಕಾರಗೊಂಡಿದೆ ಇಲ್ಲಿನ ಸ್ವಸಹಾಯ ಗುಂಪುಗಳ ಮಹಿಳಾ ಸದಸ್ಯರುಗಳು ತಮ್ಮ ವೃತ್ತಿ ಮತ್ತು ಉಳಿತಾಯ ಪ್ರವೃತ್ತಿಯಲ್ಲಿ ಕಾಯ್ದುಕೊಂಡ ಬದ್ದತೆ ಸಾಮಾಜಿಕ ವ್ಯವಸ್ಥೆ ಮತ್ತು ಸಂಬಂಧದ ನೆಲೆಗಳಿಗೆ ಆದರ್ಶಪ್ರಾಯವಾದುದು. ಮಾತ್ರವಲ್ಲ ಸರಕಾರದ ಅನೇಕ ಜನಪರ ಮತ್ತು ಅಭಿವೃದ್ಧಿಪರ ಯೋಜನೆಗಳ ಸದುಪಯೋಗ ಪಡೆಯುವ ಹಂತದಲ್ಲಿ ಯೋಜನೆಯ ಮಹಿಳಾ ಸದಸ್ಯರುಗಳು ನಿರ್ಣಾಯಕ ಪಾತ್ರವಹಿಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕುಂದಾಪುರ ತಾಲೂಕಿನಲ್ಲಿ ಬೃಹತ್ ಪ್ರಮಾಣದ ಯಶಸ್ಸು ಮತ್ತು ಮಹತ್ವದ ಪ್ರಗತಿಯನ್ನು ಸಾಧಿಸಿರುವ ನಡುವೆಯೂ ಕೆಲವು ವಿಚಾರಗಳಲ್ಲಿ ತನ್ನದೇ ಮಿತಿಗಳನ್ನು ಹೊಂದಿದೆ. ಯೋಜನೆಯ ಕೆಲವು ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ನಿರೀಕ್ಷೆಗೂ ಮೀರಿದ ಮತ್ತು ನಿರೀಕ್ಷಿತ ಗುರಿಯನ್ನು ತಲುಪಿದರೆ, ಇನ್ನು ಕೆಲವು ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ನಿರೀಕ್ಷಿತ ಮಟ್ಟವನ್ನು ತಲುಪಿಲ್ಲ. ಯೋಜನೆಯ ಒಂದಿಷ್ಟು ಕಾರ್ಯಕ್ರಮಗಳು ಅನೇಕ ಫಲಾನುಭವಿಗಳನ್ನು ಸಕಾಲದಲ್ಲಿ ಪಾರದರ್ಶಕವಾಗಿ ತಲುಪಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಫಲಾನುಭವಿಗಳು ಯೋಜನೆಯ ಕಾರ್ಯಕ್ರಮಗಳ ಪ್ರಯೋಜನವನ್ನು ಪರಿಣಾಮಕಾರಿಯಾಗಿ ಪಡೆಯುವ ಹಂತದಲ್ಲಿ ಪೂರ್ಣ ಪ್ರಮಾಣದ ಸಾಫಲ್ಯವನ್ನು ಕಂಡಿಲ್ಲ ಎನ್ನಬಹುದು. ಕುಂದಾಪುರ ತಾಲೂಕಿನಲ್ಲಿ ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಗೆ ಸಂಬಂಧಿಸಿದಂತೆ ಯೋಜನೆಯ ಚಟುವಟಿಕೆಗಳ ಸಾಮಾನ್ಯ ಮಿತಿಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

- ಯೋಜನೆಯ ಚಟುವಟಿಕೆಗಳು ಕುಂದಾಪುರ ತಾಲೂಕಿನ ಎಲ್ಲಾ ಗ್ರಾಮಗಳನ್ನು ಸಮಾನ ನೆಲೆಯಲ್ಲಿ ತಲುಪಿಲ್ಲ.

- ಯೋಜನೆಯು ಇತ್ತೀಚಿನ ವರ್ಷಗಳಲ್ಲಿ ತನ್ನ ಆಂತರಿಕ ಮತ್ತು ಪ್ರಗತಿನಿಧಿ ಸಾಲದ ಮೇಲೆ ವಿಧಿಸಿದ ಬಡ್ಡಿದರದ ಕುರಿತು ಬಹುತೇಕ ಫಲಾನುಭವಿಗಳಲ್ಲಿ ಅಸಮಾಧಾನವಿದೆ.

- ಯೋಜನೆಯ ಕೆಲವು ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾಲದಿಂದ ಕಾಲಕ್ಕೆ ಬದಲಾವಣೆಗೊಳ್ಳುತ್ತಿರುವ ಕೆಲವು ನಿಯಮಗಳು ಒಂದಿಷ್ಟು ಫಲಾನುಭವಿಗಳಿಗೆ ಜಟಿಲವೆನಿಸಿದೆ ಮಾತ್ರವಲ್ಲ ಒಂದಿಷ್ಟು ಗೊಂದಲವನ್ನು ಉಂಟುಮಾಡಿವೆ.

- ಯೋಜನೆಯು ಆರ್ಥಿಕವಾಗಿ ಮತ್ತು ಸಾಮಾಜಿಕ ಅವಕಾಶಗಳಿಂದ ವಂಚಿತವಾದ ಸಮುದಾಯಗಳು ಹೆಚ್ಚಾಗಿ ನೆಲೆಸಿರುವ ಪ್ರದೇಶಗಳ ಕಡೆ ಇನ್ನಷ್ಟು ಗಮನ ನೀಡಬೇಕಾಗಿದೆ.

- ಯೋಜನೆಯು ಮುಖ್ಯವಾಗಿ ಕುಂದಾಪುರ ತಾಲೂಕಿನ ಬೇರೆ ಬೇರೆ ಹಳ್ಳಿಗಳಲ್ಲಿ ನೆಲೆಸಿರುವ ಬುಡಕಟ್ಟು ಜನಾಂಗದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಶ್ರೇಯೋಭಿವೃದ್ಧಿಗೆ ಇನ್ನಷ್ಟು ಶ್ರಮಿಸಬೇಕಾಗಿದೆ.

- ಯೋಜನೆಯು ಕಳೆದ ಹಲವು ವರ್ಷಗಳಿಂದ ವಿವಿಧ ಹಳ್ಳಿಗಳಲ್ಲಿ ಮದ್ಯವರ್ಜನ ಶಿಬಿರಗಳನ್ನು ಆಯೋಜಿಸಿಕೊಂಡು ಬರುತ್ತಿದೆ. ಅಂತೆಯೇ ಸಮಾಜವನ್ನು ಅತಿಯಾಗಿ ಕಾಡುತ್ತಿರುವ ವರದಕ್ಷಿಣೆಯಂತಹ ಪಿಡುಗುಗಳ ಕುರಿತು ಜಾಗೃತಿ ಮೂಡಿಸಬೇಕಾಗಿದೆ.

- ಯೋಜನೆಯು ತನ್ನ ಫಲಾನುಭವಿ ಮಹಿಳೆಯರನ್ನು ಗೊಡ್ಡು ಸಾಂಪ್ರದಾಯಿಕ ಆಚರಣೆಗಳು ಮತ್ತು ಅಂಧಾನುಕರಣೆಯಿಂದ ಬಿಡುಗಡೆಗೊಳಿಸಬೇಕಾಗಿದೆ.

- ಯೋಜನೆಯು ದುಂದು ವೆಚ್ಚ ಮಾಡುವ ಧಾರ್ಮಿಕ ಮತ್ತು ಸಾಮಾಜಿಕ ಆಚರಣೆಗಳಿಂದ ಗ್ರಾಮೀಣ ಮಹಿಳೆಯರನ್ನು ರಕ್ಷಿಸಬೇಕಾಗಿದೆ.

- ಸ್ವಸಹಾಯ ಗುಂಪಿನ ಬಹುಮುಖಿ ಚಟುವಟಿಕೆಗಳ ಮೂಲಕ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಸಾಧ್ಯವಿದೆ. ಆದರೆ ಮಹಿಳೆಯರ ಸರ್ವತೋಮುಖ ಶ್ರೇಯೋಭಿವೃದ್ಧಿಯ

ಹಿನ್ನೆಲೆಯಲ್ಲಿ ಪುರುಷಕೇಂದ್ರಿತ ಆಲೋಚನೆಗಳು ಮತ್ತು ಪುರುಷನ ಆಚಾರ ವಿಚಾರಗಳು ತೀವ್ರವಾದ ಪ್ರಭಾವ ಬೀರಿರುವುದನ್ನು ಅಧ್ಯಯನ ಗಮನಿಸಿದೆ.

ಭಾರತ ಪ್ರಾಚೀನ ಕಾಲದಿಂದಲೂ ಸಾಮಾಜಿಕ, ಧಾರ್ಮಿಕ ಕಟ್ಟುಪಾಡು ಮತ್ತು ಸಂಪ್ರದಾಯಬದ್ಧ ವ್ಯವಸ್ಥೆಗೆ ತೆರೆದುಕೊಂಡ ದೇಶ, ಮದುವೆಯಾದ ಮಹಿಳೆಗೆ ಗಂಡ ಎಂಥವನಾದರೂ ಆತನೊಡನೆ ಬದುಕುವುದು ಶೋಭೆ ಎಂಬುದು ಇಲ್ಲಿನ ಬದುಕಿನ ಪರಿಪಾಠ. ಇದು ಕುಂದಾಪುರ ತಾಲೂಕಿಗೂ ಹೊರತಾಗಿಲ್ಲ. ಇಂದಿಗೂ ಸಹ ಇಲ್ಲಿನ ಅನೇಕ ಮಂದಿ ಗ್ರಾಮೀಣ ಮಹಿಳೆಯರು ಹಲವು ಸಂದರ್ಭದಲ್ಲಿ ಗಂಡನ ಕೆಟ್ಟ ವಿಚಾರ ಮತ್ತು ನಡವಳಿಕೆಗಳನ್ನು ಸಹಿಸಿಕೊಂಡು ಬದುಕುತ್ತಿದ್ದಾರೆ. ಆರ್ಥಿಕ ಸ್ವಾತಂತ್ರ್ಯ ಹೊಂದಿದ್ದರೂ ಆಕೆ ಸಮಾಜಕ್ಕೆ ಹೆದರಿ, ಆತನಿಂದ ಬೇರ್ಪಟ್ಟು ಪ್ರತ್ಯೇಕವಾಗಿ ಬದುಕಲು ಇಚ್ಛಿಸುವುದಿಲ್ಲ. ಅಲ್ಲದೆ ಪುರುಷನ ಅಪ್ಪಣೆಯನ್ನು ಮೀರಲಾಗದೆ, ಮಹಿಳೆ ಸ್ವ ಸಹಾಯ ಸಂಘದ ಸೇವೆಯಿಂದ ವಂಚಿತಳಾದ ಹಲವು ನಿದರ್ಶನಗಳು ಇಲ್ಲಿವೆ. ಆದ್ದರಿಂದ ಮಹಿಳೆಯರ ಆರ್ಥಿಕ ಸಬಲೀಕರಣ ಮಾತ್ರ ಸ್ವ ಸಹಾಯ ಗುಂಪಿನ ಕರ್ತವ್ಯವಾಗಿ ಉಳಿಯಬಾರದು. ಗ್ರಾಮೀಣ ಮಹಿಳೆಯರಿಗೆ ಸಾಮಾಜಿಕ ಮತ್ತು ಭಾವನಾತ್ಮಕ ಸ್ಥೈರ್ಯವನ್ನು ತುಂಬಿಸುವ ಕಾರ್ಯ ವಿಶೇಷವಾಗಿ ಕುಂದಾಪುರ ತಾಲೂಕಿನಲ್ಲಿ ನಡೆಯಬೇಕಾಗಿರುವ ಅಗತ್ಯವನ್ನು ಅಧ್ಯಯನ ಮನಗಂಡಿದೆ.

ಕುಂದಾಪುರ ತಾಲೂಕಿನ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಯೋಜನೆಯ ಫಲಾನುಭವಿ ಮಹಿಳೆಯರು ಯೋಜನೆಯ ಪಾಲುದಾರರಾದ ನಂತರದ ದಿನಗಳಲ್ಲಿ ಬಡತನದ ಕಪಿಮುಷ್ಟಿಯಿಂದ ಹೊರಬರಲು ಹತ್ತಿಯ ನಾರಿನಿಂದ, ತೆಂಗಿನ ನಾರಿನಿಂದ ಹಗ್ಗ ತಯಾರಿಕೆ, ಉಪ್ಪಿನಕಾಯಿ ತಯಾರಿಕೆ, ಸಾಂಬಾರ ಪದಾರ್ಥಗಳ ತಯಾರಿಕೆ, ಜೇನುತುಪ್ಪ ಮತ್ತು ಆಹಾರ ಸಂಸ್ಕರಣೆ, ಅಗರಬತ್ತಿ ತಯಾರಿಕೆ, ಬೇಕರಿ ಉತ್ಪನ್ನಗಳ ತಯಾರಿ ಮೊದಲಾದ ಸ್ವ ಉದ್ಯೋಗದ ಚಟುವಟಿಕೆಗಳನ್ನು ಅವಲಂಬಿಸಿದ್ದಾರೆ. ಈ ಬಗೆಯ ಔದ್ಯೋಗಿಕ ಚಟುವಟಿಕೆಗಳು ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುವುದರ ಜೊತೆಗೆ ಅವರಲ್ಲಿ ಮಾನಸಿಕ, ಭಾವನಾತ್ಮಕ ಮತ್ತು ಸಾಮಾಜಿಕ ದೃಢತೆಯನ್ನು ವೃದ್ಧಿಸಿದೆ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಈ ಸ್ವ ಉದ್ಯೋಗ ಚಟುವಟಿಕೆಗಳು ಸ್ವಸಹಾಯ ಗುಂಪಿನ ಮಹಿಳೆಯರ ಸಾಮುದಾಯಿಕ ಪ್ರಯತ್ನದ ಭಾಗವಾಗಿ ರೂಪ ಪಡೆದಿದ್ದು ಯೋಜನೆಯ ಸಮಗ್ರ ಆರ್ಥಿಕ ಚಟುವಟಿಕೆಗಳಲ್ಲಿ ದೊಡ್ಡ ಪಾಲು ಹೊಂದಿವೆ. ಇಲ್ಲಿ ಉತ್ಪನ್ನಗಳನ್ನು ಸ್ಥಳೀಯ ಬೇಡಿಕೆಯನ್ನು ಆಧರಿಸಿ ತಯಾರಿಸಲಾಗುತ್ತವೆ ಮತ್ತು ಸ್ಥಳೀಯವಾಗಿಯೇ ಮಾರುಕಟ್ಟೆಯನ್ನು ಕಂಡುಕೊಳ್ಳಲಾಗಿದೆ. ಈ ರೀತಿಯ ಸಮುದಾಯ ಆಧಾರಿತ ಆರ್ಥಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ ಯೋಜನೆಯು ತನ್ನ ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯರುಗಳಿಗೆ ಪಾಲುದಾರಿಕಾ ನಿರ್ವಹಣೆಯೊಂದಿಗೆ ನಾಯಕತ್ವ ಮತ್ತು

ಸದಸ್ಯತನದ ಬಗ್ಗೆ ತರಬೇತಿ ನಿಡಿದೆ. ಇದೇ ವೇಳೆಗೆ ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯರು ತಯಾರಿಸುವ ಉತ್ಪನ್ನಗಳ ಗುಣಮಟ್ಟವನ್ನು ನಿರಂತರವಾಗಿ ಕಾಯ್ದುಕೊಳ್ಳುವ ಉದ್ದೇಶದಿಂದ ಈ ಹಂತದಲ್ಲಿ ಅವರಿಗೆ ಉದ್ಯಮಶೀಲತಾ ತರಬೇತಿ ನೀಡುವುದರೊಂದಿಗೆ ಯಶಸ್ವೀ ಸಣ್ಣ ಉದ್ದಿಮೆಗಳಿಗೆ ಭೇಟಿ ನೀಡುವ ಕಾರ್ಯಕ್ರಮವನ್ನು ಯೋಜನೆಯ ವತಿಯಿಂದ ಹಮ್ಮಿಕೊಂಡಿರುವುದು ಕ್ಷೇತ್ರಕಾರ್ಯದ ಮೂಲಕ ತಿಳಿದುಬಂದಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಳೆದ ಮೂರು ದಶಕಗಳಿಂದೀಚೆಗೆ ಸರಕಾರವೇ ಬೆರಗುಪಡುವಂತಹ ಸಾಧನೆ ಮಾಡಿದೆ ಎಂಬುದು ಅತಿಶಯೋಕ್ತಿಯಲ್ಲ. ಕಳೆದ ಆರೇಳು ವರ್ಷಗಳಿಂದೀಚೆಗೆ ಯೋಜನೆಯು ತನ್ನ ವಿಶಾಲವಾದ ಕಾರ್ಯವ್ಯಾಪ್ತಿಯ ಮತ್ತು ಅಘಾದ ಚಟುವಟಿಕೆಗಳ ಮೂಲಕ ಇಲ್ಲಿನ ಗ್ರಾಮೀಣ ಬಡಜನರನ್ನು ವಿಶೇಷವಾಗಿ ಮಹಿಳೆಯರನ್ನು ಬಲು ಹತ್ತಿರದಿಂದ ತಲುಪಿವೆ. ನಬಾರ್ಡ್ ನ ಸ್ವಸಹಾಯ ಗುಂಪಿನ ಪರಿಕಲ್ಪನೆ ಈ ಯೋಜನೆಯ ಮೂಲಕ ದೊಡ್ಡ ಮಟ್ಟದ ಯಶಸ್ಸು ಕಂಡಿದೆ. ಆ ಮೂಲಕ ಯೋಜನೆಯ ಸ್ವ ಸಹಾಯ ಸಂಘಗಳು ಮಹಿಳಾ ಸಬಲೀಕರಣದ ವಿಚಾರದಲ್ಲಿ ದಿಟ್ಟ ಹೆಜ್ಜೆ ಇಟ್ಟಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಎಲ್ಲ ರೀತಿಯ ಸಮಸ್ಯೆಗಳಿಗೆ ಸ್ವ ಸಹಾಯ ಸಂಘಗಳಿಂದ ಪರಿಹಾರ ನಿರೀಕ್ಷಿಸುವುದು ಕಷ್ಟ ಸಾಧ್ಯ. ಯಾವುದೇ ಆರ್ಥಿಕ ಮಾದರಿಯಿಂದ ಶೇ. ೧೦೦ ರಷ್ಟು ಪ್ರಗತಿ ಕನಸಿನ ಮಾತೇ ಸರಿ. ಆದರೂ ಸ್ವ ಸಹಾಯ ಗುಂಪಿನ ನಿಜವಾದ ಪ್ರತಿಫಲ ದೊರೆಯದೆ ಇರುವ ವರ್ಗಕ್ಕೆ ಅದರ ಫಲವನ್ನು ತಲುಪಿಸುವ ಪ್ರಯತ್ನ ಪ್ರಾಮಾಣಿಕವಾಗಿ ಕಾರ್ಯಗತಗೊಳ್ಳಬೇಕಾಗಿದೆ. ಕುಂದಾಪುರ ತಾಲೂಕಿನಲ್ಲಿ ಯೋಜನೆಯ ಮೂಲಕ ಈ ಪ್ರಯತ್ನ ತಕ್ಕ ಮಟ್ಟಿಗೆ ನಡೆದಿದೆ ಎನ್ನಬಹುದು, ಮುಂದಿನ ದಿನಗಳಲ್ಲಿ ಈ ಸಂಗತಿಯನ್ನು ಯೋಜನೆಯು ಆದ್ಯತೆಯ ಮೇರೆಗೆ ಗಮನಹರಿಸಬೇಕಾಗಿದೆ. ಇದರ ಜೊತೆಗೆ ಸ್ವ ಸಹಾಯ ಗುಂಪಿನ ಮಹಿಳಾ ಸದಸ್ಯರುಗಳು ಪರ್ಯಾಯ ಆರ್ಥಿಕ ಮಾದರಿಯನ್ನು ಸಹ ಕಂಡುಕೊಳ್ಳಬೇಕಾಗಿದೆ.

ಗ್ರಂಥ ಸೂಚಿ

೧. ಡಾ. ಇಂದಿರಾ ಆರ್, ಮಹಿಳೆ ಮತ್ತು ಕೌಟುಂಬಿಕ ಹಿಂಸೆ, ಶ್ರೀಮತಿ ಯಶೋಧ ರಾಗೌ ಟ್ರಸ್ಟ್, ಮೈಸೂರು, ೨೦೦೦.

೨. ಗಾಯತ್ರಿ ಎನ್, ಮಹಿಳಾ ಚಳುವಳಿಯ ಮಜಲುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮.

೩. ಡಾ. ಗಾಯತ್ರಿ ನಾವಡ, ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಸಿರಿ ಪ್ರಕಾಶನ, ಹೊಸಪೇಟೆ, ೧೯೯೯.

೪. ನೇಮಿಚಂದ್ರ, ಮಹಿಳಾ ಅಧ್ಯಯನ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧.

೫. ಬರಗೂರು ರಾಮಚಂದ್ರಪ್ಪ, ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು, ೧೯೯೨.

೬. ಮದುಕೀಶ್ವರ್, ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ಸಮತಾ ಅಧ್ಯಯನ ಕೇಂದ್ರ, ಮೈಸೂರು, ೧೯೯೬.

೭. ವಿಜಯಾ ದಬ್ಬೆ, ಮಹಿಳೆ–ಸಾಹಿತ್ಯ ಮತ್ತು ಸಮಾಜ, ರಚನಾ ಪ್ರಕಾಶನ, ಮೈಸೂರು, ೧೯೮೯.

೮. ನಂದಾ ಡಿ. ಎಸ್, ಮಹಿಳೆ ಮತ್ತು ಅಗ್ನಿ, ವಿಕಾಸ ಪ್ರಕಾಶನ, ಬೆಂಗಳೂರು, ೧೯೯೯.

೯. ಜ್ಯೋತಿ ಶಶಿಕುಮಾರ್, ಮಹಿಳಾ ಸಾಮಾಜಿಕತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೭.

೧೦. ಎನ್. ಕೆ ವರ್ಮಾ, ಮಾಧ್ಯಮ ಮತ್ತು ಮಹಿಳೆ, ಮೋಹಿತ್ ಪಬ್ಲಿಕೇಶನ್, ನವದೆಹಲಿ, ೨೦೦೬.

೧೧. ಜಿ. ವಿ ಜೋಶಿ ಮತ್ತು ನೋರ್ಬರ್ಟ್ ಲೋಬೋ, ಕರಾವಳಿ ಕರ್ನಾಟಕದ ಅರ್ಥವ್ಯವಸ್ಥೆ: ಹಿಂದಿನಿಂದ ಇಂದಿನವರೆಗೆ, ಮಂಗಳ ಪ್ರಕಾಶನ, ಮಂಗಳೂರು, ೨೦೦೯.

೧೨. ಚಂದ್ರ ಪೂಜಾರಿ ಎಂ. ಅಭಿವೃದ್ಧಿ ಅಧ್ಯಯನ– ದುಡಿಯುವ ಮಹಿಳೆಯ ಸಾಮಾಜಿಕ ಸ್ವರೂಪ, ಸಂಪುಟ ೭, ಸಂಚಿಕೆ ೧, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೯.

೧೩. ಕನರಾಡಿ ವಾದಿರಾಜ ಭಟ್ಟ, ಕುಂದಾಪುರ ತಾಲೂಕು ದರ್ಶನ, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೬.

೧೪. ನಾವಡ ಎ. ವಿ, ಕುಂದದರ್ಶನ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ, ೧೯೭೭.

೧೫. ಡಾ. ಮಾಲತಿ ಕೆ. ಮೂರ್ತಿ ಮತ್ತು ಡಾ. ಎಚ್. ವಿ ನರಸಿಂಹಮೂರ್ತಿ, ಕುಂದಾಪುರ ತಾಲೂಕು– ಒಂದು ಅಧ್ಯಯನ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ, ೧೯೯೪.

೧೬. ಡಾ. ಪ್ರಜ್ಞಾ ಅಮ್ಮೆಂಬಳ, ಶ್ರೀಕ್ಷೇತ್ರ ಧರ್ಮಸ್ಥಳ: ಬಹುಮುಖಿ ಅಧ್ಯಯನ, ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲಮಹಾ ಸಂಸ್ಥಾನ, ರಾಯಚೂರು, ೨೦೦೯.

೧೭. Centre For Development of Advanced Computing ಅವರ ಅಧ್ಯಯನ ಸಮೀಕ್ಷೆ

೧೮. ಡಾ. ಎಸ್.ಬಿ. ನಾಯಕ್, ಮಹಿಳೆಯರು ಸ್ವಾವಲಂಬಿಗಳಾಗಬೇಕು ಉದಯವಾಣಿ ಕನ್ನಡ ದೈನಿಕ, ಸೆಪ್ಟೆಂಬರ್ ೧೦, ೨೦೧೦
೧೯. ಟಿ.ಆರ್. ಚಂದ್ರಶೇಖರ್, ಮಹಿಳಾ ಮೀಸಲಾತಿ ಕೆಲವು ಸರಳ ಸಂಗತಿಗಳು, ಕೆಂಡ ಸಂಪಿಗೆ, ಅಂತರ್ಜಾಲ ಪತ್ರಿಕೆ, ಗುರುವಾರ, ೧೧ ಮಾರ್ಚ್ ೨೦೧೦.
೨೦. ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಇಲಾಖೆ ಇತ್ತೀಚೆಗೆ ನೀಡಿದ ವರದಿಯ ವಿವರಗಳು.
೨೧. Website: www.solutionexchange.net.in. ಕರ್ನಾಟಕ ಸಮುದಾಯ ಲೇಖನ.
೨೨. ಪ್ರಮೋದ ಜಿ.ಕೆ, ಶಿಕ್ಷಣದಿಂದ ಮಹಿಳಾ ಸಬಲೀಕರಣ ಸಾಧ್ಯ ಪ್ರಜಾವಾಣಿ ಕನ್ನಡ ದೈನಿಕ, ಶನಿವಾರ, ಜನವರಿ ೩೦, ೨೦೧೦.
೨೩. ಡಾ. ಜಯಶೀಲ, ಸುಧಾಕರ ಎಸ್. ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಆಯಾಮಗಳು,
೨೪. ಶೌಖತ್ ಅಲಿ, ಎಂ. ಮೇಗಲಮನಿ ಸ್ತ್ರೀಯರ ಸಬಲೀಕರಣದಲ್ಲಿ ಶಿಕ್ಷನದ ಪಾತ್ರ
೨೫. ಡಾ. ಜಿ.ವಿ. ಜೋಶಿ ಬಡತನ ನಿರ್ಮೂಲನ ಮತ್ತು ಮಹಿಳಾ ಸಬಲೀಕರಣದಲ್ಲಿ ಕಿರುಹಣಕಾಸಿನ ಪಾತ್ರ
೨೬. ದಿನೇಶ ಪಿ.ಟಿ., ಡಾ. ಶಿವಬಿತ್ತಪ್ಪ ಮಹಿಳೆಯರ ಆರ್ಥಿಕ ಸ್ವಾವಲಂಬನೆಯಲ್ಲಿ ಕಿರು ಹಣಕಾಸಿನ ಪಾತ್ರ
೨೭. ಡಾ. ಸುಜಾತ ಕೆ.ಎಸ್., ಡಾ. ಎ. ರಘುರಾಮ ಮಹಿಳಾ ಸಬಲೀಕರಣ, ಕಿರು ಸಾಲ ಮತ್ತು ಸ್ವ ಸಹಾಯ ಗುಂಪುಗಳು
೨೮. ಪ್ರಸಾದ ಎಸ್., ಡಾ|. ವಾಸುದೇವ ಸೇಡಂ.ಮಹಿಳೆ ಮತ್ತು ಸ್ವ ಸಹಾಯ ಸಂಘಗಳು, ಅವಕಾಶಗಳು ಮತ್ತು ಮಿತಿಗಳು
೨೯. ಡಾ. ಜಯಶೀಲ, ಡಾ. ಯೋಗೇಶ್ ಎಸ್.ಎನ್.ಗ್ರಾಮೀಣ ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವ ಸಹಾಯ ಗುಂಪುಗಳು

ಅನುಬಂಧ ೧

ಎಂ.ಫಿಲ್ ಪೌಢಪ್ರಬಂಧಕ್ಕಾಗಿ ಸಿದ್ಧಪಡಿಸಿದ ಪ್ರಶ್ನಾವಳಿ

ಮನವಿ

ನಾನು ಪ್ರತಿಮಾ, ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಎಂ.ಫಿಲ್ ಪದವಿಗಾಗಿ ಸಂಶೋಧನೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದೇನೆ. **'ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ: ಕುಂದಾಪುರ ತಾಲೂಕನ್ನು ಅನುಲಕ್ಷಿಸಿ'** ಎಂಬ ವಿಷಯದ ಕುರಿತು ಸಂಶೋಧನೆಯ ಕೆಲಸಗಳನ್ನು ನಿರ್ವಹಿಸುತ್ತಿದ್ದು, ಈ ಹಿನ್ನಲೆಯಲ್ಲಿ ಕೈಗೊಂಡ ಕ್ಷೇತ್ರಕಾರ್ಯದ ಅನುಕೂಲಕ್ಕಾಗಿ ಪ್ರಶ್ನಾವಳಿಯೊಂದನ್ನು ಸಿದ್ಧಪಡಿಸಿರುತ್ತೇನೆ. ಕುಂದಾಪುರ ತಾಲೂಕಿನಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳು ಇಲ್ಲಿನ ಗ್ರಾಮೀಣ ಬಡ ಮಹಿಳೆಯರ ಬದುಕನ್ನು ಪರಿಣಾಮಕಾರಿಯಾಗಿ ರೂಪಿಸಿದ ನೆಲೆಗಳ ಕುರಿತು ಅಧ್ಯಯನ ನಡೆಸುವುದು ನನ್ನ ಸಂಶೋಧನೆಯ ಕೇಂದ್ರ ಕಾಳಜಿಯಾಗಿದೆ. ತಾವು ದಯಮಾಡಿ ಈ ನನ್ನ ಪ್ರಶ್ನಾವಳಿಗೆ ಸಕಾಲಿಕವಾಗಿ ಪ್ರತಿಕ್ರಿಯಿಸಿ, ಅಗತ್ಯ ಮಾಹಿತಿಗಳನ್ನು ಒದಗಿಸಿ ಸಹಕರಿಸುವಂತೆ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇನೆ. ತಮ್ಮಿಂದ ಸಂಗ್ರಹಿಸಿದ ಮಾಹಿತಿ ಮತ್ತು ಅನುಭವಗಳನ್ನು ನನ್ನ ಸಂಶೋಧನೆಯ ಕೆಲಸಗಳಿಗಾಗಿ ಮಾತ್ರ ಬಳಸಿಕೊಳ್ಳುತ್ತೇನೆ ಹೊರತು ಬೇರೆ ಯಾವುದೇ ಉದ್ದೇಶಕ್ಕಾಗಲಿ ಬಳಸಿಕೊಳ್ಳುವುದಿಲ್ಲ ಎಂಬುದಾಗಿ ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ.

ವಂದನೆಗಳೊಂದಿಗೆ,

ದಿನಾಂಕ :

(ಪ್ರತಿಮಾ)

ಮಾಹಿತಿದಾರರ ವಿವರ

೧. ಪೂರ್ಣ ಹೆಸರು :

೨. ವಯಸ್ಸು :

೩. ಲಿಂಗ : ಪುರುಷ/ಮಹಿಳೆ

೪. ವಿದ್ಯಾರ್ಹತೆ

ಅ. ಪ್ರಾಥಮಿಕ ಶಿಕ್ಷಣ

ಆ. ಪ್ರೌಢ ಶಿಕ್ಷಣ

ಇ. ಪದವಿಪೂರ್ವ ಶಿಕ್ಷಣ

ಈ. ಪದವಿ ಶಿಕ್ಷಣ

ಉ. ನವಸಾಕ್ಷರ

ಊ. ಅನಕ್ಷರಸ್ಥ

೫. ವೃತ್ತಿ :

ಅ. ಕುಲಕಸುಬು

ಆ. ಕಾರ್ಮಿಕ

ಇ. ಕೃಷಿ

ಈ. ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ

ಉ. ಸರಕಾರಿ ಉದ್ಯೋಗ

೬. ವೈವಾಹಿಕ ಸ್ಥಿತಿ : ವಿವಾಹಿತರು/ಅವಿವಾಹಿತರು

೭. ಕುಟುಂಬದ ಸದಸ್ಯರುಗಳ ಸಂಖ್ಯೆ

ಪ್ರಶ್ನಾವಳಿ

೧. ನೀವು ಪ್ರತಿಸಿಧಿಸುವ ಸ್ವಸಹಾಯ ಗುಂಪಿನ ಹೆಸರು

೨. ಪ್ರಸ್ತುತ ಸ್ವಸಹಾಯ ಗುಂಪಿನಲ್ಲಿ ನೀವು ಪಡೆದಿರುವ ಸ್ಥಾನ

೩. ಕಳೆದ ಎಷ್ಟು ವರ್ಷಗಳಿಂದ ಸ್ವಸಹಾಯ ಗುಂಪಿನ ಚಟುವಟಿಕೆಗಳ ಜೊತೆ ಭಾಗಿಯಾಗಿದ್ದೀರಿ?

ಅ) ೧ – ೩ ವರ್ಷ ಆ) ೩ – ೬ ವರ್ಷ ಇ) ೬ಕ್ಕಿಂತ ಹೆಚ್ಚು

೪. ಸ್ವಸಹಾಯ ಗುಂಪಿನ ಸದಸ್ಯರಾಗಲು ನಿಮಗೆ ಆರಂಭದಲ್ಲಿ ಸಲಹೆ ನೀಡಿದವರು ಯಾರು?

ಅ) ಸೇವಾನಿರತರು

ಆ) ಸ್ವಸಹಾಯ ಗುಂಪಿನ ಸದಸ್ಯರು

ಇ) ಸ್ನೇಹಿತರು

ಈ) ಇತರೆ

೫. ಸ್ವಸಹಾಯ ಗುಂಪಿಗೆ ಸೇರಿಕೊಂಡ ಉದ್ದೇಶವೇನು?

ಅ)

ಆ)

ಇ)

೬. ಸ್ವಸಹಾಯ ಗುಂಪಿಗೆ ಸೇರಿದ ಬಳಿಕ ನಿಮ್ಮ ಆರ್ಥಿಕ ಸ್ಥಿತಿಯಲ್ಲಿ ಉಂಟಾಗಿರುವ ಬದಲಾವಣೆಯ ಸ್ವರೂಪ

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ ಈ) ಯಥಾಸ್ಥಿತಿ

೭. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿಗೆ ಸೇರುವ ಮೊದಲು ಬೇರೆ ಯಾವುದಾದರೂ ಸ್ವಸಹಾಯ ಗುಂಪಿನ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದೀರಾ? ಇದ್ದರೆ ವಿವರ ನೀಡಿ.

ಅ) ಹೌದು ಆ) ಇಲ್ಲ

೮. ಗುಂಪಿಗೆ ಸೇರಿದ ಬಳಿಕ ನಿಮ್ಮ ಸಾಮಾಜಿಕ ಬದುಕಿನಲ್ಲಿ ಉಂಟಾದ ಬದಲಾವಣೆಯ ಸ್ವರೂಪ

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ ಈ) ಯಥಾಸ್ಥಿತಿ

೯. ಸ್ವಸಹಾಯ ಗುಂಪಿನ ಮೂಲಕ ಸಾಲ ಪಡೆದಿದ್ದೀರಾ?

ಅ) ಹೌದು ಆ) ಇಲ್ಲ

೧೦. ನೀವು ಪಡೆದ ಸಾಲದ ಮಾದರಿ ಯಾವುದು?

ಅ) ಆಂತರಿಕ ಸಾಲ ಆ) ಪ್ರಗತಿನಿಧಿ ಸಾಲ

೧೧. ನೀವು ಸಾಲ ಪಡೆದ ಉದ್ದೇಶ ಏನು?

ಅ)

ಆ)

ಇ)

೧೨.ಗುಂಪಿಗೆ ಸೇರಿದ ಬಳಿಕ ನಿಮ್ಮ ಔದ್ಯೋಗಿಕ ಬದುಕಿನಲ್ಲಿ ಉಂಟಾದ ಬದಲಾವಣೆಯ ಸ್ವರೂಪ

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ ಈ) ಯಥಾಸ್ಥಿತಿ

೧೩.ಸ್ವಸಹಾಯ ಗುಂಪಿನ ಮೂಲಕ ಪಡೆದ ಪ್ರಮುಖ ತರಬೇತಿ ಕಾರ್ಯಕ್ರಮಗಳು ಯಾವುವು?

ಅ)

ಆ)

ಇ)

೧೪.ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪುಗಳ ಕಾರ್ಯನಿರ್ವಹಣೆ ಕುರಿತು ಗುಂಪಿನ ಹೊರಗಿನವರ ಅಭಿಪ್ರಾಯ ಹೇಗಿದೆ?

ಅ) ಅತ್ಯುತ್ತಮ ಆ) ಉತ್ತಮ ಇ) ಸಾಧಾರಣ ಈ) ಯಥಾಸ್ಥಿತಿ

೧೫.ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಗುಂಪಿಗೆ ಸೇರಿದ ಪರಿಣಾಮವಾಗಿ ಗ್ರಾಮೀಣ ಮಹಿಳೆಯರ ಕೌಟುಂಬಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಉಂಟಾದ ಪರಿವರ್ತನೆಗಳೇನು?

ಅನುಬಂಧ ೨

ಕುಂದಾಪುರ ತಾಲೂಕಿನ ಭೂಪಟ

